# ಅತ್ಯಂತ ಶ್ರೇಷ್ಠ
# ಮತ್ತು
# ಅಮೂಲ್ಯವಾದ ವಾಗ್ದಾನಗಳು

ಸುಗ್ಗಿಯ ಸಂದೇಶದ ವಚನಗಳ ಮೂಲಪಾಠದ ವಿವರಣೆಗಳಿಂದ
ಆರಿಸಲ್ಪಟ್ಟ ಒಂದು ಸಂಗ್ರಹ.

**ಉಪಯೋಗಿಸಲ್ಪಟ್ಟ ಸಂಕ್ಷೇಪಗಳು:**

ಆರ್–ಅಂದರೆ ಮರುಮುದ್ರಣ
ಸಿ–ಅಂದರೆ ಅಂಕಣ
ಪಿ–ಅಂದರೆ ವಾಕ್ಯವೃಂದ
ಎ–ಅಂದರೆ ವಚನಗಳ ಅಧ್ಯಯನದ ಮೊದಲ ಸಂಪುಟ
ಇ–ಅಂದರೆ ವಚನಗಳ ಅಧ್ಯಯನದ ಐದನೇ ಸಂಪುಟ
ಎಫ್–ಅಂದರೆ ವಚನಗಳ ಅಧ್ಯಯನದ ಆರನೇ ಸಂಪುಟ
ಟಿ–ದೇವದರ್ಶನ ಗುಡಾರದ ಅಧ್ಯಯನ

## ವಾಗ್ದಾನಗಳ ಪ್ರಾಮುಖ್ಯತೆ

"ಉಪಕಾರಿಯಾದ ಆತನ ದಯೆಯು, ಅತ್ಯಂತ ಶ್ರೇಷ್ಠವಾದ ಮತ್ತು ಅಮೂಲ್ಯವಾದ ಆತನ ವಾಗ್ದಾನಗಳು, ನಮಗೆ ನೆರವಾಗಿ ನಮ್ಮನ್ನು ಬಲಪಡಿಸುತ್ತವೆ." ಆರ್. 2412, ಸಿ.2, ಪಿ.3.

"ನಮ್ಮ ಮನಸ್ಸನ್ನು ದೇವರ ವಾಗ್ದಾನಗಳಿಂದ ತುಂಬಿಸಿಕೊಂಡಿರುವಾಗ ನಮ್ಮ ಇಡೀ ಜೀವನವು ಅಧಿಕವಾಗಿ ಮಾರ್ಪಾಡುಗೊಳ್ಳುತ್ತದೆ." ಆರ್. 5739, ಸಿ.1, ಪಿ.1.

"ಎಷ್ಟು ಪ್ರಮಾಣದಲ್ಲಿ ವಾಗ್ದಾನಗಳು ನಮ್ಮ ಮುಂದಿರುತ್ತವೋ ಅಷ್ಟು ಪ್ರಮಾಣದಲ್ಲಿ ನಾವು ಇಕ್ಕಾಟ್ಟಾದ ದಾರಿಯಲ್ಲಿ ನಡೆಯಲು ನಮಗೆ ಬಲ ಮತ್ತು ಧೈರ್ಯ ಸಿಗುತ್ತದೆ." ಆರ್. 5095, ಸಿ.1, ಪಿ.4.

"ದೇವಜನರು ತಮ್ಮ ಹೃದಯಗಳು ತವಕ, ವ್ಯಾಕುಲತೆಯಿಂದ ನಿಶ್ಚಿಂತೆಯಾಗಿರುವ ಮಟ್ಟಿಗೆ, ಪೂರ್ಣತೆಯಿಂದ ದೈವೀಕ ವಾಗ್ದಾನಗಳ ಶ್ರೇಷ್ಠತೆಯನ್ನು ಅಳವಡಿಸಿಕೊಳ್ಳಬೇಕು." ಎಫ್ 572, ಪಿ.2.

“ಯಾರಿಗೆ ದೇವರ ವಾಗ್ದಾನಗಳ ಮೇಲೆ ಸಂಪೂರ್ಣ ಭರವಸೆಯಿದ್ದು ಅವುಗಳನ್ನು ಅಳವಡಿಸಿಕೊಂಡು ಹೋಗುತ್ತಾರೋ ಅವರು ಒಂದು ಜಯದಿಂದ ಮತ್ತೊಂದು ಜಯಕ್ಕೆ, ಆಶೀರ್ವಾದದಿಂದ ಆಶೀರ್ವಾದಕ್ಕೆ, ಸಂತೋಷದಿಂದ ಸಂತೋಷಕ್ಕೆ, ಒಂದು ಸಿದ್ಧಿಯಿಂದ ಮತ್ತೊಂದು ಸಿದ್ಧಿಗೆ ಹೋಗುತ್ತಾ, ಕೊನೆಗೆ ನಮ್ಮನ್ನು ಪ್ರೀತಿಸಿ ಮತ್ತು ಎಡೆಬಿಡದೆ ಸಹಾಯಕನಾಗಿ ಕರೆತಂದಾತನ ಮೂಲಕ ಲೋಕ, ಶರೀರ ಮತ್ತು ಸೈತಾನನ ಮೇಲೆ ಮಹಿಮಾನ್ವಿತವಾದ ವಿಜಯವನ್ನು ಸಾಧಿಸುತ್ತಾರೆ. ಇಂಥಹ ವರ್ಗಕ್ಕೆ ಹೇಗೆ ದಾವೀದನ ಕವಣೆ ಕಲ್ಲಿನ ಮುಂದೆ ಗೋಲಿಯಾಥನು ಅಪಹಾಸ್ಯ ಮಾಡಿದನೋ ಅದೇ ರೀತಿ ದೈತ್ಯವಾದ ಅಡ್ಡಿಗಳೂ ಅದರ ಬಲವನ್ನೂ ಕಳೆದುಕೊಳ್ಳುವ ಆತಂಕಗಳೂ ಇರುತ್ತವೆ.”

## ವಾಗ್ದಾನಗಳಿಂದಲೇ “ಪೋಷಣೆ”ಯನ್ನು ಪಡೆಯಿರಿ

“ಗರ್ಭದ ಮೂಲಾವಸ್ಥೆಯಲ್ಲಿರುವ ಹೊಸ ಸೃಷ್ಟಿಗಳಾದ ನಮಗೆ ಈ ವಾಗ್ದಾನಗಳು ಆಧ್ಯಾತ್ಮಿಕ ಆಹಾರವಾಗಿದ್ದು ಇವುಗಳಿಂದಲೇ ಪೋಷಣೆಯನ್ನು ಪಡೆಯಬೇಕೆಂದು ಕೊಡಲ್ಪಟ್ಟಿವೆ. ಯಾವುದೇ ಕಾರಣದಿಂದ ಆಹಾರ ಪೂರೈಕೆ ಎಷ್ಟಾಗಿದೆ ಎಂದು ನೋಡದೆ, ನಾವು ಸರಿಯಾದ ಆಧ್ಯಾತ್ಮಿಕ ಪೋಷಣೆಯನ್ನು ಹೊಂದದೆ ಹೋದರೆ ಸ್ವಲ್ಪ ಮಟ್ಟಿಗೆ ಅಪೂರ್ಣರಾಗಿ ಹೋಗುತ್ತೇವೆ. ಈ ವಿಚಾರದಲ್ಲಿ ಅಪೋಸ್ತಲರ ಈ ಕೆಳಗಿನ ಮಾತುಗಳು ನಿಖರವಾದ ಸಮರ್ಥನೆಯನ್ನು ನೀಡುತ್ತವೆ. ಇವುಗಳ ಮೂಲಕ ದೈವೀಕ ಸ್ವಭಾವದಲ್ಲಿ ಪಾಲುಗಾರರಾಗಲು ನಮಗೆ ದೇವರು ಅಮೂಲ್ಯವೂ ಅತ್ಯುತ್ತಮವೂ ಆದ ವಾಗ್ದಾನಗಳನ್ನು ಅನುಗ್ರಹಿಸಿದ್ದಾರೆ”. ಅಂದರೆ ಇವುಗಳನ್ನು ನಾವು ಉಪಯೋಗಿಸದಿದ್ದರೆ ದಿವ್ಯ ಸ್ವಭಾವದಲ್ಲಿ ಭಾಗಿಯಾಗಲು ಸಾಧ್ಯವಿಲ್ಲ. ಆದರೆ ಅವುಗಳನ್ನು ಉಪಯೋಗಿಸುವುದರಿಂದ ನಾವು ನಮ್ಮ ಕರೆಯನ್ನು ಮತ್ತು ಆಯ್ದುಕೊಳ್ಳುವಿಕೆಯನ್ನು ದೃಢಪಡಿಸಿಕೊಂಡು ಕ್ರಿಸ್ತಯೇಸುವಿನೊಂದಿಗೆ ಸಹಬಾಧ್ಯಸ್ಥರಾಗುತ್ತೇವೆ” ಆರ್. 4665, ಸಿ.2, ಪಿ.4.

“ಅಮೂಲ್ಯ ವಾಗ್ದಾನಗಳನ್ನು ಅಲ್ಲಗಳೆಯದೆ ದಿನನಿತ್ಯವೂ ಉಪಯೋಗಿಸಿಕೊಳ್ಳಬೇಕು.” “ಹೇಗೆ ಇಂಧನವು ಉರಿದು ಶಕ್ತಿಯನ್ನು ಉಂಟುಮಾಡುತ್ತದೋ ಅದೇ ರೀತಿ ನಮ್ಮೊಳಗೆ ದೇವರಿಗೆ ಸಮರ್ಪಕವಾದ ಚಿತ್ತ ಮತ್ತು ಇಚ್ಛೆಯನ್ನು ನೆರವೇರಿಸಲು ಈ ದೈವೀಕ ವಾಗ್ದಾನಗಳನ್ನು ನಮ್ಮ ನಂಬಿಕೆಯ ಮೇಲೆ ಕೊಡಲ್ಪಟ್ಟಿವೆ. ಆದ್ದರಿಂದ ಈ ದಯೆಯುಳ್ಳ ವಾಗ್ದಾನಗಳನ್ನು ಅಲ್ಲಗಳೆಯದೆ ಸದಾ ಉಪಯೋಗಿಸಿಕೊಂಡು ನಮ್ಮನ್ನು ದಿನನಿತ್ಯವೂ ಚೈತನ್ಯಗೊಳಿಸಿಕೊಳ್ಳಬೇಕು. ಮತ್ತು ಅದೇ ರೀತಿ ಈ ಚೈತನ್ಯವನ್ನು ಅಳವಡಿಸಿಕೊಂಡು ಪ್ರಪಂಚದ ಕ್ರಮದ ವಿರುದ್ಧ ಪ್ರಗತಿಪರರಾಗಬೇಕು.” ಆರ್. 2879, ಸಿ.1.

## ಅವುಗಳಲ್ಲಿ ಆಳವಾಗಿ "ಹುದುಗಿರಬೇಕು"

"ದೇವರ ವಾಗ್ದಾನಗಳಲ್ಲಿ ಹೆಚ್ಚು-ಹೆಚ್ಚಾಗಿ ಆಳವಾಗಿ ಬೇರೂರಿರಬೇಕು. ಹೇಗೆ ಒಂದು ಮರ ಪೌಷ್ಟಿಕವಾದ ಆಹಾರವನ್ನು ಪಡೆದು ಬೆಳೆಯುತ್ತದೋ ಹಾಗೆಯೇ ದೈವೀಕ ವಾಗ್ದಾನಗಳಲ್ಲಿ ನಾವು ಆಳವಾಗಿ ಹುದುಗಿರುವಾಗ ನಂಬಿಕೆಯ ಬೇರುಗಳು ಪುಷ್ಟಿಕರವಾದ ಆಹಾರದೆಡೆಗೆ ಬೆಳೆದು, ನಮ್ಮ ಜೀವಿತಕ್ಕೆ ಆ ಆಹಾರವನ್ನು ಪಡೆದು ನಾವು ಬೆಳೆಯುತ್ತೇವೆ. ಕೇವಲ ಇದರಿಂದ ಮಾತ್ರ ನಾವು ನಂಬಿಕೆಯಲ್ಲಿ ನೆಲೆಗೊಳ್ಳಲು ಸಾಧ್ಯ." ಆರ್.5559, ಸಿ.2, ಪಿ.1.

## "ನಮ್ಮ ಹೃದಯವು ವಾಗ್ದಾನಗಳಿಂದ ತುಂಬಿರಬೇಕು"

"ನಮ್ಮ ಹೃದಯದೊಳಗೆ ಸ್ವೀಕರಿಸಿದ ದೈವೀಕ ವಾಗ್ದಾನಗಳ ಬಯಕೆ ಅಥವಾ ಅವುಗಳ ಉತ್ಕೃಷ್ಟ ಇಚ್ಛೆಗಳನ್ನು ಪೂರೈಸದಿದ್ದರೆ ಅದು ಬೇರೆ ಸಂಗತಿಗಳ ಪೋಷಣೆಯನ್ನು ಮಾಡುತ್ತದೆ ಮತ್ತು ಯಾರ ಹೃದಯವು ಈ ವಾಗ್ದಾನಗಳಿಂದ ತುಂಬದೇ, ಸ್ವೀಕರಿಸದೇ ಇದೆಯೋ ಅಂಥವರ ಹೃದಯವು ಲೋಕ, ಶರೀರ ಮತ್ತು ಸೈತಾನನು ತಂದೊಡ್ಡುವ ಆಕರ್ಷಣೆಗಳ ಮುತ್ತಿಗೆಗೆ ಬಲಿಯಾಗಿದೆ." ಆರ್.3552, ಸಿ.2, ಪಿ.1.

"ಅಮೂಲ್ಯವಾದ ದೈವೀಕ ವಾಗ್ದಾನಗಳು ನಮಗೆ ತಂದುಕೊಡುವಂಥಹ ಶ್ರೇಷ್ಟವಾದ ಉತ್ತೇಜನ ಮತ್ತು ನಿಜವಾದ ದೈವೀಕತೆಯನ್ನು ಬೇರೆ ಯಾವುದರಿಂದಲೂ ಕಾಣಲಾಗುವುದಿಲ್ಲ." ಆರ್.2228, ಸಿ.2, ಪಿ.5.

"ನಮ್ಮ ಸಂತೋಷವು, ದೇವರ ವಾಕ್ಯವನ್ನು ಅಭ್ಯಾಸಿಸುವುದರಲ್ಲಿಯೂ ಮತ್ತು ಯಾರು ಜಯಹೊಂದುತ್ತಾರೋ ಅವರಿಗೆ ಅಮೂಲ್ಯವಾದ ವಾಗ್ದಾನಗಳಲ್ಲಿ ಅಡಗಿರುವ ಜ್ಞಾನದ ಮೇಲೆಯೇ ವ್ಯಾಪಕವಾಗಿ ಅವಲಂಬಿಸಿದೆ." ಆರ್.5460 ಮೇಲೆ.

"ಅವುಗಳ ಪ್ರಾಮುಖ್ಯತೆಯನ್ನು ಗ್ರಹಿಸಿಕೊಳ್ಳಲು ಪ್ರಯತ್ನಪಡು." ದೇವರ ವಾಗ್ದಾನಗಳಿಂದ ಸಿಗುವ ದೈವೀಕ ಪ್ರೇರಣೆಯ ಬಲವನ್ನು ಒಂದುಗೂಡಿಸಲು ಶಾಂತಚಿತ್ತದಿಂದ ಜಾಗರೂಕರಾಗಿ ತೂಕಮಾಡಿ ಅವುಗಳ ಪ್ರಾಮುಖ್ಯತೆಯನ್ನು ಅರ್ಥಮಾಡಿಕೊಳ್ಳಲು ನಾವು ಪ್ರಯತ್ನಿಸಬೇಕು." ಆರ್. 3149, ಸಿ.1, ಪಿ.6.

## ನಾವು ದೇವರಿಗೆ ಹತ್ತಿರದವರಾಗಿ ಜೀವಿಸುವಾಗ ಅವುಗಳ ಮೌಲ್ಯವನ್ನು ಸಂಪೂರ್ಣವಾಗಿ ತಿಳಿದುಕೊಳ್ಳುತ್ತೇವೆ.

"ಅಪೋಸ್ತಲರ ಹೃದಯಗಳಲ್ಲಿ ತುಂಬಿ ಉಜ್ವಲಿಸುತ್ತಿದ್ದ ಪರಿಶುದ್ಧವಾದ ಅದೇ ತೀವ್ರ ಆಸಕ್ತಿ ನಮ್ಮಲ್ಲಿ ಪರಿಪೂರ್ಣವಾಗುವವರೆಗೆ, ದೇವರ ಶಕ್ತಿ ಮತ್ತು ನಮ್ಮ ಹೃದಯಗಳನ್ನು ದೈವೀಕ ಮನಸ್ಸಿನೆಡೆಗೆ ಸಹಾನುಭೂತಿಯಿಂದ ಮತ್ತು ನಿಕಟವಾದ ಒಡನಾಡತನದಿಂದ ಮಾತ್ರ ಅಮೂಲ್ಯವಾದ ವಾಗ್ದಾನಗಳ ಮೌಲ್ಯವನ್ನು ಹೆಚ್ಚಾಗಿ ಹಾಗೂ ಸಂಪೂರ್ಣವಾಗಿ ಗ್ರಹಿಸುತ್ತೇವೆ." ಆರ್.3149, ಸಿ.1, ಪಿ.3.

## ಅವುಗಳನ್ನು ನಮ್ಮ ಅನುಗ್ರಹದ ಮತ್ತು ಜ್ಞಾನದ ಬೆಳವಣಿಗೆಗೆ ವಿನಿಯೋಗಮಾಡಿಕೊಳ್ಳಬೇಕು.

"ಒಂದುಸಲ ದೇವರ ವಾಗ್ದಾನಗಳು ನಮಗೆ ಸೇರಿದ ಮೇಲೆ ಅವುಗಳನ್ನು ಸರಿಯಾಗಿ ಗೌರವಿಸಲು ಮತ್ತು ಪ್ರತ್ಯೇಕವಾಗಿ ನಮ್ಮ ನಂಬಿಕೆಯಲ್ಲಿ ಅಳವಡಿಸಲು ಸಮಯದ ಅವಶ್ಯಕತೆ ಇದೆ. ಇದನ್ನೇ ಪವಿತ್ರಗ್ರಂಥದಲ್ಲಿ ಅನುಗ್ರಹ ಹಾಗೂ ಜ್ಞಾನದಲ್ಲಿ ಬೆಳೆಯುವಂಥದ್ದು ಎಂದು ಕರೆಯಲಾಗಿದೆ. ನಾವು ಜ್ಞಾನದಲ್ಲಿ ಬೆಳೆಯುವಾಗ ಭರವಸೆಯಿಂದ ದೇವರ ವಾಗ್ದಾನಗಳನ್ನು ಲಕ್ಷ್ಯದಲ್ಲಿಟ್ಟು ನಮ್ಮ ಜೀವನದಲ್ಲಿ ಸಂಪೂರ್ಣವಾಗಿ ಅನ್ವಯಿಸಿ, ಅವುಗಳ ಪರಿಪೂರ್ಣತೆಯನ್ನು ಪಡೆಯಲು ಪ್ರಯತ್ನಿಸುತ್ತೇವೆ. ಅದೇ ಸಮಯದಲ್ಲಿ ದೇವರ ಅನುಗ್ರಹದಲ್ಲಿ ಬೆಳೆಯುತ್ತಿರುತ್ತೇವೆ. ಇಲ್ಲದಿದ್ದರೆ ಜ್ಞಾನದ ಪ್ರತಿಯೊಂದು ಹೆಜ್ಜೆಯಲ್ಲಿ ವಿಧೇಯತೆಯಿಂದ ಮತ್ತು ನಿಷ್ಕಪಟ ಹೃದಯದಿಂದ ಪಡೆಯುವ ಜ್ಞಾನದ ಪರಿಮಾಣವನ್ನು ಪಡೆಯಲು ತಯಾರಾಗಿರದೆ ಅಲ್ಲಿಯೇ ನಿಲ್ಲಬಹುದು ಅಥವಾ ಒಂದು ವೇಳೆ ಹಿಂದೆ ತಿರುಗಬಹುದು." ಆರ್.3156, ಸಿ.2, ಪಿ.1.

## "ಅಮೂಲ್ಯವಾದ ವಾಗ್ದಾನಗಳು ಯಾವುವೆಂದರೆ ಅದ್ಭುತಕರವಾದ ಜೀವಕೊಡುವ ದೇವರ ವಚನಗಳು!"

"ಈ ವಾಗ್ದಾನಗಳ ಎಲ್ಲಾ ಸಿಹಿ ಮಹತ್ವವು ನಮ್ಮ ಹೃದಯಗಳ ಆಳಕ್ಕೆ ಸೇರಿ ದೈವದತ್ತವಾದ ಫಲವನ್ನು ನಮ್ಮ ಜೀವನದಲ್ಲಿ ತರಲು ಅವುಗಳನ್ನು ಪುನಃ ಪುನಃ ಪರಿಗಣಿಸೋಣ. "ನಮ್ಮ ಕಣಜಗಳು ನಮ್ಮ ರಾಜನನ್ನು (ದೇವರನ್ನು) ಆತನ ಮಹಿಮೆಯಲ್ಲಿ ನೋಡುವ ತನಕ" ಈ ವಾಗ್ದಾನಗಳು ನಾವು ನಡೆಯುವ ಇಕ್ಕಟ್ಟಾದ ದಾರಿಯಲ್ಲಿ ನಮಗೆ ಬಂದೊದಗುವ ಕತ್ತಲೆಯ ಮತ್ತು ಪರೀಕ್ಷೆಯ ಸಮಯದಲ್ಲಿ ಕ್ಷೀಣಗೊಳಿಸುವ ಶಕ್ತಿಗಳ ವಿರುದ್ಧ ನಮ್ಮನ್ನು ಭದ್ರಗೊಳಿಸಲು ನೂತನ ಬಲ, ಧೈರ್ಯ ಹಾಗೂ ಉತ್ಸಾಹವನ್ನು ಕೊಟ್ಟು ನಮ್ಮನ್ನು ಹುರಿದುಂಬಿಸಲಿ." ಆರ್.5863, ಸಿ.1, ಪಿ.2.

## ಅವುಗಳಿಗೆ ಹೆಚ್ಚು ಪ್ರಾಮುಖ್ಯತೆಯನ್ನು ಕೊಡಬೇಕು.

"ಆತನ ಸಭೆಯಾದ ನಾವು ವರ್ಷದಿಂದ ವರ್ಷಕ್ಕೆ ಸಾಮಾನ್ಯ ಬೆಳವಣಿಗೆಗಿಂತ ಹೆಚ್ಚಿನ ಬೆಳವಣಿಗೆಯನ್ನು ಮತ್ತು ಹೆಚ್ಚಿನ ಆತ್ಮೀಕ ಆಶೀರ್ವಾದಗಳನ್ನು ಪಡೆಯುತ್ತಿದ್ದರೂ ಕೆಲವೊಂದು ನಿಯಮಗಳ ಮೇಲೆ ದೇವರ ವಾಗ್ದಾನಗಳು ನಮ್ಮಲ್ಲಿ ಪೂರ್ಣವಾಗುವುದರಿಂದ ಹಿಂದಿಗಿಂತಲೂ ಹೆಚ್ಚು ಮಹತ್ವವನ್ನು ದೇವರ ವಾಗ್ದಾನಗಳಿಗೆ ನಾವು ಪ್ರತಿಯೊಬ್ಬರೂ ಕೊಡಬೇಕೆಂಬುದೇ ನಮ್ಮ ಶಿಫಾರಸು." ಆರ್.2240, ಸಿ.1, ಪಿ.2.

## ವಾಗ್ದಾನಗಳಿಂದ ಸಿಗುವ ಧೈರ್ಯ ಮತ್ತು ಬಲ

"ಜಯಹೊಂದಲು ತುಂಬಾ ಅಡೆತಡೆ, ಕಷ್ಟಗಳಿರುತ್ತವೆ. ಆ ಅಡೆತಡೆ ಕಷ್ಟಗಳನ್ನು ಜಯಿಸಲು ಧೈರ್ಯ ಬೇಕು. ಆದರೆ ದೇವರಲ್ಲಿ ಭರವಸೆ ಹುಟ್ಟಿಸುವ ಧೈರ್ಯವು ಆತನ ಮಿತಿಮೀರಿದ

ಶ್ರೇಷ್ಠ ಮತ್ತು ಅಮೂಲ್ಯವಾದ ವಾಗ್ದಾನಗಳ ಬಲದಿಂದ ಸಿಗುತ್ತದೆ. ಇಲ್ಲದಿದ್ದಲ್ಲಿ ಅವುಗಳ ಎಲ್ಲೆ ಮೀರಬಹುದು. ಇವುಗಳಿಗೆ ಅಪರಿಚಿತವಾಗಿರುವ ಅವರೆಲ್ಲರಿಗೆ ಬಲವನ್ನು ತಂದುಕೊಡುತ್ತದೆ. ದೇವರ ಮಕ್ಕಳಲ್ಲಿ ಯಾರಾದರೂ ಒಬ್ಬರು ಎದೆಗುಂದಿ ದೇವರಲ್ಲಿ ನಂಬಿಕೆ ಮತ್ತು ಶಕ್ತಿಯನ್ನು ಕಳೆದುಕೊಂಡರೆ ಅದು ತಾನು ದೇವರ ವಾಗ್ದಾನಗಳಿಂದ ಸಿಗುವ ಸಹಾಯದ ಮೇಲೆ ಹಿಡಿತವನ್ನು ಕಳೆದುಕೊಂಡದ್ದನ್ನು ಸೂಚಿಸುತ್ತದೆ. ಧೈರ್ಯವನ್ನು ಕಳೆದುಕೊಂಡರೆ ನಂಬಿಕೆಯನ್ನು ಕಳೆದುಕೊಂಡಂತೆ. ನಂಬಿಕೆ ಮತ್ತು ಧೈರ್ಯವನ್ನು ಕಳೆದುಕೊಂಡ ದೇವರ ಮಕ್ಕಳು ತಮ್ಮ ವೈರಿಗಳ ಮುಂದೆ ಬಲಹೀನರಾಗುತ್ತಾರೆ. ದೇವರು ಆತನ ಪೂರೈಕೆಗಳನ್ನು ನಮ್ಮ ಕಣ್ಣುಗಳಿಂದ ಮುಚ್ಚಿಟ್ಟ ಉದ್ದೇಶವು ನಮಗೆ ತಿಳಿಯದಿದ್ದರೂ ನಮ್ಮ ತಂದೆಯಲ್ಲಿ ಭರವಸೆಯಿಡಬೇಕು ಮತ್ತು ನಮ್ಮ ಪ್ರಯತ್ನಗಳು, ಅವರಿಗೆ ಸೇವೆಮಾಡಿ ಅವರಲ್ಲಿಯೇ ಆಶ್ರಯಪಡೆಯುವಂತಿರಬೇಕು." ಆರ್.5712, ಸಿ.1, ಪಿ.7, ಸಿ.2, ಪಿ.1.

## ನಿಜವಾಗಿಯೂ, ಸಂಪೂರ್ಣವಾಗಿಯೂ ನಂಬಿರಬೇಕು ಮತ್ತು ವಯುಕ್ತಿಕವಾಗಿ ಅಳವಡಿಸಿಕೊಳ್ಳಬೇಕು. ಒಂದು ಪರಿಣಾಮಕಾರಿಯಾದ ಪ್ರಭಾವ.

"ತಮ್ಮ ಜೀವನದಲ್ಲಿ ಎಂಥಹ ಬಲಿಷ್ಠ ಪ್ರಾಬಲ್ಯಗಳಿಗೂ ಕುಸಿದುಬೀಳುವುದಿಲ್ಲ ಎಂದು ನಂಬಿರುವ ವರ್ಗದವರಿಗೆ ಮಾತ್ರ ದೇವರ ವಾಗ್ದಾನಗಳು ಮಿತಿಮೀರಿದ ಶ್ರೇಷ್ಠ ಮತ್ತು ಅಮೂಲ್ಯವಾದ ವಾಗ್ದಾನಗಳಾಗಿವೆ; ಆದರೆ ಈ ರೀತಿ ಅವುಗಳನ್ನು ನಂಬಿಕೊಂಡು ಯಾರು ಸ್ವೀಕರಿಸಿಲ್ಲವೋ ಅವರಿಗೆ ಜೀವನದ ಮೇಲೆ ನಿಯಂತ್ರಣ ಇಲ್ಲ ಎಂಬುದನ್ನು ರುಜುವಾತುಪಡಿಸುತ್ತದೆ. ಮತ್ತು ಹೆಚ್ಚಾಗಿ ಯಾರು ಅವುಗಳನ್ನು ಸಂಪೂರ್ಣವಾಗಿ ನಂಬಿಲ್ಲವೋ, ಯಾರು ಅವುಗಳನ್ನು ವಯುಕ್ತಿಕವಾಗಿ ಅಳವಡಿಸಿಕೊಂಡಿಲ್ಲವೋ ಅವರಿಗೆ ಅವು ಯಾವುದಕ್ಕೂ ಅನ್ವಯವಾಗುವುದಿಲ್ಲ ಹಾಗೂ ಅವುಗಳಿಂದ ಯಾರೂ ಏನನ್ನೂ ಆಶೀಸಲಾಗುವುದಿಲ್ಲ. ಇದನ್ನೇ ಅಪೋಸ್ತಲರ ಮಾತುಗಳಲ್ಲಿ ತಿಳಿಯಾಗಿ "ಸಜ್ಜನನು ವಿಶ್ವಾಸದಿಂದಲೇ ಬಾಳುವನು" ಎಂಬುದಾಗಿ ತಿಳಿಸಲ್ಪಟ್ಟಿದೆ." ಆರ್.1798, ಸಿ.1, ಪಿ.6.

## ವಾಗ್ದಾನಗಳ ಮೇಲಿರುವ ಭರವಸೆಯ ಧೃಢಸಂಕಲ್ಪವು ಜೀವಂತವಾಗಿರುವ ವಾಸ್ತವಿಕತೆಯಾಗಿರಬೇಕು.

"ಪೌಲರು ತಮ್ಮ ಎದುರಿಗಿದ್ದ ವಿಷಯಗಳ ಎಲ್ಲೆಯನ್ನು ತಲುಪಿದರು, ಅವರ ನಂಬಿಕೆಯು ದೇವರ ವಾಗ್ದಾನಗಳ ಮೇಲೆ ಎಷ್ಟೊಂದು ದೃಢಸಂಕಲ್ಪದಿಂದ ನೆಲೆಸಿತ್ತೆಂದರೆ ಅವುಗಳೇ ಅವರಿಗೆ ಜೀವಂತವಾದ ಸತ್ಯ-ಸ್ಥಿತಿಗಳಾಗಿಯೂ ಉತ್ತೇಜನ ಕೊಡುವ ಉತ್ಸಾಹವಾಗಿಯೂ ಮತ್ತು ಸ್ವಾಮಿನಿಷ್ಠೆಯಾಗಿಯೂ ಇದ್ದವು." ಯಾವುದು ಸತ್ಯವು-ಮಾನ್ಯವು, ನ್ಯಾಯವು-ಶುದ್ಧವು, ಪ್ರೀತಿಕರವು-ಮನೋಹರವು ಆಗಿದೆಯೋ, ಯಾವುದು ಸದ್ಗುಣವು-ಸ್ತುತ್ಯಾರ್ಹವು ಆಗಿದೆಯೋ ಅಂಥವುಗಳಲ್ಲಿ ಮಗ್ನರಾಗಿರಿ ಎಂದು ಬೇರೆಯವರಿಗೆ ಬುದ್ಧಿವಾದ ಹೇಳುವಾಗಲೂ ಅವರ ಮನಸ್ಸನ್ನು ಸ್ವರ್ಗೀಯ ವಿಷಯಗಳ ಮೇಲೆ ಸಂಪೂರ್ಣವಾಗಿ ಕೇಂದ್ರೀಕರಿಸಿದ್ದರು. ಈ ರೀತಿ ತಮ್ಮ ಮುಂದಿದ್ದ ವಿಷಯಗಳ ಎಲ್ಲೆಯನ್ನು ಮುಟ್ಟಿದರು.

ಅದೇ ರೀತಿ ನಾವೂ ಕೂಡ ನಮ್ಮ ಸ್ಫೂರ್ತಿಯನ್ನು ಪವಿತ್ರತೆಯತ್ತ ಮತ್ತು ನಮ್ಮ ಧೈರ್ಯವನ್ನು ತಾಳ್ಮೆಯತ್ತ ಕ್ರೋಢಿಕರಿಸಿಕೊಂಡು ಸಾವಿನ ಗಳಿಗೆಯ ತನಕ ಸ್ವಾಮಿನಿಷ್ಠೆಯನ್ನು ಪಟ್ಟು ಹಿಡಿದು ಸಾಧಿಸಬೇಕು." ಆರ್.1885,ಸಿ.2,ಪಿ.2.

"ಪ್ರತಿಯೊಬ್ಬನೂ ಅವನವನ ಹೃದಯದಲ್ಲಿ ವಿಶ್ವಾಸವನ್ನು ಬೆಳೆಸಿಕೊಳ್ಳಬೇಕು. (ಅ) ದಿನನಿತ್ಯವೂ ದೈವೀಕ ವಾಗ್ದಾನಗಳನ್ನು ನೆನಪಿಗೆ ತಂದುಕೊಂಡು ತಂದೆಯ ಮಾತುಗಳಲ್ಲಿ ಇವುಗಳಿಂದ ಹೆಚ್ಚಾಗಿ ಆಪ್ತವಾಗಿ ವಿಶ್ವಾಸವನ್ನು ಬೆಳೆಸಿಕೊಳ್ಳಬೇಕು (ಆ) ಕೃತಜ್ಞತೆಯಿಂದ ಪ್ರಾರ್ಥನೆ ಮಾಡುವಾಗ ದೇವರ ಮುಂದೆ ತನ್ನ ಹೃದಯ ಮತ್ತು ತುಟಿಗಳಲ್ಲಿ ತಾನು ದೇವರೊಂದಿಗೆ ವಾಗ್ದಾನ ಮಾಡಿಕೊಂಡದಂದಿನಿಂದ ಈ ವಾಗ್ದಾನಗಳು ತನ್ನವು ಎಂದು ಜ್ಞಾಪಿಸಿಕೊಂಡು ಅವುಗಳನ್ನು ಹೆಚ್ಚು ಹೆಚ್ಚಾಗಿ ಪಡೆಯಲು ಪ್ರಯತ್ನಿಸಬೇಕು. ಸಹೋದರರೊಂದಿಗೆ ಪವಿತ್ರ ವಿಷಯಗಳ ಮೇಲೆ ತನ್ನ ಸಮಾಲೋಚನೆಯಲ್ಲಿ ಮತ್ತು ತನ್ನ ಸ್ವಂತ ಯೋಚನೆಗಳಲ್ಲಿ ಈ ವಾಗ್ದಾನಗಳನ್ನು ತನ್ನವೇ ಎಂದು ಹಕ್ಕು ಸಾಧಿಸಬೇಕು. ಅವುಗಳು ನನಗೇ ಸೇರಿದವುಗಳು ಎಂದು ಜ್ಞಾಪಿಸಿಕೊಂಡು, ಶೋಧನೆಗಳು ಅಥವಾ ಕಷ್ಟಗಳು ಅಥವಾ ದಿಗ್ಭ್ರಮೆಗಳು ಕಾಣುವಾಗ ಅವನು ಈ ವಾಗ್ದಾನಗಳನ್ನೇ ನೆನಪಿಸಿಕೊಳ್ಳಬೇಕು. ಏಕೆಂದರೆ ಯಾರು ಸಜೀವಯಜ್ಞದೊಡನೆ ದೇವರೊಂದಿಗೆ ಒಡಂಬಡಿಕೆಯನ್ನು ಮಾಡಿಕೊಂಡಿ–ದ್ದಾರೋ ಅಂಥವರನ್ನು ದೇವರು ಪ್ರೀತಿಸಿ ಅವರಿಗೇ ಇವುಗಳನ್ನು ವಾಗ್ದಾನಮಾಡಿದ್ದಾರೆ." ಆರ್.2642,ಸಿ.2,ಪಿ.7.

## ಅತ್ಯಂತ ಶ್ರೇಷ್ಠ ಮತ್ತು ಅಮೂಲ್ಯವಾದ ವಾಗ್ದಾನಗಳು.

## ಹಳೆಯ ಒಡಂಬಡಿಕೆ

### "ಅಬ್ರಹಾಮನೇ, ಭಯಪಡಬೇಡ; ನಾನೇ ನಿನ್ನ ಗುರಾಣಿಯೂ ನಿನ್ನ ಅತ್ಯಧಿಕವಾದ ಬಹುಮಾನವೂ ಆಗಿದ್ದೇನೆ." ಆದಿಕಾಂಡ 15:1.

"ಭೂಲೋಕದ ಎಲ್ಲಾ ರಾಜರುಗಳ ಕೋಪ ಮತ್ತು ನಿಯಂತ್ರಣದಿಂದ ಮತ್ತು ಅವರ ಸೈನ್ಯಗಳಿಂದ ಅವನನ್ನು ಕಾಪಾಡಿ, ಸಕಲವೂ ಅವನ ಒಳಿತಿಗಾಗಿಯೂ ಹಿತಕರಕ್ಕಾಗಿಯೂ ಪರಿಣಮಿಸಲು ಶಕ್ತರಾದ ದೇವರು ಅವನ ಕವಚವಾಗಿದ್ದರು. ಈ ಒಂದು ಯೋಚನೆಯಲ್ಲಿ ಎಂಥಹ ನೆಮ್ಮದಿಯಿದೆ. ಈ ಸಂಗತಿ ಎಲ್ಲಾ ದುಷ್ಟತ್ವದಿಂದ ಮತ್ತು ಅದರ ಶಕ್ತಿಯಿಂದ ದೇವರು ನಮ್ಮನ್ನು ರಕ್ಷಿಸುತ್ತಾರೆ ಮತ್ತು ನಮ್ಮ ಕವಚ ಕೂಡ ಆಗಿದ್ದಾರೆ ಎಂಬುದನ್ನು ಜ್ಞಾಪಿಸುತ್ತದೆ. ನಮ್ಮ ಕೀರ್ತನೆ ಒಂದರಲ್ಲಿ ಈ ಸಂಗತಿಯನ್ನು ಸುಂದರವಾಗಿ ವ್ಯಕ್ತಪಡಿಸ–ಲಾಗಿದೆ:– 'ನನ್ನ ಆತ್ಮದ ಕವಚ, ಬಿರುಗಾಳಿ ರೋಷಾವೇಷಗೊಂಡರೂ ನನ್ನ ವಿರುದ್ಧ ವೈರಿಗಳ ಸೈನ್ಯಗಳೇ ನಿಶ್ಚಯಮಾಡಿಕೊಂಡರೂ ನನ್ನ ಆಶ್ರಯದಾತ ಮತ್ತು ನನ್ನ ಕೋಟೆ ನೀನೇ; ಪ್ರತಿಯೊಬ್ಬ ವೈರಿಯೂ ನಿನ್ನ ಮುಂದೆ ತಲೆಬಾಗಬೇಕು." ಆರ್.2853, ಸಿ.2, ಪಿ.3

"ಅಬ್ರಹಾಮನಿಗೆ ಇಲ್ಲಿ ಕೊಟ್ಟ ಸಮಾಧಾನವನ್ನು ಅಬ್ರಾಹಾಮನಂತೆ ನಂಬಿಕೆಯುಳ್ಳ ಪ್ರತಿಯೊಬ್ಬರಿಗೂ ಕೊಡಲಾಗಿದೆ ಮತ್ತು ಇದಕ್ಕೆ ಸಮಾನಾದ ಹೇಳಿಕೆಯನ್ನು ನಮ್ಮ ಕರ್ತನೇ ಹೊಸ ಒಡಂಬಡಿಕೆಯಲ್ಲಿ ಹೇಳಿದಂತೆ (ಯೊಹಾನ 14:21,23) "ನನ್ನನ್ನು ಪ್ರೀತಿಸುವವನು ನನ್ನ ಪಿತನಿಗೂ ಪ್ರಿಯನಾಗಿರುವನು, ನಾನೂ ಅವನನ್ನು ಪ್ರೀತಿಸಿ ನನ್ನನ್ನೇ ಅವನಿಗೆ ಸಾಕ್ಷಾತ್ಕರಿಸಿ ಕೊಡುವೆನು...ಮತ್ತು ನಾವಿಬ್ಬರೂ ಅವನ ಬಳಿ ಬಂದು ಅವನಲ್ಲಿ ನೆಲೆಸುವೆವು." ಆದುದರಿಂದ ನಮ್ಮ ಇಹಲೋಕದ ಯಾತ್ರೆಯಲ್ಲಿ ನಮ್ಮ ಮಧ್ಯೆ ಮತ್ತು ನಮ್ಮ ಸುತ್ತಲೂ ಆಕ್ರಮಿಸಿಕೊಂಡಿರುವ ಪ್ರಲೋಭನೆ ಮತ್ತು ಶೋಧನೆಗಳನ್ನು ಜಯಿಸಿಕೊಂಡು ನಂಬಿಕೆಯಿಂದ ಆಶೀರ್ವಾದದ ಬಾಧ್ಯತೆಯಿಂದ ಕಾಯ್ದಿರಿಸಲಾದ ಸೌಭಾಗ್ಯದೆಡೆಗೆ ನಡೆಯುವಾಗ, ಭಕ್ತರಾದ ನಾವೂ ಕೂಡ ನಮ್ಮ ದೇವರು ಹೇಳುವ "ಭಯಪಡಬೇಡ; ನಾನೇ ನಿನ್ನ ಗುರಾಣಿಯೂ ನಿನ್ನ ಅತ್ಯಧಿಕವಾದ ಬಹುಮಾನವೂ ಆಗಿದ್ದೇನೆ" ಎಂಬ ಸ್ವರವನ್ನು ಗುರುತಿಸಬಹುದು." ಆರ್.1906, ಸಿ.1, ಪಿ.1.

## "ಸರ್ವೇಶ್ವರನಿಗೆ ಅಸಾಧ್ಯವಾದದ್ದು ಯಾವದಾದರೂ ಇದೆಯೋ?" ಆದಿಕಾಂಡ 18:14.

"ದೇವರ ಶಕ್ತಿಯನ್ನು ಯಾವ ರೀತಿಯಲ್ಲಿ ಅನ್ವಯಿಸಿದರೂ ಕೂಡ ಅದು ತುಂಬಾ ಸಾಮರ್ಥ್ಯವುಳ್ಳದ್ದು. ಈ ಶಕ್ತಿಗೆ ಒಂದು ನಿದರ್ಶನವಾಗಿ ಅಪೋಸ್ತಲರು ನಮ್ಮ ಕರ್ತನಾದ ಯೇಸುವನ್ನು ಮತ್ತು ಆತನ ವಾಸ್ತವವಾದ ಮರಣ ಮತ್ತು ಹೇಗೆ ದೇವರ ಪವಿತ್ರ ಶಕ್ತಿಯು ಯೇಸುವನ್ನು ಮರಣದಿಂದ ಪುನರುತ್ಥಾನಕ್ಕೆ ಎಬ್ಬಿಸಿತು ಎಂಬುದರ ಬಗ್ಗೆ ನಮ್ಮ ಗಮನವನ್ನು ಸೆಳೆಯುತ್ತಾರೆ. ಈ ರೀತಿ ಕರ್ತ ಯೇಸುವಿನ ಪರವಾಗಿ ಪ್ರಯೋಗಿಸಲ್ಪಟ್ಟ ಮತ್ತು ಈ ಯುಗಾಂತ್ಯದಲ್ಲಿ ಕ್ರಿಸ್ತನ ಶರೀರದಲ್ಲಿ ಒಂದಾಗುವ ಎಲ್ಲಾ ನಂಬಿಗಸ್ಥ ಸದಸ್ಯರ ಪರವಾಗಿ ಆತನು ವಾಗ್ದಾನ ಮಾಡಿದಂತೆ ಪ್ರಯೋಗಿಸಲ್ಪಡುವ ಈ ದೇವರ ಶಕ್ತಿಯಿಂದ ನಾವು ಅದರಿಂದ ಪ್ರಯೋಜನ ಪಡೆದುಕೊಂಡರೆ ಶರೀರವನ್ನು ಅಧೀನದಲ್ಲಿಟ್ಟು ಜಯಹೊಂದಲು ಹೊಸ ಸೃಷ್ಟಿಗೆ ಬಲ ಸಿಗುತ್ತದೆ ಹಾಗೂ ಇದಕ್ಕಿಂತಲೂ ಹೆಚ್ಚಾಗಿ ಅದನ್ನು ನಂಬಿಗಸ್ತ ಸೇವೆಯಲ್ಲಿ ಸೇವೆಯಲ್ಲಿ ಚಟುವಟಿಕೆಯುಳ್ಳದ್ದಾಗಿ, ಕ್ರಿಯಾಶೀಲವಾಗಿ, ಶಕ್ತಿಯುತವಾಗಿಯೂ ಇಟ್ಟುಕೊಳ್ಳಲು ಬಲವನ್ನು ಪಡೆಯುತ್ತದೆ ಎಂಬುದೇ ದೇವರ ಶಕ್ತಿಯ ಕಲ್ಪನೆಯ ಸೂಚನೆಯಾಗಿದೆ." ಆರ್. 3203, ಸಿ. 1, ಪಿ. 4.

## "ಇಗೋ, ನಾನು ನಿನ್ನ ಸಂಗಡ ಇದ್ದು ನೀನು ಹೋಗುವಲ್ಲೆಲ್ಲಾ ನಿನ್ನನ್ನು ಕಾಪಾಡಿ ಈ ದೇಶಕ್ಕೆ ನಿನ್ನನ್ನು ತಿರಿಗಿ ಬರಮಾಡುವೆನು. ಯಾಕಂದರೆ ನಾನು ನಿನಗೆ ಹೇಳಿದ್ದನ್ನು ಮಾಡುವವರೆಗೆ ನಿನ್ನನ್ನು ಬಿಡುವದಿಲ್ಲ ಅಂದನು." ಆದಿಕಾಂಡ 28:15.

"ಏಣಿಯ ಅತ್ತಣ ತುದಿಯಿಂದ ಯಾಕೋಬನಿಗೆ, ನಿನ್ನ ತಂದೆಯಾದ ಅಬ್ರಹಾಮನ ದೇವರೂ ಇಸಾಕನ ದೇವರೂ ಆಗಿರುವ ಸರ್ವೇಶ್ವರ ನಾನೇ. ನೀನು ಮಲಗಿಕೊಂಡಿರುವ

ಈ ನಾಡನ್ನು ನಿನಗೂ ನಿನ್ನ ಸಂತತಿಗೂ ಕೊಡುತ್ತೇನೆ... ಮತ್ತು ಇದಲ್ಲದೆ ನಾನು ನಿನ್ನ ಸಂಗಡ ಇದ್ದು ನೀನು ಹೋಗುವ ಎಲ್ಲಾ ಸ್ಥಳಗಳಲ್ಲಿ ನಿನ್ನನ್ನು ಕಾಪಾಡಿ ಈ ದೇಶಕ್ಕೆ ಬರಮಾಡುತ್ತೇನೆ..." ಎಂಬ ದೇವರ ವಾಣಿ ಕೇಳಿಸಿತು. ಇಲ್ಲಿ ಯಾಕೋಬನಿಗೆ ನಿಜವಾದ ಸಮಾಧಾನ ಮತ್ತು ಪ್ರೋತ್ಸಾಹ ಬೇಕಾಗಿತ್ತು... ಅಂದಿನಿಂದ ಎಲ್ಲವನ್ನೂ ಕಳೆದುಕೊಂಡು ಸಂಕಷ್ಟದಲ್ಲಿದ್ದರೂ ಅವನಿಗೆ ದೈವೀಕ ಕೃಪೆಯಿತ್ತು ಮತ್ತು ಈ ಪ್ರಕಾರ ಈ ಅದ್ಭುತವಾದ ವಾಗ್ದಾನಗಳಿಗೆ ವಾರಸುದಾರನಾಗುತ್ತಾನೆ ಎಂಬುದು ಸಂಪೂರ್ಣವಾಗಿ ಅರ್ಥಗರ್ಭಿತವಾಗಿದ್ದರೂ ಆಸಕ್ತತೆಯಿಂದ ಅದನ್ನು ಗೌರವಿಸಿದನು. ಯಾರೆಲ್ಲರು ದೇವರ ಸ್ವರವನ್ನು ಕೇಳಿದ್ದಾರೋ ಮತ್ತು ಆತನ ವಾಗ್ದಾನಗಳಿಂದ ಸೆಳೆಯಲ್ಪಟ್ಟಿದ್ದಾರೋ ಅಥವಾ ಆಕರ್ಷಿಸಲ್ಪಟ್ಟಿದ್ದಾರೋ ಮತ್ತು ಯಾರೆಲ್ಲರು ದೈವೀಕ ಕೃಪೆಯನ್ನು ಸಂಪಾದಿಸಲು ಮತ್ತು ದೇವರ ಪ್ರಮುಖ ಆಶೀರ್ವಾದಕ್ಕೆ ಬಾಧ್ಯಸ್ಥರಾಗಲು ತಮ್ಮ ಜೀವಿತದ ಎಲ್ಲಾ ಆಸೆ ಆಕಾಂಕ್ಷೆಗಳನ್ನು ಸಮರ್ಪಿಸಿದ್ದಾರೋ ಅವರೂ ಇದೇ ರೀತಿ ಗೌರವಿಸುತ್ತಾರೆ." ಆರ್.3965, ಸಿ.1, ಪಿ.1,2.

## "ನಾನೇ ನಿನ್ನ ಬಾಯಿಯಾಗಿದ್ದು ನೀನು ಮಾತನಾಡತಕ್ಕದ್ದನ್ನು ನಿನಗೆ ಬೋಧಿಸುವೆನು" ವಿಮೋಚನಾಕಾಂಡ 4:12.

ಆದಿಯಲ್ಲಿದ್ದ ಮೋಶೆಯಂತೆ ಈಗ ಇರುವ ದೀನರಿಗೆಲ್ಲಾ ದೇವರು ಪ್ರಕಟಿಸುವುದೇನೆಂದರೆ, "ನಾನೇ ನಿನ್ನ ಬಾಯಿಯಾಗಿದ್ದು ನೀನು ಮಾತಾಡಬೇಕಾದದ್ದನ್ನು ಬೋಧಿಸುವೆನು" ಎಂಬುವದಾಗಿದೆ. ಇದರಿಂದ ಒಂದು ಪಾಠವೇನೆಂದರೆ ನಮ್ಮಲ್ಲೇ ಅಥವಾ ನಮ್ಮದೇ ಸ್ವಂತ ವಿವೇಚನೆಯಲ್ಲಿ ಅಥವಾ ಸಾಮರ್ಥ್ಯದಲ್ಲಿ ಆತ್ಮವಿಶ್ವಾಸವಿರದೆ, ನಮ್ಮ ಸಂಪೂರ್ಣ ಆತ್ಮವಿಶ್ವಾಸ ಎಲ್ಲಾ ಧೃಡವಿಶ್ವಾಸ ದೇವರಲ್ಲಿರಬೇಕು. ಈ ದೀನತೆಯ ಪಾಠವನ್ನು ಕಲಿಯುವ ತನಕ ದೇವರ ಪರವಾಗಿ ಮಾತನಾಡಲು ಯಾರೂ ಅರ್ಹರಾಗಿರುವುದಿಲ್ಲ... ದೇವರ ಮಕ್ಕಳನ್ನು ಆತನು ಯಾವುದೇ ಮುಖ್ಯವಾದ ಅಥವಾ ಆತನ ವಿಶೇಷವಾದ ಕೆಲಸಕ್ಕೆ ಉಪಯೋಗಿಸಬೇಕಾದರೆ ಪವಿತ್ರಗ್ರಂಥವು ಎಲ್ಲಾ ವಿಧದಲ್ಲೂ ಸೂಚಿಸುವ ಸತ್ಯಾಂಶವೇನೆಂದರೆ, ಎಲ್ಲಕ್ಕಿಂತ ಅವಶ್ಯವಾಗಿ ಬೇಕಾಗಿರುವ ಗುಣ ದೀನತೆ ಎಂಬುವದಾಗಿದೆ. ಕ್ರಿಸ್ತನ ಅನುಯಾಯಿಗಳು ಈ ಅಂಶವನ್ನು ನಿರಂತರವಾಗಿ ಜ್ಞಾಪಕದಲ್ಲಿಟ್ಟುಕೊಂಡು ಮತ್ತು ಪಟ್ಟುಹಿಡಿದು ಅವರ ಜೀವನ ಮಾರ್ಗವನ್ನು ಅದೇ ಪ್ರಕಾರ ರೂಪಿಸಿಕೊಂಡು ಮುನ್ನಡೆದರೆ ಆತನು ಅವರನ್ನು ಎಷ್ಟೊಂದು ಉಪಯೋಗಿಸಿಕೊಳ್ಳುತ್ತಾರೆಂಬುದು ನಮಗೇ ಗೊತ್ತುಂಟು. ಆರ್., ಸಿ.2, ಪಿ.3.

## "ನನ್ನ ಸನ್ನಿಧಾನವು ನಿನ್ನ ಸಂಗಡ ಹೋಗುವದು; ನಾನು ನಿನಗೆ ವಿಶ್ರಾಂತಿಯನ್ನು ಕೊಡುವೆನು" ವಿಮೋಚನಾಕಾಂಡ 33:14.

"ದೇವರು ಆತನ ಜನರೊಂದಿಗೆ ಸದಾ ಪ್ರಸನ್ನರಾಗಿರುತ್ತಾರೆ. ಅವರು ನಮ್ಮ ಅಭಿರುಚಿಯನ್ನು ನೋಡಿಕೊಂಡು ನಮ್ಮನ್ನು ಆಪತ್ತಿನಿಂದ ರಕ್ಷಿಸುತ್ತಾ, ನಮಗೆ ಲೌಕಿಕ ಮತ್ತು ಆತ್ಮೀಕ ಕಾರ್ಯಗಳನ್ನು ಪೂರೈಸುತ್ತಾ, ನಮ್ಮ ಹೃದಯಗಳನ್ನು ಗ್ರಹಿಸಿ, ನಮ್ಮ ಮನಸ್ಸಿನ ಆವೇಶವನ್ನು ಆತನ ಪ್ರೀತಿಯ ಅರ್ಪಣೆಯ ಲಕ್ಷ್ಯದಲ್ಲಿಡುವಂತೆ ಮಾಡಿ, ನಮ್ಮ ಸುತ್ತಲೂ ನಮ್ಮ ಶಿಸ್ತಿಗೆ

ಪ್ರಭಾವವನ್ನು ರೂಪಿಸಿ ಮತ್ತು ಶುದ್ಧೀಕರಿಸಿ, ನಮ್ಮ ಅಶಕ್ತತೆಯಿಂದ ಕೂಡಿದ ಸಹಾಯಕ್ಕಾಗಿ ಅಥವಾ ಅನುಕಂಪಕ್ಕಾಗಿ ಅಥವಾ ಆತನೊಡನೆ ಸಾಂಗತ್ಯಕ್ಕಾಗಿ ಕೋರುವ ಕರೆಯನ್ನು ಆಲಿಸುತ್ತಾ ಯಾವಾಗಲೂ ನಮ್ಮ ಬಗ್ಗೆಯೇ ಆಲೋಚಿಸುತ್ತಿರುತ್ತಾರೆ." ಆರ್. 3251, ಸಿ.2, ಪಿ.2.

"ದೇವರು ಆತನ ಸೇವಕರೊಡನೆ ಪ್ರಸನ್ನರಾಗಿರುತ್ತಾರೆ, ಅಂದರೆ ಆತನ ದೇಹದಲ್ಲಿ ಪ್ರಸನ್ನರಾಗಿರುತ್ತಾರೆ ಎಂದು ನಾವು ಭಾವಿಸದೆ, ಆತನ ಶಕ್ತಿಯ ಮೂಲಕ ಮತ್ತು ಆತನ ಸಂದೇಶ ಕೊಡುವ ದೂತರ ಮೂಲಕ ಬೆಂಬಲವಾಗಿದ್ದು ಆಶೀರ್ವದಿಸುತ್ತಾರೆ ಹಾಗೂ ಅವರನ್ನು ಮುನ್ನಡೆಸುತ್ತಾರೆ. ಅವರ ಪ್ರತಿಯೊಂದು ಹಿತಾಸಕ್ತಿಯನ್ನು ನೋಡಿಕೊಳ್ಳುತ್ತಾರೆ ಮತ್ತು ಅವರನ್ನು ಜೋಪಾನವಾಗಿ ಲಕ್ಷಿಸುತ್ತಾರೆ." ಆರ್. 5547, ಸಿ.2, ಪಿ.4.

## "ಸರ್ವೇಶ್ವರ ನಿಮಗೆ ಅವರ ಅಮೂಲ್ಯವಾದ ನಿಧಿಯನ್ನು ತೆರೆಯುವರು" ಧರ್ಮೋಪದೇಶಕಾಂಡ 28:12.

"ಈಗ ಕರ್ತನ ದಿನವು ರೂಪತಾಳಿದೆ ಮತ್ತು ಶಿರಸ್ಸಿನ ಮೇಲೆ ಚಿನ್ನದ ಕಿರೀಟವನ್ನು (ದೈವೀಕ ಅಧಿಕಾರ) ಹೊಂದಿರುವ 'ಸುಗ್ಗಿಯ ಒಡೆಯನಾದ' ಹಾಗೂ ಕೈಯಲ್ಲಿ (ಅಧಿಕಾರ) ಹರಿತವಾದ ಕುಡುಗೋಲು, ಅಂದರೆ ದೇವರ ವಾಕ್ಯವನ್ನು ಪ್ರಬಲವಾಗಿ, ಸ್ಪಷ್ಟವಾಗಿ ಪ್ರಕಟಿಸಬಲ್ಲ ಯಾವುದೇ ಇಬ್ಬಾಯಿಯ ಕತ್ತಿಗಿಂತಲೂ ಹರಿತವಾದ ಪ್ರಸ್ತುತ ಸತ್ಯದ ಕುಡುಗೋಲನ್ನು ಹೊಂದಿರುವ... ಮತ್ತು ಹೃದಯದ ಉದ್ದೇಶಗಳನ್ನು ಹಾಗೂ ಆಲೋಚನೆಗಳನ್ನು ಗ್ರಹಿಸುವಂಥಹ ಮನುಷ್ಯಕುಮಾರನ ಪ್ರಸನ್ನತೆಯ ಕಾಲದಲ್ಲಿ ನಾವು ಜೀವಿಸುತ್ತಿದ್ದೇವೆ."

"ಹೇಗೆ ಯೆಹೂದ್ಯರ ಸುಗ್ಗಿಯ ಕಾಲದಲ್ಲಿ ಕೊಯ್ಲಿಗೆ ಕಳುಹಿಸಿದರೋ, ಹಾಗೆಯೇ ಆತನ ನಂಬಿಗಸ್ಥ ಮತ್ತು ತಮ್ಮನ್ನೇ ಸಮರ್ಪಿಸಿಕೊಂಡು ಸುಗ್ಗಿಯ ಸಂದೇಶವಾದ, ಈಗ ಸಂಪೂರ್ಣವಾಗಿ ಪ್ರಕಟಿಸಲ್ಪಟ್ಟು, ದೇವರ ಯೋಜನೆ ಮತ್ತು ಅದರಲ್ಲಿ ಗೊತ್ತುಮಾಡಿರುವಂಥಹ ಸಮಯ ಹಾಗೂ ಕಾಲವನ್ನು ಒಯ್ಯುವಂಥಹ 'ಕೆಲಸಗಾರರನ್ನು', 'ದೂತರನ್ನು' ಅಥವಾ 'ಸಂದೇಶಕಾರರನ್ನು' ಸುಗ್ಗಿಯ ಕೆಲಸಕ್ಕೆ ಕಳುಹಿಸುತ್ತಿದ್ದಾರೆ." ಆರ್.1362, ಸಿ.1, ಪಿ.3.

## "ನಿನ್ನ ದೇವರಾದ ಸರ್ವೇಶ್ವರನೇ ನಿನ್ನ ಸಂಗಡ ಹೋಗುತ್ತಾನೆ; ಆತನು ನಿನ್ನನ್ನು ಬಿಡುವದಿಲ್ಲ, ವಿಸರ್ಜಿಸುವದೂ ಇಲ್ಲ" ಧರ್ಮೋಪದೇಶಕಾಂಡ 31:6.

"ದೇವಜನರಿಗೆ ನಿಜವಾಗಿಯೂ ಕೆಲವೊಂದು ಸಂಗತಿಗಳು ಕಂಗೆಡಿಸುವಂತೆ ತೋರಬಹುದು; ಆದರೆ ಅವರು ಹತಾಶರಾಗಿಲ್ಲ ಮತ್ತು ಏನೇ ಬಂದರೂ ಹತಾಶರಾಗುವುದಿಲ್ಲ; ಏಕೆಂದರೆ ದೇವರೇ ಹೇಳಿರುವ ಪ್ರಕಾರ ಅವರೆಂದಿಗೂ ನಮ್ಮನ್ನು

ಬಿಟ್ಟುಬಿಡುವುದಿಲ್ಲ ಅಥವಾ ನಮ್ಮನ್ನು ತೊರೆದು ಬಿಡುವುದಿಲ್ಲ. ಈ ಅಮೂಲ್ಯವಾದ ವಾಗ್ದಾನವು ನಮಗೆ ಖಂಡಿತವಾಗಿಯೂ ಒಂದು ನಿರೀಕ್ಷೆಯನ್ನು ಮತ್ತು ಸ್ಥಿರತೆಯನ್ನು ತಂದುಕೊಡಬೇಕು. ನಮ್ಮ ನಿರೀಕ್ಷೆಯ ಲಂಗರನ್ನು ಬಿಗಿಯಾಗಿ ಹಿಡಿದಿರಬೇಕು. ಆದುದರಿಂದ ನಮ್ಮ ಸ್ಥಾನವು ಲೋಕವು ಹೊಂದಿರದ ಇಂಥಹ ನಿರ್ದಿಷ್ಟವಾದ ನಿರೀಕ್ಷೆಗಿಂತ ಬೇರೆಯಾಗಿದೆ. ಲೋಕಕ್ಕೆ ಭದ್ರವಾದ ಲಂಗರು ಇಲ್ಲ, ಸ್ಥಿರವಾಗಿ ನಿಲ್ಲಲು ಅಮೂಲ್ಯವಾದ ವಾಗ್ದಾನಗಳಿಲ್ಲ. ಕೆಟ್ಟದ್ದರಲ್ಲಿ ಅತೀ ಕೆಟ್ಟದ್ದು ಬಂದರೂ, ಹಸಿವೆಯಿಂದ ಸತ್ತರೂ, ನಮ್ಮ ನಿರೀಕ್ಷೆ ಪರದೆಯ ಆಚೆಗೆ, ಮರಣದ ಆಚೆಕಡೆಗೆ ಇದೆ ಎಂಬುದು ನಮಗೆ ಗೊತ್ತು. ಆದುದರಿಂದ ದೇವರ ಭಕ್ತರು ಈ ಹೊತ್ತು ಎಲ್ಲಾ ನಿರೀಕ್ಷೆಗೆ ಮತ್ತು ಸಂತೋಷಕ್ಕೆ ಪುರದ್ವಾರವಾಗಿ ಎಲ್ಲವನ್ನೂ ಗೋಚರಪಡಿಸುವ ಮರಣವನ್ನೇ ಎದುರು ನೋಡುತ್ತಿದ್ದಾರೆ." ಆರ್.5671, ಸಿ.1, ಪಿ.3.

## "ಸರ್ವೇಶ್ವರ ತಾನೇ ನಿನ್ನ ಮುಂದೆ ಹೋಗುತ್ತಾನೆ; ಆತನೇ ನಿನ್ನ ಸಂಗಡ ಇರುವನು; ನಿನ್ನನ್ನು ತೊರೆಯುವದಿಲ್ಲ, ವಿಸರ್ಜಿಸುವದಿಲ್ಲ; ನೀನು ಭಯಪಡಬೇಡ; ಅಂಜಿಕೊಳ್ಳಬೇಡ." ಧರ್ಮೋಪದೇಶಕಾಂಡ 31:8.

"ದೇವರ ಅನುಗ್ರಹವು ಆತನ ಮಕ್ಕಳ ಮೇಲೆ ವಿಶಿಷ್ಟವಾದ ಅನುಗ್ರಹವಾಗಿದೆ! ಅವರ ಎಲ್ಲಾ ಹೆಜ್ಜೆಗಳು ದೇವರಿಂದ ಕ್ರಮಪಡಿಸಲ್ಪಟ್ಟಿವೆ ಮತ್ತು ತಲೆಗೂದಲೂ ಕೂಡ ಎಲ್ಲವೂ ಎಣಿಕೆಯಾಗಿವೆ. (ಲೂಕ 12:7) ಆತನ ಕಣ್ಣುಗಳು ಯಾವಾಗಲೂ ಸಜ್ಜನರ ಮೇಲೆಯೇ ಇದೆ ಮತ್ತು ಅವರ ಮೊರೆಗೆ ಆತನು ಕಿವಿಗೊಡುವನು. ಸೇವೆಮಾಡುವ ಆತ್ಮಗಳಾದ ಎಲ್ಲಾ ದೇವದೂತರನ್ನು ಜೀವೋದ್ಧಾರವನ್ನು ಬಾಧ್ಯವಾಗಿ ಹೊಂದಬೇಕಾದವರ ಊಳಿಗಕ್ಕಾಗಿ ಕಳುಹಿಸುತ್ತಾನೆ. ದೇವರನ್ನು ಪ್ರೀತಿಸುವವರಿಗೂ, ಆತನ ಸಂಕಲ್ಪದ ಮೇರೆಗೆ ಕರೆಹೊಂದಿದವರಿಗೂ, ಸಕಲವೂ ಹಿತಕರವಾಗುವಂತೆ ಪರಿಣಮಿಸುತ್ತದೆ. ಎಂಥಹ ಅದ್ಭುತವಾದ ಮತ್ತು ವಿಶಿಷ್ಟವಾದ ಗಂಭೀರ ಲಕ್ಷ್ಯವಿದು; ಮತ್ತು ಈ ವಾಗ್ದಾನವು ಅವರ ಶೋಧನೆಯ ಸ್ಥಿತಿಯ ಅಂತ್ಯದವರೆಗೂ ಇರುತ್ತದೆ. ಯಾರೆಲ್ಲರು ಆತನಲ್ಲಿ ನಂಬಿಕೆಯಿಟ್ಟಿದ್ದಾರೋ ಅವರೆಲ್ಲರಿಗೆ ದೇವರು ತಂದೆಯಾಗಿದ್ದಾರೆ. ಹಾಗೆಯೇ ಯಾರೆಲ್ಲರು ದೇವರ ಮಕ್ಕಳಾಗಿದ್ದಾರೋ ಮತ್ತು ಯಾರೆಲ್ಲರು ಪರಕೀಯರಾಗಿಯೂ, ಶತ್ರುಗಳಾಗಿಯೂ ಉಳಿದಿದ್ದಾರೋ ಅವರ ಮಧ್ಯೆ ಅಜಗಜಾಂತರ ವ್ಯತ್ಯಾಸವಿದೆ." ಆರ್.1561, ಸಿ.1, ಪಿ.4.

## "ಯೆಹೋವನಿಗೆ ಪ್ರಿಯನು ಸುರಕ್ಷಿತವಾಗಿ ಆತನ ಬಳಿಯಲ್ಲಿ ವಾಸ ಮಾಡುವನು; ಆತನು ಅವನಿಗೆ ದಿನವೆಲ್ಲಾ ಮರೆಯಾಗಿರುವನು; ಅವನು ಆತನ ಹೆಗಲುಗಳ ನಡುವೆ ವಾಸಮಾಡುವನು." ಧರ್ಮೋಪದೇಶಕಾಂಡ 33:12.

"ಆದರೆ ನಂಬಿಗಸ್ಥರು ಮಾತ್ರ ಈ ಪ್ರಕಾರವಾಗಿ ಸಂರಕ್ಷಿಸಲ್ಪಡುವರು. ದೇವರ ಚಿತ್ತವನ್ನು ಸರಿಯಾಗಿ ತಿಳಿದುಕೊಳ್ಳದೆ ಹಾಗೆಯೇ ಅವರ ಚಿತ್ತವನ್ನು ನೆರವೇರಿಸುತ್ತೇವೆ ಅನ್ನುವವರನ್ನು

ಕೂಡ ದೇವರು ಈ ರೀತಿಯಾಗಿ ಕಾಪಾಡುತ್ತಾರೆ ಎಂದು ಅರ್ಥೈಸಿಕೊಳ್ಳಬಾರದು; ಯಾರು ಯೇಸುಸ್ವಾಮಿಯ ಹೆಜ್ಜೆಜಾಡಿನಲ್ಲಿ ನಡೆದು ತಮ್ಮ ಸಂಪೂರ್ಣ ಶಕ್ತಿಯಿಂದ ದೇವರನ್ನು ಸಂತೋಷಪಡಿಸುತ್ತಾರೋ ಅಂಥವರು ಮಾತ್ರ ಈ ರೀತಿ ಸಂರಕ್ಷಿಸಲ್ಪಡುವರು. ದೇವರ ಸ್ತೋತ್ರದ ಧ್ವನಿಯನ್ನು ಕೇಳಿಸುವಂತೆ ಮಾಡುವುದು ಇಂದು ಇವರ ಉದ್ದೇಶವಾಗಿದೆ ಮತ್ತು ಸಾಕಾಗುವಷ್ಟು ಕೃಪಾಕಟಾಕ್ಷವೇ ಅವರ ಪಾಲಾಗಿದೆ. ಈಗ ಇರುವುದಕ್ಕಿಂತಲೂ ಮುಂದೆ ನಂಬಿಕೆ, ಅಧೀನತೆ ಮತ್ತು ಭರವಸೆಯ ವಿರುದ್ಧ ಶೋಧನೆಗಳು ಇನ್ನೂ ಹೆಚ್ಚಾಗಿದ್ದರೆ ಸ್ವಾಮಿಯ ಮೇಲೆ ನಿಷ್ಠೆಯುಳ್ಳವರು ಎಡವಿ ಬೀಳುವುದಿಲ್ಲ... ಕೆಲವೊಮ್ಮೆ ಕಾಣಲಾರದ ಕಡೆಗೂ ಹಿಂಬಾಲಿಸಿಕೊಂಡು ಹೋಗಬೇಕೆಂದಿದ್ದರೂ ಇವರು ದೇವರ ಪ್ರಭಾವಯುಕ್ತವಾದ ಬಲದಲ್ಲಿ ದೃಢವಾಗಿರುತ್ತಾರೆ." ಆರ್.5501,ಸಿ.2,ಪಿ.2.

### "ಸ್ಥಿರಚಿತ್ತನಾಗಿರು, ಧೈರ್ಯದಿಂದಿರು, ಅಂಜಬೇಡ, ಕಳವಳಗೊಳ್ಳಬೇಡ, ನೀನು ಹೋಗುವ ಎಡೆಗಳಲ್ಲೆಲ್ಲಾ ನಿನ್ನ ದೇವರೂ ಸರ್ವೇಶ್ವರನೂ ಆದ ನಾನು ನಿನ್ನ ಸಂಗಡ ಇರುತ್ತೇನೆ." ಯೆಹೋಶುವ 1:9.

"ಲೋಕ, ಶರೀರ ಮತ್ತು ಸೈತಾನನೊಡನೆ ಕಾದಾಡಲು ನಮ್ಮಲ್ಲಿರುವುದಕ್ಕಿಂತಲೂ ಅಧಿಕ ಶಕ್ತಿ ಬೇಕು; ಈ ಎದೆಗಾರಿಕೆ ನಮಗೆ ಯೆಹೋಶುವನಿಗೆ ಕೊಟ್ಟಂಥಹ (ಮೇಲೆ ಹೇಳಿದ ಹಾಗೆ) ದೈವೀಕ ಭರವಸೆಯಿಂದ ಬರಬೇಕು." ಆರ್.3080, ಸಿ.2.

### "ನಿಮ್ಮ ದೇವರಾದ ಯೆಹೋವನು ನಿಮ್ಮ ವಿಷಯದಲ್ಲಿ ನುಡಿದ ಆಶೀರ್ವಾದಗಳಲ್ಲಿ ಒಂದೂ ವ್ಯರ್ಥವಾಗುವುದಿಲ್ಲ." ಯೆಹೋಶುವ 23:14.

"ನಮ್ಮ ಜೀವಿತದ ಅತ್ಯಂತ ಚಿಕ್ಕ ಮತ್ತು ಅತ್ಯಂತ ಶ್ರೇಷ್ಠವಾದ ವಿಷಯಗಳಲ್ಲಿ ಆತನು ನಮ್ಮ ಹಿತಾಸಕ್ತಿಯನ್ನೇ ನೋಡಿದ್ದಾನೆ. ಪ್ರತಿಯೊಂದು ಮೋಡವೂ ಬೆಳ್ಳಿಯ ಗೆರೆಯನ್ನು ಹೊಂದಿದೆ! ಹೀಗಿರುವಲ್ಲಿ ನಾವು ದೇವರಿಗೆ ಏನನ್ನು ಸಮರ್ಪಿಸಬಹುದು?" ಆರ್.5538, ಸಿ.1 ಕೊನೇ ಭಾಗ, ಸಿ.2, ಮೇಲೆ.

### "ಆತನು ತನ್ನ ಭಕ್ತರ ಹೆಜ್ಜೆಗಳನ್ನು ಕಾಯುವನು" 1 ಸಮುವೇಲ 2:9.

"ಕ್ರಿಸ್ತನಲ್ಲಿ ನೂತನ ಸೃಷ್ಟಿಗಳಾಗಿರುವ ಅವರಿಗೆ ಏನೊಂದು ಆಪತ್ತು ಸಂಭವಿಸುವುದಿಲ್ಲ." ಆರ್.5862, ಸಿ.2, ಪಿ.3.

### "ನಮ್ಮ ಸಮಯಗಳು ದೇವರ ಕೈಗಳಲ್ಲಿವೆ."

"ಇಂದು ಇಲ್ಲಿರುವ ನಾವು ಪುನಃ ಶರೀರದಲ್ಲಿ ಭೇಟಿಯಾಗುತ್ತೇವೆಯೋ ಇಲ್ಲವೋ ಎಂದು ನಮಗೆ ಗೊತ್ತಿಲ್ಲ. ಅದೇನು ದೊಡ್ಡ ವಿಷಯ? ದೈವಾನುಗ್ರಹವು ಯಾವ ರೀತಿಯಲ್ಲಿ ನಮ್ಮನ್ನು ನಡೆಸಿದರೂ, ಸಾಯುವುದರಲ್ಲೂ ಜೀವಂತವಾಗಿರುವುದರಲ್ಲೂ ಪೂರ್ಣ ಸಂತೃಪ್ತಿಯನ್ನು

ಹೊಂದಿದ್ದೇವೆ. "ನನ್ನ ಸಮಯಗಳು ನಿನ್ನ ಕೈಗಳಲ್ಲಿವೆ; ನನ್ನ ದೇವರೇ ಅವು ಅಲ್ಲಿರುವುದೇ ನನ್ನ ಇಚ್ಛೆ. ಇದು ಎಷ್ಟೊಂದು ಸೊಗಸಾಗಿ ವರ್ಣಿಸುತ್ತದೆ ಅಲ್ಲವೇ? ನಮ್ಮ ಕಾಲ ಬದಲಾವಣೆಯಲ್ಲಿ ಮತ್ತು ದಿನನಿತ್ಯವೂ ನಾವು ಸಂತೋಷಪಡುವ ಎಲ್ಲಾ ವಿಷಯಗಳಲ್ಲೂ ದೇವರ ಚಿತ್ತವೇ ನಡೆಯಬೇಕೆಂಬುದು ನಮ್ಮ ಇಚ್ಛೆ–ಇದೆಲ್ಲವನ್ನು ಅವರಿಗೇ ಸಮರ್ಪಿಸಬೇಕು. ನಮ್ಮ ಇಚ್ಛೆಗಳು ಸಂಪೂರ್ಣವಾಗಿ ಸತ್ತಿವೆ. ಆತನ ಚಿತ್ತ ನಿಮ್ಮ ದೇಹದಲ್ಲಿ ಮತ್ತು ನನ್ನಲ್ಲಿ ಮತ್ತು ನಮ್ಮೆಲ್ಲರಲ್ಲೂ ದೊರೆತನ ಮಾಡಬೇಕು." ಆರ್.5728, ಸಿ.2, ಪಿ.5.

## "ಯೆಹೋವನು ದಯದಿಂದ ನಿಮ್ಮನ್ನು ಸ್ವಕೀಯಜನವನ್ನಾಗಿ ಆರಿಸಿಕೊಂಡ ಮೇಲೆ ಆತನು ತನ್ನ ಮಹೋನ್ನತ ನಾಮದ ನಿಮಿತ್ತವಾಗಿ ನಿಮ್ಮನ್ನು ಕೈಬಿಡುವುದೇ ಇಲ್ಲ." 1 ಸಮುವೇಲ 12:22.

"ಈ ವಚನವನ್ನು ಆತ್ಮೀಕ ಇಸ್ರಾಯೇಲರಿಗೆ ಅನ್ವಯಿಸಿದರೆ ನಾವು ಅತ್ಯಂತ ನೆಮ್ಮದಿಯನ್ನು ಇದರಿಂದಲೂ ಹೊಂದಬಹುದು. 'ವಿಶಿಷ್ಟ ಜನರಾಗಿ ಆಯ್ದುಕೊಂಡ ಪ್ರಾಕೃತ ಇಸ್ರಾಯೇಲರಿಗೇ ಇದೊಂದು ಕೃಪೆಯಾಗಿದ್ದರೆ, ಪ್ರಧಾನ ಮಗನಾದ ಕ್ರಿಸ್ತಯೇಸುವಿನ ಅಧೀನದಲ್ಲಿ ದೇವರ ಮನೆಯ ಮಕ್ಕಳಾಗಿ, ದೇವರಿಂದ ಆಯ್ದುಕೊಂಡು, ದೇವರ ಮನೆಯ ಸೇವಕರಾಗಿ ನಮ್ಮ ದೃಢವಿಶ್ವಾಸ ಮತ್ತು ಸ್ಥಿರವಾದ ನಂಬಿಕೆಯಲ್ಲಿ ಕೊನೆಯವರೆಗೂ ಉತ್ಸಾಹದಿಂದಿರುವ ದೇವರ ನಿವಾಸವಾಗಿರುವ ಆತ್ಮೀಕ ಇಸ್ರಾಯೇಲರಿಗೆ ಎಂತಹ ಅತ್ಯುನ್ನತ ಆಶೀರ್ವಾದವಿದು." (ಹಿಬ್ರಿಯ. 3:6)

"ದೇವರಿಗೆ ಭಯಭಕ್ತಿಯಿಂದ ಸನ್ಮಾನವನ್ನು ಸಲ್ಲಿಸಲು ದೇವಜನರು ಕರೆಯಲ್ಪಟ್ಟಿರುವುದು ಯೋಗ್ಯವಾಗಿಯೇ ಇದೆ, ಒಂದು ವೇಳೆ ಪವಿತ್ರಗ್ರಂಥವು ಸಂಪೂರ್ಣವಾಗಿ ವಾಗ್ದಂಡನೆಗಳಿಂದಲೇ ಮತ್ತು ಆಜ್ಞೆಗಳಿಂದಲೇ ಬರೆಯಲ್ಪಟ್ಟಿದ್ದರೆ ನಿಜವಾಗಿ ದೇವಜನರು ಬಹು ಹಿಂದೆಯೇ ಎದೆಗುಂದುತ್ತಿದ್ದರು. ಅದಕ್ಕೆ ಬದಲಾಗಿ ವಾಗ್ದಂಡನೆ ಮತ್ತು ತಿದ್ದುಪಡಿಗಳೊಂದಿಗೆ ಪ್ರೀತಿ ಮತ್ತು ದಯೆ, ಒಳ್ಳೆಯತನ ಹಾಗು ದೀರ್ಘಶಾಂತಿಯ ದಯಾಳತ್ವವನ್ನು ಗೌರವಿಸುವ ಆತನ ಅತ್ಯಂತ ಅಮೂಲ್ಯವಾದ ಸಾಕ್ಷಿಗಳನ್ನು ದೇವರು ನಮ್ಮನ್ನು ಹುರಿದುಂಬಿಸಲು ಕೊಡುತ್ತಿದ್ದಾರೆ." ಆರ್.3223, ಸಿ.2, ಪಿ.3.

## "ಯೆಹೋವನು ನನ್ನ ಬಂಡೆಯೂ ನನ್ನ ಕೋಟೆಯೂ ನನ್ನ ವಿಮೋಚಕನೂ ಆಗಿದ್ದಾನೆ." 2 ಸಮುವೇಲ 22:2.

"ಇದು ದೇವಜನರೆಲ್ಲರಿಗೆ ಅನ್ವಯವಾಗುವ ಆಶೀರ್ವದಿಸಲ್ಪಟ್ಟ ಭರವಸೆಯಾಗಿದೆ ಮತ್ತು ಇದು ಆತನ ಒಳ್ಳೆಯತನವನ್ನು ಧ್ಯಾನಿಸುವವರಲ್ಲಿ ಹಾಗು ಆತನ ಪವಿತ್ರನಾಮಕ್ಕೆ ಯಕ್ತವಾಗಿರುವ ಸ್ತೋತ್ರವನ್ನು ಸಮರ್ಪಿಸಿ ತಾವಾಗಿಯೇ ದೇವರಲ್ಲಿ ಹರ್ಷಿಸುವವರಲ್ಲಿ ಧಾರಾಳವಾಗಿ ಪ್ರಾಮಾಣೀಕರಿಸಲ್ಪಟ್ಟಿದೆ. ಯೆಹೋವನು ನನ್ನ ಬಂಡೆ (ಅದರ ಮೇಲೆ ನನ್ನ

ನಿರೀಕ್ಷೆಗಳನ್ನು ಸುರಕ್ಷಿತವಾಗಿ ಕಟ್ಟಬಲ್ಲೆ) ಮತ್ತು ನನ್ನ ಕೋಟೆ (ಇದರಲ್ಲಿ ನಾನು ಸುರಕ್ಷಿತವಾಗಿ ಅಡಗಿಕೊಳ್ಳಬಲ್ಲೆ) ಮತ್ತು ನನ್ನ ವಿಮೋಚಕನು (ಎಲ್ಲಾ ಆಪತ್ತಿನ ಸಮಯದಲ್ಲಿ)." ಆರ್.2032, ಸಿ.2, ಪಿ.1.

## "ಯೆಹೋವನು ಭೂಲೋಕದ ಎಲ್ಲಾ ಕಡೆಗಳಲ್ಲಿಯೂ ದೃಷ್ಟಿಯನ್ನು ಪ್ರಸರಿಸುತ್ತಾ ತನ್ನ ಕಡೆಗೆ ಯಥಾರ್ಥಮನಸ್ಸುಳ್ಳವರ ರಕ್ಷಣೆಗಾಗಿ ತನ್ನ ಪ್ರತಾಪವನ್ನು ತೋರ್ಪಡಿಸುತ್ತಾನೆ." 2 ಪೂರ್ವಕಾಲವೃತ್ತಾಂತ 16:9.

"ಯಾವುದೇ ವಿಷಯವಾದರೂ ಅದನ್ನು ತಿಳಿದುಕೊಳ್ಳುವ ದೇವರ ಶಕ್ತಿಯ ಪ್ರಭಾವಕ್ಕೆ ಈ ಕಣ್ಣುಗಳು ಉಲ್ಲೇಖಿಸಲ್ಪಟ್ಟಿವೆ... ನಮ್ಮ ಯಾವುದೇ ವಿಷಯಗಳಿಗಿಂತಲೂ ದೇವರಲ್ಲಿ ಅತೀ ಶ್ರೇಷ್ಟವಾದ ವಿಷಯಗಳಿವೆ ಎಂಬುದರಲ್ಲಿ ಸಂದೇಹವೇ ಇಲ್ಲ... ದೇವದೂತರು ದೇವರ ಉಪಚಾರಕರಾಗಿದ್ದಾರೆ ಮತ್ತು ಅವರಿಗೆ ದೇವರ ಜನರ ಮೇಲೆ ಅಧಿಕಾರವಿದೆ ಎಂದು ದೇವರು ನಮಗೆ ಹೇಳುತ್ತಾರೆ... ಆದರೆ ದೇವದೂತರುಗಳಿಗೆ... ಜಗತ್ತಿನ ಚರಿತ್ರೆಯಲ್ಲಿಯೇ ಹಿಂದಿದ್ದ ದೇವಜನರೆಲ್ಲರಿಗಿಂತ ಹೆಚ್ಚಾಗಿ ಶುಭಸಂದೇಶ ಸಭೆಯ ನಮ್ಮ ಮೇಲೆ ಅತೀ ಹೆಚ್ಚಾದ ಅಧಿಕಾರವಿದೆ. ದೇವರು ಆತ್ಮೀಕ ಇಸ್ರಾಯೇಲರಲ್ಲಿ ಅತೀ ವಿಶೇಷವಾಗಿ ಆಸಕ್ತಿಯುಳ್ಳವರಾಗಿದ್ದಾರೆ. ಆದ್ದರಿಂದ ಈ ದೇವದೂತರು ಈ ಮೇಲಿನ ದೈವಾನುಗ್ರಹವನ್ನು ಅಥವಾ ಬೇರೆ ದೈವಾನುಗ್ರಹವನ್ನು ನಮ್ಮಲ್ಲಿ ಉಂಟುಮಾಡುವುದಕ್ಕಾಗಿ ನಮ್ಮ ಬಗ್ಗೆ ಗಂಭೀರ ಲಕ್ಷ್ಯಕೊಡುತ್ತಾರೆ. ನಮ್ಮ ಕಾರ್ಯಗಳ ಮೇಲೆ ನಿಗಾ ಇಡುತ್ತಾರೆ ಮತ್ತು ನಮ್ಮ ಕೆಲಸಗಳ ಮೇಲ್ವಿಚಾರಣೆ ಮಾಡುತ್ತಾರೆ ಮತ್ತು ನಮಗೆ ದೇವರ ಚಿತ್ತಕ್ಕನುಸಾರವಾಗಿ ಆತನ ಸಂಪರ್ಕ ವಾಹಕರು ಅಥವಾ ವಾಹಿನಿಯೂ ಆಗಿದ್ದಾರೆ. ಆರ್.5634, ಸಿ1, ಪಿ.3, 4, 5635, ಸಿ.1, ಪಿ.2.

## "ಯೆಹೋವನ ಆನಂದವೇ ನಿಮ್ಮ ಆಶ್ರಯವಾಗಿದೆ." ನೆಹೆಮಿಯ 8:10.

"ನಮ್ಮ ಸಂತೋಷದ ಸಾಮರ್ಥ್ಯವು ಆಗಾಗ್ಗೆ ಇರುವಂಥದ್ದು ಅಲ್ಲ, ಆದರೆ ನಮ್ಮ ಚಿಕ್ಕ ಮಣ್ಣಿನ ಘಟಕಗಳು ಎಷ್ಟರ ಮಟ್ಟಿಗೆ ದೇವರ ಸಂತೋಷವನ್ನು ಭರ್ತಿಯಾಗಿ ಹಿಡಿಯಬಲ್ಲದೋ ಅಷ್ಟರ ಮಟ್ಟಿಗೆ ಭರ್ತಿಯಾಗಿರುತ್ತದೆ. (ಯೊಹಾನ 14:23) "ಇಂಥಹ ಕೂಟದಲ್ಲಿ ಯಾವುದೇ ಕ್ರೈಸ್ತನಾದರೂ ದೇವರಲ್ಲಿ ಸ್ವಲ್ಪ ಪ್ರಮಾಣದ ಆನಂದವನ್ನಾದರೂ ಗ್ರಹಿಸಿಕೊಳ್ಳುವಲ್ಲಿ ಸಂಪೂರ್ಣವಾಗಿ ವಿಫಲನಾಗುವನೇ? ಒಂದು ವೇಳೆ ವಾಗ್ದಾನವನ್ನು ಮನದಟ್ಟುಮಾಡಿಕೊಂಡು ಅವನ ನಂಬಿಕೆಯು ಅದನ್ನೇ ಹಿಡಿದುಕೊಂಡರೆ ಖಂಡಿತ ಇಲ್ಲ, ದೇವರಲ್ಲಿ ಮನದಟ್ಟು ಮಾಡಿಕೊಂಡ ಆನಂದವು ಖಂಡಿತವಾಗಿ ಗ್ರಹಿಕೆಗೆ ಬರುತ್ತದೆ ಮತ್ತು ಎಷ್ಟು ಸ್ಥಿರವಾಗಿ ಅವನ ನಂಬಿಕೆಯನ್ನು ವಾಗ್ದಾನದ ಮೇಲೆ ಹಿಡಿದಿಡುತ್ತಾನೋ ಅಷ್ಟು ಹೆಚ್ಚಾಗಿ ಆದರ ಈಡೇರುವಿಕೆಯನ್ನು ಗ್ರಹಿಸುತ್ತಾನೆ; ಮತ್ತು ಇನ್ನೂ ಹೆಚ್ಚಾಗಿ ಅವನ ಸಂತೋಷವು ತುಂಬಿರುತ್ತದೆ; ಏಕೆಂದರೆ ಏನೇ ನಿಯಮಗಳೂ ಮತ್ತು ಸನ್ನಿವೇಶಗಳಿದ್ದರೂ ದೇವರ ಪ್ರಸನ್ನತೆಯಲ್ಲಿ ಪರಿಪೂರ್ಣ ಸಂತೋಷವಿರುವುದು." ಆರ್.1949, ಸಿ.1, ಎಪ್2,3.

**“ಆರು ಇಕ್ಕಟ್ಟುಗಳಿಂದ ಆತನು ನಿನ್ನನ್ನು ಬಿಡಿಸುವನು; ಏಳನೆಯ ಇಕ್ಕಟ್ಟು ಉಂಟಾದರೂ ಯಾವ ಕೇಡೂ ನಿನ್ನನ್ನು ಮುಟ್ಟದು.” ಯೋಬನು 5:19.**

“ನಾವು ಕ್ರಿಸ್ತನಲ್ಲಿ ನೆಲೆಯಾಗಿದ್ದು ಮತ್ತು ಆತನ ವಾಕ್ಯ ನಮ್ಮಲ್ಲಿ ನೆಲೆಯಾಗಿದ್ದಲ್ಲಿ ಆತನು ನಮ್ಮನ್ನು ಆರು ಇಕ್ಕಟ್ಟುಗಳಿಂದ ಬಿಡಿಸುವನು ಮತ್ತು ಏಳನೆಯದರಲ್ಲಿ ನಮ್ಮ ಕೈ ಬಿಡುವುದಿಲ್ಲ, ಏಕೆಂದರೆ ನಾವು ದೇವರಿಂದ ಕರೆಯಲ್ಪಟ್ಟವರು, ಏಕೆಂದರೆ ನಮ್ಮ ದೇಹಗಳಲ್ಲಿ ಆತನನ್ನು ಮಹಿಮೆಪಡಿಸಲು ಹಾತೊರೆಯುವವರು ಆಗಿದ್ದೇವೆ. ಆದುದರಿಂದ ನಾವು ಭಯಪಡುವ ಅವಶ್ಯಕತೆ ಇಲ್ಲ. ಮನುಷ್ಯನು ನಮಗೆ ಏನಾದರೂ ಕೇಡು ಮಾಡಬಹುದೆಂದು ನಾವು ಅಂಜುವ ಅಗತ್ಯವಿಲ್ಲ.” ಆರ್.5539, ಸಿ.1, ಪಿ.8.

ಕೆಲವೊಂದು ಇಂಥಹ ವಾಗ್ದಾನಗಳನ್ನು ಕವಿಯು ಈ ರೀತಿ ಸಾರಾಂಶಿತವಾಗಿ ಹೇಳಿದ್ದಾನೆ... “ನಾನು ನಿನ್ನನ್ನು ಆಳವಾದ ನೀರಿನಲ್ಲಿ ನಡೆದು ಹೋಗಲು ಕರೆಯುವಾಗ, ನದಿಗಳ ವಿಪತ್ತು ನಿನ್ನ ಮೇಲೆ ಮಿತಿಮೀರಿ ಹರಿಯುವುದಿಲ್ಲ; ಏಕೆಂದರೆ ನಿನ್ನ ಸಂಕಷ್ಟಗಳಲ್ಲಿ ನಿನ್ನನ್ನು ಆಶೀರ್ವದಿಸಲು ಮತ್ತು ನಿನ್ನನ್ನು ಪವಿತ್ರೀಕರಿಸಲು ನಿನ್ನ ಜೊತೆಗಿರುವೆನು.” ಆರ್.4784, ಸಿ.2, ಮೇಲೆ.

**“ನಾನು ಯೆಹೋವನನ್ನು ಯಾವಾಗಲೂ ನನ್ನೆದುರಿಗೇ ಇಟ್ಟುಕೊಂಡಿದ್ದೇನೆ; ಆತನು ನನ್ನ ಬಲಗಡೆಯಲ್ಲಿ ಇರುವುದರಿಂದ ನಾನು ಎಂದಿಗೂ ಕದಲುವುದಿಲ್ಲ.” ಕೀರ್ತನೆಗಳು 16:8**

“ನನ್ನ ಬಲಗಡೆಯಲಿ, ಅಂದರೆ ನನ್ನ ವಾತ್ಸಲ್ಯಗಳ ಸಮೀಪದಲ್ಲಿ ಎಂಬುವದಾಗಿದೆ.”

“ವಿವೇಕವು, ಸ್ವಂತ ಆತ್ಮವಿಶ್ವಾಸದ ಬದಲಾಗಿ ಅದರ ನ್ಯೂನತೆಗಳನ್ನು ಮತ್ತು ಅಸಂಪೂರ್ಣತೆಯನ್ನು ಜ್ಞಾಪಿಸಿ, ಅದಕ್ಕೆ ಅನುರೂಪವಾಗಿ ನಮ್ಮನ್ನು ಎಲ್ಲದಕ್ಕಿಂತಲೂ ಹೆಚ್ಚಾಗಿ ಬಲಪಡಿಸಿ ಮತ್ತು ನಮ್ಮ ಬಿದ್ದುಹೋದ ಸ್ಥಿತಿಯ ಕೆಟ್ಟತನದಿಂದ ದೂರಹೋಗಲು ಶಕ್ತಿಯುತಗೊಳಿಸುವ ದೇವರ ಮೇಲಿರುವ ಅತೀ ಹೆಚ್ಚಿನ ಭಯಭಕ್ತಿ ಮತ್ತು ಆತನ ಮೇಲಿರುವ ಅವಲಂಬನೆಗಳು ನಮ್ಮ ಸ್ವಂತ ಆತ್ಮವಿಶ್ವಾಸದ ಬದಲಾಗಿ ಅಪನಂಬಿಕೆಯನ್ನು ಆದೇಶಿಸುತ್ತದೆ... ಈ ರೀತಿ ನಾವು ದೀನಮನಸ್ಕರಾಗಿ ನಂಬಿಗಸ್ಥರಾದಾಗ ದೇವರು ನಮ್ಮನ್ನು ಆತನ ನಾಮವನ್ನು ಬೇರೆಯವರಿಗೆ ಪ್ರಚಾರಪಡಿಸಲು ಆತನಿಂದ ಆರಿಸಲ್ಪಟ್ಟ ಪಾತ್ರೆಯನ್ನಾಗಿ ನೇಮಿಸುತ್ತಾರೆ. ಆರ್.5186, ಸಿ.1, ಪಿ.1; ಸಿ.2, ಪಿ.2.

**“ನೀನು ನನಗೆ ಜೀವಮಾರ್ಗವನ್ನು ತಿಳಿಯಪಡಿಸುವಿ; ನಿನ್ನ ಸಮ್ಮುಖದಲ್ಲಿ ಪರಿಪೂರ್ಣ ಸಂತೋಷವಿದೆ; ನಿನ್ನ ಬಲಗೈಯಲ್ಲಿ ಶಾಶ್ವತಭಾಗ್ಯವಿದೆ.” ಕೀರ್ತನೆಗಳು 16:11.**

“ಇಂಥವರೇ ಈ ಪ್ರಸ್ತುತ ಜೀವಿತದ ವಿಷಯಗಳನ್ನು ಅವುಗಳ ನಿಜವಾದ ಮಹತ್ವಕ್ಕೆ ತಕ್ಕಂತೆ ಗಣನೆ ಮಾಡಲು ಕಲಿತುಕೊಂಡಿದ್ದಾರೆ. ಅವರ (ಪ್ರಸ್ತುತ ಜೀವಿತದ) ಎಲ್ಲಾ ಸಂತೋಷಗಳು ಕ್ಷಣಿಕವಾದವುಗಳು ಮತ್ತು ಅತೃಪ್ತಿಕರವೂ ಕೂಡ ಎಂದೆಣಿಸಿ, ಅದರಲ್ಲಿರುವ ಒಂದೇ ಒಂದು

ಬೆಲೆಯೆಂದರೆ ದೇವರ ಕರೆಗೆ ಕೇಳುವ ಮತ್ತು ನಮ್ಮ ಕರೆಯನ್ನು ಮತ್ತು ಆಯ್ಕೆಯನ್ನು ದೃಢಪಡಿಸಲು ಅದು ಕೊಡುವ ಅನುಭವಗಳು ಹಾಗೂ ಶಿಸ್ತು ಮತ್ತು ಶಿಕ್ಷಣ ಎಂಬುದನ್ನು ನೋಡುತ್ತಾರೆ. ಹೀಗೆ ಪ್ರಸ್ತುತ ಜೀವಿತದ ಸರಿಯಾದ ಉಪಯೋಗವನ್ನು ಮಾಡುವಾಗ ದೇವರು ತನ್ನ ವಾಕ್ಯದ ಮೂಲಕ ತೋರಿಸುವ ಜೀವಿತದ ಹಾದಿಯಲ್ಲಿ ನಡೆಯುವಾಗ, ನಮ್ಮ ಸಂತೋಷಗಳು ಮತ್ತು ನಂಬಿಕೆ ಮತ್ತು ಭರವಸೆ ನಾವು ನೋಡದಿರುವ ಖಂಡಿತವಾಗಿಯೂ ಶಾಶ್ವತವಾಗಿಯೂ ಇರುವ ವಿಷಯಗಳ ಮೇಲಿವೆ; ಏಕೆಂದರೆ ದಿನದಿಂದ ದಿನಕ್ಕೆ ಅತೀ ಶೀಘ್ರವಾಗಿ ದೇವರ ಸಮ್ಮುಖದಲ್ಲಿ ನಮಗೆ ಸಂಪೂರ್ಣ ಸಂತೋಷವೂ ಹಾಗೂ ಎಂದೆಂದಿಗೂ ಆತನ ಬಲಗಡೆಯಲ್ಲಿ ಕೃಪೆಯ ಉನ್ನತ ಸ್ಥಾನದಲ್ಲಿ ಸೌಭಾಗ್ಯವಿದೆ ಎಂಬುದು ನಮಗೆ ತಿಳಿದಿದೆ." ಆರ್.1949, ಸಿ.1, ಪಿ.1.

"ನಮ್ಮ ಸಂತೋಷವು ಅತೀ ಹೆಚ್ಚಾಗಿ ದೇವವಾಕ್ಯದ ಮೇಲೆ ನಾವು ಮಾಡುವ ಅಭ್ಯಾಸದ ಮೇಲೆ ಮತ್ತು ನಮ್ಮ ಜ್ಞಾನವು ಅದರಲ್ಲಿ ಅಡಕಗೊಂಡಿರುವ ಅಮೂಲ್ಯವಾದ ವಾಗ್ದಾನಗಳ ಮೇಲೆ ಅವಲಂಬಿತವಾಗಿದೆ." ಆರ್. 5460, ಸಿ.1, ಮೇಲೆ.

## "ಕರ್ತನು ನನ್ನ ಬಂಡೆಯೂ ನನ್ನ ಕೋಟೆಯೂ ನನ್ನನ್ನು ತಪ್ಪಿಸುವಾತನೂ ನನ್ನ ದೇವರೂ ನಾನು ಭರವಸವಿಡುವ ನನ್ನ ಬಲವೂ ನನ್ನ ಗುರಾಣಿಯೂ ನನ್ನ ರಕ್ಷಣೆಯ ಕೊಂಬೂ ನನ್ನ ಉನ್ನತವಾದ ದುರ್ಗವೂ ಆಗಿದ್ದಾನೆ." ಕೀರ್ತನೆಗಳು 18:2.

"ದೇವರು ತನ್ನ ಮೇಲೆ ನಂಬಿಕೆಯಿಟ್ಟುವ ಎಲ್ಲರಿಗೂ ರಕ್ಷಿಸುವ ಗುರಾಣಿಯಾಗಿದ್ದಾನೆ; ಆತನು ಬಲಿಷ್ಠನಾದ ದೇವರಾಗಿದ್ದು ನಮ್ಮನ್ನು ಕಾಪಾಡುವವನಲ್ಲವೇ? ಅಥವಾ, ಬಂಡೆಯಂತಿದ್ದು (ನಮ್ಮ ಆತ್ಮಕ್ಕೆ ಸುರಕ್ಷಿತವಾದ ಪ್ರಾಣಾಧಾರ) ನಮ್ಮನ್ನು ರಕ್ಷಿಸುವ ದೇವರಾಗಿಲ್ಲ? ನಮ್ಮ ನಂಬಿಕೆಯ ಮತ್ತು ಭರವಸೆಯ ಲಂಗರನ್ನು ಹಾಕಲು ಬೇರೆ ಯಾರೂ ಇಲ್ಲ; ಆದರೆ ನಿಶ್ಚಿಂತವಾಗಿ ಸುರಕ್ಷಿತವಾದ ಲಂಗರನ್ನು ಆತನಲ್ಲಿ ನೆಟ್ಟು ನಂಬಿಕೆಯಿಂದ ಭಯವಿಲ್ಲದೆ, ಸುಮಧುರವಾದ ವಿಶ್ರಾಂತಿಯನ್ನು ಆತನ ರೆಕ್ಕೆಗಳ ನೆರಳಿನಡಿಯಲ್ಲಿ ಪಡೆಯಬಹುದು. "ಯೆಹೋವನು ಚೈತನ್ಯ ಸ್ವರೂಪನು; ನನ್ನ ಶರಣನಿಗೆ ಸ್ತೋತ್ರ; ನನ್ನನ್ನು ರಕ್ಷಿಸುವ ದೇವರಿಗೆ ಕೊಂಡಾಟ." ಕೀರ್ತನೆ. 18:46 ಆರ್.3337, ಸಿ.2, ಪಿ.4.

## "ನನಗೆ ಶೌರ್ಯವೆಂಬ ನಡುಕಟ್ಟನ್ನು ಬಿಗಿಯುವವನೂ ನನ್ನ ಮಾರ್ಗವನ್ನು ಸರಾಗಮಾಡವವನೂ ದೇವರೇ; ನಿನ್ನ ಬಲದಿಂದ ದಂಡಿನ ಮೇಲೆ ಬೀಳುವೆನು; ನನ್ನ ದೇವರ ಸಹಾಯದಿಂದ ಪ್ರಕಾರವನ್ನು ನೆಗೆದೆನು." ಕೀರ್ತನೆಗಳು 18:32, 29.

"ಈ ಕಾರ್ಯವನ್ನು ಯಾವುದೇ ಮನುಷ್ಯನು ತನ್ನದೇ ಆದ ಸ್ವಂತ ಶಕ್ತಿಯಿಂದ ಮಾಡಲು ಪ್ರಯತ್ನಿಸಿದ್ದಲ್ಲಿ ಅವನು ಖಂಡಿತವಾಗಿಯೂ ವಿಫಲವಾಗುತ್ತಾನೆ; ಯಾಕೆಂದರೆ

ಪ್ರತಿಯೊಬ್ಬರನ್ನೂ ಶೋಧಿಸುವ ತೀಕ್ಷ್ಣವಾದ ಶೋಧನೆಯು ಶರೀರದ ಅಂತಃಕರಣಕ್ಕೆ ಮಿತಿಮೀರಿ ಪರೀಕ್ಷಿಸುತ್ತದೆ; ಆದರೆ ಆತನ ಸುಚಿತ್ತವನ್ನು ಮತ್ತು ಉದ್ದೇಶವನ್ನು ನೆರವೇರಿಸಲು ಪ್ರತಿಷ್ಠಿಸಿಕೊಂಡವರಲ್ಲಿ ಪ್ರಯತ್ನವನ್ನು ಉಂಟುಮಾಡಿರುವ ದೇವರು, ಆತನ ದಯೆಯ ಮೇಲೆ ಅವಲಂಬಿತವಾಗಿರುವವರನ್ನು ಈ ರೀತಿ ಬಲಪಡಿಸುತ್ತಾನೆ ಮತ್ತು ಸಜ್ಜುಗೊಳಿಸುತ್ತಾನೆ; ಆದ್ದರಿಂದ ಅವರು ಕೀರ್ತನೆಗಾರನ ಜೊತೆ (ಈ ಮೇಲಿನ ಪಂಕ್ತಿಯನ್ನು) ಮತ್ತು ಪೌಲನ ಜೊತೆ "ನನ್ನನ್ನು ಬಲಪಡಿಸುವ ಕ್ರಿಸ್ತನ ಮೂಲಕ ನಾನು ಎಲ್ಲವನ್ನು ಮಾಡಲು ಶಕ್ತನಾಗಿದ್ದೇನೆ" ಎಂದು ಹೇಳಬಹುದು. ಆರ್.2154, ಸಿ.1, ಪಿ.4.

## "ಯೆಹೋವನು ನನ್ನ ಕುರುಬನು; ಕೊರತೆಪಡೆನು." ಕೀರ್ತನೆಗಳು 23:1.

"ಯೋಗ್ಯವಾದ ಕುರಿಗಳು ತಮ್ಮ ಚಿತ್ತವನ್ನು ಕುರುಬನ ಚಿತ್ತಕ್ಕೇ ಸಮರ್ಪಿಸುತ್ತವೆ. ಮತ್ತು ಆತನ ಮಾರ್ಗದರ್ಶನದಲ್ಲೇ ಸಂಪೂರ್ಣವಾಗಿ ಭರವಸೆಯಿಡುತ್ತವೆ ಮತ್ತು ಈ ರೀತಿ ಮಾಡುವವರು ಪ್ರಪಂಚದ ಜನರಿಗೆ ಸರ್ವಸಾಮಾನ್ಯವಾದ ಚಿಂತಾಪರ ಬಯಕೆಯಿಂದ ಬಿಡುಗಡೆ ಹೊಂದುತ್ತಾರೆ." ಆರ್.3269, ಸಿ.1, ಪಿ.3.

"ಅವರಿಗೆ ಹೆಚ್ಚು ವಿದ್ಯೆ ಮತ್ತು ವಾಕ್ಚಾತುರ್ಯ ಇಲ್ಲದಿರಬಹುದು; ಕುತರ್ಕಗಳ ತಪ್ಪಲ್ಲಿ ಎಲ್ಲವನ್ನೂ ಬಂಧಿಸಿಡುವದಕ್ಕೆ ಸಾಧ್ಯವಾಗದೆ ಇರಬಹುದು. ಆದರೂ ಸ್ವಾಮಿಯ ಧ್ವನಿಯು ಚೆನ್ನಾಗಿ ಚಿರಪರಿಚಿತವಾಗಿರುವುದರಿಂದ ಅವರು ತಕ್ಷಣ ಅಂಥಹ ಧ್ವನಿಗಳು ಅಪರಿಚಿತರ ಧ್ವನಿಗಳೆಂದು ಚೆನ್ನಾಗಿ ಗ್ರಹಿಸುತ್ತಾರೆ. ಮತ್ತು ಅಂಥವರನ್ನು ಅವರು ಹಿಂಬಾಲಿಸುವುದಿಲ್ಲ. ಏಕೆಂದರೆ ಅವರು ಕುರುಬನಿಗೆ ಮಾತ್ರ ಪ್ರಾಮಾಣಿಕರು ಹಾಗೂ ವಿಧೇಯರಾಗಿದ್ದಾರೆ. ಇಂಥಹ ಮನಸ್ಸು ಮತ್ತು ಹೃದಯತ್ವವಿರುವಂಥಹ ಮನೋಪ್ರವೃತ್ತಿಯಲ್ಲಿಯೇ ಈ ಪ್ರಸ್ತುತ ದಿನದ ಗೊಂದಲ ಮತ್ತು ಕಷ್ಟಗಳ ಮಧ್ಯದಲ್ಲಿಯೂ ನಮ್ಮ ಸುರಕ್ಷಿತತೆ ಇರುವುದು ಮತ್ತು ಇವೆಲ್ಲವುಗಳಲ್ಲಿ ನಿಸ್ಸಂದೇಹವಾಗಿಯೂ ಕೀರ್ತನೆಗಾರನ ಜೊತೆ 23ನೇ ಕೀರ್ತನೆಯನ್ನು ಹಾಡಬಹುದು." ಆರ್.3116, ಸಿ.1, ಪಿ.4,5.

## "ಆತನು ಹಸಿರುಗಾವಲುಗಳಲ್ಲಿ ನನ್ನನ್ನು ತಂಗಿಸುತ್ತಾನೆ; ವಿಶ್ರಾಂತಿಕರವಾದ ನೀರುಗಳ ಬಳಿಗೆ ಬರಮಾಡುತ್ತಾನೆ." ಕೀರ್ತನೆಗಳು 23:2

"ಕರ್ತನ ಯಾವ ಕುರಿಯು ಆತನ ವೈಯುಕ್ತಿಕ ಉಪಾಸನೆಗಳಲ್ಲಿ ಮತ್ತು ದೈವೀಕ ವಿಷಯಗಳ ಅಧ್ಯಯನದಲ್ಲಿ... ಮತ್ತು ಇತರರೊಂದಿಗೆ ಪ್ರಾರ್ಥನೆಯಲ್ಲಿ, ಸತ್ಯವೇದದ ಅಧ್ಯಯನದಲ್ಲಿ, ಕರ್ತನ ಒಳ್ಳೆಯತನಕ್ಕೆ ಮತ್ತು ಆತನ ದಯೆಗೆ ಸಾಕ್ಷಿಗಳನ್ನು ಕೊಡುವ ಕೂಟದಲ್ಲಿ ಒಟ್ಟು ಗೂಡುವಾಗ ಇಂಥಹ ಹಸಿರು ಹುಲ್ಲುಗಾವಲಿನ ಆತ್ಮೀಕ ಉಲ್ಲಾಸವನ್ನು ಹೊಂದಿಲ್ಲ! ಈ ಎಲ್ಲಾ ಅವಕಾಶಗಳು ಮತ್ತು ಭಾಗ್ಯಗಳು... ಉನ್ನತ ಕುರುಬನಿಂದ ಕುರಿಗಳಿಗೆ ಮಾಡಲ್ಪಟ್ಟ ಮುನ್ನೇರ್ಪಾಡುಗಳು... ಹೋಲಿಕೆಯಲ್ಲಿ ಪ್ರಶಾಂತವಾದ ನೀರಾದರೂ, ಸತ್ಯದ ಉಲ್ಲೇಖಗಳು ಮತ್ತು ಜೀವವುಳ್ಳ ಅನುಗ್ರಹಗಳನ್ನು ಕುರಿಗಳಿಂದಲೇ ಮಾತ್ರ ಕಂಡುಕೊಳ್ಳಲು

ಸಾಧ್ಯವಿಲ್ಲ; ಅವುಗಳನ್ನು ಕಂಡುಕೊಳ್ಳಲು ಅವುಗಳೆಡೆಗೆ ಮುನ್ನಡೆಸುವ ಆತ್ಮದ ಅಗತ್ಯವಿದೆ... ಈಗ ನಾವು ಆತನ ಸತ್ಯಯುತ ಸ್ವರವನ್ನು, ಮಿಥ್ಯ ಸ್ವರದ ಉಚ್ಚಾರಣೆಯಿಂದ ತುಂಬಾ ವ್ಯತ್ಯಾಸವಾಗಿರುವುದನ್ನು ಗ್ರಹಿಸೋಣ. ಅಪರಿಚಿತರನ್ನು ನಿಜವಾದ ಕುರಿಗಳು ಹಿಂಬಾಲಿಸು ವುದಿಲ್ಲ. ಏಕೆಂದರೆ ಅವುಗಳಿಗೆ ಅಪರಿಚಿತರ ಸ್ವರವು ಗೊತ್ತಿಲ್ಲ. ಅವು ಅದರ ಹಣದ ಸುರುಳಿ ಯನ್ನು ಅಥವಾ ಅದರ ಪ್ರಾಪಂಚಿಕ ಆಸೆಗಳ ವರ್ತುಲವನ್ನು ಅಥವಾ ಅದರ ಆರಾಧಕ ವರ್ಗದ ನಾದವನ್ನು ಅಥವಾ ಅದರ ದೈವೀಕ ಸಂದೇಶದ ಮಾದರಿಯ ಎದುರುತ್ತರದ ರೀತಿಯನ್ನು ಇಷ್ಟಪಡುವುದಿಲ್ಲ." ಆರ್.3269, ಸಿ.1, ಪಿ.5, ಸಿ.2, ಪಿ.1.

## "ನನ್ನ ಪ್ರಾಣವನ್ನು ಉಜ್ಜೀವಿಸಮಾಡಿ ತನ್ನ ಹೆಸರಿಗೆ ತಕ್ಕಂತೆ ನೀತಿ ಮಾರ್ಗದಲ್ಲಿ ನನ್ನನ್ನು ನಡಿಸುತ್ತಾನೆ." ಕೀರ್ತನೆಗಳು 23:3.

"ಆತನು ನನ್ನ ಪ್ರಾಣವನ್ನು ಉಜ್ಜೀವಿಸುತ್ತಾನೆ (ಅದನ್ನು ಮರಣದಿಂದ ಉದ್ಧರಿಸುತ್ತಾನೆ); ಆತನು ತನ್ನ ಹೆಸರಿಗೆ ತಕ್ಕಂತೆ ನೀತಿಮಾರ್ಗದಲ್ಲಿ ನನ್ನನ್ನು ನಡಿಸುತ್ತಾನೆ (ಏಕೆಂದರೆ ನಾನು ಆತನ ಮಗನು/ಳು ಮತ್ತು ಆತನ ಘನವಾದ ನಾಮವನ್ನು ಹೊತ್ತುಕೊಂಡಿದ್ದೇನೆ)" ಆರ್.3116, ಸಿ.2, ಮಧ್ಯ.

"ಕ್ರಿಸ್ತೀಯ ಅನುಭವಕ್ಕೆ ಅನ್ವಯಮಾಡುವಂಥದ್ದು ಪ್ರಾಣವನ್ನು ಉಜ್ಜೀವಿಸ ಮಾಡುವ ಅನುಭವ ಗಳೆಂದು ಅಥವಾ ನಮ್ಮ ಜೀವನಕ್ಕೆ ಪ್ರತಿಪಾದಿಸುವಂತೆ ನ್ಯಾಯನಿರ್ಣಯದ ಅನುಗುಣಗ ಳನ್ನು... ಮಾಡುವುದು ಎಂಬಂಥಾ ಅನುಭವಗಳನ್ನು ನೀಡಲಾಗಿದೆ. ನಾವು ಅದನ್ನು ತ್ಯಾಗ ಮಾಡಲು ಮತ್ತು ಕುರಿಗಳಿಗಾಗಿ ತನ್ನ ಜೀವವನ್ನೇ ಕೊಟ್ಟ ಉನ್ನತ ಕುರುಬನ ಹೆಜ್ಜೆಯ ಜಾಡಿ ನಲ್ಲಿ ನಡೆಯಲು ಅಳವಡಿಕೆಯನ್ನು ಮಾಡುತ್ತೇವೆ. ಅವುಗಳ ಆತ್ಮೀಕ ಬೆಳವಣಿಗೆಯ ಉಪ –ಯುಕ್ತಕರವಾಗಿ... ಈ ರೀತಿ ನಿಜವಾದ ಕುರಿಗಳು ಸರಿಯಾದ ದಾರಿಯಲ್ಲಿ ನಡೆಸಲ್ಪಡುತ್ತವೆ. ಇಂತಹ ದಯೆ ಹಾಗೂ ಆಶೀರ್ವಾದ ಮತ್ತು ಸದಾವಕಾಶಗಳು ಅವರಿಗೆ ತಮ್ಮಿಂದ ಅಥವಾ ತಮ್ಮ ಯೋಗ್ಯತೆಯ ನಿಮಿತ್ತ ದೊರೆಯುವಂಥದ್ದಲ್ಲ, ಆದರೆ ದೇವರ ಕೃಪೆಯಿಂದಲೇ ಆತನ ನಾಮದ ನಿಮಿತ್ತವಾಗಿ ದೊರೆಯುವಂಥದ್ದಾಗಿದೆ." ಆರ್.3269, ಸಿ.2, ಪಿ.3, 4.

## "ನಾನು ಮರಣದ ನೆರಳಿನ ಕಣಿವೆಯಲ್ಲಿ ನಡೆದರೂ ಕೇಡಿಗೆ ಭಯಪಡೆನು; ಯಾಕಂದರೆ ನೀನು ನನ್ನ ಸಂಗಡ ಇದ್ದೀ; ನಿನ್ನ ಕೋಲೂ ದೊಣ್ಣೆಯೂ ನನ್ನನ್ನು ಆದರಿಸುತ್ತವೆ." ಕೀರ್ತನೆಗಳು 23:4.

"ಚಿಕ್ಕ ಮಂದೆಗೆ ಸೇರಿದ ಕುರಿಗಳಿಗೆ ದೇವರ ದಯೆ ಇರುವುದರಿಂದ, ಆತನು ಅವರೊಂದಿಗೆ, ಅವರ ಪಕ್ಷದಲ್ಲಿ ಮತ್ತು ಆತನ ದಯೆಯನ್ನು ವಿಮೋಚನಾ ಬೆಲೆಯಲ್ಲಿ ಮೊದಲೇ ತೋರ್ಪಡಿಸಿರುವುದರಿಂದ ಯಾವ ಕೇಡಿಗೂ ಹೆದರುವುದಿಲ್ಲ. ಆತನ ವಾಕ್ಯದ

ಭರವಸೆಯೊಂದಿಗೆ ಅವರ ಜೊತೆಯಲ್ಲಿದ್ದಾರೆ–ಅದೇನೆಂದರೆ, ಮರಣವೆಂದರೆ ಅಗಲಿಕೆಯಲ್ಲ ಎಂಬ ವಾಗ್ದಾನವೇ... ಇಂಥವರು ಮರಣದ ನೆರಳಿನ ಕಣಿವೆಯಲ್ಲಿಯೂ ಅವರ ಹೃದಯಗಳಲ್ಲಿ ಹಾಡುತ್ತಾ, ಕೀರ್ತನೆಯ ಇಂಪನ್ನು ಮಾಡುತ್ತಾ ನಡೆಯುತ್ತಾರೆಂದರೆ ಏನಾಶ್ಚರ್ಯ! ಅದೇ ರೀತಿ ಆತನ ಸಹಾಯದ ಕೋಲೂ ಕರ್ತನ ಚಿಕ್ಕ ಮಂದೆಯ ಜೊತೆಗೆ ಮತ್ತು ಅವರ ಕುರುಬನೊಂದಿಗೆ ಈ ಬೆತ್ತದ ಎಲ್ಲಾ ಉಪಯೋಗಗಳು ಕುರಿಗಳ ಉಪಯಕ್ತತೆಗಾಗಿ ಹಾಗು ಕ್ಷೇಮಾಭಿವೃದ್ಧಿಗಾಗಿ, ಅದರ ಅತ್ಯಂತ ಶಕ್ತಿಯುತ ಶತ್ರುಗಳಿಂದ ರಕ್ಷಿಸಲು ಕುರುಬನ ಚುರುಕುತನವು ಕುರಿಗಳ ಕಷ್ಟಗಳಲ್ಲಿ ಜೊತೆಗಿರಲು ಮತ್ತು ಅವುಗಳು ಅಜಾಗರೂಕತೆಯಿಂದ ಇರುವಾಗ ಶಿಕ್ಷಿಸಲು ಉಪಯೋಗಿಸಲ್ಪಡುತ್ತದೆ... ಇವುಗಳಿಂದ ಕರ್ತನ ನಿಜವಾದ ಕುರಿಗಳು ಕುರುಬನ ಅನುಗ್ರಹವನ್ನು ಪ್ರೀತಿಸಲು ಕಲಿತುಕೊಳ್ಳುತ್ತವೆ ಮತ್ತು ಅವುಗಳಿಂದ ಸಾಂತ್ವಾನವನ್ನು ಪಡೆಯುತ್ತವೆ. ಆರ್.3269, ಸಿ.2, ಪಿ.34.

## "ನನ್ನ ವೈರಿಗಳ ಎದುರಿನಲ್ಲಿ ನನ್ನ ಮುಂದೆ ಮೇಜನ್ನು ಸಿದ್ಧಮಾಡುತ್ತೀ; ನೀನು ನನ್ನ ತಲೆಯನ್ನು ಎಣ್ಣೆಯಿಂದ ಅಭಿಷೇಕಿಸುತ್ತೀ; ನನ್ನ ಪಾತ್ರೆಯು ತುಂಬಿ ಹೊರಸೂಸುತ್ತದೆ." ಕೀರ್ತನೆಗಳು 23:5.

"ಎಷ್ಟೊಂದು ಬಗೆಬಗೆಯ ಔತಣಗಳು ಮತ್ತು ವ್ಯತ್ಯಾಸವುಳ್ಳ ಭಿನ್ನವಾದ ಉಪದೇಶಕರವಾದ ಮೃಷ್ಟಾನ್ನಗಳು ಹೆಸರಿನ ಸಭೆಯಲ್ಲಿರುವವು. ಈ ಔತಣಗಳಲ್ಲಿ ಹೆಚ್ಚಿನವುಗಳು ತಯಾರಿಸುವಾಗಲೇ ಹಾಳು ಮಾಡಿದ ಹಾಗೆ ತೋರುತ್ತವೆ. ಅವುಗಳಲ್ಲಿ ಕೆಲವೊಂದು ಹಳಸಿಹೋದವುಗಳು, ಕೆಲವೊಂದು ಹುಳಿಯಾದವುಗಳು ಮತ್ತು ಬಹುಭಾಗ ದುರ್ಗಂಧಯುಕ್ತವಾದವುಗಳು, ಅವುಗಳಲ್ಲಿ ಬಹುಭಾಗ ತಯಾರಾದದ್ದು ಕತ್ತಲೆಯ ಯುಗದಲ್ಲಿ ಮತ್ತು ಇಂಥಹ ಔತಣದಲ್ಲಿ ಕುಳಿತುಕೊಳ್ಳುವ ಸಹೋದರರಿಗೆ ಸ್ವಲ್ಪ ಮಾತ್ರ ಅಭಿಲಾಷೆ ಇರುವುದು ತೋರಿಬರುತ್ತದೆ... ನಾವು ಅವರ ಗಮನವನ್ನು, ಕರ್ತನು ಅವರಾಗಿಯೇ ದೇವರ ನಂಬಿಗಸ್ಥ ಮನೆತನದವರಿಗೆ ಧಾರಾಳವಾಗಿ, ಉದಾರವಾಗಿ ಪೂರೈಸಿದ "ಸಂಗತಿಗಳು ಹೊಸದಾಗಿದ್ದರೂ ಹಳೆಯದಾಗಿದ್ದರೂ" ಅವೆಲ್ಲವುಗಳು ಪರಿಶುದ್ಧವಾದವುಗಳಾದ, ಸಿಹಿಯಾದವುಗಳಾದ, ಮಧುರವಾದವುಗಳಾದ, ಪ್ರಧಾನವಾದವುಗಳಾದ ದೈವೀಕ ಸತ್ಯದೆಡೆಗೆ ಸೆಳೆಯೋಣ. ಈ ಔತಣದ ಮೇಜು, ಯಾರೆಲ್ಲರೂ ದೇವರನ್ನು ತಮ್ಮ ಸಂಪೂರ್ಣ ಹೃದಯದಿಂದ, ಮನಸ್ಸಿನಿಂದ, ಆತ್ಮದಿಂದ ಮತ್ತು ಶಕ್ತಿಯಿಂದ– ಅವರು ತಮ್ಮ ಮನೆಗಳನ್ನು ಅಥವಾ ಆಸ್ತಿಯನ್ನು, ತಂದೆ, ತಾಯಿ ಅಥವಾ ಮಕ್ಕಳನ್ನು, ಗಂಡ ಅಥವಾ ಹೆಂಡತಿಯನ್ನು, ಕುಟೀರ ಅಥವಾ ಸಮಾಜ ಅಥವಾ ಮತವ್ಯವಸ್ಥೆಯನ್ನು ಅಥವಾ ಸ್ವಂತಿಕೆಯನ್ನು ಪ್ರೀತಿಸುವುದಕ್ಕಿಂತಲೂ ಹೆಚ್ಚಾಗಿ ಪ್ರೀತಿಸುತ್ತಾರೋ ಅಂಥವರೆಲ್ಲರಿಗೆ ತೆರೆದಿರುತ್ತದೆ." ಆರ್.3270, ಸಿ.1, ಸಿ.2.

**"ನಿಶ್ಚಯವಾಗಿ ನನ್ನ ಜೀವಮಾನದಲ್ಲೆಲ್ಲಾ ಶುಭವೂ ಕೃಪೆಯೂ ನನ್ನನ್ನು ಹಿಂಬಾಲಿಸುವುವು. ನಾನು ಸದಾಕಾಲವೂ ಯೆಹೋವನ ಮಂದಿರದಲ್ಲಿ ವಾಸಿಸುವೆನು." ಕೀರ್ತನೆಗಳು 23:6.**

"ಸಂಪೂರ್ಣ ಖಾತ್ರಿಯಾಗಿರುವ ನಿರೀಕ್ಷೆ ಮತ್ತು ಸಂಪೂರ್ಣ ಖಾತ್ರಿಯಾಗಿರುವ ನಂಬಿಕೆಯೇ ದೇವರ ಮಕ್ಕಳ ಸರಿಯಾದ ವಿದ್ಯಮಾನ ಎಂದು ಅಪೋಸ್ತಲನಾದ ಪೌಲನು ಹೇಳುತ್ತಾನೆ. ಮತ್ತು ಈ "ಸತ್ಕಾರ್ಯವನ್ನು ನಮ್ಮಲ್ಲಿ ಆರಂಭಿಸಿದ ದೇವರು ಅದನ್ನು ಶಕ್ತಗೊಳಿಸಲೂ ಮತ್ತು ಪೂರೈಸಲೂ ಸಮರ್ಥರಾಗಿದ್ದಾರೆ" (ಫಿಲಿಪ್ಪ 1:6) ಎಂಬ ಇದೇ ದೃಢವಿಶ್ವಾಸದ ವಿಚಾರವನ್ನೇ ಈ ಮೇಲಿನ ಮೂಲಪಾಠದಲ್ಲಿ ಪ್ರವಾದಿಯು ವ್ಯಕ್ತಪಡಿಸುತ್ತಾರೆ. ಆದರೆ ಹೋಲಿಸಿ ನೋಡಿದ್ದಲ್ಲಿ ಎಷ್ಟು ಮಂದಿ ಕೆಲವೇ ಕ್ರೈಸ್ತರಿಗೆ ಈ ಸಂಪೂರ್ಣ ಖಾತ್ರಿಯಾದ ನಂಬಿಕೆಯಿದೆ; ನಿಜವಾಗಿಯೂ, ಸಂದೇಹವಿಲ್ಲದೆ, ಒಳ್ಳೆಯತನ ಮತ್ತು ದಯೆ ನನ್ನನ್ನು ಹಿಂಬಾಲಿಸುತ್ತದೆ... ಮತ್ತು ಕಟ್ಟಕಡೆಗೆ ನಾನು ದೇವರ ದಯೆಯಿಂದ ಸ್ವರ್ಗ ಸಾಮ್ರಾಜ್ಯವನ್ನು ಪಡೆಯುತ್ತೇನೆ ಎಂದು ಕೆಲವರು ಹೇಗೆ ಹೇಳಬಹುದು! ಪ್ರವಾದಿ ಮತ್ತು ಅಪೋಸ್ತಲರು ವ್ಯಕ್ತಪಡಿಸಿದ ಈ ವಿಷಯಗಳಲ್ಲಿ ಸಂಪೂರ್ಣ ಸಹಾನುಭೂತಿಯನ್ನು ಹೊಂದಿರುವ ಕೆಲವರು ಮಾತ್ರ ಬೇರೆಯವರು ಹೊಂದಿಕೊಳ್ಳದೆ ಇರುವ ಅತ್ಯುನ್ನತ ಸಂತೋಷ, ಅತ್ಯುನ್ನತ ಆಶೀರ್ವಾದ, ಸಂಪೂರ್ಣ ಹೃದಯದ ವಿಶ್ರಾಂತಿಯನ್ನು ಹೊಂದಿರುತ್ತಾರೆ." ಆರ್.2642, ಸಿ.1, ಪಿ.4.

**"ಆತನು ದೀನರನ್ನು ತನ್ನ ವಿಧಿಗನುಗುಣವಾಗಿ ನಡಿಸುವನು; ಅವರಿಗೆ ತನ್ನ ಮಾರ್ಗವನ್ನು ತೋರಿಸುವನು." ಕೀರ್ತನೆಗಳು 25:9.**

"ದೀನತೆಯೆಂದರೆ ದೇವರ ಚಿತ್ತಕ್ಕೆ ತಾಳ್ಮೆಯಿಂದ ಒಪ್ಪಿಸಿಕೊಡುವುದು." ಆರ್.2568,ಸಿ.1.

"ಒಂದು ಕಡೆ ದೇವರು ಸ್ವಂತ ಇಚ್ಛೆಯುಳ್ಳ ಮನುಷ್ಯರನ್ನು ತಪ್ಪಾದ ಉದ್ದೇಶಕ್ಕೆ ಬೀಳಲು ಮತ್ತು ಅವುಗಳಲ್ಲಿ ಹರಡಿ ವೃದ್ಧಿಯಾಗಲು ಅನುಮತಿಸುವಾಗ, ಇನ್ನೊಂದು ಕಡೆ ಆತನು ದೀನರನ್ನು ತನ್ನ ನೀತಿಗನುಸಾರವಾಗಿ ಉಪದೇಶಿಸುತ್ತಾನೆ ಮತ್ತು ಆತನ ಮಾರ್ಗವನ್ನು ಅವರಿಗೆ ಕಲಿಸುತ್ತಾನೆ ಮತ್ತು ಅವರು ಸತ್ಯವನ್ನು ಅರಿತುಕೊಳ್ಳುವ ಹಾಗೆಯೂ ಮತ್ತು ಅದನ್ನು ಅಸತ್ಯದಿಂದ ಬೇರ್ಪಡಿಸಲು ಸಮರ್ಥರಾಗುವ ಹಾಗೆಯೂ ಅವರಿಗೊಂದು ನಿರ್ದಿಷ್ಟಮಾನವನ್ನು ಏರ್ಪಡಿಸುತ್ತಾನೆ ಮತ್ತು ಈ 'ದುಷ್ಟ ದಿನದಲ್ಲಿ' ಸಾವಿರ ಜನರು ಅಸತ್ಯಗಳಿಂದ ಬಿದ್ದುಹೋದರೂ ಅವರು ದೀನರನ್ನು ಉರುಳಿಸಲಾಗುವುದಿಲ್ಲ, ಇವರಿಗೆ ಮಾರ್ಗದರ್ಶನ ನೀಡಲು ಮತ್ತು ಅವರು ಬೀಳದಂತೆ ನೋಡಿಕೊಳ್ಳು ಕರ್ತನು ವಾಗ್ದಾನ ಮಾಡಿದ್ದಾನೆ " ಆರ್.1268, ಸಿ.1, ಪಿ.3.

"ಯಾರು ಈ ದೀನತೆಯ ಪಾಠವನ್ನು ಕಲಿತುಕೊಳ್ಳುತ್ತಾರೋ ಅವರು ದೈವೀಕ ಸೇವೆಯಲ್ಲಿ ಅತ್ಯುತ್ತಮವಾದ ಸಿದ್ಧತೆಯನ್ನು ಹೊಂದುತ್ತಾರೆ." ಆರ್.5261, ಸಿ.1, ಪಿ.5.

**“ಯಾವನು ಯೆಹೋವನಲ್ಲಿ ಭಯಭಕ್ತಿಯುಳ್ಳವನೋ ಅವನಿಗೆ ಉಚಿತವಾದ ಮಾರ್ಗವನ್ನು ಆತನು ಬೋಧಿಸುವನು.” ಕೀರ್ತನೆಗಳು 25:12.**

“ಪ್ರೀಯರೇ, ಈ ಅಪಾಯಕರ ಕಾಲದಲ್ಲಿ ದೋಷವು ತನ್ನ ಅತ್ಯುನ್ನತ ವಿನಾಶಕಾರಕ ಮತ್ತು ಕಪಟಯುಕ್ತವಾದ ಸ್ವರೂಪಗಳನ್ನು ತೆಗೆದುಕೊಳ್ಳುತ್ತಿರುವಾಗ ಮತ್ತು ಅದು ತನ್ನ ಅತೀ ಕಾರ್ಯಗತ ಕಾರ್ಯಕರ್ತರನ್ನು ತಪ್ಪಾದ ಸಹೋದರ ಮತ್ತು ಸಹೋದರಿಯರನ್ನು ನಿಮ್ಮ ಮಧ್ಯದಲ್ಲೇ ಕಾಣುವಾಗ ಹಾಗೂ ಸತ್ಯಕ್ಕೆ ಅನುಸಾರವಾಗಿರುವುದರಿಂದ ನಿಮಗೆ ಗೊತ್ತಿರುವ ಕೆಲವೊಂದು ಕೋಮುವಾದ ಸಾಮಾಜಿಕ ಕಟ್ಟುಪಾಡುಗಳನ್ನು ಸಲ್ಲಿಸುವ ಸಂದರ್ಭಗಳಲ್ಲಿ, ಒಂದು ಕಾಲದಲ್ಲಿ ದೇವರ ಆಲಯಕ್ಕೆ ಹೋಗುವಾಗ ಇಂಥವರೊಡನೆಯೇ ಮೃದುವಾದ ಸಂಭಾಷಣೆಯನ್ನು ಹೊಂದಿದ್ದೀರಿ, ಹೌದು, ಇಂಥಹ ಸಂದರ್ಭಗಳಲ್ಲಿ “ನೀವಾದರೋ ಕಲಿತು ದೃಢವಾಗಿ ನಂಬಿದ ಬೋಧನೆಗಳಲ್ಲಿ ನೆಲೆಯಾಗಿರಿ. ಕಲಿಸಿಕೊಟ್ಟವರು ಯಾರೆಂಬುದನ್ನು ಆಲೋಚಿಸಿ.” ಎಂಬ ಅಪೋಸ್ತಲ ಪೌಲರ ಬುದ್ಧಿಮಾತು ನಮ್ಮನ್ನು ಒತ್ತಾಯಪಡಿಸುತ್ತದೆ. ಯಾಕೆಂದರೆ (ಯೊಹಾನ 6:45) “ಅವರೆಲ್ಲರೂ ದೇವರಿಂದ ಶಿಕ್ಷಿತರಾಗುವರು” ಎಂದು ಬರೆಯಲ್ಪಟ್ಟಿದೆ.” ಆರ್.1320, ಸಿ.2, ಪಿ.6.

**“ಯೆಹೋವನು ತನ್ನ ಸದ್ಭಕ್ತರಿಗೆ ಆಪ್ತಮಿತ್ರನಂತಿರುವನು; ಅವರಿಗೇ ತನ್ನ ಒಡಂಬಡಿಕೆಯ ಅನುಭವವನ್ನು ದಯಪಾಲಿಸುವನು.”ಕೀರ್ತನೆಗಳು 25:14.**

“ಇದನ್ನು ಬಹು ಮುಖ್ಯವಾದ ವಿಷಯ ಎಂಬುದಾಗಿ ನೋಡುವಂತೆ ಅಥವಾ ದೇವರ ಒಡಂಬಡಿಕೆಯನ್ನು ಸರಿಯಾಗಿ ಅರ್ಥಮಾಡಿಕೊಂಡಿರುವಂತೆ ಉಲ್ಲೇಖಿಸಲಾಗಿದೆ. ಇದೊಂದು ಮುಖ್ಯವಾದ ವಿಷಯ, ಯಾಕೆಂದರೆ ದೇವರ ದೈವೀಕ ಯೋಜನೆಯಲ್ಲಿ ಮುಖ್ಯವಾಗಿರುವ ಒಂದು ಪ್ರಧಾನ ಅಂಶವಾಗಿದೆ. ಒಡಂಬಡಿಕೆಯಲ್ಲಿ ದೇವರು ಅಬ್ರಹಾಮನಿಗೆ “ನಿನ್ನ ಮೂಲಕವೂ ನಿನ್ನ ಸಂತತಿಯ ಮೂಲಕವೂ ಭೂಮಿಯ ಎಲ್ಲಾ ಜನಾಂಗಗಳಿಗೂ ಆಶೀರ್ವಾದವುಂಟಾಗುವುದು” ಎಂದು ವಾಗ್ದಾನ ಮಾಡುವಾಗ, ಇದರಲ್ಲಿ ಪ್ರತ್ಯಕ್ಷ್ಯವಾಗಿ ಮತ್ತು ಪರೋಕ್ಷವಾಗಿ ದೈವೀಕ ಕೃಪೆಯ ಎಲ್ಲಾ ಶ್ರೀಮಂತಿಕೆಯೂ ಒಳಗೊಂಡಿತ್ತು. ನಮ್ಮ ಕಣ್ಣುಗಳಿಗೆ ಅಭ್ಯಂಜನವಾಗಿರುವುದರಿಂದ, ನಮ್ಮ ಹೃದಯಗಳು ದೇವರಿಗೆ ಸಂಪೂರ್ಣವಾಗಿ ಒಪ್ಪಿಸಲ್ಪಟ್ಟಿರುವುದರಿಂದ ಮತ್ತು ಸಂಪೂರ್ಣವಾಗಿ ಆತನ ಆಶಾಯುಕ್ತವಾದ ಚಿತ್ತವೇನು ಮತ್ತು ಆತನ ಹಾದಿಯೇನು ಎಂದು ನಾವು ಉನ್ನತ ಒಡಂಬಡಿಕೆಯೆಡೆಗೆ ನೋಡುವಾಗ, ಇಗೋ ಅದು ನಮ್ಮ ಮುಂದೆ ಮಹಿಮಾನ್ವಿತವಾಗಿ ಮೂರು ಭಾಗಗಳಾಗಿ ತೆರೆಯಲ್ಪಡುತ್ತದೆ. 1. ಜಗತ್ತಿನ ಎಲ್ಲಾ ಜನರು–ಮಾನವ ಕುಟುಂಬದ ಪ್ರತಿಯೊಬ್ಬ ಸದಸ್ಯನೂ ಆಶೀರ್ವಾದವನ್ನು ಪಡೆಯುವನು. 2. ಎಲ್ಲಾ ಜೀವಿಗಳಿಗೆ ಅಬ್ರಹಾಮನ ಸಂತತಿಯೇ ದೈವೀಕ ಆಶೀರ್ವಾದದ ಬುಗ್ಗೆಯಾಗಿರುವುದು. 3. ಈ ಸಂತತಿ ತನ್ನ ಮೊಟ್ಟಮೊದಲ ಹಂತದಲ್ಲಿ ನಮ್ಮ ಕರ್ತನಾದ ಕ್ರಿಸ್ತಯೇಸುವನ್ನೇ ಕುರಿತ್ತಾಗಿದೆ. ಅದರ ಎರಡನೇ ಹಂತದಲ್ಲಿ ಅದು ಕುರಿಯ ಪತ್ನಿಯಾದ ಮದುವಣಗಿತ್ತಿಯಾಗಿದೆ.

ಈ ಒಡಂಬಡಿಕೆಯಲ್ಲಿ ಮತ್ತು ಆತನ ಎಲ್ಲಾ ದೈವೀಕ ಅನುಗ್ರಹಗಳಲ್ಲಿ ಸಹಬಾಧ್ಯತೆಯನ್ನು ಒಳಗೊಂಡಿದೆ." ಆರ್.2209, ಸಿ.1, ಪಿ.5, ಸಿ.2, ಪಿ.1.

## "ಯೆಹೋವನು ನನಗೆ ಬೆಳಕೂ ರಕ್ಷಕನೂ ಆಗಿದ್ದಾನೆ; ನಾನು ಯಾರಿಗೆ ಭಯಪಟ್ಟೇನು? ಯೆಹೋವನು ನನ್ನ ಪ್ರಾಣದ ಆಧಾರವು; ನಾನು ಯಾರಿಗೆ ಹೆದರೇನು?" ಕೀರ್ತನೆಗಳು 27:1.

"ಯಾರೆಲ್ಲಾ ಈಗ ನಂಬಿಕೆಯ ಅತ್ಯುತ್ತಮ ಹೋರಾಟವನ್ನು ಹೋರಾಡುತ್ತಿದ್ದಾರೋ ಅಂಥಹ ದೇವ ಜನರಿಗೆ ಸರಿಯಾದ ಮನಸ್ಸನ್ನು ರೂಪಿಸಿಕೊಳ್ಳುವಂತೆ ಈ ವಾಗ್ದಾನವು ಸೂಚಿಸು ತ್ತದೆ. ಸಂದರ್ಭಗಳು ಗಾಡಾಂಧಕಾರವಾಗಿಯೂ ಮತ್ತು ಅಪಾಯಕಾರಿ – ಯಾಗಿಯೂ ಮತ್ತು ವಿರೋಧಗಳು ಹೆಚ್ಚಾದರೂ ಹೆದರಬಾರದು ಎಂಬ ಭರವಸೆಯನ್ನು ಈ ವಾಗ್ದಾನವು ಕೊಡುತ್ತದೆ. (ಆರ್.2016, ಸಿ.2, ಮಧ್ಯಭಾಗ) ಈ ಸಾಂತ್ವಾನವು ಅನೇಕ ವಿಧವಾಗಿ ಪವಿತ್ರಗ್ರಂಥದ ಎಲ್ಲಾ ಭಾಗಗಳಲ್ಲಿ ಉಲ್ಲೇಖಿಸಲಾಗಿದೆ. ನಮಗೆ ಅತ್ಯಂತ ಹೆಚ್ಚಾಗಿ ಬೇಕಾದ ಸಂದರ್ಭಗಳಲ್ಲಿ ದೈವೀಕ ಸಾಮರ್ಥ್ಯವನ್ನು ತಂದುಕೊಡುತ್ತದೆ. ನಂಬಿಕೆಯಿಂದ ಹುಟ್ಟುವ ತಾಳ್ಮೆಯಿಂದ ಬಲಗೊಂಡ ಧೈರ್ಯವು, ಕಳವಳಗೊಳಿಸುವ ಸಂಕಷ್ಟಗಳಿಂದ ಉಂಟಾದ ಆಳವಾದ ಅಂಧಕಾರದ ಮತ್ತು ಭಯಂಕರವಾದ ಬಿರುಗಾಳಿಯ ಮಧ್ಯದಲ್ಲಿ ನಮ್ರಭಾವದ ಧೈರ್ಯವುಳ್ಳ ಕೂಗೇ 'ಯೆಹೋವನೇ ನನಗೆ ಬೆಳಕೂ ರಕ್ಷಕನೂ ಆಗಿದ್ದಾನೆ, ನಾನು ಯಾರಿಗೆ ಭಯಪಟ್ಟೇನು' ಎಂಬ ಈ ಮಾತುಗಳಾಗಿವೆ. ಆರ್.1925, ಸಿ.1, ಪಿ.1, ಸಿ.2, ಪಿ.3.

## "ಅಪಾಯಕಾಲದಲ್ಲಿ ಆತನು ನನ್ನನ್ನು ಗುಪ್ತಸ್ಥಳದಲ್ಲಿ ಅಡಗಿಸುವನು; ತನ್ನ ಗುಡಾರವೆಂಬ ಆಶ್ರಯಸ್ಥಾನದಲ್ಲಿ ನನ್ನನ್ನು ಭದ್ರಪಡಿಸುವನು; ಪರ್ವತಾಗ್ರದಲ್ಲಿ ನನ್ನನ್ನು ಸುರಕ್ಷಿತವಾಗಿ ಇರಿಸುವನು."ಕೀರ್ತನೆಗಳು 27:5.

"ವಿಶೇಷವಾಗಿ ಅತ್ಯಂತ ಹೆಚ್ಚಾಗಿರುವ ಅಗತ್ಯದ ಈ ಸಮಯದಲ್ಲಿ ದೇವಜನರು ಕ್ರೈಸ್ತರ ಆಯುಧವಾದ ನಂಬಿಕೆಯ ದ್ವಾರಗಳು ಅವರನ್ನು ಸಂಪೂರ್ಣವಾಗಿ, ಆತನ ಗುಡಾರವೆಂಬ ಆಶ್ರಯಸ್ಥಾನದಲ್ಲಿ ಭದ್ರಪಡಿಸಬೇಕು. ನಿಂದನೆಗಳು ಗಾಢವಾಗಿಯೂ ವೇಗವಾಗಿಯೂ ಮೇಲೆ ಬೀಳುವಾಗ... ಅವರ ಹೆಸರುಗಳು ದೂಷಣೆಯಾಗಿ ಹಾಕಲ್ಪಟ್ಟಾಗ... ಹೌದು, ಇಂಥಹ ಸಮಯದಲ್ಲಿ ನಂಬಿಕೆಯ ಗುರಾಣಿಯನ್ನು ಭದ್ರವಾಗಿ ಅಪ್ಪಿ ಹಿಡಿದುಕೊಳ್ಳಬೇಕು. ಮತ್ತು ಹೇಳಲ್ಪಟ್ಟಿರುವ ಕೀರ್ತನೆಗಾರನ ಭಾಷೆಯನ್ನು ಜಯದೊಂದಿಗೆ ಆಯ್ದುಕೊಳ್ಳಬೇಕು." ಆರ್.1788, ಸಿ.1, ಪಿ.5.

## "ತಂದೆ ತಾಯಿಗಳು ನನ್ನನ್ನು ತೊರೆದು ಬಿಟ್ಟರೇನು; ಯೆಹೋವನು ನನ್ನನ್ನು ಸೇರಿಸಿಕೊಳ್ಳುವನು." ಕೀರ್ತನೆಗಳು 27:10.

"ದೇವರ ಜನರೊಂದಿಗೆ ಎಣಿಕೆಯಾಗುವುದು ಒಂದು ಅತೀ ಶ್ರೇಷ್ಠವಾದ ಭಾಗ್ಯ. ನಮ್ಮ ದೃಷ್ಟಿಯಲ್ಲಿ ಮಾತ್ರವಲ್ಲ ದೇವರ ದೃಷ್ಟಿಯಲ್ಲಿ ಕೂಡ, ದೇವಜನರು ತಿಳಿದುಕೊಂಡಿರುವು – ದಕ್ಕಿಂತಲೂ ಹೆಚ್ಚಾದ ಅರ್ಥ ಇದರಲ್ಲಿ ಅಡಗಿದೆ. ದೇವಜನರ ದೃಷ್ಟಿಯಲ್ಲಿ ನೋಡುವುದಾದರೆ, ಇದು ಅವರು ದೇವರ ಮಕ್ಕಳು ಮತ್ತು ಕ್ರಿಸ್ತನೊಂದಿಗೆ ದೇವರಲ್ಲಿ ಭಾದ್ಯಸ್ಥರು, ದೇವರ ಪ್ರಿಯ ಮಗನ ಹೆಜ್ಜೆಜಾಡನ್ನು ಹಿಂಬಾಲಿಸಲು ಸಂಪೂರ್ಣವಾಗಿ ತಮ್ಮನ್ನೇ ದೇವರಿಗೆ ಸಮರ್ಪಿಸಿದವರು ಎಂಬುದನ್ನು ಸೂಚಿಸುತ್ತದೆ... ದೇವರ ದೃಷ್ಟಿಯಲ್ಲಿ ನೋಡುವದಾದರೆ, ಕ್ರಿಸ್ತನ ಮುಖಾಂತರ ಇಂಥವರಲ್ಲಿ ದೇವರ ಅನುಗ್ರಹ–ಪೂರ್ವಕವಾದ ವಾಗ್ದಾನಗಳನ್ನು ಈಗ ಇರುವ ಜೀವಿತ ಮತ್ತು ಮುಂಬರುವ ಜೀವಿತ ಇವೆರಡರಲ್ಲಿಯೂ ಪೂರೈಸುವುದನ್ನು ಸೂಚಿಸುತ್ತದೆ. ಇದು ಈಗಿರುವ ಪ್ರಸ್ತುತ ಜೀವಿತದಲ್ಲಿ ನಮಗೆ ಕೊನೆಯವರೆಗೆ ತಂದೆಯ ಪ್ರೀತಿ, ಜಾಗರೂಕತೆ, ಶಿಸ್ತುಬದ್ಧವಾದ ಬೋಧನೆ, ರಕ್ಷಣೆ ಮತ್ತು ಉತ್ತೇಜನ ಮತ್ತು ನಂತರ ಆತನ ಮಹಿಮಾಭರಿತ ಪ್ರಸನ್ನತೆಯಲ್ಲಿ ಮತ್ತು ಎಂದೆಂದಿಗೂ ಸಿಗುವ ವಿಶ್ರಾಂತಿ ಹಾಗು ಶಾಂತಿ–ಸಮಾಧಾನದಲ್ಲಿ ಸ್ವೀಕರಿಸುವುದನ್ನು ಸೂಚಿಸುತ್ತದೆ. ಹೌದು, ಪ್ರಸ್ತುತ ಜೀವಿತದಲ್ಲಿ ಕೂಡ ಅಳತೆಗಿಂತಲೂ ಅಗಾಧವಾದ ಆತನ ದಯೆಯ ಪ್ರತಿಫಲವು ಇರುವುದರಿಂದ ದೇವರ ಜನರಾಗಿರುವದು ಎಷ್ಟೊಂದು ಮಹಿಮಾಭರಿತ ಮಧುರಕ್ಷಣ!!" ಆರ್.1789, ಸಿ.2, ಪಿ.5, ಆರ್.1788, ಸಿ.1, ಪಿ.1.

## "ಯೆಹೋವನನ್ನು ನಿರೀಕ್ಷಿಸಿಕೊಂಡಿರು, ದೃಢವಾಗಿರು; ನಿನ್ನ ಹೃದಯವು ಧೈರ್ಯದಿಂದಿರಲಿ. ಯೆಹೋವನನ್ನು ನಿರೀಕ್ಷಿಸಿಕೊಂಡೆ ಇರು." ಕೀರ್ತನೆಗಳು 27:14.

"ಲೌಕಿಕ ವಿಷಯಗಳಲ್ಲಿ ಆತನ ಮಕ್ಕಳು ವಿಶೇಷವಾಗಿ ಸಂರಕ್ಷಿಸಲ್ಪಡುತ್ತಾರೆ ಎಂಬುದನ್ನು ಪ್ರಕಟಪಡಿಸಿಲ್ಲ ಮತ್ತು ಅದು ಆತನ ಅತ್ಯುತ್ತಮ ಜ್ಞಾನದಲ್ಲಿ, ಉತ್ತಮ ಹಾದಿಯಲ್ಲಿ ನಮ್ಮ ಕರ್ತನಿಗೆ ಮಾಡಿದ ಹಾಗೆ ನಮ್ಮನ್ನು ಯಾವ ವಿಧದಲ್ಲಿಯಾದರೂ ಜಜ್ಜಬಹುದು ಮತ್ತು ಅಪಹಾಸ್ಯಕ್ಕೊಳಪಡಿಸಬಹುದು. ನಾವು ಆತನನ್ನು ನಂಬಿರುವುದರಿಂದ ಹಾಗು ಆತನಲ್ಲಿ ಭರವಸೆಯನ್ನು ಹೊಂದಿರುವುದರಿಂದ ಉತ್ತಮ ಉತ್ಸಾಹದಿಂದಿರಬೇಕು. ಮತ್ತು ಆತನು ನಮ್ಮ ಹೃದಯಗಳನ್ನು ಬಲಪಡಿಸುತ್ತಾನೆ. ಆತನು ಯಾವುದೇ ತಪ್ಪು ಮಾಡುವುದಿಲ್ಲ, ಶೋಧನೆಗಳನ್ನು ನಮ್ಮ ಜೀವಿತದಲ್ಲಿ ಅನುಮತಿಸಿದಾಗ ನಮಗೆ ಅದರಲ್ಲಿ ಆತನ ಯಾವುದೋ ಒಳ್ಳೆಯ ಉದ್ದೇಶವಿದೆ ಮತ್ತು ಕಾರಣವಿದೆ ಎಂಬುವುದು ನಮಗೆ ತಿಳಿದಿದೆ, ಅದು ಆತನ ಅತ್ಯುನ್ನತ ಜ್ಞಾನದಿಂದಲೇ ನಡೆದಿರುತ್ತದೆ. ಸಂತರು ಆತನ ದೃಷ್ಟಿಯಲ್ಲಿ ತುಂಬಾ ಅಮೂಲ್ಯರು, ಆತನ ಕಣ್ಣುಗುಡ್ಡೆ ಎಂಬುವದು ನಮಗೆ ಚೆನ್ನಾಗಿ ತಿಳಿದಿದೆ. ಹೀಗೆ ನಮಗೆ ಏನೇನೂ ಸಂಭವಿಸಿದರೂ ನಮ್ಮ ಹಿತಕ್ಕಾಗಿಯೇ ಎಂಬುದು ಗೊತ್ತಿದೆ." ಆರ್.5330, ಸಿ.2, ಪಿ.7.

**"ಯೆಹೋವನು ತನ್ನ ಜನರಿಗೆ ಬಲವನ್ನು ಅನುಗ್ರಹಿಸುವನು; ಆತನು ತನ್ನ ಪ್ರಜೆಗೆ ಸುಕ್ಷೇಮವನ್ನು ದಯಪಾಲಿಸುವನು." ಕೀರ್ತನೆಗಳು 29:11.**

"ಈ ಮೂಲವಾಕ್ಯದಲ್ಲಿ ಬಲದ ಅರ್ಥವೇನೆಂದರೆ ಹೆಚ್ಚಾದ ಪ್ರಮಾಣದಲ್ಲಿ ಧೈರ್ಯ ಎಂದರ್ಥ." ಆರ್.4817, ಸಿ.1, ಪಿ.9.

"ಆತನ ಜನರಾದ ನಾವು ನಂಬಿಗಸ್ತರಾಗಿರೋಣ ಮತ್ತು ಶ್ರದ್ಧೆಯಿಂದ ಆತನು ವಾಗ್ದಾನಮಾಡಿದ ಬಲವನ್ನು ನಂಬಿಗಸ್ತತೆಯಿಂದ ಉಪಯೋಗಿಸೋಣ. ವಾಗ್ದಾನ ಮಾಡಿದಾತನು ನಂಬಿಗಸ್ಥನು ಮತ್ತು ಆತನು ಅದನ್ನು ನೆರವೇರಿಸುವನು. ಆದುದರಿಂದ ದೇವರು ಕೊಟ್ಟಿರುವ ಮನಸ್ಸನ್ನು ನಂಬಿಗಸ್ತತೆಯಿಂದ ಉಪಯೋಗಿಸುವಾಗ ನ್ಯೂನತೆ ಮತ್ತು ಅಧೈರ್ಯತೆ ಕಂಡುಬಂದಲ್ಲಿ ತಪ್ಪು ನಮ್ಮದೇ ಹೊರತು ದೇವರದ್ದಲ್ಲ. ಒಂದೇ ಆತನ ಸೇವೆಯ ಮನೋಭಾವವು ನಿನ್ನ ಹೃದಯದ ಅಂಗಳದಲ್ಲಿ ಇಲ್ಲ ಅಥವಾ ಆತನು ದಯಪಾಲಿಸಿದ ಬಲವನ್ನು ಉಪಯೋಗಿಸುತ್ತಿಲ್ಲ. ಬಹುವಾಗಿದ್ದರೂ ಅಲ್ಪವಾಗಿದ್ದರೂ ಆತನ ಮಹಿಮೆಗೋಸ್ಕರ ತಮ್ಮ ತಾಲಂತುಗಳನ್ನು ಉಪಯೋಗಿಸಿ ಯಜಮಾನನಿಗೆ ಸಮರ್ಪಿಸಿಕೊಂಡಿರುವ ಆತನನ್ನು ನಂಬಿರುವ ನಂಬಿಗಸ್ತ ಸೇವಕರಿಗೆ, ತನ್ನ ಜನರಿಗೆ ಯೆಹೋವನು ಬಲವನ್ನು ಅನುಗ್ರಹಿಸುವನು." ಆರ್.3697,ಸಿ.1,ಪಿ.2.

**"ಮನುಷ್ಯರ ಒಳಸಂಚುಗಳಿಂದ ಹಾನಿಯುಂಟಾಗದಂತೆ ಅವರನ್ನು ನಿನ್ನ ಸಾನಿಧ್ಯದಲ್ಲಿಯೇ ಮರೆಮಾಡುತ್ತೀ; ವಿವಾದಿಸುವ ನಾಲಿಗೆಗಳಿಂದ ಕೇಡಾಗದಂತೆ ಅವರನ್ನು ಗೋಪ್ಯಸ್ಥಳದಲ್ಲಿ ಅಡಗಿಸುತ್ತೀ." ಕೀರ್ತನೆಗಳು 31:20.**

"ಓ, ಎಷ್ಟೊಂದು ಅಮೂಲ್ಯವಾದದ್ದು ಈ ಗೋಪ್ಯಸ್ಥಳ! ಈಗ ಕೂಡ ಲೋಕವನ್ನು, ವಿಶೇಷವಾಗಿ ಕ್ರೈಸ್ತ ಸಮೂಹದ ರಾಷ್ಟ್ರಗಳನ್ನು ಮನುಷ್ಯನ ಗರ್ವ ಮತ್ತು ಪ್ರಸ್ತುತ ಅತೃಪ್ತಿಕರ ಸಾಮಾಜಿಕ ಕ್ರಮಗಳನ್ನು ಮರು-ಕ್ರಮಪಡಿಸುವ ಮನುಷ್ಯನ ಅವಿವೇಕತನದ ನಿರರ್ಥಕ ಪ್ರಯತ್ನಗಳ ನಡುವೆ ಮನುಷ್ಯನ ಪ್ರಸ್ತುತ ಅಸ್ತವ್ಯಸ್ತವಾಗಿರುವ ಸಂಪ್ರದಾಯಗಳನ್ನು ಮತ್ತು ವಿಶ್ರಾಂತಿಯನ್ನು, ನೀತಿ ಮತ್ತು ಸತ್ಯತೆಯಿಂದ ಕೂಡಿರುವ ಪರಿಶುದ್ಧ ಮೂಲತತ್ವಗಳಿಗೆ ಸಮಾನವಾಗಿ ನಿರರ್ಥಕ ಪ್ರಯತ್ನಗಳಿಂದ ವಿಶ್ರಾಂತಿಯನ್ನು ತವಕಪಡಿಸುವ ಕೋಲಾಹಲದ ನಡುವೆ ಎಂಥಹ ಅಮೂಲ್ಯವಾದ ಉತ್ಸಾಹದಾಯಕ ಸಮಾಧಾನವನ್ನು ನಾವು ಕಾಣುತ್ತಿದ್ದೇವೆ (ಕೀರ್ತನೆ. 32:20). ನಾವು ಇಲ್ಲಿ ಜಗತ್ತು ಕೊಡಲಾರದ ಮತ್ತು ತೆಗೆದುಕೊಳ್ಳಲಾರದ ವಿಶ್ರಾಂತಿ, ಸಮಾಧಾನ, ಬೆಳಕು ಮತ್ತು ಸಂತೋಷವನ್ನು ಕಂಡುಕೊಳ್ಳುತ್ತೇವೆ." ಆರ್.1788, ಸಿ.1, ಪಿ.3.

## “ಯೆಹೋವನನ್ನು ನಿರೀಕ್ಷಿಸಿಕೊಂಡಿರುವವರೇ ದೃಢವಾಗಿರ್ರಿ; ನಿಮ್ಮ ಹೃದಯವು ಧೈರ್ಯದಿಂದಿರಲಿ.” ಕೀರ್ತನೆಗಳು 31:24.

“ನಾವು ಜಗತ್ತಿನ ಜನರೊಂದಿಗೆ ಸಂಪರ್ಕಿಸುವ ಸಂದರ್ಭಗಳಲ್ಲೆಲ್ಲಾ ಅವರೊಂದು ಮಾತು ಕೂಡ ನಮ್ಮೊಂದಿಗೆ ಆಡದಿದ್ದರೂ ನಮ್ಮ ಸರಳವಾದ ನಿರೀಕ್ಷೆಯ ಮೇಲೆ ಒದ್ದೆಯಾಗಿರುವ ಹಾಸುಗಂಬಳಿಯನ್ನು ಹಾಕಿದಂತಿರುತ್ತದೆ. ಮೂಲಪಾಠವು ಪ್ರಚೋದಿಸುವಂತೆ ಯೆಹೋವನನ್ನೇ ನಿರೀಕ್ಷಿಸಿಕೊಂಡಿದ್ದು ಧೈರ್ಯವಾಗಿರಬೇಕು. ಆದರೆ ಸರಿಯಾದ ಮೂಲತತ್ವಗಳಿಂದ ಬರುವ ಧೈರ್ಯವು ದೇವರ ಮೇಲಿರುವ ನಂಬಿಕೆಯ ಮೇಲೆ ಅವಲಂಬಿತವಾಗಿದೆ. ಇದು ಬಡಾಯಿಕೊಚ್ಚಿಕೊಳ್ಳುವ ಧೈರ್ಯವಲ್ಲ. ಇದು ದೇವರಿಗೆ ಮೆಚ್ಚಿಗೆಯಾಗಿರುವ ಮತ್ತು ಉದಾತ್ತ ಧ್ಯೇಯಗಳ ಧೈರ್ಯ. ಇದರ ಉಗಮ ದೇವರು ವಾಗ್ದಾನಿಸಿದ್ದಾರೆ ಎಂಬ ಸ್ಪಷ್ಟ ಗ್ರಹಿಕೆಯೊಂದಿಗೆ ಮತ್ತು ಕ್ರಿಸ್ತನ ರಾಜ್ಯದಲ್ಲಿ ಆತನೊಂದಿಗೆ ದೇವರಲ್ಲಿ ಸಹಬಾಧ್ಯಸ್ಥರಾಗುವುದಕ್ಕೆ ದೇವರು ಅಪೇಕ್ಷಿಸುತ್ತಿದ್ದಾರೆ ಮತ್ತು ನೋಡುತ್ತಿದ್ದಾರೆ ಎಂಬಲ್ಲಿ ಆರಂಭವಾಗಿದೆ. ನಮ್ಮ ನಂಬಿಗಸ್ತತೆಯನ್ನು ಆತನ ಮೇಲೆ ಸಾಬೀತು ಪಡಿಸುತ್ತಿದ್ದೇವೇಯೇ ಎಂದು ಆತನು ನಮ್ಮನ್ನು ಪರೀಕ್ಷಿಸುತ್ತಿದ್ದಾನೆ ಮತ್ತು ಈ ಧೈರ್ಯವು ನಮ್ಮಲ್ಲಿ ಎಲ್ಲಾ ಕೆಲಸ ಕಾರ್ಯಗಳನ್ನು ಸರಿಯಾದ ರೀತಿಯಲ್ಲಿ ಮಾಡುವುದಕ್ಕೆ ಮಾರ್ಪಡಿಸಬೇಕು.” ಆರ್.5329, ಸಿ.2, ಪಿ.2, 5330, ಸಿ.1, ಪಿ.4.

## “ನಿನ್ನನ್ನು ಉಪದೇಶಿಸಿ ನಡೆಯಬೇಕಾದ ಮಾರ್ಗವನ್ನು ತಿಳಿಸುವೆನು, ನಿನ್ನನ್ನು ಕಟಾಕ್ಷಿಸಿ ಆಲೋಚನೆ ಹೇಳುವೆನು.” ಕೀರ್ತನೆಗಳು 32:8.

“ಈ ಲೋಕದ ತಂದೆತಾಯಿಗಳು ತಮಗೆ ತುಂಬಾ ನಂಬಿಗಸ್ತರಾಗಿ ಮತ್ತು ವಿಧೇಯರಾಗಿ ನಡೆಯುವ ಮಕ್ಕಳನ್ನು ಅವರ ಕೆಟ್ಟ ನಡತೆಯಿಂದ ತಪ್ಪಿಸಲು ಮತ್ತು ಅವರಲ್ಲಿ ಅತೀ ಹೆಚ್ಚಾಗಿ ಸಂತೋಷಪಡಿಸಲು ಒಂದು ತಿದ್ದುಪಾಟಿನ ಮಾತು ಅಥವಾ ನೋಟ ಸಾಕು. ಹಾಗೆಯೇ ನಮ್ಮ ಪರಲೋಕದ ತಂದೆಯಾದ ದೇವರು ಆತನ ಮಾತಿಗೆ ಭಯಪಡುವವರಿಗೆ ಇದೇ ರೀತಿ ಪ್ರಕಟಪಡಿಸುತ್ತಾರೆ (ಯೆಶಾಯ 66:8). ಹೀಗಿರುವವರು ದೇವರೊಂದಿಗೆ ತಮ್ಮ ಗುಣಗಳನ್ನು ಬೆಳೆಸಿಕೊಳ್ಳಲು ಮತ್ತು ಉತ್ತಮಪಡಿಸಿಕೊಳ್ಳಲು ದೇವರೊಂದಿಗೆ ಸಹಕರಿಸಿ ತಮ್ಮ ತಪ್ಪುಗಳನ್ನು ಗುರುತಿಸಿಕೊಳ್ಳುತ್ತಾರೆ ಹಾಗು ಅವುಗಳನ್ನು ಸರಿಪಡಿಸಿಕೊಳ್ಳಲು ಹಾತೊರೆಯುತ್ತಾರೆ. ದೇವರ ಸ್ವರಕ್ಕೆ, ಆತನ ನಡೆಸುವಿಕೆಗೆ ಅಥವಾ ಪ್ರೀತಿಯ ತಿದ್ದುವಿಕೆಗೆ ಮತ್ತು ಯಾವಾಗಲೂ ಆತನ ಮನ್ನಣೆಯ ಮಂದಹಾಸಕ್ಕೆ ಅರ್ಪಿಸಿಕೊಡುತ್ತಾರೆ. ನಂಬಿಗಸ್ತ ಮತ್ತು ವಿಧೇಯರಾಗಿರುವ ಈ ತರಗತಿಗೆ ದೇವರು ಹೀಗೆ ಹೇಳುತ್ತಾರೆ– "ನಿನ್ನನ್ನು ಕಟಾಕ್ಷಿಸಿ ಆಲೋಚನೆ ಹೇಳುವೆನು." ...ಯಾರೆಲ್ಲಾ ಯಾವಾಗಲೂ ಸತತವಾಗಿ ಬಾರುಕೋಲಿನಿಂದಲೇ ಮುನ್ನಡೆಸಬೇಕೆನ್ನುತ್ತಾರೋ ಅವರು ಈ ಜಯಗೊಳ್ಳುವ ತರಗತಿಯುವರಲ್ಲ. ಇ 233, 234 ಮೇಲೆ.

## "ಯೆಹೋವನ ಭಯಭಕ್ತಿಯುಳ್ಳವರ ಸುತ್ತಲು ಆತನ ದೂತನು ದಂಡಿಳಿಸಿ ಕಾವಲಾಗಿದ್ದು ಕಾಪಾಡುತ್ತಾನೆ." ಕೀರ್ತನೆಗಳು 34:7.

"ಆತುಕೊಳ್ಳುವುದು-ಯಾವಾಗಲೂ ಹಾಗೂ ನಿರಂತರವೂ ಜೊತೆಗಿರುವ ಪ್ರಸನ್ನತೆ-ಯಾಗಿದೆ." ಆರ್.3441, ಸಿ.1, ಪಿ.2.

"ಈ ಶುಭಸಂದೇಶ ಯುಗದಲ್ಲಿ ಆತ್ಮೀಕ ಮನೆಯ ಇಸ್ರಾಯೇಲ್ಯರು ನೋಟ ಮತ್ತು ದೃಷ್ಟಿಯ ಮೂಲಕವಲ್ಲ, ನಂಬಿಕೆಯಿಂದ ನಡೆಯಬೇಕು ಎಂಬುದು ದೇವರ ಚಿತ್ತವಾಗಿದೆ ಮತ್ತು ಸಭೆಯು ಸಂಪೂರ್ಣವಾಗಿ ಸ್ಥಾಪಿಸಲ್ಪಟ್ಟ ಮೇಲೆ ದೇವದೂತರು ಅವರಾಗಿಯೇ ಬಹಿರಂಗವಾಗಿ ಕಾಣಿಸಿಕೊಳ್ಳುತ್ತಾರೆ ಎಂಬುದನ್ನು ಎದುರುನೋಡುವುದು ಈ ದೃಷ್ಟಿಯಿಂದ ಸರಿಯಲ್ಲ... ಕ್ರಿಸ್ತನ ಹಿಂಬಾಲಕರಿಗೆ ಅವರ ಅಗತ್ಯತೆಗಳನ್ನು ಪೂರೈಸಲು ಸತ್ಯವೇದ ಮತ್ತು ದೈವಯುಕ್ತವಾದ ರಕ್ಷಣೆ ಮತ್ತು ಆತನ ಕಾರ್ಯಗಳನ್ನು ಸಾಧಿಸಲು ಕಣ್ಣಿಗೆ ಕಾಣದ ಪರಿಶುದ್ಧ ದೇವದೂತ ನಿರ್ವಾಹಕರು ಇದ್ದಾರೆ. ಇದು ನಮಗೆ ಅತೀ ನಿಜವಾದ ಮತ್ತು ಅತ್ಯುನ್ನತವಾದ ಆದರಣೆಯಾಗಿದೆ. ಒಂದು ವೇಳೆ ದೇವರೇ ಖುದ್ದಾಗಿ ಈ ಎಲ್ಲಾ ಕಾರ್ಯಗಳನ್ನು ವಯುಕ್ತಿಕವಾಗಿ ಮಾಡುತ್ತಿದ್ದಾರೆ ಎಂದು ತಿಳಿದಿದ್ದಲ್ಲಿ, ದೇವರು ನಮ್ಮನ್ನು ನಿಜವಾಗಿಯೂ ಮರೆತಿರಬಹುದು ಎಂಬ ಯೋಚನೆ ಬಂದಿರುತ್ತಿತ್ತು. ಆದರೆ ಆತನ ಮಾತಿನಲ್ಲಿ "ನಿಮ್ಮ ತಂದೆಯ ಚಿತ್ತವಿಲ್ಲದೆ ನಿಮ್ಮ ಒಂದು ತಲೆಕೂದಲಾದರೂ ನೆಲಕ್ಕೆ ಬೀಳದು" ಎಂಬ ಭರವಸೆಯೊಂದಿಗೆ ನಮ್ಮ ಮನಸ್ಸು ಕ್ರಿಸ್ತನಲ್ಲಿ ಆತನ ಧ್ಯೇಯವನ್ನು, ಆತನ ಮಕ್ಕಳಲ್ಲಿ ಪರಿಶುದ್ಧ ದೇವದೂತರ ಸೇವೆಯ ಮೂಲಕ ಆತನ ಚಿತ್ತವನ್ನು ನೆರವೇರಿಸುವಾಗೆಲ್ಲ ನೆಮ್ಮದಿಯನ್ನು ಪಡೆಯಬಹುದು." ಆರ್.5635, ಪಿ.1, ಸಿ.2, ಪಿ.2.

## "ಯೆಹೋವನು ಸರ್ವೋತ್ತಮನೆಂದು ಅನುಭವ ಸವಿದು ನೋಡಿರಿ; ಆತನನ್ನು ಆಶ್ರಯಿಸಿಕೊಂಡವರು ಎಷ್ಟೋ ಧನ್ಯರು." ಕೀರ್ತನೆಗಳು 34:8.

"ಕರ್ತನ ಮೇಜಿನ ಮೇಲೆ ಏನೆಲ್ಲಾ ಒಳ್ಳೆಯ ಪದಾರ್ಥಗಳಿವೆ ಎಂಬ ಉತ್ಸುಕತೆಯಿಂದ ಮಾತ್ರ ನೋಡುವ ಆಸಕ್ತಿಯುಳ್ಳವರು ಎಂದಿಗೂ ಅದನ್ನು ಅರಿಯರು. ಯಾರು ನಿಷ್ಠಾವಂತ ಹೃದಯವುಳ್ಳವರಾಗಿ, ಅದನ್ನು ಸವಿಯಲು ಮತ್ತು ಅದನ್ನು ತಾವಾಗಿ ನೋಡಲು ಬರುತ್ತಾರೋ ಅವರು ಮಾತ್ರವೇ ಅದನ್ನು ಸದಾ ತಿಳಿದುಕೊಳ್ಳುತ್ತಾರೆ. 'ಮರೆಯಾದ ಮನ್ನಾ ಅವರದು'... ಈ ಔತಣದ ಆತ್ಮೀಕ ಆಶೀರ್ವಾದಗಳಿಗೆ, ದೇವರೊಂದಿಗೆ ಸಂಭಾಷಣೆ ಮತ್ತು ಒಡನಾಡಿತನಕ್ಕೆ, ದೇವರ ಜ್ಞಾನದ ಆಳವಾದ ವಿಷಯಗಳನ್ನು ಅರಿತುಕೊಳ್ಳಲು, ಮಿತಿ ಮೀರಿದ ಶ್ರೇಷ್ಟ ಹಾಗು ಅಮೂಲ್ಯವಾದ ವಾಗ್ದಾನಗಳನ್ನು ರಕ್ಷಣೆಯ ಯೋಜನೆಯಲ್ಲಿ ಆತನೊಂದಿಗೆ ಸಹಕರಿಸುವ ಸಂತೋಷವನ್ನು ಪಡೆದುಕೊಳ್ಳಲು, ಎಲ್ಲಾ ಮೇಜುಗಳನ್ನು ತೊರೆಯಲು ಯಾರು ಅಭಿಲಾಷೆಯುಳ್ಳವರಾಗಿದ್ದಾರೋ ಅಂಥವರು ಮಾತ್ರ ಕರ್ತನ ಮೇಜಿಗೆ ಆಹ್ವಾನಿಸಲ್ಪಟ್ಟಿದ್ದಾರೆ. ಆತನ ದಯೆಗೆ ಪಾತ್ರರಾಗಲು ಎಲ್ಲವನ್ನು ತೊರೆದು, ಅದನ್ನು ಆಳವಾಗಿ ಗೌರವಿಸುವವರು ಮಾತ್ರ ಈ ಔತಣಕ್ಕೆ ಭಾಗಿಯಾಗುತ್ತಾರೆ." ಆರ್.1957, ಸಿ.2, ಪಿ.4.

## “ಯೆಹೋವನು ನೀತಿವಂತರನ್ನು ಕಟಾಕ್ಷಿಸುತ್ತಾನೆ; ಅವರು ಮೊರೆಯಿಡುವಾಗ ಕಿವಿಗೊಡುತ್ತಾನೆ.” ಕೀರ್ತನೆಗಳು 34:15.

“ನಮ್ಮ ಎಲ್ಲಾ ಶೋಧನೆಗಳನ್ನು ಮತ್ತು ಸಂದಿಗ್ಧ ಪರಿಸ್ಥಿತಿಗಳನ್ನು ಕರ್ತನ ಹತ್ತಿರ ಪ್ರಾರ್ಥನೆ – ಯಲ್ಲಿ ತೆಗೆದುಕೊಂಡು ಹೋಗಬಾರದೇ? ಹೌದು, ನಾವು ನಿಜವಾಗಿಯೂ ತೆಗೆದುಕೊಂಡು ಹೋಗಬೇಕು. ಕಳವಳಗೊಂಡಿರುವವರಿಗೆ ಮತ್ತು ದುಃಖತೃಪ್ತವಾಗಿರುವವರಿಗೆ ಎಲ್ಲವನ್ನೂ ಕರ್ತನಿಗೆ ಹೇಳುವ ವಿಶೇಷ ಭಾಗ್ಯ ಮತ್ತು ನೆಮ್ಮದಿ ಬೇರೆ ಎಲ್ಲಿಂದಲೂ ಸಿಗುವುದಿಲ್ಲ. ಆತನ ಕಿವಿ ‘ಅವರ ಅಲ್ಪರ’ ಮೊರೆಗೆ ಯಾವಾಗಲೂ ತೆರೆದಿರುತ್ತದೆ ಹಾಗು ಆತನಿಗೆ ಅವುಗಳನ್ನು ಹೇಳುವುದರಲ್ಲಿಯೂ ಮತ್ತು ಆತನು ನಮ್ಮ ವಿಷಯಗಳ ಮೇಲೆ ಉತ್ಸುಕತೆಯಿಂದಿರು – ವುದನ್ನು ಮನಗಂಡು ನಾವು ಪ್ರೋತ್ಸಾಹಿತರೂ ಉಲ್ಲಾಸಭರಿತರೂ ಆಗುತ್ತೇವೆ. ಇದು ಆತನು “ಎಂದಿಗೂ, ಎಂದೆಂದಿಗೂ ಕೈಬಿಡುವುದಿಲ್ಲ... ನಮ್ಮ ಎಲ್ಲಾ ಭಾರವನ್ನು ಆತನ ಮೇಲೆ ಹಾಕಿ... ಎಂಬ ವಾಗ್ದಾನಗಳನ್ನು ಮತ್ತು ಆತನ ಪ್ರೀತಿಯನ್ನು ಜ್ಞಾಪಕಪಡಿಸುತ್ತದೆ. ಹಾಗೆಯೇ ಆತನೊಂದಿಗೆ ಅತೀ ನಿಕಟವಾದ ಸಾಂಗತ್ಯದೊಂದಿಗೆ ಮತ್ತು ಅನ್ಯೋನ್ಯತೆಯೊಂದಿಗೆ ಬೇರೆ ಯಾವುದೇ ರೀತಿಯಲ್ಲಿ ನಮ್ಮ ಕಾರ್ಯಗಳನ್ನು ವ್ಯವಸ್ಥಿತಗೊಳಿಸುವುದಕ್ಕಿಂತಲೂ, ನಮ್ಮ ಮೊಣಕಾಲುಗಳ ಮೇಲೆ ನಾವು ಬಲಗೊಂಡು ಸಂತೋಷದಿಂದ ಮತ್ತು ಹೆಚ್ಚಾದ ಭರವಸೆಯಿಂದ ಎದ್ದು ನಿಲ್ಲಬಹುದು.” ಆರ್.1999, ಸಿ.2, ಪಿ.5.

## “ಮುರಿದ ಮನಸುಳ್ಳವರಿಗೆ ಯೆಹೋವನು ನೆರವಾಗುತ್ತಾನೆ; ಕುಗ್ಗಿಹೋದವರನ್ನು ಉದ್ಧಾರಮಾಡುತ್ತಾನೆ.” ಕೀರ್ತನೆಗಳು 34:18.

“ಮನೆಗಳು ಮತ್ತು ನೆಲಗಳು ಮತ್ತು ಜಾಗರೂಕತೆಯಿಂದ ಕೂಡಿಸಿಟ್ಟ ಆಸ್ತಿಗಳು ಕೊತ್ತವಾಲನ ಸುತ್ತಿಗೆಯ ಏಟಿಗೆ ಮಾಯವಾಗಬಹುದು. ಬಹುಕಾಲ ನಂಬಿದ ಗೆಳೆಯರು ಕ್ಷಣದಲ್ಲಿ ತಣ್ಣಗಾಗಬಹುದು ಮತ್ತು ನಿಮಗೆ ವಿರೋಧವಾಗಿ ಬೆನ್ನು ತಿರುಗಿಸಿ ನಿಮ್ಮ ಶತ್ರುಗಳು ಕೂಡ ಆಗಬಹುದು. ಕೆಲವು ಸಮಯದಲ್ಲಿ, ಪ್ರೀತಿಸಿದ ಮನೆ ಒಡೆದುಹೋಗಬಹುದು, ಕುಟುಂಬವೇ ಚದುರಿಹೋಗಬಹುದು ಅಥವಾ ಮರಣವೇ ಆಕ್ರಮಿಸಬಹುದು. ಮನೆಯ ಪ್ರಾರ್ಥನಾ ವೇದಿಕೆಯ ಮುಂದೆ ಪ್ರಕಾಶಿಸಿದ ಪ್ರೀತಿ ಮಿಣುಗಬಹುದು ಮತ್ತು ಬರಬರುತ್ತಾ ಬತ್ತಿಹೋಗಬಹುದು ಅಥವಾ ನಂದಿಹೋಗಬಹುದು. ಎಷ್ಟು ಮಂದಿ ಯೌವನದಲ್ಲಿರುವ ಅತ್ಯುನ್ನತ ನಿರೀಕ್ಷೆ ಮತ್ತು ಬಾಲ್ಯದ ಜೀವನ ಕೇವಲ ಕೆಲವೇ ವರುಷಗಳಲ್ಲಿ ಅಥವಾ ತಿಂಗಳುಗಳಲ್ಲಿ ಬೂದಿಯಾಗುತ್ತದೆ ಎಂಬುದನ್ನು ಕಂಡುಕೊಂಡಿದ್ದಾರೆ. ಇಂಥವರು ತಮ್ಮ ಹೊರೆಗಳೊಂದಿಗೆ ಮತ್ತು ಮುರಿದ ಹೃದಯಗಳೊಂದಿಗೆ ಆತನಲ್ಲಿಗೆ ವಿಶೇಷವಾದ ಬಲದೊಂದಿಗೆ ಮೊರೆಯಿಡುತ್ತಾರೆ. (ಮೇಲಿನ ವಾಕ್ಯವನ್ನು ನೋಡಿ) ಜೀವಿತದ ಹೋರಾಟದಲ್ಲಿ ನಿರಾಶೆ ಮತ್ತು ದುಃಖವನ್ನು ಹೊಂದಿ, ಕ್ರಿಸ್ತನಲ್ಲಿ ವಿಶ್ರಾಂತಿಗೆ ಮತ್ತು ಸಂರಕ್ಷಣೆಗೆ, ಜೀವಕ್ಕೆ ಮತ್ತು ಗುಣಹೊಂದುವುದಕ್ಕೆ ಬರುವವರಿಗೆ ಆತನ ಪ್ರೀತಿ ಮತ್ತು ಶ್ರೇಷ್ಠ ವಾಗ್ದಾನಗಳು ಗಿಲ್ಯಾದಿನ ಸುಗಂಧ ತೈಲದಂತೆ ಬರುತ್ತದೆ.” ಆರ್.5862, ಸಿ.1, ಪಿ.3,4.

**"ನೀತಿವಂತನಿಗೆ ಸಂಭವಿಸುವ ಕಷ್ಟಗಳು ಅನೇಕವಿದ್ದರೂ ಯೆಹೋವನು ಅವೆಲ್ಲವುಗಳಿಂದ ಅವನನ್ನು ಬಿಡಿಸುತ್ತಾನೆ." ಕೀರ್ತನೆಗಳು 34:19.**

"ದಿನನಿತ್ಯ ಜೀವನದ ಅನುಭವಗಳು ನಮಗೊಂದು ಅತೀ ಮುಖ್ಯವಾದ ಧ್ಯೇಯಗಳಾಗಿವೆ ಮತ್ತು ನಾವು ಅವುಗಳನ್ನು ಯಾವ ವಿಧದಲ್ಲಿ ಸ್ವೀಕರಿಸುತ್ತೇವೆ ಎಂಬುದರಲ್ಲಿ ಆಳವಾದ ಆಸಕ್ತಿ ಅಡಗಿದೆ. ಪ್ರತೀದಿನ ಯಾವ ವಿಧದಲ್ಲಿ ಅವುಗಳನ್ನು ಉಪಯೋಗಿಸುತ್ತೇವೆಯೋ ಆ ರೀತಿಯಲ್ಲಿ ಪ್ರತೀದಿನದ ಪ್ರಗತಿ ಅಥವಾ ಅದರ ವಿಪತ್ತುಗಳು ಮತ್ತು ಶೋಧನೆಗಳು ಆಶೀರ್ವಾದವನ್ನು ಅಥವಾ ಶಾಪವನ್ನು ತಂದುಕೊಡುತ್ತವೆ... ದುಃಖ ಮತ್ತು ಕೊರಗುಗಳು ಪ್ರಾಯಶಃ ಪ್ರಳಯದಂತೆ ಮೇಲರಗಿ ಬರಬಹುದು. ಆದರೆ ಕರ್ತನೇ ಅವೆಲ್ಲಕ್ಕೂ ನಮ್ಮ ತಡೆಯಾಗಿದ್ದು, ಆತನು ಅನುಮತಿಸುವಂಥಹ ಎಲ್ಲಾ ಅನುಭವಗಳಿಗೆ ಅವರೇ ಬಲವನ್ನು ಕೊಡುತ್ತಾರೆ. ಯಾವ ಆತ್ಮ ದುಃಖ ಮತ್ತು ಕಷ್ಟಗಳ ಶಿಸ್ತನ್ನು ಅರಿತಿಲ್ಲವೋ ಅದು ಇನ್ನೂ ಕರ್ತನ ಪ್ರೀತಿ ಮತ್ತು ಸಹಾಯಕತೆಯ ಸಂತೋಷ ಮತ್ತು ಅಮೂಲ್ಯತೆಯನ್ನು ಅರಿತು–ಕೊಂಡಿಲ್ಲ. ಉಮ್ಮಳಿಸುವ ದುಃಖ ಮತ್ತು ಸಂಕಷ್ಟಗಳಲ್ಲಿ ನಾವು ಕರ್ತನ ಹತ್ತಿರಕ್ಕೆ ಎಳೆಯಲ್ಪಡುವಾಗ ಆತನೂ ವಿಶೇಷವಾಗಿ ನಮ್ಮನ್ನು ತನ್ನ ಸನಿಹಕ್ಕೆ ಸೆಳೆಯುತ್ತಾನೆ." ಆರ್.5802, ಸಿ.1, ಪಿ.4.6.

**"ಆಗ ಯೆಹೋವನಲ್ಲಿ ಸಂತೋಷಿಸುವಿ; ಮತ್ತು ಆತನು ನಿನ್ನ ಇಷ್ಟಾರ್ಥಗಳನ್ನು ನೆರವೇರಿಸುವನು. ನಿನ್ನ ಭೂಯಾತ್ರೆಯ ಚಿಂತೆಯನ್ನು ಯೆಹೋವನಿಗೆ ವಹಿಸಿಬಿಟ್ಟು ಭರವಸದಿಂದಿರು; ಆತನೇ ಅದನ್ನು ಸಾಗಿಸುವನು." ಕೀರ್ತನೆಗಳು 37:4,5.**

"ಕರ್ತನಲ್ಲಿ ನಮ್ಮ ಭರವಸೆ ಮುಂದುವರೆದರೆ ಮತ್ತು ಆತನ ಅನೇಕ ಅನುಗ್ರಹಭರಿತ ಉತ್ತರಗಳಲ್ಲಿ, ನಮ್ಮ ಜೀವಿತದಲ್ಲಿ, ಪವಿತ್ರವಾದ ವಯುಕ್ತಿಕ ಚಿರಪರಿಚಿತ ಹಾಗೂ ಅನ್ಯೋನ್ಯತೆಯಿಂದಿದ್ದರೆ ನಾವು ಆತನಲ್ಲಿ ಹರ್ಷಚಿತ್ತವುಳ್ಳವರಾಗಿರಲು ಕಲಿತುಕೊಳ್ಳುತ್ತೇವೆ... ಆಗ ನಮ್ಮ ಹಾದಿ ಎಷ್ಟೇ ಕತ್ತಲುಮಯವಾಗಿದ್ದರೂ...ದೈವೀಕ ಪರಿಪಾಲನೆಯ ಯೋಚನೆ ನಮ್ಮೊಂದಿಗಿರುತ್ತದೆ... ಅಂಥವರಿಗೆ ಆತನು ಸರ್ವಾಂಗದಲ್ಲಿಯೂ ಮನೋಹರನು. ಆತನ ನ್ಯಾಯಪ್ರಮಾಣವೇ ಅವರ ಆನಂದ. ಆತನ ಗೆಳೆತನ ಮತ್ತು ಪ್ರೀತಿಯೇ ಅವರ ಜೀವಾಳ. ಹೃದಯವು ದೇವರಲ್ಲಿ ಕೇಂದ್ರೀಕೃತವಾದಾಗ, ಸ್ವಾಭಾವಿಕವಾಗಿ ಅದು ಅದರ ಹಾದಿಗಳನ್ನು ಆತನಿಗೆ ಒಪ್ಪಿಸುತ್ತದೆ. ನಿಜವಾಗಿಯೂ ಇಂಥವರು ಅವರ ಹೃದಯದ ಅಭಿಲಾಷೆಗಳನ್ನು ಕಂಡುಕೊಳ್ಳುತ್ತಾರೆ ಮತ್ತು ಯಾವ ಒಳ್ಳೆಯತನವೂ ಅವರಿಂದ ಹಿಡಿದಿಟ್ಟುಕೊಳ್ಳಲ್ಪಡು – ವುದಿಲ್ಲ." ಆರ್.5803, ಸಿ.2, ಪಿ.2,3,5.

**"ಸತ್ಪುರುಷನ ಗತಿಸ್ಥಾಪನೆಯು ಯೆಹೋವನಿಂದಲೇ ಆಗಿದೆ: ಆತನು ಅವನ ಪ್ರವರ್ತನೆಯನ್ನು ಮೆಚ್ಚುತ್ತಾನೆ." ಕೀರ್ತನೆಗಳು 37:23.**

"ಈ ವಾಗ್ದಾನವನ್ನು ಮತ್ತು ಇದಕ್ಕೆ ಸರಿಹೊಂದುವ ವಾಗ್ದಾನಗಳನ್ನು ಕರ್ತನ ಅನೇಕ ಜನರು ವಿಶ್ವಾಸದಿಂದ ಸರಿಯಾಗಿ ಗ್ರಹಿಸದೆ ಇರುವುದು ಒಂದು ಬಲಹೀನತೆ. ಎಷ್ಟು ಪ್ರಮಾಣದಲ್ಲಿ

ಈ ವಿಶ್ವಾಸ ಅವರಲ್ಲಿದೆಯೋ ಮತ್ತು ಈ ವಾಗ್ದಾನಗಳನ್ನು ಗ್ರಹಿಸಿಕೊಳ್ಳುತ್ತಾರೋ ಅಷ್ಟರ–ಮಟ್ಟಿಗೆ ಅದರಲ್ಲಿ ತೇಲುತ್ತಾರೆ ಮತ್ತು ಅದರಿಂದ ಉತ್ತೇಜನಗೊಂಡು ಮುಂದೆ ಇರುವ ಗುರಿಯೆಡೆಗೆ ಹೆಜ್ಜೆ ಹಾಕುತ್ತಾರೆ." ಆರ್.3157, ಸಿ.1, ಪಿ.1.

ಈ ಮಾರ್ಗವು ಎಷ್ಟೇ ಮುಳ್ಳಿನಿಂದ ಕೂಡಿದ್ದರೂ, ಕಡಿದಾಗಿದ್ದರೂ, ಅವರು ದೇವರ ಪ್ರೀತಿ ಮತ್ತು ವಿವೇಕದ ಮೇಲಣ ತಮ್ಮ ಭರವಸೆಯ ನಿಮಿತ್ತ ಈ ಮಾರ್ಗದಲ್ಲಿ ಸಂತೋಷ ಪಡಬಹುದು ಮತ್ತು ಅವರಲ್ಲಿ ಒಳ್ಳೆಯ ಕಾರ್ಯವನ್ನು ಪ್ರಾರಂಭಿಸಿದಾತನು ಈ ರೀತಿಯಲ್ಲಿ ಅದನ್ನು ಪೂರೈಸುತ್ತಾನೆ ಮತ್ತು ಅವರನ್ನು ಅನುಭವಗಳೊಂದಿಗೆ ಆಶೀರ್ವದಿಸುತ್ತಾನೆ ಮತ್ತು ಇದನ್ನು ದೈವೀಕ ಜ್ಞಾನವು ನೋಡುವುದರಿಂದ ಅವರಿಗೆ ಅತ್ಯಂತ ಲಾಭವುಂಟಾಗುವದು. ಆರ್. 2762, ಸಿ.2, ಪಿ.4.

## "ಅವನು ಕೆಳಕ್ಕೆ ಬಿದ್ದರೂ ಏಳದೆ ಹೋಗುವುದಿಲ್ಲ: ಯೆಹೋವನು ಅವನನ್ನು ಕೈಹಿಡಿದು ಉದ್ಧಾರ ಮಾಡುವನು." ಕೀರ್ತನೆಗಳು 37:24.

"ದೇವರ ಮಕ್ಕಳು ಇಕ್ಕಾಟ್ಟಾದ ದಾರಿಯಲ್ಲಿ ಅನೇಕ ಸಮಯಗಳಲ್ಲಿ ಎಡವಿದರೂ (ಕರ್ತನು ಆತನ ಕೈಯನ್ನು ಇನ್ನೂ ಹಿಡಿದುಕೊಂಡಿರುವುದರಿಂದ), ಇವುಗಳು ಅವನು ಸಂಪೂರ್ಣ ವಾಗಿ ಬಿದ್ದುಹೋದನು ಎಂಬ ಅರ್ಥವನ್ನು ಕೊಡುವುದಿಲ್ಲ. ಏಕೆಂದರೆ ಕರ್ತನು ಆತನ ಕೈಯನ್ನು ಇನ್ನೂ ಹಿಡಿದುಕೊಂಡಿದ್ದಾನೆ ಎಂಬ ಆಶ್ವಾಸನೆ ಇರುವುದರಿಂದ!... ನಾವು ಎಂದಿಗೂ ಉದಾಸೀನರಾಗಿರಬಾರದು. ಎಂಥಹಾ ಸಮಾಧಾನಕರವಾದ ಆಲೋಚನೆ ಇಲ್ಲಿದೆ! ಕರ್ತನ ಜನರನ್ನು ಸಂಪೂರ್ಣ ಆಶಾಭಂಗದಿಂದ ಮತ್ತು ಒಬ್ಬರು ಮತ್ತೊಬ್ಬರಿಗೆ ಬಿಡುಗಡೆಗೊಳಿಸುವಂಥಹ ಎಣಿಕೆ ಎಷ್ಟು ರಮ್ಯವಾಗಿದೆ! ಮನಸ್ಸಿನಲ್ಲಿರಬೇಕಾದ ಅತೀ ಮುಖ್ಯವಾದ ಆಲೋಚನೆ ಏನೆಂದರೆ, ನಾನು ಇನ್ನೂ ನಿಜವಾಗಿಯೂ ಕರ್ತನವನೇ? ನಾನು ಇನ್ನೂ ಆತನ ಪರಿಶುದ್ಧ ರಕ್ತದಲ್ಲಿ ಭರವಸೆಯಿಂದಿದ್ದೇನಾ? ನಾನು ಇನ್ನೂ ಕರ್ತನಿಗಾಗಿ ಮತ್ತು ಆತನ ನೀತಿವಂತ ಮಾರ್ಗಗಳಿಗೆ ಸಮರ್ಪಿಸಿಕೊಂಡಿದ್ದೇನೆಯೋ? ಇವುಗಳನ್ನು ನಿಶ್ಚಯವಾಗಿ ಉತ್ತರಿಸಿದ್ದಲ್ಲಿ ನಾವು ಇನ್ನೂ ದೇವರ ಮಕ್ಕಳು ಮತ್ತು ನಮ್ಮ ಕೈಗಳು ಆತನಲ್ಲಿವೆ; ಇನ್ನೂ ಕ್ಷಯಿಸಿ ಹೋಗದೆ... ಆತ್ಮೀಕವಾಗಿ ಜನಿಸಲ್ಪಟ್ಟವರು ಮತ್ತು ಯಾವುದೇ ಎಡಹುವಿಕೆಯಿಂದ ಆದಷ್ಟು ಬೇಗನೆ ನಮ್ಮನ್ನು ನಾವೇ ಗುಣಪಡಿಸಿಕೊಳ್ಳಬೇಕು ಎಂಬುದು ದೇವರ ಚಿತ್ತವಾಗಿದೆ ಮತ್ತು ಕಷ್ಟಗಳಲ್ಲಿ ಶೋಧನೆಗಳಲ್ಲಿ ಹೇಗೆ ನಮ್ಮನ್ನು ಚೆನ್ನಾಗಿ ಮುನ್ನಡೆಸಿ ನೋಡಿಕೊಂಡಿದ್ದಾರೆ ಎಂಬುದನ್ನೂ, ನಾವು ನಮ್ಮ ಗುಣಗಳನ್ನು ಭವಿಷ್ಯದಲ್ಲಿ ಎದುರಾಗುವಂಥಹ ಕಷ್ಟಗಳನ್ನು ಎದುರಿಸಲು ಭದ್ರಪಡಿಸಿಕೊಳ್ಳಬೇಕು ಹಾಗೂ ನಿಜವಾಗಿಯೂ ಬಲಗೊಂಡು ಮುಂದುವರೆಯಬೇಕು ಎಂಬುದನ್ನೂ ಸ್ಪಷ್ಟವಾಗಿ ಗ್ರಹಿಸಬಹುದು." ಆರ್.3157, ಸಿ.2, ಪಿ.1.

## "ನಾನು ಬಾಲಕನಾಗಿದ್ದೆನು, ಈಗ ವೃದ್ಧನಾಗಿದ್ದೇನೆ; ಈ ವರೆಗೂ ನೀತಿವಂತನು ದಿಕ್ಕಿಲ್ಲದೆ ಬಿದ್ದಿರುವುದನ್ನಾಗಲೀ ಅವನ ಸಂತತಿಯವರು ಭಿಕ್ಷೆಬೇಡಿ ತಿನ್ನುವುದನ್ನಾಗಲೀ ನೋಡಲಿಲ್ಲ." ಕೀರ್ತನೆಗಳು 37:25.

"ಯೆಹೋವನಲ್ಲಿ ಭರವಸವಿಟ್ಟು ಒಳ್ಳೆಯದನ್ನು ಮಾಡು, ನಿಜವಾಗಿಯೂ ನೀನು ಸಂತೃಪ್ತನಾಗಿರುವಿ" ...ಈ ವಾಗ್ದಾನಗಳು ನಿಶ್ಚಯವಾದವುಗಳು ಮತ್ತು ಭರವಸೆಯಿಂದಿದ್ದು ಒಳ್ಳೆಯದನ್ನು ಮಾಡುವಾಗ ನಾವು ಸಂತೋಷಪಡಬಹುದು. ಇದು ನಮಗೆ ಉದ್ಯೋಗದಲ್ಲಿ ತಾಪತ್ರಯಗಳು, ತೊಂದರೆಗಳು, ಆಶಾಭಂಗ ಹಾಗೂ ನಿರಾಶೆಗಳು ಇರುವುದಿಲ್ಲ ಎಂಬುದನ್ನು ಸೂಚಿಸುವುದಿಲ್ಲ. ಇಂಥಹ ಅನುಭವಗಳು ಕ್ರಿಸ್ತೀಯ ಗುಣಗಳನ್ನು–ಸಾಧುತ್ವ, ದಮೆ, ಸಹೋದರ ಸ್ನೇಹ, ಪ್ರೀತಿಯನ್ನು ಬೆಳೆಸಿಕೊಳ್ಳಲು ನ್ಯಾಯವಾಗಿ ಬೇಕಾಗಿವೆ. ಚಾರೆಪ್ತದ ವಿಧವೆಯಂತೆ, ನಿಮ್ಮ ಹಿಟ್ಟು ಮತ್ತು ಎಣ್ಣೆ ಕಡಿಮೆಯಾಗಬಹುದು, ಆದರೆ ದೇವರಲ್ಲಿ ಭರವಸೆಯಿಂದಿದ್ದು ನೀನು ಮಾಡಬೇಕಾದ್ದನ್ನು ಮಾಡಿದರೆ ದೇವರಿಗೆ ಇದು ಗೊತ್ತಿದ್ದು ಆತನೇ ನಮಗೆ ಬೇಕಾದ್ದನ್ನು ಆತ್ಮೀಕ ಆಶೀರ್ವಾದಗಳ ಜೊತೆಗೆ ಪೂರೈಸುತ್ತಾರೆ. ಯೆಹೋವನು ನಮಗೆ ಅಗತ್ಯವಾದವುಗಳನ್ನು ನಮ್ಮ ಉದ್ಯಮದಲ್ಲಿ ಅಥವಾ ಗೆಳೆಯರ ಉದಾರತ್ವದ ಮೂಲಕ ಅಥವಾ ಸಾರ್ವಜನಿಕ ಸೌಕರ್ಯದ ಮೂಲಕ ಪೂರೈಸಬಹುದು. ಇವುಗಳನ್ನು ಅಲ್ಲಗಳೆಯಬಾರದು ಅಥವಾ ತ್ಯಜಿಸಬಾರದು. ಈ ಯಾವುದೇ ವಿಧಾನಗಳು ಭಿಕ್ಷೆಬೇಡುವಂಥವುಗಳಲ್ಲ. ಅಗತ್ಯ ಸಹಾಯವನ್ನು ಸ್ವೀಕರಿಸುವುದು ಭಿಕ್ಷೆಬೇಡುವುದಲ್ಲ." ಆರ್.2021, ಸಿ.2, ಪಿ.2.

## "ಓ ಮಗಳೇ, ಕಿವಿಗೊಟ್ಟು ಕೇಳಿ ಆಲೋಚಿಸು; ಸ್ವಜನರನ್ನೂ ತವರುಮನೆಯನ್ನೂ ಮರೆತುಬಿಡು. ಆಗ ರಾಜನು ನಿನ್ನ ಲಾವಣ್ಯವನ್ನು ನೋಡಲಪೇಕ್ಷಿಸುವನು. ಆತನೇ ನಿನಗೆ ಒಡೆಯನು; ಆತನಿಗೆ ನಮಸ್ಕರಿಸು." ಕೀರ್ತನೆಗಳು 45:10,11.

"ಹಿಂದೆ ಎಂದಾದರೂ ವಿವಾಹದ ಪ್ರಸ್ತಾಪ ಇಷ್ಟೊಂದು ಸುಂದರವಾಗಿ ಮತ್ತು ನಾಜೂಕಾದ ಪದಸಮುಚ್ಚಯಗಳೊಂದಿಗೆ ಸ್ಪಷ್ಟಪಡಿಸಲ್ಪಟ್ಟಿದೆಯೋ? ಆಶ್ಚರ್ಯಕರವಾಗಿ ಪದೇ ಪದೇ ನಾನು ಇದನ್ನು ಓದುತ್ತೇನೆ. ನಾನು ರಾಜಾಧಿರಾಜನಿಂದ, ಆತನ ಒಬ್ಬನೇ ಮಗನೂ ಸರ್ವಕ್ಕೂ ವಾರಸುದಾರನೂ, ರಾಜಕುಮಾರನ ಮದುಮಗಳಾಗಲು ಆಹ್ವಾನಿಸಲ್ಪಟ್ಟಿದ್ದೇನೆ; ಈ ಆಮಂತ್ರಣ ಇದಕ್ಕಿಂತ ಬೇರೆ ಯಾವುದೇ ಕಡಿಮೆ ಅರ್ಥವನ್ನು ಕೊಡಲಾರದು; ಮತ್ತು ನನ್ನದೇ ಆದ ವಸ್ತ್ರದಲ್ಲಿ ತುಂಬಿದ ಅನೀತಿಯನ್ನು ಆತನ ನೀತಿಯ ವಸ್ತ್ರದಿಂದ ಮರೆಮಾಡುವುದರಿಂದ, ನಾನು ನಿಜವಾಗಿಯೂ ರಾಜನ ಕಣ್ಣುಗಳಲ್ಲಿ ಸುಂದರವಾಗಿ ಕಾಣುತ್ತೇನೆ. ಆತನ ಪ್ರೀತಿಯ ನಿಮಿತ್ತವಾಗಿ ನನ್ನ ಸ್ವಂತ ಜನಗಳನ್ನು ಮತ್ತು ನನ್ನ ತಂದೆಯ (ಆದಾಮನ) ಮನೆಯನ್ನು, ನಿರ್ದಿಷ್ಟವಾಗಿ ಜಗತ್ತನ್ನೂ, ಅದರ ಎಲ್ಲಾ ನಿರೀಕ್ಷೆಗಳೊಂದಿಗೆ, ಗುರಿಗಳೊಂದಿಗೆ ಮತ್ತು ಹೆಬ್ಬಯಕೆಗಳೊಂದಿಗೆ ಮರೆತರೆ, ಆತನು ನನ್ನನ್ನು ತನ್ನ ಮದುವಣಗಿತ್ತಿಯನ್ನಾಗಿ ಮಾಡಿಕೊಳ್ಳಲು ಆಶಿಸುತ್ತಾನೆ ಎಂಬುದಾಗಿ ನನಗೆ ಹೇಳಲ್ಪಟ್ಟಿದೆ." ಆರ್.1494, ಸಿ.2, ಪಿ.5.

**“ದೇವರು ನಮಗೆ ಆಶ್ರಯದುರ್ಗವಾಗಿದ್ದಾನೆ; ಆತನು ಇಕ್ಕಟ್ಟಿನಲ್ಲಿ ನಮಗೆ ವಿಶೇಷ ಸಹಾಯಕನು. ಆದುದರಿಂದ ಭೂಮಿಯು ಮಾರ್ಪಟ್ಟರೂ ಬೆಟ್ಟಗಳು ಸಮುದ್ರದಲ್ಲಿ ಮುಳುಗಿಹೋದರೂ ನಮಗೇನೂ ಭಯವಿಲ್ಲ.” ಕೀರ್ತನೆಗಳು 46:1–2.**

“ಈ ವಾಕ್ಯವು ಕರ್ತನ ನಂಬಿಗಸ್ತರಿಗೆ ಒಂದು ಸಾಂತ್ವನವೂ ಮತ್ತು ಪೋಷಾಣಾಧಾರವಾದ ಶಕ್ತಿಯೂ ಎಂಬುವದಾಗಿ ಮನಸ್ಸಿನಲ್ಲಿ ಧರಿಸಿಕೊಳ್ಳಬೇಕು. ಇದು ಅಪೋಸ್ತಲ ಪೌಲರು ಹೊಸ ಒಡಂಬಡಿಕೆಯಲ್ಲಿ ಹೇಳುವ “ದೇವರ ಸಂಕಲ್ಪದ ಮೇರೆಗೆ ಕರೆಯಲ್ಪಟ್ಟು ಆತನನ್ನು ಪ್ರೀತಿಸುವವರ ಹಿತಕ್ಕಾಗಿ ಎಲ್ಲಾ ಕಾರ್ಯಗಳು ಅನುಕೂಲವಾಗಿರುತ್ತವೆ” ಎಂಬ ವಾಕ್ಯಗಳಿಗೆ ಸಂಪೂರ್ಣವಾಗಿ ಸರಿಹೊಂದುತ್ತದೆ.” ಆರ್.3232, ಸಿ.2, ಪಿ.2.

**“ನಿನ್ನ ಚಿಂತಾಭಾರವನ್ನು ಯೆಹೋವನ ಮೇಲೆ ಹಾಕು; ಆತನು ನಿನ್ನನ್ನು ಉದ್ಧಾರಮಾಡುವನು, ನೀತಿವಂತನನ್ನು ಎಂದಿಗೂ ಕದಲಗೊಡಿಸನು.” ಕೀರ್ತನೆಗಳು 55:22.**

“ನಮ್ಮಲ್ಲಿ ದಯೆಯುಳ್ಳ ಕೆಲಸಗಳು ಹೆಣೆಯಲ್ಪಡಬೇಕು, ಅದನ್ನು ಕೇವಲ ಜೀವಿತದ ಕಠಿಣವಾದ ಅನುಭವಗಳು ಮಾತ್ರ ಸಾಧ್ಯವಾಗುವಂತೆ ಮಾಡುತ್ತವೆ. ಉದಾಹರಣೆಗೆ, ಒಂದುವೇಳೆ ನಮ್ಮ ಕೌಶಲ್ಯಗಳನ್ನು ದಿಗಿಲುಪಡಿಸುವಂಥಹ ಸಮಸ್ಯೆಗಳನ್ನು ಮುಖಾಮುಖಿಯಾಗಿ ಎದುರಿಸುವ ಸಂದರ್ಭಗಳನ್ನು ಅನುಮತಿಸಲ್ಪಡದಿದ್ದರೆ, ನಮ್ಮದೇ ಆದ ಬುದ್ಧಿಶಕ್ತಿಯ ಮೇಲೆ ಅತೀ ಹೆಚ್ಚಾಗಿ ಅವಲಂಬಿತವಾಗಿರುತ್ತೇವೆ. ಹೀಗೆ ನಾವು ‘ನಮ್ಮನ್ನು ಹೆಚ್ಚಾಗಿ ತೊಡಗಿಸಿಕೊಳ್ಳುವ ವಿಷಯಗಳನ್ನು ಮುಟ್ಟಲು ಭಯಪಡುವಾಗ’ ನಮ್ಮ ದಿಗ್ಭ್ರಮೆಯಲ್ಲಿ ‘ನಿನ್ನ ಹೊರೆಯನ್ನು ಕರ್ತನ ಮೇಲೆ ಹಾಕಿ ಮತ್ತು ಆತನು ನಿನ್ನನ್ನು ಸಂರಕ್ಷಿಸುವನು’ ಎಂದು ದಯೆಯಿಂದ ಹೇಳಿದಾತನ ಬಳಿಗೆ ಬರುತ್ತೇವೆ ಮತ್ತು ನಮಗೋಸ್ಕರ ಅವುಗಳನ್ನು ಹೊತ್ತುಕೊಳ್ಳಲು ಆತನಲ್ಲಿ ಕೇಳಿಕೊಳ್ಳುತ್ತೇವೆ. ಈ ಶರೀರ ಬಲವು ಎಂದಿಗೂ ನಮ್ಮನ್ನು ಅಪಜಯಗೊಳಿಸದೇ ಇದ್ದರೆ, ನಾವು ಶರೀರದ ಬಲವನ್ನೇ ಅತೀ ಹೆಚ್ಚಾಗಿ ಆತುಕೊಂಡು, ಅದರ ಮೇಲೆಯೇ ಭರವಸೆಯಿಂದಿದ್ದು, ನಮ್ಮ ನಿರಾಶೆಗಳು ನಮ್ಮನ್ನು ಕರ್ತನ ರೆಕ್ಕೆಯಡಿಯಲ್ಲಿ ಆಶ್ರಯಕ್ಕಾಗಿ ಹೋಗದಂತೆ ಮಾಡುತ್ತದೆ ಅಥವಾ ಎಂದಿಗೂ ಗೆದ್ದಲು ಮತ್ತು ತುಕ್ಕು ನಾಶಪಡಿಸದೆ ಅಥವಾ ಕಳ್ಳರು ಸ್ವಲ್ಪ ಅಥವಾ ಹೆಚ್ಚಾಗಿ ನಮ್ಮ ಭೂಲೋಕದ ಸೊತ್ತನ್ನು ಕದಿಯದೆ ಇದ್ದಿದ್ದರೆ, ನಿಶ್ಚಯವಿಲ್ಲದ ಐಶ್ವರ್ಯಗಳ ಮೇಲೆ ಭರವಸೆಯನ್ನಿಡಲು ಕಲಿತುಕೊಳ್ಳುತ್ತಿದ್ದೆವು. ದೇವರ ಆರೈಕೆಯ ಮಧುರತೆಯನ್ನು ಅನುಭವಿಸುವುದಕ್ಕಾಗಿ ಮತ್ತು ಆತನು ಮಾತ್ರ ನಮಗಿದ್ದಾರೆ ಎಂಬ ನೆಲೆಯು ಉದ್ಭವಿಸದ ಪಕ್ಷದಲ್ಲಿ, ನಾವು ಭೂಲೋಕದ ಗೆಳೆತನಗಳಲ್ಲಿ, ನಮ್ಮನ್ನು ಪ್ರೀತಿಸುವವರ ಜೊತೆಗೆ ತೃಪ್ತಿಯಿಂದ ಇರುತ್ತಿದ್ದೆವು.” ಆರ್.2130, ಸಿ.1, ಪಿ.2.

**“ನಾನಾದರೋ, ಇಕ್ಕಟ್ಟಿನ ಕಾಲದಲ್ಲಿ ಆಶ್ರಯವೂ ದುರ್ಗವೂ ಆಗಿರುವ ನಿನ್ನ ಬಲವನ್ನು ಹಾಡಿ ಹೊಗಳುವೆನು; ಪ್ರಾತಃಕಾಲದಲ್ಲಿ ನಿನ್ನ ಪ್ರೇಮವನ್ನು ಉಲ್ಲಾಸದಿಂದ ಕೊಂಡಾಡುವೆನು.” ಕೀರ್ತನೆಗಳು 59:16.**

“ಆತನ ನಿಜವಾದ ಆಯ್ಕೆಯಾದ”ವರು ಆತನಲ್ಲಿ ಒಂದುಗೂಡಿ, ದೇವರ ಹತ್ತಿರಕ್ಕೆ ಬರುವುದೇ ಆತನ ಆಶ್ರಯದ ಉಗಮ ಮತ್ತು ಇತರರು ಈ ಅತ್ಯುನ್ನತ ಕೋಟೆಯ ಬಲದಿಂದ, ಈ ದುರ್ಗದಿಂದ, ಈ ರಕ್ಷಣಾಸ್ಥಾನ ಅಥವಾ ಗೋಪುರದಿಂದ ಎಷ್ಟು ದೂರವಿರುತ್ತಾರೋ ಅಷ್ಟೇ ಪ್ರಮಾಣದಲ್ಲಿ ಅಪಾಯದಲ್ಲಿರುತ್ತಾರೆ... ಈ ಆಲೋಚನೆಯನ್ನು ನಮ್ಮ ಮನಸ್ಸಿನಲ್ಲಿ ಸರಿಯಾಗಿ ನಿರ್ಧರಿಸಿಕೊಳ್ಳಬೇಕು!... ಏನೆಂದರೆ ನಮ್ಮ ಕರ್ತನು ಈ ಪ್ರಸ್ತುತ ಲೋಕದಲ್ಲಿ ಹಿಂದೆಂದಿಗಿಂತಲೂ ಈಗ ಹೆಚ್ಚಾಗಿ ಕಾರ್ಯರೂಪದ ರೀತಿಯಲ್ಲಿ ಎಲ್ಲಾ ಭೂಲೋಕದ ಕಾರ್ಯಗಳನ್ನು ಹಡಗಿನ ಚುಕ್ಕಾಣಿಯಂತೆ ಮೇಲ್ವಿಚಾರಿಸುತ್ತಿದ್ದಾರೆ. ಮತ್ತು ಸಭೆಗೆ ಆತನು ತೋರಿಸಿದ ದಯಾಳತ್ವವನ್ನು ಕಳೆದುಹೋದ ನೂರ ಮೂವತ್ನಾಲ್ಕು ವರ್ಷದ ಸುಗ್ಗಿಯ ಕಾಲದಲ್ಲಿ ನೋಡಿಲ್ಲವೇ? ಅಂತಿಮ ನೆರವೇರುವಿಕೆಯ ತನಕ ಆತನು ವಾಗ್ದಾನಮಾಡಿದ ಆತನ ಮುಂದುವರೆದ ಮೇಲ್ವಿಚಾರಣೆಯಲ್ಲಿ ನಾವು ಇನ್ನೂ ಸಂದೇಹಪಡಬಹುದೋ? “ನಮ್ಮಲ್ಲಿ ಒಳ್ಳೇ ಕೆಲಸವನ್ನು ಪ್ರಾರಂಭಿಸಿದಾತನು ಸಿದ್ಧಿಗೆ ತರಲು ಶಕ್ತನಾಗಿದ್ದಾನೆ”... ಆರಂಭದಲ್ಲಿ ನಡೆಸಿದಾತನು ಇನ್ನೂ ಮುನ್ನಡೆಸುತ್ತಾನೆ, ಶಾಂತತೆಯಿಂದಿದ್ದು ಆತನ ಚಿತ್ತದಲ್ಲಿ ಮುಳುಗಿಹೋಗು.” ಆರ್.4379, ಸಿ.2.

**“ನಿನ್ನ ಪ್ರೇಮಾನುಭವವು ಜೀವಕ್ಕಿಂತಲೂ ಶ್ರೇಷ್ಠ; ನನ್ನ ಬಾಯಿ ನಿನ್ನನ್ನು ಕೀರ್ತಿಸುವುದು.” ಕೀರ್ತನೆಗಳು 63:3.**

“ಯಾರೆಲ್ಲರೂ ಪ್ರಸ್ತುತ ಜೀವನವನ್ನು ಪ್ರೀತಿಸುತ್ತಾರೋ ಅವರೆಲ್ಲರು ತಮ್ಮ ತುಟಿಗಳನ್ನು ಮುಚ್ಚಿಕೊಳ್ಳುವರು ಮತ್ತು ಆತನ ಪ್ರೇಮಾನುಭವವನ್ನು ಮಾತಾನಾಡುವ ಗೊಡವೆಗೆ ಹೋಗುವುದಿಲ್ಲ; ಆದರೆ ಯಾರೆಲ್ಲರು ಆತನಿಗೆ ನಂಬಿಗಸ್ತರಾಗಿದ್ದಾರೋ ಮತ್ತು ಕರ್ತನ ದಯೆಯನ್ನು ಜೀವಕ್ಕಿಂತಲೂ ಹೆಚ್ಚಾಗಿ ಗೌರವಿಸುತ್ತಾರೋ ಅವರು ಆತನ ಸ್ತುತಿಯನ್ನು ಲೋಕದ ಯಾವುದೇ ರೀತಿಯ ಕಾರ್ಯಗಳ ನಷ್ಟಗಳಲ್ಲಿಯೂ ತೋರ್ಪಡಿಸುತ್ತಾರೆ.” ಆರ್.2853, ಸಿ.1, ಮೇಲೆ.

ನಾವು ದೇವರ ಪ್ರೇಮಾನುಭವವನ್ನು ಭೌತಿಕ ಜೀವಿತಕ್ಕಿಂತ ಹೆಚ್ಚಾಗಿ ಗೌರವಿಸಬೇಕು, ಇಲ್ಲದಿದ್ದಲ್ಲಿ ನಾವು ಆತನಿಗೆ ಯೋಗ್ಯರಾದವರಲ್ಲ ಮತ್ತು ಆತನು ಹುಡುಕುವ ತರಗತಿಯ ವರಲ್ಲ... ದೇವರೊಂದಿಗಿನ ಸಾಂಗತ್ಯವನ್ನು ಮತ್ತು ಅನಂತ ನಿರೀಕ್ಷೆಗಳನ್ನು ಭೌತಿಕ ಪ್ರೀತಿಗ–ಳೊಂದಿಗೆ ಮತ್ತು ಕುಟುಂಬದ ಬಂಧನಗಳೊಂದಿಗೆ ಮತ್ತು ಲೋಕದ ಅಭಿಲಾಷೆಗಳೊಂದಿಗೆ ಮತ್ತು ಸುಖಾನುಭವಗಳೊಂದಿಗೆ ತೂಕಮಾಡಿ ಮತ್ತು ಭೇದಮಾಡಿ ನೋಡಿದಾಗ ನಂತರ –ದಲ್ಲಿ ಹೇಳಿರುವಂಥವುಗಳು ಶುದ್ಧಚಿನ್ನಕ್ಕೆ ಹೋಲಿಸಿದಾಗ ಅಲ್ಪವಾದವುಗಳು, ಕೆಲಸಕ್ಕೆ

ಬಾರದವುಗಳು. ಈ ದೃಷ್ಟಿಕೋನದಿಂದ ನಾವು ಸಂತೋಷಭರಿತವಾಗಿ ಎಲ್ಲವನ್ನು ತ್ಯಜಿಸುತ್ತೇವೆ, ದೇವರ ದಯೆಗಾಗಿ ಜೀವವನ್ನೇ ತೊರೆಯುತ್ತೇವೆ." ಆರ್.2852, ಸಿ.1, ಮೇಲೆ.

## "ನಿನ್ನ ಚಿತ್ತವನ್ನು ತಿಳಿಯಪಡಿಸಿ ನನ್ನನ್ನು ನಡಿಸಿ ತರುವಾಯ ಮಹಿಮೆಗೆ ಸೇರಿಸಿಕೊಳ್ಳುವಿ." ಕೀರ್ತನೆಗಳು 73:24.

"ಕರ್ತನು ತನ್ನ ಜನರನ್ನು ಎಷ್ಟು ಆಶ್ಚರ್ಯಕರವಾಗಿ ನಡೆಸಿದ್ದಾರೆ! ಎಂದೆಂದಿಗೂ ಆತನ ಮಕ್ಕಳು ಆತನ ಸತತವಾದ ಗಂಭೀರ ಲಕ್ಷ್ಯವಾಗಿದ್ದಾರೆ. ಯಾವ ಒಳ್ಳೆಯ ಕಾರ್ಯವನ್ನು ಅವರಿಂದ ಆತನು ಹಿಂದೆಗೆದಿಟ್ಟಿಲ್ಲ ಮತ್ತು ಆತನಿಗೆ ವಿಧೇಯರಾಗಿದ್ದರೆ ಎಲ್ಲಾ ಕಾರ್ಯಗಳನ್ನು ಅವರಿಗೆ ಅನುಕೂಲವಾಗುವಂತೆ ಮಾಡಿದ್ದಾರೆ. ಯಾರೆಲ್ಲ ಕರ್ತನನ್ನು ಅನೇಕ ವರ್ಷಗಳಿಂದ ನಂಬಿದ್ದಾರೊ ಅವರಿಗೆಲ್ಲಾ ಸೂರ್ಯಪ್ರಕಾಶ ಹಾಗು ಮಬ್ಬುಗತ್ತಲೆಯ ಮುಖಾಂತರ, ಮಂದಹಾಸ ಮತ್ತು ಕಣ್ಣೀರಿನ ಮುಖಾಂತರ, ಪ್ರಶಾಂತ ನೀರುಗಳಲ್ಲಿ, ಅಲೆಗಳಲ್ಲಿ ಮತ್ತು ಬಿರುಗಾಳಿಯಲ್ಲಿ ಆತನ ಉತ್ಕೃಷ್ಟ ವಾಗ್ದಾನಗಳು ಮತ್ತು ನೆಲೆಯಾದ ನಂಬಿಗಸ್ತತೆ ನಿಜವಾಗಿಯೂ ಸಾಭೀತುಪಡಿಸಿಲ್ಲವೇ!!" ಆರ್.5538, ಸಿ.1, ಪಿ.8.

"ನಾವು ಒಬ್ಬ ಅತೀ ವಿವೇಕವುಳ್ಳ ಮತ್ತು ಉಪದೇಶಕನ ಅಗತ್ಯತೆಯನ್ನು ಗೌರವಿಸುತ್ತೇವೆ. ಉತ್ತಮ ಪ್ರಾಂಪಂಚಿಕ ಉಪದೇಶವು ಕೂಡ ದೈವೀಕ ಉಪದೇಶದ ಪ್ರಕಾರವಾಗಿ ನಿರ್ದೇಶಿಸಿದರೆ ಮಾತ್ರ ಅದು ಬೆಲೆಯುಳ್ಳದ್ದು ಎಂದು ನಾವು ಪರಿಗಣಿಸುತ್ತೇವೆ... ಮೇಲಾಗಿ, ಅಲ್ಲಿ ಈ ಉಪದೇಶವೇ ನಮಗೆ ಸಾಕಾಗುವಷ್ಟಿದೆ ಎಂಬ ಭರವಸೆಯಿದೆ, ಏಕೆಂದರೆ ಅದರಿಂದ ಕಟ್ಟಕಡೆಯದಾಗಿ ಅದಕ್ಕೆ ಗಮನಕೊಡುವದರೊಂದಿಗೆ ಓಟದ ಕಡೆಯಲ್ಲಿ ನಿತ್ಯಜೀವದ ಬಹುಮಾನದೆಡೆಗೆ ತಲುಪುತ್ತೇವೆ." ಆರ್.2240, ಸಿ.1, ಪಿ.5.

## "ತನುಮನಗಳು ಕ್ಷಯಿಸಿದರೂ ನನ್ನ ಆತ್ಮಕ್ಕೆ ಶರಣನೂ ನನ್ನ ಶಾಶ್ವತವಾದ ಪಾಲೂ ದೇವರೇ." ಕೀರ್ತನೆಗಳು 73:26.

"ಪ್ರಬಲವಾದ ಸಂಕಟಗಳ ಸಮಯದಲ್ಲಿ ನಮ್ಮ ಕರ್ತನಿಗೆ ಆದಂತೆಯೇ ಅಂಧಕಾರವು ಆತ್ಮದ ಮೇಲೆ ದಟ್ಟವಾಗಿ ಕವಿಯುತ್ತದೆ ಮತ್ತು ನಿರೀಕ್ಷೆಯ ನಕ್ಷತ್ರವು ಹೆಚ್ಚು ಕಡಿಮೆ ಮುಚ್ಚಿಹೋದಂತೆ ಭಾಸವಾಗುತ್ತದೆ; ಆದರೂ ಕರ್ತನಂತೆ, ಸರ್ವಶಕ್ತ ಯೆಹೋವನ ಕೈಯನ್ನು ಕರೆದಿಡಿದುಕೊಳ್ಳುತ್ತೇವೆ ಮತ್ತು ನಮ್ರತೆಯಿಂದ "ಅದಾಗ್ಯೂ ನನ್ನ ಚಿತ್ತವಲ್ಲ, ಆದರೆ ನಿಮ್ಮ ಚಿತ್ತವೇ ನೆರವೇರಲಿ" ಎಂದು ಹೇಳುತ್ತೇವೆ. ಆತನ ಕೃಪೆಯೇ ಸಾಕು ಮತ್ತು ಕೀರ್ತನೆಗಾರನೊಂದಿಗೆ "ತನುಮನಗಳು ಕ್ಷಯಿಸಿದರೂ ದೇವರೇ ನನ್ನ ಆತ್ಮಕ್ಕೆ ಶರಣನೂ ನನ್ನ ಶಾಶ್ವತವಾದ ಪಾಲೂ" ಎಂದು ಹೇಳುತ್ತೇವೆ ಮತ್ತು ಕರ್ತನೊಂದಿಗೆ – "ತಂದೆ ನನಗೆ ಕೊಟ್ಟಿರುವ ಪಾತ್ರೆಯಲ್ಲಿ ಕುಡಿಯಬಾರದೋ?" ಎಂದು ನಮ್ಮ ಹೃದಯಗಳು ಪ್ರತಿಸ್ಪಂದಿಸುತ್ತವೆ." ಆರ್.1802, ಸಿ.2, ಮೇಲೆ.

## “ಯೆಹೋವ ದೇವರು ಸೂರ್ಯನೂ ಗುರಾಣಿಯೂ ಆಗಿದ್ದಾನಲ್ಲಾ.” ಕೀರ್ತನೆಗಳು 84:11.

“ದಾವೀದನ ತರಗತಿಯವರಿಗೆ, ಅತೀಪ್ರಿಯ ವರ್ಗದವರಿಗೆ, ಅಭಿಷಿಕ್ತರಿಗೆ, ಕ್ರಿಸ್ತನ ಅಂಗದವರಿಗೆ ನಮ್ಮ ಮೂಲವಾಕ್ಯ ಶ್ರೇಷ್ಟ ಉತ್ತೇಜನವಾಗಿದೆ. ಇಂಥವರಿಗೆ ಯೆಹೋವದೇವರು ಸೂರ್ಯನೂ ಮತ್ತು ಗುರಾಣಿ ಎರಡೂ ಆಗಿದ್ದಾರೆ; ಆತನು ಇವರನ್ನು ಪ್ರಕಾಶಪಡಿಸುತ್ತಾರೆ, ಮಾತ್ರವಲ್ಲದೆ ಅವರ ಮೇಲೆ ದಯಪಾಲಿಸುವ ಆಶೀರ್ವಾದಗಳಲ್ಲಿ ಅವರಿಗೆ ಹಾನಿಯಾಗದಂತೆ ಕಾಪಾಡುತ್ತಾರೆ. ಯಾವುದೇ ವಿಧದಲ್ಲಿ ಅವರಿಗೆ ಹಾನಿಮಾಡುವ ಸಕಲಕಾರ್ಯಗಳಿಂದ ಮತ್ತು ಎಲ್ಲಾ ಶತ್ರುಗಳಿಂದ ಅವರಿಗೆ ಗುರಾಣಿಯಾಗಿದ್ದಾರೆ; ಆತನ ಸಂಕಲ್ಪದ ಮೇರೆಗೆ ಕರೆಯಲ್ಪಟ್ಟ ಆತನನ್ನು ಪ್ರೀತಿಸುವವರ ಹಿತಕ್ಕಾಗಿ ಎಲ್ಲಾ ಕಾರ್ಯಗಳು ಅನುಕೂಲವಾಗುತ್ತವೆ. ಆಗ ಇಂಥಹ ಆಶೀರ್ವಾದದಾಯಕ ಭರವಸೆಯಿಂದ, (ಹರ್ಷದಿಂದ ಮತ್ತು ದೃಢವಿಶ್ವಾಸದೊಂದಿಗೆ ಭವಿಷ್ಯದೆಡೆಗೆ ಮುಂದೆ ನೋಡಿಕೊಂಡು) ನಂಬಿಗಸ್ತರಿಗೆ ದೇವರು ವಾಗ್ದಾನ ಮಾಡಿರುವ ಮಹಿಮಾನ್ವಿತ ಫಲದಲ್ಲಿ ನಂಬಿಕೆಯಿಂದ ಪಾಲುಹೊಂದಲು ಹರ್ಷದೊಂದಿಗೆ ಮತ್ತು ದೃಢವಿಶ್ವಾಸದೊಂದಿಗೆ ಭವಿಷ್ಯದೆಡೆಗೆ ಮುಂದೆ ನೋಡಬಹುದು.” ಆರ್.4219, ಸಿ.2, ಪಿ.4.

## “ನನ್ನ ಒಡಂಬಡಿಕೆಯನ್ನು ನಾನು ಮುರಿಯೆನು; ಇಲ್ಲವೆ ನನ್ನ ತುಟಿಗಳಿಂದ ಹೊರಟದ್ದನ್ನು ಬದಲಾಯಿಸೆನು.” ಕೀರ್ತನೆಗಳು 89:34.

“ಎಲ್ಲಾ ವಿಶಿಷ್ಟತೆಗಳಲ್ಲಿ ಕರ್ತನನ್ನು ಅನುಸರಿಸಲು ಮತ್ತು ಗುಣಲಕ್ಷಣಗಳಲ್ಲಿ ಆತನ ಸ್ವಾರೂಪ್ಯದಲ್ಲಿ ಸಂಪೂರ್ಣವಾಗಿ ಹೆಣೆದುಕೊಳ್ಳಲು ಪ್ರಯತ್ನಿಸುವಾಗ ಈ ಮೂಲವಾಕ್ಯದ ಪಾಠವನ್ನು ಈಗ ವಿಶೇಷವಾಗಿ ನಮ್ಮ ಮನಸ್ಸಿನಲ್ಲಿಟ್ಟುಕೊಳ್ಳೋಣ, ಆತನ ಕೆಲಸಗಳಿಗೆ ದೇವರ ನಂಬಿಗಸ್ತತೆ ಮತ್ತು ನಾವು ಆತನ ಜನರಾಗಿ, ಆತನ ಸಹಾಯ ಮತ್ತು ಕೃಪೆಯ ಮುಖಾಂತರ, ಆತನ ಸ್ವಾರೂಪ್ಯದಲ್ಲಿ ದಿನನಿತ್ಯ ಈ ಗುಣದಲ್ಲಿ ಬೆಳೆಯಬೇಕು ಎಂದು ನಿರ್ಧರಿಸಿ, ನಾವು ಕೂಡ ನಮ್ಮಷ್ಟಕ್ಕೆ ನಮ್ಮ ಪ್ರಮಾಣಗಳ ಮತ್ತು ಒಡಂಬಡಿಕೆಗಳ ನಿಮಿತ್ತವಾಗಿ ಕರ್ತನು ತಾನಾಗಿಯೇ ಹೇಳುವಂತೆ, “ನನ್ನ ಒಡಂಬಡಿಕೆಯನ್ನು ಭಂಗಪಡಿಸುವುದಿಲ್ಲ; ನನ್ನ ಮಾತನ್ನು ಬದಲಿಸುವುದಿಲ್ಲ” ಎಂಬುದಾಗಿ ಹೇಳೋಣ.” ಆರ್.3109, ಸಿ.2, ಪಿ.2.

## “ಪರಾತ್ಪರನ ಮೊರೆಹೊಕ್ಕಿರುವವನು ಸರ್ವಶಕ್ತನ ಆಶ್ರಯದಲ್ಲಿ ಸುರಕ್ಷಿತನಾಗಿರುವನು.” ಕೀರ್ತನೆಗಳು 91:1.

“ಪರಾತ್ಪರನ ಈ ಸುರಕ್ಷಿತ ತಾಣ, ಪ್ರೀತಿಮಯ, ಅನ್ಯೋನ್ಯ ಸಂಭಾಷಣೆಯ ಮತ್ತು ದೇವರೊಂದಿಗೆ ಸಾಂಗತ್ಯದ ಸ್ಥಳ, ಆಶೀರ್ವಾದಯುತವಾದ ಪ್ರಾರ್ಥನೆಯ ಭಾಗ್ಯದ ಮೂಲಕ ಮತ್ತು ಆತನ ಅಮೂಲ್ಯ ವಾಕ್ಯದ ಮೇಲಿರುವ ನಂಬಿಕೆಯ ಮೂಲಕ ಮತ್ತು ಆತನ

ವಾಗ್ದಾನದ ದೈವಾಯುಕ್ತ ಪರಾಮರಿಕೆಯ ಮೂಲಕ.... ಓ, ಎಂಥಹಾ ಅಮೂಲ್ಯವಾದ ಹುದುಗುವ ಸ್ಥಳವು ಇದಾಗಿದೆ! ಈಗಲೂ ಇಡೀ ಜಗತ್ತನ್ನು ತವಕಪಡಿಸುವ ಕೋಲಾಹಲದ ನಡುವೆಯೂ ನಾವು ಎಂಥಹಾ ವಿಶ್ರಾಂತಿ ಮತ್ತು ಉಲ್ಲಾಸವನ್ನು ಪಡೆಯುತ್ತೇವೆ. ಜಗತ್ತು ಕೊಡಲಾಗದ ಹಾಗು ತೆಗೆದುಕೊಳ್ಳಲಾಗದ ವಿಶ್ರಾಂತಿ, ಸಮಾಧಾನ, ಹಗುರತೆ ಮತ್ತು ಸಂತೋಷವನ್ನು ನಾವು ಇಲ್ಲಿ ಪಡೆಯುತ್ತೇವೆ." ಆರ್.1788, ಸಿ.1, ಪಿ.2,3.

"ಪರಾತ್ಪರನ ನೆರಳಿನೊಳಗೆ ತಂಗಿರು" ಎಂದು ಮೇಘಗಳಿಂದ ದೇವದರ್ಶನ ಗುಡಾರವು ಆವರಿಸಲ್ಪಟ್ಟದ್ದು ಕರ್ತನ ಪ್ರಸನ್ನತೆ ಮತ್ತು ರಕ್ಷಣೆಯನ್ನು ಸಾಂಕೇತಿಸುತ್ತದೆ." ಆರ್.1913, ಸಿ.2, ಪಿ.1.

## "ನಾನು ಯೆಹೋವನಿಗೆ, ನೀನೇ ನನ್ನ ಶರಣನು ನನ್ನ ದುರ್ಗವು ನಾನು ಭರವಸವಿಟ್ಟಿರುವ ನನ್ನ ದೇವರು ಎಂದು ಹೇಳುವೆನು." ಕೀರ್ತನೆಗಳು 91:2.

"ನಮ್ಮ ಆತ್ಮವಿಶ್ವಾಸವನ್ನು ಭದ್ರವಾಗಿ ಹಿಡಿದುಕೊಂಡಿರಬೇಕು, ಯಾಕೆಂದರೆ ಇದು ದೇವರು ನಮ್ಮ ತಂದೆ ಎಂಬುದನ್ನು ರುಜುವಾತುಪಡಿಸುತ್ತದೆ. ನಮ್ಮೆಲ್ಲರಿಗೆ ಗೊತ್ತಿರುವಂತೆ ಈಗ ತಂತಿರಹಿತ ದೂರವಾಣಿಯನ್ನು ಸಮುದ್ರ ಮತ್ತು ನೀರಿನಲ್ಲಿ ಅದ್ಭುತವಾಗಿ ಬಳಸಲಾಗುತ್ತಿದೆ. ಹಾಗು ನಿಜವಾದ ಕ್ರೈಸ್ತರು ಮತ್ತು ಪರಲೋಕದ ಕರ್ತನ ನಡುವೆ ತಂತಿರಹಿತ ಸಂಭಾಷಣೆಗೆ ಒಂದು ದುರ್ಬಲ ನಿದರ್ಶನವಷ್ಟೆ. ಈ ಸನ್ನಿವೇಶಗಳಲ್ಲಿ ಈ ಆತ್ಮವಿಶ್ವಾಸ ಕರ್ತನ ಮೇಲೆ ಅವಲಂಬಿತವಾಗಿದ್ದು ಆತನೆಡೆಗೆ ನೋಡುತ್ತದೆ. ತಂದೆ ಮತ್ತು ಮಕ್ಕಳ ನಡುವೆ ಅಲ್ಲೊಂದು ತಂತಿರಹಿತ ಸಂಭಾಷಣೆ ಇರುತ್ತದೆ." ಆರ್.5595, ಸಿ.1, ಪಿ.6.

## "ನಿನ್ನನ್ನು ಬೇಟೆಗಾರನ ಬಲೆಯಿಂದಲೂ ಮರಣಕರವಾದ ವ್ಯಾಧಿಯಿಂದಲೂ ತಪ್ಪಿಸುವವನು ಆತನೇ." ಕೀರ್ತನೆಗಳು 91:3.

"ಅವಿಶ್ವಾಸವೆಂಬ ದಂಡಿನ ಪಿಡುಗನ್ನು ಹೊರಗೆ ಹಾಕಲಾಗುವುದು." ಆರ್.844, ಸಿ.1, ಪಿ.6.
ಪ್ರತಿಯೊಂದು ದೋಷವು ಕೆಲವು ಸತ್ಯವನ್ನು ತಡೆಮಾಡುತ್ತದೆ ಮತ್ತು ಮಬ್ಬುಗೊಳಿಸುತ್ತದೆ. ಮತ್ತು ನಾವು ದೇವರ ಪ್ರತೀ ಮಕ್ಕಳಿಗೆ ಸತ್ಯದ ಎಲ್ಲಾ ಸರ್ವಾಂಗ ಕವಚ, ದೇವರ ಸರ್ವಾಯುಧ ಬೇಕಾಗಿರುವ ಕಾಲಕ್ಕೆ ಬಂದಿದ್ದೇವೆ. ಯಾರಲ್ಲಿ ದೇವರ ಸರ್ವಾಯುಧ ಇಲ್ಲವೋ ಅವನು ಈ 'ಕೆಟ್ಟ ದಿನದಲ್ಲಿ ಶೋಧನೆಯ ಸಮಯದಲ್ಲಿ ಖಂಡಿತವಾಗಿಯೂ ತಪ್ಪಿನಲ್ಲಿ ಬೀಳುತ್ತಾನೆ... ಮತ್ತು ನ್ಯಾಯತೀರ್ಪು ದೇವರ ಮರೆಯಲ್ಲಿ ಆರಂಭವಾಗಬೇಕು,' ಯಾರು ತಾನೇ ನಿಲ್ಲಲು ಸಾಧ್ಯ? ಅಮೂಲ್ಯ ವಾಗ್ದಾನಗಳಿಂದ ಮತ್ತು ಅತೀ ಮಹತ್ವದ ದೇವರ ವಾಕ್ಯದ ಬೋಧನೆಗಳಿಂದ ಯಾರು ಮಾತ್ರ ತಮ್ಮನ್ನು ತಾವೇ ಮಹಾಪರಿಶುದ್ಧ ವಿಶ್ವಾಸದಲ್ಲಿ ಬೆಳೆಸಿಕೊಳ್ಳುತ್ತಾರೋ ಅಂಥವರೇ ಹೊರತು ಬೇರೆ ಯಾರೂ ನಿಲ್ಲಲು ಸಾಧ್ಯವಿಲ್ಲ." ಆರ್.5801, ಸಿ.2, ಪಿ.4.

**“ತನ್ನ ರೆಕ್ಕೆಗಳಿಂದ ನಿನ್ನನ್ನು ಹೊದಗಿಸುವನು; ಆತನ ರೆಕ್ಕೆಗಳ ಕೆಳಗೆ ಆಶ್ರಯಿಸಿಕೊಳ್ಳುವಿ; ಆತನ ಸತ್ಯವು ನಿನ್ನ ಖೇಡ್ಯವೂ ಡಾಲೂ ಆಗಿದೆ.” ಕೀರ್ತನೆಗಳು 91:4.**

“ನಮ್ಮ ಪರಲೋಕ ತಂದೆಯ ಪ್ರೀತಿ ಮತ್ತು ಪೋಷಣೆ ಮತ್ತು ಸಂರಕ್ಷಣೆಯೇ ಆತನ ರೆಕ್ಕೆಗಳು ಮತ್ತು ಪಕ್ಕೆಗಳಾಗಿದ್ದು, ಎಲ್ಲಾ ಕೆಡುಕುಗಳಲ್ಲಿ ಗುರಾಣಿಯಾಗಿದ್ದು, ಬೆಚ್ಚಗಿದ್ದು ಸುರಕ್ಷಿತವಾಗಿರಿಸುತ್ತದೆ.” ಆರ್.5438, ಸಿ.2,ಪಿ.1.

“ಹೌದು, ಆತನ ಸತ್ಯ, ದೈವೀಕ ಯುಗಗಳ ಯೋಜನೆಯಲ್ಲಿ ಸತ್ಯವನ್ನು ಒಳಗೊಂಡ ಭವ್ಯವಾದ ರೀತಿಯನ್ನು ಯಾರೆಲ್ಲರೂ ನಿಷ್ಕಪಟ ಹೃದಯದಿಂದ ಸ್ವೀಕರಿಸಿ, ಅದಕ್ಕೆ ನಂಬಿಗಸ್ತತೆಯನ್ನು ತೋರ್ಪಡಿಸುತ್ತಾರೋ ಅಂಥಹವರಿಗೆ ಇದೊಂದು ವಿಸ್ತೃತ (ಧಾರಾಳ) ಖೇಡ್ಯ ಮತ್ತು ಗುರಾಣಿಯಾಗಿದೆ.” ಆರ್.3332, ಸಿ.1, ಮೇಲೆ.

“ಸುಗ್ಗಿಯ ಸಂದೇಶ, ಅದರ ಅನೇಕ ವೈಶಿಷ್ಟ್ಯಗಳಲ್ಲಿ ಈಗ ಯುಕ್ತವಾಗಿರುವ ಸತ್ಯವನ್ನು ಎಲ್ಲಾ ಹಂತಗಳಲ್ಲೂ ಸ್ಥಿರಪಡಿಸುತ್ತದೆ ಮತ್ತು ತಪ್ಪನ್ನು ಎಲ್ಲಾ ಹಂತಗಳಲ್ಲೂ ಹೊರಗೆ ತರುತ್ತಿದೆ. ಅದರ ಮೂಲಕ ಆತನ ಖಚಿತತೆಗೆ ಅನುಸಾರವಾಗಿ “ಪಾದ ಸದಸ್ಯರಿಗೆ, ಕ್ರಿಸ್ತನ ನಿಜವಾದ ಶರೀರದ ಅಂಗದವರಿಗೆ ಹಾನಿಮಾಡುವುದಿಲ್ಲ ಎಂಬುದು ದೇವರ ಕಾಪಾಡುವ ಶಕ್ತಿಯ ಮಹತ್ವತೆಯಾಗಿದೆ.” ಆರ್.3441, ಸಿ.2, ಪಿ.1.

**“ಇರುಳಲ್ಲಿ ಭಯಹುಟ್ಟಿಸುವ ಯಾವುದಕ್ಕೂ ಹಗಲಲ್ಲಿ ಹಾರಿಬರುವ ಬಾಣಕ್ಕೂ ಕತ್ತಲೆಯಲ್ಲಿ ಸಂಚರಿಸುವ ವಿಪತ್ತಿಗೂ ಮಧ್ಯಾಹ್ನದ ಕೇಡಿಗೂ ಅಂಜ ಕಾರಣವಿಲ್ಲ.” ಕೀರ್ತನೆಗಳು 91:5–6.**

“ನಮ್ಮ ಪ್ರಸ್ತುತ ದಿನಗಳಿಂದ ಹೊರಡುವ ಬಾಣಗಳು, ವಿಪತ್ತುಗಳು, ಎಡವುವಿಕೆಗಳು, ಇತ್ಯಾದಿಗಳಿಗೆ... ಪ್ರವಾದಿ ದಾವೀದನು ಕೊಡುವ ವಿವರಣೆಯನ್ನು ಜ್ಞಾಪಿಸಿಕೊಳ್ಳಿರಿ ಮತ್ತು ಸಾವಿರ ಜನರು ನಮ್ಮ ಮಗ್ಗುಲಲ್ಲಿ ಬೀಳುವರು ಎಂಬುದು ಪ್ರಕಟಣೆಯಾಗಿದೆ. ನಾವು ಕರ್ತನ ಧನಾತ್ಮಕ ಭರವಸೆಗಳಾದ, ಅವರಾಯ್ದುಕೊಂಡ ತಮ್ಮದೇ ಜನರನ್ನು ಕಾಪಾಡುತ್ತಾರೆ– ಅಂದರೆ, ಕರೆಯುವಿಕೆಯನ್ನೂ ಆಯ್ಕೆಯನ್ನೂ ದೃಢಪಡಿಸಿಕೊಳ್ಳುವವರು ಎಂಬುದನ್ನು ಮರೆಯಬಾರದು. ಕೇವಲ ಬಾಹಿರವಾಗಿ ಮಾತ್ರವಲ್ಲದೆ, ತಮ್ಮ ಹೃದಯದ ಅನುಭವಗಳಲ್ಲಿ ಕರ್ತನಿಗೆ ಹತ್ತಿರವಾಗಿ ಜೀವಿಸುತ್ತಿರುವವರು ಗುರಾಣಿಯಿಂದ ಆವೃತವಾಗಿರುವವರು. ಆಯ್ಕೆಯಾದವರ ಕಾಲಗಳು ಎಡುವು ಕಲ್ಲಿಗೆ ತಗಲದಂತೆ ಕಾಪಾಡಲು ದೇವರು ತನ್ನ ದೂತರಿಗೆ ಅಪ್ಪಣೆಕೊಟ್ಟಿದ್ದಾನೆ ಮತ್ತು ಯೆಹೋವನಿಂದ ನೇಮಿಸಲ್ಪಟ್ಟ ಕಾರ್ಯಕರ್ತರ ಮುಖಾಂತರ ಅವರನ್ನು ಮೇಲಕ್ಕೆ ಎತ್ತುತ್ತಾರೆ ಎಂಬ ಭರವಸೆ ನೀಡಿದ್ದಾನೆ.” (ಕೀರ್ತನೆ. 91) ಆರ್.4438, ಸಿ.2, ಪಿ.5.

## “ನಿನ್ನ ಮಗ್ಗುಲಲ್ಲಿ ಹತ್ತುಸಾವಿರ ಜನರು ಸತ್ತುಬಿದ್ದರೂ ನಿನಗೇನೂ ತಟ್ಟದು.” ಕೀರ್ತನೆಗಳು 91:7.

“ದೇವರನ್ನು, ಅತ್ಯುನ್ನತನನ್ನು ತಮ್ಮ ಆಶ್ರಯ ಮತ್ತು ನಿವಾಸವನ್ನಾಗಿ ಮಾಡಿಕೊಂಡಿದ್ದಾರೋ ಅಂಥಹ ಪ್ರತ್ಯೇಕ ತರಗತಿಗೆ ಮಾತ್ರ ಈ ವಾಗ್ದಾನ ಸೀಮಿತವಾಗಿದೆ ಎಂಬುದನ್ನು ನಾವು ನೆನಪಿನಲ್ಲಿಡಬೇಕು.” ಆರ್.4167,ಸಿ.2, ಮಧ್ಯಭಾಗ.

“ಜಗತ್ತಿನವರ ಬಗ್ಗೆ... ಯಾರು ಹಾನಿಗೊಳಗಾಗುತ್ತಾರೋ ಮತ್ತು ಬಿದ್ದುಹೋಗುತ್ತಾರೋ ಅಂಥವರ ಬಗ್ಗೆ ನಾವು ಯೋಚಿಸಬಾರದು, ಬದಲಾಗಿ ಸಭೆಯ ಗೆಳೆಯರ; ಸಭೆಯ ಜೊತೆಗೆ ನಿಕಟವಾಗಿ ಅನ್ಯೋನ್ಯವಾಗಿರುವವರ ಬಗ್ಗೆ ಯೋಚಿಸಬೇಕು. ಜಗತ್ತು ದೇವರ ದಯೆಯಿಂದ ಬಿದ್ದುಹೋಗಿಲ್ಲ, ಏಕೆಂದರೆ ಅದು ದೇವರ ದಯೆಯಲ್ಲಿ ಇರಲಿಲ್ಲ. ಈ ವಚನ ನಿಜವಾಗಿಯೂ ಪವಿತ್ರಾತ್ಮದಿಂದ ಹುಟ್ಟಿದ ಅಥವಾ ತಾವು ಪವಿತ್ರಾತ್ಮದಿಂದ ಹುಟ್ಟಲ್ಪಟ್ಟವರೆಂದು ಭಾವಿಸಿ ಸ್ಥಾನವನ್ನು ಬಯಸುವವರು; ಅಂದರೆ, ಗೋಧಿಯಂತೆ ನಟಿಸುವ ಕಳೆಗಳು... ಮಗ್ಗುಲಲ್ಲಿ ಸಾವಿರ ಜನರು ಬೀಳುವುದಕ್ಕೆ ಮತ್ತು ಬಲಗಡೆಯಲ್ಲಿ ಹತ್ತು ಸಾವಿರ ಜನರಿಗೂ ನಡುವೆ ಇರುವಂಥ ಒಂದು ವ್ಯತ್ಯಾಸವಾಗಿದೆ. ನಾವು ಅರ್ಥೈಸುವಂತೆ ಸಾವಿರ ಜನರು ಒಟ್ಟಾಗಿ ಅಪನಂಬಿಕೆಯಲ್ಲಿ ಬಿದ್ದುಹೋಗಬಹುದು ಮತ್ತು ಹತ್ತುಸಾವಿರ ಜನರು, ಅಂದರೆ ‘ಮಹಾಸಮೂಹ’, ಅವರ ವಸ್ತ್ರಗಳನ್ನು ಬೆಳ್ಳಗಾಗುವಂತೆ ಮತ್ತು ಅವರನ್ನೇ ಶುದ್ಧೀಕರಿಸಿಕೊಳ್ಳಲು ಮಹಾ ಉಪದ್ರವ ಕಾಲದಲ್ಲಿ ಬೀಳಬಹುದು. ಅವರು ಬಾಬಿಲೋನಿನೊಂದಿಗೆ ಆಕೆಯ ಪಾಪಗಳಲ್ಲಿ ಪಾಲನ್ನು ಹೊಂದಿರುವವರು ಮತ್ತು ಆಕೆಯ ಮಹಾ ಬೀಳುವಿಕೆಯಲ್ಲಿ ಪಾಲನ್ನು ಹೊಂದುವರು... ಯೇಸು ಕ್ರಿಸ್ತನಲ್ಲಿ ಪವಿತ್ರೀಕರಿಸಲ್ಪಟ್ಟವರು, ದೇವರ ಪ್ರಿಯ ಮಗನ ಪ್ರತಿಗಳು ಮಾತ್ರ ಆತನಲ್ಲಿ ಸಂಪೂರ್ಣವಾಗಿ ನಿಂತುಕೊಳ್ಳಲು ಶಕ್ತರಾಗುವರು.” ಆರ್.4926, ಸಿ.1, ಪಿ.5, ಪಿ.1.

## “ಯೆಹೋವನೇ ನನ್ನ ಶರಣನು! ಪರಾತ್ಪರನನ್ನು ನಿವಾಸಸ್ಥಾನ ಮಾಡಿಕೊಂಡಿದ್ದೀಯಲ್ಲಾ.” ಕೀರ್ತನೆಗಳು 91:9.

“ಇದು ಸಂತರಿಗೆ ಇರುವ ಭದ್ರತೆಯ ಸುಳಿವನ್ನು ನಮಗೆ ಕೊಡುತ್ತದೆ. ಪ್ರಸ್ತುತ ಸಮಯದ ಬಗ್ಗೆ ಅಪೊಸ್ತಲರು ಕೊಟ್ಟ ಆಕ್ಷೇಪಣೆಗಳಿಗೆ ಲಕ್ಷ್ಯಕೊಡುವುದರಿಂದ ಮತ್ತು ಎದುರಾಳಿಯ ತಂತ್ರಗಳಲ್ಲಿ ಹೇಗೆ ಎಚ್ಚರಿಕೆಯಿಂದ ನಡೆದುಕೊಳ್ಳಬೇಕೆಂದು ಅರಿತುಕೊಂಡವರಲ್ಲಿ ಅವರ ಬಲವು ಹೆಚ್ಚಾಗಿ ಅಡಗಿದೆ. ಆಯ್ಕೆಯಾದವರು ಹೇಗೆ ಕರ್ತನಲ್ಲಿ ಏಕಮತವನ್ನು ಹೊಂದಿರು ವುದರಿಂದ ಮತ್ತು ಹೆಚ್ಚಾಗಿ ಆತನ ವಾಕ್ಯದ ಆತ್ಮದಿಂದ ತುಂಬಿಸಲ್ಪಡುವುದರಿಂದ ಮತ್ತು ಈ ಸುಗ್ಗಿಯಲ್ಲಿ ಸಹ-ಕೊಯ್ಲುಗಾರರಾಗಿ ವಿಶೇಷ ಪ್ರಯೋಜನವನ್ನು ಚಲಾಯಿಸುವ ಆಶೀರ್ವಾದವನ್ನು ಹೊಂದಿರುವುದರಿಂದ ಮತ್ತು ಸತ್ಯಕ್ಕೆ, ಮತ್ತದರ ಸೇವೆಗೆ ತಮ್ಮ

ಜೀವವನ್ನೇ ಮುಡುಪಾಗಿಡಲು ಒಲವು ತೋರುವುದರಿಂದ ಎದುರಾಳಿಯ ಯಾವುದೇ ಈ ಉರುಲುಗಳು ಮತ್ತು ಭ್ರಾಂತಿಗಳು... ಅವರಿಗೆ ವಿಶೇಷ ಆಕರ್ಷಣೆಗಳಾಗಿರಲಾರವು." ಆರ್.2770, ಸಿ.2, ಪಿ.4.

## "ಯಾವ ಕೇಡೂ ನಿನಗೆ ಸಂಭವಿಸದು; ಉಪದ್ರವವು ನಿನ್ನ ಗುಡಾರದ ಸಮೀಪಕ್ಕೆ ಬಾರದು." ಕೀರ್ತನೆಗಳು 91:10.

"ಯಾವ ಕೇಡೂ ನಿನಗೆ, ಅಂದರೆ ಹೊಸ ಸೃಷ್ಟಿಗೆ ಸಂಭವಿಸದು." ಆರ್.4767, ಸಿ.1, ಪಿ.3.

"ಪವಿತ್ರಾತ್ಮಭರಿತರಲ್ಲಿ ಎರಡು ತರಗತಿಯವರು ಇದ್ದಾರೆ ಎಂಬುದನ್ನು ನಾವು ಗುರುತಿಸಬೇಕು ಮತ್ತು ನಮ್ಮ ಮೂಲವಾಕ್ಯವು ಈ ತರಗತಿಯ ಒಂದು ವರ್ಗಕ್ಕೆ ಮಾತ್ರ ಅನ್ವಯಿಸುತ್ತದೆ... ಈ ತರಗತಿಯ ದೈಹಿಕ ಆಸಕ್ತಿಗಳಿಗೆ ಘೋರವಾದ ಸಂಗತಿಗಳು ನಡೆಯಬಹುದು; ಅವರು ಪ್ರೀತಿ ಮತ್ತು ಭಕ್ತಿಯಿಂದ ಏನನ್ನೂ ಹಿಡಿದಿಟ್ಟುಕೊಂಡಿಲ್ಲ; ಆದರೆ ಅವರು 'ಮಾಂಸದಲ್ಲಿಲ್ಲ, ಆತ್ಮದಲ್ಲಿದ್ದಾರೆ' ಎಂಬುದನ್ನು ಜ್ಞಾಪಿಸಿಕೊಳ್ಳುತ್ತಾರೆ ಮತ್ತು ಯಾವುದೇ ಬಾಹಿರ ವರ್ಚಸ್ಸು ಅವರ ನಿಜವಾದ ಆಸಕ್ತಿಗೆ ಹಾನಿಮಾಡುವುದಿಲ್ಲ ಅಥವಾ ಹೊಸಸೃಷ್ಟಿಗಳಾಗಿ ಒಂದುವೇಳೆ ನಂಬಿಗಸ್ತರಾಗಿದ್ದರೆ ರಾಜ್ಯದ ಮಹಿಮೆಯನ್ನು ಹೊಂದಲು ತಡೆಪಡಿಸುವುದಿಲ್ಲ ಎಂದು ಮನಗಾಣುತ್ತಾರೆ. ಈ ತರಗತಿಗೆ ಏನೇ ಸಂಭವಿಸಿದರೂ– 'ಯಾವ ಕೇಡೂ ನಿನಗೆ ಸಂಭವಿಸದು' ಎಂಬ ಭರವಸೆಯನ್ನು ಇವರಿಗೇ ಕೊಡಲಾಗಿದೆ. ಎರಡು ವರ್ಗಗಳಲ್ಲಿ ಮತ್ತೊಂದು ವರ್ಗಕ್ಕೆ, ಅಂದರೆ ಮಹಾಸಮೂಹಕ್ಕೆ ಕೆಲವು ಕೇಡುಗಳು ಖಂಡಿತ ಸಂಭವಿಸುವವು. ಅವರನ್ನು ಮಹಾ ಉಪದ್ರವದಲ್ಲಿ ಹಾಕಲಾಗುವದು." ಆರ್4767, ಸಿ.2, ಪಿ.4,5.

## "ನೀನು ಹೋಗುವಲ್ಲೆಲ್ಲಾ ನಿನ್ನನ್ನು ಕಾಯುವುದಕ್ಕೆ ಆತನು ನಿನ್ನ ವಿಷಯವಾಗಿ ತನ್ನ ದೂತರಿಗೆ ಅಪ್ಪಣೆಕೊಡುವನು." ಕೀರ್ತನೆಗಳು 91:11.

"ಸುಗ್ಗಿಯ ಸಂದೇಶವು ದೇವರು ಕಾಯುವ ಬಲವಾಗಿದೆ." ಆರ್.3441, ಸಿ.2, ಪಿ.1.

"ಕರ್ತನ "ಪಾದ"ದ ತರಗತಿಯವರಿಗೆ ಹೆಚ್ಚಾಗಿ ಸಹಾಯವಾಗಿರಲು ದೂತರನ್ನು (ಸಂದೇಶ ವಾಹಕರನ್ನು), ಶಾಖೆಗಳನ್ನು ಎಬ್ಬಿಸಿ ನಿಲ್ಲಿಸಿದ್ದಾರೆ ಎಂಬುವದಾಗಿ ನಾವು ನಂಬುತ್ತೇವೆ. ಈ ಶಾಖೆಗಳು ಅನೇಕವಾದವುಗಳು. ಕ್ರಿಸ್ತನ ಪಾದದ ಸದಸ್ಯರನ್ನು ಹುಡುಕಲು ಮತ್ತು ಸಂರಕ್ಷಿಸಲು ಪ್ರಸ್ತುತ ಸತ್ಯದಿಂದ ಮುದ್ರಿಸಲ್ಪಟ್ಟ ಪುಟಗಳು... ಜಗತ್ತಿನ ಎಲ್ಲಾ ಭಾಗಗಳಿಗೆ ಹೋಗಿವೆ... ಆತನು ಈ ಪಾರುಪತ್ಯಗಾರಿಗೆಯನ್ನು ಉಪಯೋಗಿಸುವದನ್ನು ಮುಂದುವರೆಸುತ್ತಾನೆ. ಮಾರ್ಗದ ಅಂತ್ಯದವರೆಗೆ ಆತನ ಜನರ ಬಲಪಡಿಸುವಿಕೆಯು ಇದ್ದೇ ಇರುತ್ತದೆ, ಈ ರೀತಿಯಾಗಿ ನಡೆಸಲ್ಪಡುವವರು ಯಾರಾದರೂ ಇಲ್ಲದಿದ್ದಲ್ಲಿ ಅದಕ್ಕೆ ಅವರಲ್ಲಿನ ದೋಷವೇ ಕಾರಣವಾಗಿರುತ್ತದೆ. ನಮ್ಮಲ್ಲಿ ಪ್ರತಿಯೊಬ್ಬರೂ "ನಿನ್ನ" ಎಂದು

ಹೇಳಲ್ಪಟ್ಟ ತರಗತಿಯಾಗಿರುವಂತೆ ನೋಡಿಕೊಳ್ಳಬೇಕು. 'ಯಾವ ಕೇಡೂ ನಿನಗೆ ಸಂಭವಿಸದು,' ಹೇಗೆಂದರೆ ದೈವೀಕ ರಕ್ಷಣೆಯು ನಮ್ಮ ಓಟದ ಕಡೆಯ ತನಕ ಇದೆ ಎಂದರ್ಥವಾಗುತ್ತದೆ." ಆರ್.5817, ಸಿ.2, ಮೇಲೆ ಮತ್ತು ಪಿ.1.

## "ನಿನ್ನ ಪಾದವು ಕಲ್ಲಿಗೆ ತಗಲದ ಹಾಗೆ ಅವರು ನಿನ್ನನ್ನು ತಮ್ಮ ಕೈಗಳಲ್ಲಿ ಎತ್ತಿಕೊಳ್ಳುವರು." ಕೀರ್ತನೆಗಳು 91:12.

"ಈ ಕೀರ್ತನೆಯ ಪ್ರಕಾರ, ಈಗ "ಪಾದ"ದ ಸದಸ್ಯರು ಎಡವಿಬೀಳುವ ವಿಶಿಷ್ಟ ಅಪಾಯದಲ್ಲಿದ್ದಾರೆ ಮತ್ತು ಆದಕಾರಣ ವಿಶೇಷ ನೆರವು ಬೇಕಾಗಿದೆ ಎಂಬುದನ್ನು ನಾವು ನೋಡುತ್ತೇವೆ...ನಮ್ಮ ಕರ್ತನ ಪ್ರಸನ್ನತೆ ಮತ್ತು ಆತನ ಕೆಲಸದವರನ್ನು ಯೆಹೂದ ಸುಗ್ಗಿಯಲ್ಲಿ ಅರ್ಥಮಾಡಿಕೊಳ್ಳಲೂ ಇಲ್ಲ, ಇಲ್ಲವೇ ಗೌರವಿಸಲಿಲ್ಲ ಮತ್ತು ಹಾಗೆಯೇ ಇಲ್ಲಿ ಕೂಡ ಸಂಭವಿಸುತ್ತದೆ. ಇವತ್ತಿನ ಸಂಗತಿಗಳು ಆತನ ಪ್ರಸನ್ನತೆಯ ಪ್ರಕಟನೆಗಳಾಗಿವೆ. ಈ ಸಂಗತಿಗಳು ಮತ್ತು ವಚನಗಳ ಮಹತ್ವದ ಸತ್ಯಗಳು, ಈಗ ಹೆಚ್ಚಾಗಿ ಇನ್ನೂ ತಿಳಿಯಾಗಿವೆ ಮತ್ತು ಹಿಂದೆಂದಿ –ಗಿಂತಲೂ ತೇಜೋಮಯವಾಗಿವೆ, ಅವುಗಳು ಜಗತ್ತಿಗೆ ಎಡವುಗಲ್ಲುಗಳಾಗಿವೆ. ಆದರೆ ನಂಬಿಗಸ್ತರಿಗೆ, ಕಾಯುವವರಿಗೆ ಆಶೀರ್ವಾದಗಳಾಗಿವೆ. ನಿಜವಾದ ದೇವಜನರು ಈ ಮೆಟ್ಟುಗಲ್ಲಿನ ಮೇಲೆ ಏರುತ್ತಾ, ಇನ್ನೂ ಎತ್ತರವಾದ ವಿಚಾರಣೀಯ ಹಂತಕ್ಕೆ ಎತ್ತಲ್ಪಡುತ್ತಾರೆ ಮತ್ತು ಎಡವುವಿಕೆಯಿಂದ ಕಾಪಾಡಲ್ಪಡುತ್ತಾರೆ. ಈಡುಬಲಿಯ ಉಪದೇಶ ಮತ್ತು ಬೋಧಕನ ಎರಡನೆಯ ಬರುವಿಕೆಯ ಸೂಚನೆಗಳು ಈ ಸಮಯದಲ್ಲಿ ಕರ್ತನ ಸಂತರಿಗೆ ಉಚ್ಚರಿಸಲಾಗದಂಥಹ ಪ್ರಯೋಜನಗಳಾಗಿವೆ." ಆರ್.5816, ಸಿ.2, ಪಿ.7; 5817, ಸಿ.1, ಪಿ.1.

## "ಅವನು ನನ್ನಲ್ಲಿ ಆಸಕ್ತನಾಗಿರುವುದರಿಂದ ಅವನನ್ನು ರಕ್ಷಿಸುವೆನು; ನನ್ನ ನಾಮವನ್ನು ಅರಿತನಾಗಿರುವದರಿಂದ ಅವನನ್ನು ಉದ್ಧರಿಸುವೆನು." ಕೀರ್ತನೆಗಳು 91:14.

"ಅವನು ನನ್ನಲ್ಲಿ ಆಸಕ್ತನಾಗಿರುವುದರಿಂದ (ಯೆಹೋವನು ಹೇಳುತ್ತಾನೆ) ಅವನನ್ನು ರಕ್ಷಿಸುವೆನು (ವಿಪತ್ತು ಇತ್ಯಾದಿಗಳಿಂದ); ಅವನನ್ನು ಉದ್ಧರಿಸುವೆನು (ಕ್ರಿಸ್ತನೊಂದಿಗೆ ಅವನನ್ನು ಸಹ ಭಾಧ್ಯತೆಯ ಉನ್ನತಿಗೇರಿಸುವೆನು, ಅವನನ್ನು ರಾಜವಂಶಸ್ಥರ ಯಾಜಕ ಸದಸ್ಯನನ್ನಾಗಿ ಮತ್ತು ದೈವೀಕ ಸ್ವಭಾವದಲ್ಲಿ ಪಾಲು ಹೊಂದುವವನನ್ನಾಗಿ ಮಾಡುವೆನು), ಯಾಕೆಂದರೆ ಅವನು ನನ್ನ ನಾಮವನ್ನು ಅರಿತವನಾಗಿದ್ದಾನೆ..." ಆರ್.3332, ಸಿ.2, ಪಿ.4.

## "ಅವನು ನನ್ನನ್ನು ಕರೆಯುವನು; ನಾನು ಅವನಿಗೆ ಉತ್ತರ ಕೊಡುವೆನು; ಇಕ್ಕಟ್ಟಿನಲ್ಲಿ ನಾನು ಅವನ ಸಂಗಡ ಇದ್ದು ಅವನನ್ನು ತಪ್ಪಿಸಿ; ಘನಪಡಿಸುವೆನು.' ಕೀರ್ತನೆಗಳು 91:15.

ಇಂತಹ ಭರವಸಯುಕ್ತ ಆತನ ಪ್ರೀತಿಯ ಆರೈಕೆಗೆ ಕರ್ತನನ್ನು ಮಹಿಮೆಪಡಿಸಿ! 'ನನ್ನ ಮನವೇ, ಯೆಹೋವನನ್ನು ಕೊಂಡಾಡು; ನನ್ನ ಸರ್ವೇಂದ್ರಿಯಗಳೇ ಆತನ ಪವಿತ್ರ ನಾಮವನ್ನು ಕೀರ್ತಿಸಿರಿ.' ಆರ್.3332, ಸಿ.2, ಪಿ.6.

"ಇಲ್ಲಿರುವ ಸೂಚನೆಯೇನೆಂದರೆ, ಉಪದ್ರವದಲ್ಲಿ ನಾವು ಹೋಗಿ ಸಿಕ್ಕಿಕೊಳ್ಳುವದನ್ನು ಕರ್ತನು ಅವಶ್ಯವಾಗಿ ತಪ್ಪಿಸುವುದಿಲ್ಲ... ಉಪದ್ರವ ನಮಗೆ ತುಂಬಾ ಫಲಪ್ರದವಾಗಿ ಮಾರ್ಪಾಡಾಗಬಹುದು. ಕರ್ತನು ಆತನ ವಾಕ್ಯದಲ್ಲಿ ಮೊದಲೇ ಹೇಳಿದಂತೆ ನಾವು ಉಪದ್ರವಗಳಲ್ಲೂ ಸಂತೋಷಪಡಬೇಕು... ಆದುದರಿಂದ ಕರ್ತನು ನಮಗೆ ಉಪದ್ರವಗಳಿಂದ ಪಾರಾಗುತ್ತೇವೆ ಎಂದು ವಾಗ್ದಾನ ಮಾಡಿದ್ದರೂ, ಆತನ ಮಕ್ಕಳಿಗೆ ಉಪದ್ರವಗಳಲ್ಲಿ ಆತನ ಅಂತರಂಗ, ಉಪಶಮನವನ್ನು ಆಧರಿಸುವ ದಯೆಯನ್ನು ಕೊಡುತ್ತೇನೆ ಎಂದು ಖಂಡಿತವಾಗಿ ವಾಗ್ದಾನ ಮಾಡಿದ್ದಾರೆ. ಇದು ಅವರಿಗೆ ಉಪದ್ರವಗಳ ನಡುವೆಯೂ ಸಂತೋಷಪಡಿಸಲು ಶಕ್ತಗೊಳಿಸುತ್ತದೆ." ಆರ್.5758, ಸಿ.1, ಪಿ.5, ಸಿ.2, ಪಿ.1.

## "ಬೆಳಕು ನೀತಿವಂತನಿಗೋಸ್ಕರವೂ ಸಂತೋಷವು ಯಥಾರ್ಥ ಹೃದಯದವರಿಗೋಸ್ಕರವೂ ಬಿತ್ತಲ್ಪಟ್ಟಿವೆ." ಕೀರ್ತನೆಗಳು 97:11.

"ಸಕಾಲದಲ್ಲಿ ಎಲ್ಲಾ ಸಹೋದರರು ಎಚ್ಚೆತ್ತುಕೊಂಡು ದೇವರ ಸರ್ವಾಯುಧಗಳನ್ನು ಧರಿಸಿಕೊಳ್ಳವರು... ಯಾರೆಲ್ಲ ನಿದ್ರೆಹೋಗಲು ಬಿಡಲ್ಪಡುತ್ತಾರೋ ಮತ್ತು ಕತ್ತಲೆಯಲ್ಲಿ – ದ್ದಾರೋ ಅಂಥವರು ಕೇಡಿನ ದಿನವನ್ನು ಎದುರಿಸಲಾರರು ಮತ್ತು ಇದರ ಮುಖಾಂತರ ಸ್ಪಷ್ಟಪಡಿಸುವುದೇನೆಂದರೆ, ಅಂಥವರ ಉದ್ಯೋಗ ಏನೇ ಆಗಿದ್ದರೂ ಹೃದಯವನ್ನು ಅವಲೋಕಿಸುವ ದೇವರು, ಅಂಥವರು ಪ್ರಸ್ತುತ ಸತ್ಯದ ಬೆಳಕಿಗೆ ಯೋಗ್ಯರಲ್ಲ ಎಂದು ನಿರ್ಧರಿಸುತ್ತಾರೆ. ಪ್ರಕಾಶವೂ (ಸತ್ಯ) ನೀತಿವಂತನಿಗೋಸ್ಕರ ಮತ್ತು ಸಂತೋಷವು (ಸಂತೋಷವು ಸತ್ಯವನ್ನು ಸ್ಪಷ್ಟವಾಗಿ ಗ್ರಹಿಸುವುದರ ಮುಖಾಂತರ ಬರುತ್ತದೆ) ಯಥಾರ್ಥ ಹೃದಯದವರಿಗೋಸ್ಕರವೂ ಬಿತ್ತಲ್ಪಟ್ಟಿವೆ." ಆರ್.2453, ಸಿ.1, ಪಿ.4, ಆರ್.3648, ಸಿ.1, ಪಿ.3.

## "ತಂದೆಯು ಮಕ್ಕಳನ್ನು ಕನಿಕರಿಸುವಂತೆ ಯೆಹೋವನು ತನ್ನಲ್ಲಿ ಭಯಭಕ್ತಿಯುಳ್ಳವರನ್ನು ಕನಿಕರಿಸುತ್ತಾನೆ. ಆತನು ನಮ್ಮ ಪ್ರಕೃತಿಯನ್ನು ಬಲ್ಲನು; ನಾವು ಧೂಳಿಯಾಗಿದ್ದೇವೆಂಬುದನ್ನು ನೆನಪು ಮಾಡಿಕೊಳ್ಳುತ್ತಾನೆ." ಕೀರ್ತನೆಗಳು 103:13–14.

"ನಮ್ಮ ಅಲ್ಪ ಸಂಗತಿಗಳಲ್ಲಿಯೂ ಪ್ರೀತಿಸುವ ಆತನ ಹಿತಾಸಕ್ತಿಯ ಮೇಲೆ ಪೂರ್ಣ ಭರವಸೆಯಿಟ್ಟು ನಾವು ಆತನ ಮಕ್ಕಳಾಗಿದ್ದೇವೆಂಬುದನ್ನು ಒಪ್ಪಿಕೊಳ್ಳುವಂತೆ ಆತನು ನಮ್ಮನ್ನು ಆಮಂತ್ರಿಸುತ್ತಾನೆ." ಆರ್.3161, ಸಿ.2, ಪಿ.1.

ಮುಂದುವರೆಯುತ್ತಾ, ದೇವರ ಬಾಯಿಂದ ಭರವಸೆಯಾಗಿ ಹೊರಡುವ ಒಂದು ಮಾತೆಂದರೆ, ಆತನು ನಮ್ಮ ಪ್ರಕೃತಿಯನ್ನು ಬಲ್ಲನು; ನಾವು ಧೂಳಿಯಾಗಿದ್ದೇವೆ–ಬಲಹೀನರು, ಅಪರಿಪೂರ್ಣರು, ಸಾಯುವಂತವರು ಎಂಬುದನ್ನು ನೆನಪು ಮಾಡಿಕೊಳ್ಳುತ್ತಾರೆ. ಮತ್ತು ಯಾವಾಗಲೂ ನಾವು ಪರಿಪೂರ್ಣ ಚಿತ್ತದಿಂದ ಅಪರಿಪೂರ್ಣ ಶರೀರ ಹೋರಾಟದಲ್ಲೇ ಮುಂದುವರಿಯಬೇಕೆಂಬುದು ಆತನ ಉದ್ದೇಶವಲ್ಲ, ಆದರೆ ಪುನರುತ್ಥಾನದಲ್ಲಿ ನಮ್ಮ ಹೊಸ ಮನಸ್ಸಿಗೆ ಸಮರ್ಪಕವಾಗಿ ನೂತನ, ಪರಿಪೂರ್ಣ ದೇಹವನ್ನು ಒದಗಿಸಿಕೊಡುತ್ತಾರೆ." ಆರ್.4893, ಸಿ.2,ಪಿ.6.

## "ಆದರೆ ಕರ್ತನ ಕೃಪೆಯು ಆತನಿಗೆ ಭಯಪಡುವವರ ಮೇಲೆಯೂ ಆತನ ನೀತಿಯು ಮಕ್ಕಳ ಮಕ್ಕಳಿಗೂ ಆತನ ಒಡಂಬಡಿಕೆಯನ್ನು ಕೈಕೊಂಡು ಆತನ ಕಟ್ಟಳೆಗಳನ್ನು ನೆನಸಿ ಅದರಂತೆ ಮಾಡುವವರಿಗೂ ನಿತ್ಯತ್ವದಿಂದ ನಿತ್ಯತ್ವಕ್ಕೂ ಇರುವದು." ಕೀರ್ತನೆಗಳು 103:17–18.

"ಪ್ರಸ್ತುತ ಸಮಯದಲ್ಲಿ ದೇವರೊಂದಿಗೆ ನಿರ್ದಿಷ್ಟವಾದ ಒಡಂಬಡಿಕೆಯನ್ನು ಮಾಡಿಕೊಳ್ಳದಿದ್ದಲ್ಲಿ ಯಾರೊಬ್ಬರೂ ದೇವರಿಂದ ಅಂಗೀಕೃತವಾಗುವುದಿಲ್ಲ ಎಂಬುದು ಈ ಹಾದಿಯ ಸೂಕ್ಷ್ಮವಾದ ವೈಶಿಷ್ಟ್ಯಗಳಲ್ಲಿ ಒಂದು. ಒಂದು ವೇಳೆ ಅವನು ಒಡಂಬಡಿಕೆಯನ್ನು ಮಾಡಿಕೊಳ್ಳಲು ಆಯ್ಕೆಮಾಡಿಕೊಳ್ಳದೆ ತಾನು ಕ್ರೈಸ್ತನೆಂದು ಆಲೋಚಿಸಬಹುದು. ಆದರೆ ಅವನು ಕ್ರೈಸ್ತನಲ್ಲ. ಜಗತ್ತಿನಲ್ಲಿ ನಾಲ್ಕು ಬಿಲಿಯನ್ ಜನರು ಕ್ರೈಸ್ತರೆಂದು ಎಣಿಕೆಯಾಗಿದ್ದಾರೆ... ಆದರೆ ವೇದವಾಕ್ಯವು ತುಂಬಾ ಸರಳವಾಗಿ ಹೇಳುತ್ತದೆ; 'ಯಾವನಿಗಾದರೂ ನನ್ನ ಹಿಂದೆ ಬರುವುದಕ್ಕೆ ಮನಸ್ಸಿದ್ದರೆ ಅವನು ತನ್ನನ್ನು ನಿರಾಕರಿಸಿ ತನ್ನ ಶಿಲುಬೆಯನ್ನು ಹೊತ್ತುಕೊಂಡು ನನ್ನ ಹಿಂದೆ ಬರಲಿ.' ಈ ಸ್ವ–ನಿರಾಕರಣೆ ಮತ್ತು ಶಿಲುಬೆಯನ್ನು ಹೊತ್ತುಕೊಳ್ಳುವಂಥಹ ತ್ಯಾಗವು ಕ್ರಿಸ್ತನ ಶಿಷ್ಯರಾಗುವವರಲ್ಲಿ ಪ್ರಸ್ತುತ ಸಮಯದಲ್ಲಿ ಅತೀ ಅಗತ್ಯವಾಗಿ ಬೇಕು. ಅನೇಕ ಜನರು ಕ್ರೈಸ್ತರಲ್ಲ, ಏಕೆಂದರೆ ಅವರು ದೇವರೊಂದಿಗೆ ಒಡಂಬಡಿಕೆಯಲ್ಲಿ ಪ್ರವೇಶಿಸಿಲ್ಲ... ಈ ಇಕ್ಕಟ್ಟಾದ ಬಾಗಿಲು ಮತ್ತು ಬಿಕ್ಕಟ್ಟಾದ ದಾರಿಯಲ್ಲಿ ಪ್ರವೇಶಿಸಿದ ನಂತರ ನಾವು ಅವಶ್ಯವಾಗಿ ಅದರಲ್ಲಿಯೇ ಮುಂದುವರಿಯಬೇಕು, ಅತ್ಯವಶ್ಯವಾಗಿ ಎಡವಿ ಬೀಳದಂತೆಯೇ ಅಲ್ಲ... ಅವಶ್ಯವಾಗಿ ತಪ್ಪುಗಳನ್ನು ಮಾಡದೆ ಅಲ್ಲ. ಒಂದು ವೇಳೆ ಹೀಗೆಯೇ ತತ್ತರಿಸದೆ ಮುಂದುವರೆದು ಹೋಗುತ್ತಾ ಇದ್ದರೆ, ನಮ್ಮ ಅತ್ಯುತ್ತಮ ಸಾಮರ್ಥ್ಯಕ್ಕೆ ತಕ್ಕಂತೆ ಮತ್ತು ಕರ್ತನಿಗೆ ನಮ್ಮ ಹೃದಯಗಳಲ್ಲಿ ವಿಧೇಯರಾಗಿ, ಆತನ ಮದುವಣಗಿತ್ತಿಯ ಸದಸ್ಯರಾಗಿ ಆತನ ಸಿಂಹಾಸನದಲ್ಲಿ ನಾವು ಕುಳಿತುಕೊಳ್ಳುವಂತೆ ಸಮ್ಮತಿಸುತ್ತಾರೆ." ಆರ್.5055: ಸಿ.1, ಪಿ.7,8; ಸಿ.2, ಪಿ.3

## "...ಅವರನ್ನು ಸರಿಯಾದ ಹಾದಿಯಲ್ಲಿ ನಡಿಸಿದನು." ಕೀರ್ತನೆಗಳು 107:7.

"ಆತ್ಮೀಕ ಇಸ್ರಾಯೇಲರಲ್ಲಿ, ಕರ್ತನು ಸರಿಯಾದ ದಾರಿಯಲ್ಲಿ, ಉತ್ತಮ ದಾರಿಯಲ್ಲಿ ನಡೆಸುತ್ತಾನೆ ಎಂಬುದು ವಿಶೇಷವಾದ ಸತ್ಯವಾಗಿದೆ ಮತ್ತು ಈ ಕಾರಣದಿಂದ ಆತನ ನಿಜವಾದ ಜನರು ಆತನ ಮುನ್ನಡೆಸುವಿಕೆಯನ್ನು ಜಾಕರೂಕತೆಯಿಂದ ಗಮನಿಸಬೇಕು ಮತ್ತು ಆತನನ್ನು ಹಿಂಬಾಲಿಸುವುದರಲ್ಲಿ ತ್ವರೆಯಿಂದಿರಬೇಕು. ನಮಗಾಗಿ ಆಯ್ಕೆಮಾಡಿಕೊಂಡ ಹಾದಿಯೂ ಎಷ್ಟೇ ವ್ಯತ್ಯಾಸವಾಗಿದ್ದರೂ ಕೊನೆಯಲ್ಲಿ ಆತನು ನಮ್ಮನ್ನು ಸರಿಯಾದ ದಾರಿಯಲ್ಲಿ ನಡೆಸಿದ್ದಾರೆ ಎಂದು ನಿಜವಾಗಿಯೂ ಮನಗಾಣುತ್ತೇವೆ. ಕೆಲವರ ಪೇಚಾಟವೇನೆಂದರೆ, ಅವರು ಆರಿಸಿಕೊಂಡಿರುವ ಮಾರ್ಗವು ಕರ್ತನು ನಡೆಸುವ ಮಾರ್ಗವಾಗಿರುವುದಿಲ್ಲ, ಆದುದರಿಂದ ಅದು ಉತ್ತಮ ಮಾರ್ಗವಲ್ಲವೆಂದು ಭಾವಿಸುತ್ತಾರೆ, ಕರ್ತನು ಅಂಥವರ ಹಟಮಾರಿತನದಿಂದಲೇ ಅವರಿಗೆ ಹೆಚ್ಚು ಹಾನಿ ಉಂಟಾಗಬಾರದೆಂಬ ಕಾರಣಕ್ಕೆ ಅದನ್ನು ತಳ್ಳಿಹಾಕಬಹುದು, ಇಲ್ಲವಾದಲ್ಲಿ ಆ ಹಾನಿ ಅವರದಾಗಬಹುದು... ಆದುದರಿಂದ ನಾವು ಇಲ್ಲಿಯವರೆಗೆ ನಮ್ಮನ್ನು ನಡೆಸಿದ ಆತನಲ್ಲಿ ನಂಬಿಕೆಯನಿಟ್ಟು ಮುಂದಿನ ದಿನಗಳಲ್ಲಿ ಜಯಗೊಳ್ಳುತ್ತಾ... ನಮ್ಮಲ್ಲಿಯೇ ಅಲ್ಲ, ಬದಲಾಗಿ ನಮ್ಮನ್ನು ಕರೆದಾತನಲ್ಲಿ ಮತ್ತು ಇಲ್ಲಿಯುವರೆಗೆ ಮುನ್ನಡೆಸಿದಾತನಲ್ಲಿ ಬಲಹೊಂದಿ ಮುಂದುವರೆಯೋಣ." ಆರ್.4064, ಸಿ.2, ಪಿ.2.

## "ಬಿರುಗಾಳಿಯನ್ನು ಶಾಂತಮಾಡುತ್ತಾನೆ; ಹೀಗೆ ಅದರ ತೆರೆಗಳು ನಿಂತು ಹೋಗುವವು." ಕೀರ್ತನೆಗಳು 107:29.

"ಅನೇಕ ವಚನಗಳ ಹಾಗೆ ಈ ವಚನವೂ ಕ್ರಿಸ್ತನ ಸಭೆಗೆ ವಿಶೇಷವಾಗಿ ಅನ್ವಯವಾಗುತ್ತದೆ. ಸಂತ ಪೌಲರು ನಮಗೆ ಹೇಳುವ ಹಾಗೆ, ಅವರಿಗೆ ಸಂಭವಿಸಿದ ಈ ಸಂಗತಿಗಳು ನಮಗೆ ನಿದರ್ಶನರೂಪವಾಗಿವೆ, ಬುದ್ಧಿವಾದಗಳಾಗಿವೆ. (1 ಕೊರಿಂಥ 10:11) ನಾವು ನಂಬುವಂತೆ, ಬಹುಮಟ್ಟಿಗೆ ಎಲ್ಲಾ ಪ್ರವಾದನೆಗಳು ಕರ್ತನನ್ನು ಮತ್ತು ಆತನ ಶರೀರವನ್ನು ಮೊದಲಾಗಿ ಗುರುತಿಸುವಂಥವುಗಳಾಗಿವೆ. ಆತನ ಹಿಂಬಾಲಕರ ಮೇಲೆ ಅನೇಕ ಬಿರುಗಾಳಿಗಳು ಬರಲು ಕರ್ತನಿಂದ ಅನುಮತಿಸಲ್ಪಟ್ಟಿವೆ. ಕೆಲವು ಸಮಯಗಳಲ್ಲಿ ಜೀವನದ ಸಂಪೂರ್ಣ ಪ್ರಯಾಣವೇ ಬಿರುಗಾಳಿಯಾಗಿರಬಹುದು 'ಜೀವನದ ಅಲೆಗಳು ಏಳುವಾಗ' ಎಂದು ಕೆಲವೊಮ್ಮೆ ನಾವು ಹಾಡುತ್ತೇವೆ. ಅಪೋಸ್ತಲರು ಅವರ ಪತ್ರಿಕೆಯಲ್ಲಿ ಉಲ್ಲೇಖಿಸುವಂತೆ, ಯಾರಿಗೆ ಬಿರುಗಾಳಿ, ಶೋಧನೆಗಳು ಮತ್ತು ಕಷ್ಟಗಳು ಇಲ್ಲವೋ ಅಂಥವರು ದೇವರ ಮಕ್ಕಳೆಂಬ ಸಾಕ್ಷಿಯಲ್ಲಿ ಕೊರತೆಯನ್ನನುಭವಿಸುತ್ತಾರೆ. ಯಾಕೆಂದರೆ ಅಂಥವರು ದೇವರ ಮಕ್ಕಳೆಂಬ ಪಾಲನ್ನು ಹೊಂದುವುದಿಲ್ಲ. (ಹಿಬ್ರಿಯ 12:7,8). ಒಂದು ವೇಳೆ ನಾವು ದೇವರ ಮಕ್ಕಳಾಗಿದ್ದರೆ ನಮಗೆ ಶೋಧನೆಗಳು ಮತ್ತು ಪರೀಕ್ಷೆಗಳು ಇರಬೇಕು. ಅವುಗಳು ನಮ್ಮನ್ನು ಬೆಳಕಿನ ರಾಜ್ಯದೊಳಗೆ ದೇವಜನರ ಭಾದ್ಯತೆಯಲ್ಲಿ ಪಾಲುಗಾರರಾಗುವುದಕ್ಕೆ ಯೋಗ್ಯರನ್ನಾಗಿ ಮಾಡುತ್ತವೆ." (ಕೊಲೊಸ್ಸೆ 1:12) ಈ ಎಲ್ಲಾ ಅನುಭವಗಳಲ್ಲಿ ಶೋಧನೆಯ

ಬಲವೇನೆಂದರೆ, ಕರ್ತನ ಹತ್ತಿರ ನಮ್ಮನ್ನು ಸೆಳೆದು, ನಮಗೆ ದೈವೀಕ ಆಶ್ರಯ ಮತ್ತು ಪಾಲನೆಯ ಅಗತ್ಯತೆ ಬೇಕು ಎಂಬುದನ್ನು ಮನದಟ್ಟು ಮಾಡುವುದೇ ಆಗಿದೆ. ಮತ್ತು ಹೀಗೆ ಈ ಬಿರುಗಾಳಿಗಳಿಂದ ನಮಗೆ ಆಶೀರ್ವಾದ ಉಂಟಾಗುತ್ತದೆ." ಆರ್.5239, ಸಿ.1, ಪಿ.2,3.

## "ಕರ್ತನ ದೃಷ್ಟಿಯಲ್ಲಿ ಆತನ ಭಕ್ತರ ಮರಣವು ಅಮೂಲ್ಯವಾಗಿದೆ." ಕೀರ್ತನೆಗಳು 116:15.

"ಯೆಹೋವನು ತನ್ನ ಭಕ್ತರ ಮರಣವನ್ನು ಅಲ್ಪವೆಂದು ಎಣಿಸುವುದಿಲ್ಲ."

"ವಿಮೋಚಕನ ಹೆಜ್ಜೆಜಾಡಿನಲ್ಲಿ ನಡೆಯಲು ಯಾರೆಲ್ಲ ತಮ್ಮನ್ನೇ ಅರ್ಪಿಸಿದ್ದಾರೋ ಅವರೆಲ್ಲರ ಜೀವಿತವು ಹೀಗೆಯೇ ಆಗಲಿ. ಆತನ ನೀತಿಯ ವಸ್ತ್ರದಿಂದ ಆವರಿಸಲ್ಪಟ್ಟದ್ದರಿಂದ ಅವರೆಲ್ಲರು ತಂದೆ ದೇವರಿಗೆ ಅಮೂಲ್ಯವಾದವರು, ಮತ್ತು ಅವರ ಮರಣ ಯಾವುದೇ ಸನ್ನಿವೇಶಗಳಲ್ಲಿ ನಡೆದರೂ ಅದು ನಿಜವಾಗಿಯೂ ಆಕಸ್ಮಿಕವಾಗಿ ಇರದೆ, ದೈವೀಕ ಸಮ್ಮತಿಯ ಚುಂಬನವಾಗಿರುತ್ತದೆ ಮತ್ತು ಪ್ರಥಮ ಪುನರುತ್ಥಾನದಲ್ಲಿ ಬರುವ ಆಶೀರ್ವಾದದ ಮುದ್ರೆಯಾಗಿರುತ್ತದೆ." ಆರ್.4054, ಸಿ.2, ಪಿ.1.

"ಆತನ ಗಮನವಿಲ್ಲದೆ ಅವರ ತಲೆಗಳಲ್ಲಿ ಒಂದು ಕೂದಲಾದರೂ ಕೆಳಗೆ ಬೀಳುವುದಿಲ್ಲ" ಎಫ್.646. "ದೇವರ ಗಳಿಗೆ ನಮಗೆ ಬರುವುದಕ್ಕಿಂತ ಮುಂಚೆ ಮರಣವೇ ನಮ್ಮನ್ನು ಮುಟ್ಟಲು ಬಲಹೀನವಾಗಿರುತ್ತದೆ." ಆರ್.5546, ಸಿ.2, ಪಿ.3.

## "ನಿನ್ನ ವಾಕ್ಯವು ನನ್ನ ಪಾದಕ್ಕೆ ದೀಪವೂ ನನ್ನ ದಾರಿಗೆ ಬೆಳಕೂ ಆಗಿದೆ." ಕೀರ್ತನೆಗಳು 119:105.

"ಯಾರು ಎಚ್ಚೆತ್ತುಕೊಂಡಿದ್ದಾರೋ ಅಂಥವರು ಆತನ ಯೋಜನೆಯನ್ನು ಹೆಚ್ಚು-ಹೆಚ್ಚಾಗಿ ಕಲಿತುಕೊಳ್ಳಬೇಕೆಂದು ದೇವರು ಅಪೇಕ್ಷಿಸುತ್ತಾರೆ. ಇಂಥವರು ಎಚ್ಚರಿಕೆಯಿಂದಿರುವುದರಿಂದ ದಯೆ ಮತ್ತು ಜ್ಞಾನದಲ್ಲಿ ಬೆಳೆಯುತ್ತಾರೆ. ಇಂಥವರು ಲೋಕದವರ ಹಾಗೆ ಇರುವುದಿಲ್ಲ. ಲೋಕದವರು ಮಬ್ಬಿನಲ್ಲಿದ್ದಾರೆ. ಅವರು ದಿನಕ್ಕೆ ಅರ್ಹರಲ್ಲ. ಪ್ರಸ್ತುತ ಸಮಯದಲ್ಲಿ ಗಾಢಾಂಧಕರವು ಇಡೀ ಭೂಮಿಯನ್ನು ಆವರಿಸಿದೆ. ಆದರೆ ದೇವರ ಜನರಿಗೆ ವಿಶೇಷ ಬೆಳಕನ್ನು ಕೊಡಲಾಗಿದೆ. ಅವರು ಬೆಳಕನ್ನು ಪ್ರೀತಿಸುತ್ತಾರೆ. 'ನಿನ್ನ ವಾಕ್ಯವು ನನ್ನ ಪಾದಕ್ಕೆ ದೀಪವೂ ನನ್ನ ದಾರಿಗೆ ಬೆಳಕೂ ಆಗಿದೆ,' ಇದು ಚಂದ್ರನ ಬೆಳಕಿನಂತೆ ಬಹು ದೂರಕ್ಕೆ ಪಸರಿಸುವ ಬೆಳಕಲ್ಲ, ಬದಲಾಗಿ ಕಾಯುವವರ ಕಾಲಿಗೆ ಮಾತ್ರ ಬೆಳಕನ್ನು ಕೊಡುವ ಚಿಕ್ಕ ಬೆಳಕು ಆಗಿದೆ. ಯಾರು ನಿದ್ರೆಗೆ ಹೋಗುತ್ತಾರೋ ಅಂಥವರು ತಮ್ಮ ಬೆಳಕು ಹೊರಗೆ ಹೋಗುವುದನ್ನು ಕಾಣುತ್ತಾರೆ." ಆರ್.5256, ಸಿ.2, ಪಿ.5.

## “ನಿನ್ನ ನ್ಯಾಯಪ್ರಮಾಣ ವನ್ನು ಪ್ರೀತಿಮಾಡುವವರಿಗೆ ಸಂಪೂರ್ಣ ಸಮಾಧಾನ ಉಂಟು; ಅವರಿಗೆ ಆತಂಕವೇನೂ ಇರುವದಿಲ್ಲ.” ಕೀರ್ತನೆಗಳು 119:165.

“ಆತಂಕವು ಏನೆಂದರೆ ಅವರ ಮನ ನೋಯಿಸುತ್ತದೆ ಅಥವಾ ಅವರನ್ನು ಎಡವಿ ಬೀಳಿಸುವುದು ಆಗಿದೆ.” ಆರ್.1356. ಸಿ.2, ಪಿ.3 ನ್ನು ನೋಡಿ.

“ದೇವರ ಧರ್ಮಶಾಸ್ತ್ರವನ್ನು ಪ್ರೀತಿಸುವುದು ಎಂದರೆ, ದೇವರು ಒಂದು ಉನ್ನತ ಸಂಕಲ್ಪವನ್ನು ಇಟ್ಟಿದ್ದಾರೆ ಎಂಬುದನ್ನು ಗೌರವಿಸಿ; ದೇವರ ಚಿತ್ತ ಏನು ಎಂಬುದನ್ನು ಹುಡುಕಿ ಅದರಲ್ಲಿ ಅತ್ಯಾನಂದವನ್ನು ಹೊಂದುವುದು ಮತ್ತು ಆತನ ನೀತಿ, ಜ್ಞಾನ, ಪ್ರೀತಿ ಮತ್ತು ಶಕ್ತಿಯಲ್ಲಿ ಸಂಪೂರ್ಣ ಭರವಸೆಯನ್ನು ಹೊಂದುವುದು. ಹೀಗೆ ಯಾರು ನಡೆಯುತ್ತಾರೋ ಅಂಥವರು ಸಂಪೂರ್ಣ ಸಮಾಧಾನವನ್ನು ಹೊಂದುತ್ತಾರೆ. ಅವರಿಗೆ ದೈವೀಕ ನೀತಿಯ ಪ್ರತಿಯೊಂದು ವ್ಯವಹಾರಗಳು ಅರ್ಥವಾಗುವುದಿಲ್ಲ. ಆದರೆ ಅವರ ನಂಬಿಕೆ ಆತನು ತಪ್ಪು ಮಾಡುವುದಿಲ್ಲ ಎಂಬ ವಿಷಯವನ್ನು ಹಿಡಿದುಕೊಂಡಿರುತ್ತದೆ. ಹೀಗೆ ಅವರು ತಮ್ಮ ಆಸಕ್ತಿಗಳನ್ನು ಆತನಿಗೆ ಒಪ್ಪಿಸುವುದರಿಂದ ಸಮಾಧಾನವನ್ನು ಹೊಂದುತ್ತಾರೆ.” ಆರ್.4898, ಸಿ.1, ಪಿ.2.

## “ಆಕಾಶವನ್ನೂ ಭೂಮಿಯನ್ನೂ ಉಂಟುಮಾಡಿದ ಕರ್ತನ ಬಳಿಯಿಂದಲೇ ನನ್ನ ಸಹಾಯವು ಬರುತ್ತದೆ.” ಕೀರ್ತನೆಗಳು 121:2.

ಮಂಜೂಷವು ಮುಂಚಿತವಾಗಿ ಹೊರಟು ನದಿಯ ಮಧ್ಯದಲ್ಲಿ ಎಲ್ಲರೂ ಹಾದು ಹೋಗುವವರೆಗೆ ನಿಂತಿದ್ದ ಸಂಗತಿಯಲ್ಲಿ ಒಂದು ಸರ್ವೇಸಾಮಾನ್ಯವಾದ ಪಾಠವನ್ನು ಕಲಿತುಕೊಳ್ಳಬಹುದು. ಇದು ಅವರಿಗೆ ಕರ್ತನಿಂದ ಅವರ ಮಾರ್ಗಕ್ಕೆ ಸುರಕ್ಷತೆಯ ಭರವಸೆಯನ್ನು ಕೊಟ್ಟಿತ್ತು...ಎಲ್ಲಾ ಆತ್ಮೀಕ ಇಸ್ರಾಯೇಲ್ಯರಿಗೆ ಒಂದು ಪಾಠವೇನೆಂದರೆ, ‘ನಿನ್ನ ಎಲ್ಲಾ ನಡವಳಿಕೆಯಲ್ಲಿ ಆತನ ಚಿತ್ತಕ್ಕೆ ವಿಧೇಯನಾಗಿರು; ಆತನೇ ನಿನ್ನ ಮಾರ್ಗಗಳನ್ನು ಸರಾಗ ಮಾಡುವನು.’ (ಜ್ಞಾನೋಕ್ತಿ. 3:6)... ‘ನೀವು ನನ್ನನ್ನು ಬಿಟ್ಟು ಏನೂ ಮಾಡಲಾರಿರಿ’ ...ಕರ್ತನಿಂದಲೇ ನನ್ನ ಸಹಾಯವು ಬರುತ್ತದೆ’... ‘ನನ್ನನ್ನು ಬಲಪಡಿಸುವ ಕ್ರಿಸ್ತನಲ್ಲಿ ಎಲ್ಲಕ್ಕೂ ಶಕ್ತನಾಗಿದ್ದೇನೆ’.. .ಸಮಸ್ತವೂ ನಿಮ್ಮದೇ; ನೀವಂತೂ ಕ್ರಿಸ್ತನವರು, ಕ್ರಿಸ್ತನು ದೇವರವನು’...ಆದುದರಿಂದ ನಾವು ಈ ದೈವೀಕ ವಾಗ್ದಾನಗಳ ಮುಖಾಂತರ ಕರ್ತನ ಆಶೀರ್ವಾದಗಳಲ್ಲಿ ಹೆಚ್ಚೆಚ್ಚಾಗಿ ದಿನದಿಂದ ದಿನಕ್ಕೆ ಸೇರೋಣ ಮತ್ತು ಆತನ ಹಿಂದಿನ ಹಾಗೂ ಪ್ರಸ್ತುತ ನಡೆಸುವಿಕೆಗಳಲ್ಲಿ ಆತನಿಗೆ ಅನುಮತಿಕೊಡುವುದರಿಂದ ಅವು ಭವಿಷ್ಯಕ್ಕೆ ಧೈರ್ಯವನ್ನು ಮತ್ತು ಮನಸ್ಥೈರ್ಯವನ್ನು ಕೊಡಬೇಕು. ‘ಹಿಂದೆ ಯಾರು ನಮ್ಮನ್ನು ನಡೆಸಿದ್ದಾರೋ ಅವರೇ ಈಗಲೂ ನಮ್ಮನ್ನು ನಡೆಸುತ್ತಾರೆ, ಪ್ರಶಾಂತವಾಗಿರು ಮತ್ತು ಅವರ ಚಿತ್ತದಲ್ಲಿ ಮುಳುಗಿರು.’ ಆರ್.4064, ಸಿ.1, ಪಿ.1,2.

## “ಆತನು ನಿನ್ನ ಪಾದವನ್ನು ಕದಲಿಸದಿರಲಿ; ನಿನ್ನನ್ನು ಕಾಪಾಡುವಾತನು ತೂಕಡಿಸುವದಿಲ್ಲ.” ಕೀರ್ತನೆಗಳು 121:3.

ಇಸ್ರಾಯೇಲ್ಯರ ದೇವರು ನಿಜವಾಗಿಯೂ ಆತನ ನಿಜವಾದ ಜನರಲ್ಲಿ ಪ್ರಸನ್ನರಾಗಿರುತ್ತಾರೆ. ಆತನು ಎಂದಿಗೂ ನಮ್ಮನ್ನು ಮರೆಯುವುದಿಲ್ಲ. ಆದರೆ ಸತತವಾಗಿ ನಮ್ಮ ಹಿತಾಸಕ್ತಿಗಾಗಿ ಕಾಯುತ್ತಿರುತ್ತಾರೆ. ಎಲ್ಲಾ ಅಪಾಯದ ಸಮಯದಲ್ಲಿ ನಮ್ಮನ್ನು ಕಾಪಾಡಿ, ನಮ್ಮ ಪ್ರತಿಯೊಂದು ಅಗತ್ಯತೆಯನ್ನು ಪೂರೈಸಿ ಆತ್ಮೀಕವಾಗಿಯೂ ಮತ್ತು ಶಾರೀರಿಕವಾಗಿಯೂ ಹೊಸ ಸೃಷ್ಟಿಯ ಹಿತಾಸಕ್ತಿಗೆ ಏನು ಉತ್ತಮವೋ ಅದನ್ನು ಪೂರೈಸುತ್ತಾರೆ. ಆತನು ನಮ್ಮ ಹೃದಯದ ಪ್ರತಿಯೊಂದು ಆಲೋಚನೆಯನ್ನು ಬಲ್ಲವರಾಗಿದ್ದಾರೆ, ಆತನು ನಮ್ಮ ಭಕ್ತಿಯ ಪ್ರತಿಯೊಂದು ಪ್ರಚೋದನೆಗಳನ್ನೂ, ಶೃದ್ಧೆಯನ್ನು ಮತ್ತು ಪ್ರೀತಿಯನ್ನು ಗುರುತಿಸುತ್ತಾರೆ; ಆತನು ನಮ್ಮ ಜೀವಿತಕ್ಕೆ, ನಮ್ಮ ಶಿಸ್ತುಪಾಲನೆಗೆ ಮತ್ತು ಶುದ್ಧೀಕರಿಸುವಿಕೆಗೆ ಪ್ರಭಾವಬೀರುವ ಸುತ್ತಮುತ್ತಲಿನ ಎಲ್ಲಾ ಕಾರ್ಯಗಳನ್ನು ಅಣಿಗೊಳಿಸುತ್ತಾರೆ ಮತ್ತು ನಮ್ಮ ಪ್ರತೀ ಮೊರೆಗಳನ್ನು ಆಲಿಸಿ ಅದಕ್ಕೆ ಸಹಾಯವನ್ನು, ಆದರಣೆಯನ್ನು, ಸಹಾನುಭೂತಿಯನ್ನು ಮತ್ತು ಸಾಂಗತ್ಯವನ್ನು ಆತನಲ್ಲಿ ದಯಪಾಲಿಸುತ್ತಾರೆ. ಎಂದಿಗೂ ಒಂದು ಕ್ಷಣಕ್ಕೂ ಕೂಡ ಮರೆತುಹೋಗುವವರಲ್ಲ ಅಥವಾ ಎಚ್ಚರ ತಪ್ಪುವವರಲ್ಲ. ‘ಇಸ್ರಾಯೇಲರನ್ನು ಕಾಪಾಡುವಾತನು ತೂಕಡಿಸುವದೂ ಇಲ್ಲ ನಿದ್ರಿಸುವುದೂ ಇಲ್ಲ.’ ಆರ್.5548, ಸಿ.2, ಪಿ.7.

## “ಯೆಹೋವನು ನಿನ್ನನ್ನು ಎಲ್ಲಾ ಕೇಡಿನಿಂದ ತಪ್ಪಿಸುವನು; ನಿನ್ನ ಪ್ರಾಣವನ್ನು ಕಾಯುವನು.” ಕೀರ್ತನೆಗಳು 121:7.

“ಕರ್ತನಿಗೆ ಎಷ್ಟು ಹತ್ತಿರವಾಗಿ ಜೀವಿಸುತ್ತೇವೆಯೋ ಅಷ್ಟೇ ನಮ್ಮ ನಂಬಿಕೆಯು ಹೆಚ್ಚಾಗಿರುತ್ತದೆ. ದೇವರ ದೈವೀಕ ಮಾರ್ಗದರ್ಶನವನ್ನು ಹೆಚ್ಚಾಗಿ ನಮ್ಮ ಬಲಪಡಿಸುವಿಕೆಗೆ ಮತ್ತು ಸಮರ್ಥನೆಗೆ ಉಪಯೋಗಿಸುತ್ತೇವೆ. ಸಂಕಷ್ಟದ ಸಮಯದಲ್ಲಿ ಆತನನ್ನು ಬೇಡಿಕೊಳ್ಳಬಹುದು, ಪ್ರಾರ್ಥನೆಯಲ್ಲಿ ಆತನಲ್ಲಿಗೆ ಹೋಗಬಹುದು ಮತ್ತು ಶೃದ್ಧೆಯಿಂದ ಆತನು ನಿಯಮಿಸಿದ ಹಾದಿಯಲ್ಲಿ ನಡೆಯಲು ಆಶಿಸುವವರಿಗೆ ಮತ್ತು ಆತನಲ್ಲಿ ಭರವಸೆಯನ್ನು ಹೊಂದಿರುವವರಿಗೆ ಎಂದಿಗೂ ಆಶಾಭಂಗಪಡಿಸುವುದಿಲ್ಲ, ಇದು ನಿಜವಾಗಿರುವುದರಿಂದ, ನಾವು ನಮ್ಮ ಹಾದಿಯಲ್ಲಿ ಪರಿಪೂರ್ಣ ಭರವಸೆ ಮತ್ತು ಆತ್ಮವಿಶ್ವಾಸದಿಂದ ಮುಂದುವರಿಯಬಹುದು, ನಮ್ಮ ಸರ್ವಸ್ವವನ್ನು ಕರ್ತನಿಗೆ ಅರ್ಪಿಸುವುದರಿಂದ ನಾವು ಆತನ ನಡೆಸುವಿಕೆಯನ್ನು ಆಶಿಸಬೇಕು. ಯಾಕೆಂದರೆ ಆತನ ಪ್ರಸನ್ನತೆ ನಮ್ಮ ಜೀವಿತದ ಎಲ್ಲಾ ವಿಷಯಗಳಲ್ಲೂ ನಮ್ಮೊಂದಿಗೆ ಇರುವದು.” ಆರ್.5548, ಸಿ.1, ಪಿ.6.

## “ಕರ್ತನು ನಿನ್ನ ಹೋಗೋಣವನ್ನೂ ಬರೋಣವನ್ನೂ ಇಂದಿನಿಂದ ಸದಾಕಾಲವೂ ಕಾಪಾಡುವನು.” ಕೀರ್ತನೆಗಳು 121:8.

“ಯೆಹೋವನ ಜ್ಞಾನವು ಮತ್ತು ವಿವೇಕವು ಆತನ ಸೃಷ್ಟಿಯ ಎಲ್ಲಾ ಚಕ್ರಾದಿಪತ್ಯಗಳಿಗಿಂತಲೂ ಜರೂರಾಗಿ ಅತೀ ಶ್ರೇಷ್ಠವಾಗಿದೆ ಎಂದು ಅರಿತುಕೊಳ್ಳುವುದು ನಮ್ಮ ಭಾಗ್ಯವಾಗಿದ್ದು ಸಮಾಧಾನವನ್ನು ತರುವಂಥದ್ದಾಗಿದೆ ಮತ್ತು ಮನುಷ್ಯನ ಕೋಪ ಹಾಗೂ ಇರುಳಿನ ಒಂದುಸೇರಿದ ಶಕ್ತಿಗಳು ಲವಕೇಶವೂ ಕೂಡ ದೈವೀಕ ಯೋಜನೆಯನ್ನು ನಿಷ್ಫಲ-ಗೊಳಿಸುವುದಿಲ್ಲ. ಯೆಹೋವನ ಶಕ್ತಿಯು ಆತ್ಮೀಕವಾಗಿದ್ದ ತನ್ನ ಕುಮಾರನನ್ನು ಮನುಷ್ಯನನ್ನಾಗಿ ಪರಿವರ್ತಿಸಲು ಸಾಧ್ಯವಾಯಿತೋ, ಅದೇ ಶಕ್ತಿ ಆತನ ಎಲ್ಲಾ ವಿರೋಧಿಗಳಿಂದ ಕಾಪಾಡಲೂ, ಅಸಹಾಯಕ ಶೈಶಾವಸ್ಥೆಯಿಂದ ನಿಯಮಿಸಲ್ಪಟ್ಟ ಜಗತ್ತಿನ ಉದ್ಧಾರಕ್ಕೆ ಆತನ ಬಲಿಯನ್ನು ನಿಯಮಿಸಲ್ಪಟ್ಟ ಸಮಯದ ತನಕವೂ ಕಾಪಾಡಲು ಶಕ್ತವಾಗಿದೆ.” ಆರ್.1681, ಸಿ.1, ಪಿ.6.

## “ಯೆಹೋವನಲ್ಲಿ ಭರವಸವಿಡುವವರು ಚೀಯೋನ್. ಪರ್ವತದ ಹಾಗಿದ್ದಾರೆ; ಅದು ಕದಲದೆ ಯುಗಯುಗಕ್ಕೂ ಇರುವದು.” ಕೀರ್ತನೆಗಳು 125:1.

“ಎಲ್ಲಾ ಮನುಷ್ಯನ ಗುಣಗಳ ವಿನ್ಯಾಸವೇನು, ಯಾವ ವಿಧವಾದದ್ದು ಎಂಬುದನ್ನು ಮಹಾದಿನವು ಶೋಧಿಸುತ್ತಿದೆ, ಆದರೆ ಬಹಿರಂಗವಾಗಿ ಪ್ರಕಟಿಸಲ್ಪಟ್ಟ ಕ್ರೈಸ್ತರಲ್ಲಿ ಕೆಲವೇ ಕೆಲವರು ಮಾತ್ರ ಪರೀಕ್ಷೆಯಲ್ಲಿ ದೃಢವಾಗಿ ನಿಲ್ಲುತ್ತಾರೆ. ಸುರಕ್ಷಿತವಾಗಿ ನಷ್ಟವಿಲ್ಲದೆ ಈ ನಿರ್ಣಾಯಕ ನ್ಯಾಯವಿಚಾರಣೆಯಲ್ಲಿ ತೇರ್ಗಡೆ ಹೊಂದುವ ಆ ಕೆಲವರೇ ದೇವರ ಸತ್ಯದಲ್ಲಿ ನೆಲೆನಿಂತಿರುವವರು, ಬೇರೂರಿದವರಾಗಿದ್ದಾರೆ ಮತ್ತು ಸ್ಥಿರವಾಗಿದ್ದು ಕ್ರಿಸ್ತನಲ್ಲಿ ಕಟ್ಟಲ್ಪಡುತ್ತಾರೆ. ಬಲವುಳ್ಳ ದೃಢನಿಶ್ಚಲನಾದ ಕ್ರೈಸ್ತನಿಗೂ, ಪರಮತ ವೈರಿಗೂ ಇರುವ ವ್ಯತ್ಯಾಸವೇನೆಂದರೆ, ಒಬ್ಬನು ಸತ್ಯದಲ್ಲಿ ನೆಲೆಯೂರಿರುತ್ತಾನೆ, ಮತ್ತೊಬ್ಬನು ಅಸತ್ಯದಲ್ಲಿ ನೆಲೆಯೂರಿರುತ್ತಾನೆ. ಈ ದಿನದ ಅಗ್ನಿಯು ಸತತವಾಗಿ ಉರಿಯುತ್ತಲೇ ಇದ್ದು ಎರಡೂ ವರ್ಗಗಳ ನಡುವೆ ಇರುವ ವ್ಯತ್ಯಾಸವನ್ನು ಪ್ರಕಟಪಡಿಸಲು ಎಲ್ಲರೂ ಪರೀಕ್ಷಿಸಲ್ಪಟ್ಟು, ಶೋಧಿಸಲ್ಪಟ್ಟ ಅರ್ಹರು ಮತ್ತು ಅನರ್ಹರು ಎಂದು ನಿರ್ಣಯಿಸಲ್ಪಡುವವರೆಗೆ ಸದಾ ಉರಿಯುತ್ತಲೇ ಇರುತ್ತದೆ.” ಆರ್.5558, ಸಿ.2, ಪಿ.4,5.

## “ಯೆರೂಸಲೇಮಿನ ಸುತ್ತಲೂ ಬೆಟ್ಟಗಳಿರುವಂತೆ ಯೆಹೋವನು ಈಗಿನಿಂದ ಯುಗಯುಗಕ್ಕೂ ತನ್ನ ಜನರ ಸುತ್ತಲೂ ಇರುವನು.” ಕೀರ್ತನೆಗಳು 125:2.

“ನಾವು ಸರಿಯಾಗಿ ಗುರುತಿಸುವಂತೆ ಯೆರೂಸಲೇಮ್ ಪಟ್ಟಣವು ಬೆಟ್ಟದ ಮೇಲೆ ನೆಲೆಯಾಗಿದೆ ಮತ್ತು ಬೆಟ್ಟಗಳು ಅದರ ಸುತ್ತಲೂ ಸೈನ್ಯಗಳ ಪಾರ್ಶ್ವದಂತೆ ಸುತ್ತುವರೆದಿರುವುದರಿಂದ ಶತ್ರುಗಳು ಯಶಸ್ವಿಯಾಗಿ ಆಕ್ರಮಣ ಮಾಡುವುದು ತುಂಬಾ ಕಷ್ಟ. ಬೆಟ್ಟಗುಡ್ಡಗಳಲ್ಲಿನ ಅದರ ಮಾರ್ಗಗಳು ಸುಲಭವಾಗಿ ರಕ್ಷಣೆ ಒದಗಿಸುವುದರಿಂದ ಅಲ್ಲಿಗೆ

ತಲುಪುವುದು ಕ್ಲಿಷ್ಟಕರವಾಗಿದೆ. ಕರ್ತನು ತನ್ನ ಜನರಿಗೆ ಎಲ್ಲಾ ಪ್ರತಿಕೂಲ ಪ್ರಭಾವಗಳಲ್ಲಿಯೂ ಭದ್ರವಾದ ಕೋಟೆ ಮತ್ತು ಆಶ್ರಯ ಎಂದು ಪ್ರವಾದಿಯು ಸೂಚಿಸುವುದು ತುಂಬಾ ರಮ್ಯವಾದದ್ದು ಮತ್ತು ಎಲ್ಲರೂ ಗೌರವಿಸತಕ್ಕದ್ದೂ ಆಗಿದೆ." ಆರ್.4623, ಸಿ.1, ಪಿ.4.

**"ಕರ್ತನಿಗೆ ಮೊರೆಯಿಡುವವರು ಯಥಾರ್ಥವಾಗಿ ಮೊರೆಯಿಡುವದಾದರೆ ಆತನು ಹತ್ತಿರವಾಗಿಯೇ ಇದ್ದಾನೆ. ತನಗೆ ಭಯಪಡುವವರ ಇಷ್ಟವನ್ನು ತೀರಿಸುತ್ತಾನೆ. ಅವರ ಮೊರೆಯನ್ನು ಕೇಳಿ ಅವರನ್ನು ರಕ್ಷಿಸುತ್ತಾನೆ." ಕೀರ್ತನೆಗಳು 145: 18–19.**

"ಸ್ವಾಮಿಗೇ ಸಹಾಯ ಬೇಕಾಗಿದ್ದಲ್ಲಿ ನಮಗೂ ಅದರ ಅಗತ್ಯತೆ ಖಂಡಿತ ಇದೆ ಮತ್ತು ಆತನು ಅದನ್ನು ಬಲವಾಗಿ ಕೂಗುತ್ತಾ ಕಣ್ಣೀರನ್ನು ಸುರಿಸುತ್ತಾ ಪ್ರಾರ್ಥನೆ ವಿಜ್ಞಾಪನೆಗಳ ನಿಮಿತ್ತವಾಗಿ ಪಡೆದುಕೊಂಡಿದ್ದಲ್ಲಿ ನಮಗೂ ಈ ಹಾದಿಯಲ್ಲಿ ದೇವರು ಪರಿಪೂರ್ಣ ನಂಬಿಕೆಯನ್ನು, ಅದರ ಮೂಲಕ ಉತ್ತಮ ಸೈನಿಕರಾಗಿ ಆತನ ನಾಮದ ಮತ್ತು ಸೇವೆಯ ನಿಮಿತ್ತವಾಗಿ ಸಕಲವನ್ನೂ ಸಹಿಸಿಕೊಳ್ಳುವದಕ್ಕೆ ಬಲವನ್ನು ಅನುಗ್ರಹಿಸಲು ಚಿತ್ತವುಳ್ಳವರಾಗಿದ್ದಾರೆ ಎಂಬುದನ್ನು ಸೂಚಿಸಿದ್ದಾರೆ. ಆದರೆ ಬಲ ಹೇಗೆ ಬಂದರೂ ಅದು ಮನುಷ್ಯರಿಂದಲ್ಲ ಅಥವಾ ದೇವದೂತರಿಂದಲ್ಲ, ಅದು ದೇವರಿಂದ ಎಂದುದು ಖಚಿತವಾಗಿರುವುದು. ಅಂದರೆ ನಾವು ಆತನಿಗೆ ಮೆಚ್ಚಿಗೆಯಾಗಿದ್ದೇವೆ ಮತ್ತು ಅಂಗೀಕೃತವಾಗಿದ್ದೇವೆ ಮತ್ತು ಹೀಗೆ ಆತನನ್ನು ಪ್ರೀತಿಸುವವರಿಗೆ ಮೀಸಲಾಗಿಟ್ಟಿರುವ ಮಿತಿಮೀರಿದ ಶ್ರೇಷ್ಠ ಹಾಗೂ ಉತ್ಕೃಷ್ಟ ವಿಷಯಗಳನ್ನು ಬಾಧ್ಯತೆಯಾಗಿ ಕೇಳಬಹುದು." ಆರ್.2775, ಸಿ.1, ಪಿ.7.

**"ಕರ್ತನು ತನ್ನನ್ನು ಪ್ರೀತಿ ಮಾಡುವವರೆಲ್ಲರನ್ನು ಕಾಪಾಡುತ್ತಾನೆ." ಕೀರ್ತನೆಗಳು 145:20.**

"ಕಠಿಣವಾದ ಮತ್ತು ಈ 'ಕೆಟ್ಟ ದಿನದ' ಮಧ್ಯದಲ್ಲಿ ಉರುಲುಗಳು ಮತ್ತು ಬರಗಾಲಗಳು ಮತ್ತು ಗೂಢ ಆಪತ್ತುಗಳು ಎಲ್ಲಾ ಕಡೆಗಳಲ್ಲೂ ಇವೆ ಎಂದು ಪವಿತ್ರ ಪ್ರವಾದಿಗಳ ಮತ್ತು ಅಪೋಸ್ತಲರ ಎಚ್ಚರಿಕೆಯ ಸ್ವರಗಳಲ್ಲಿ ಸೂಚಿತವಾಗಿರುವಂತೆ, ಅವುಗಳ ನಡುವೆ ಪ್ರಸ್ತುತ ಇರುವಿಕೆಯ ಜ್ಞಾನವನ್ನು ಸ್ಪಷ್ಟವಾಗಿ ಗ್ರಹಿಸಿ, ಇಂಥಹ ಕೆಟ್ಟ ಆಕ್ರಮಣಗಳ ಮತ್ತು ಗಂಡಾಂತರಗಳ ನಡುವೆ ಕೂಡ ಸಂತರಿಗೆ ದೈವೀಕ ಸಂರಕ್ಷಣೆ ಮತ್ತು ಆರೈಕೆ ಹಾಗೂ ವಯುಕ್ತಿಕವಾದ ಪ್ರೀತಿಯಿಂದ ಕೂಡಿದ ಎಷ್ಟೊಂದು ಅಮೂಲ್ಯವಾದ ಭರವಸೆಗಳು ಇವೆ!!" ಆರ್.5257, ಸಿ.1, ಪಿ.4.

**"ಸ್ವಬುದ್ಧಿಯನ್ನೇ ಆಧಾರಮಾಡಿಕೊಳ್ಳದೆ ಪೂರ್ಣಮನಸ್ಸಿನಿಂದ ಯೆಹೋವನಲ್ಲಿ ಭರವಸವಿಡು, ನಿನ್ನ ಎಲ್ಲಾ ಮಾರ್ಗಗಳಲ್ಲಿ ಆತನನ್ನು ಸನ್ಮಾನಿಸು. ಆಗ ಆತನು ನಿನ್ನ ಮಾರ್ಗಗಳನ್ನು ಸರಾಗಮಾಡುವನು." ಜ್ಞಾನೋಕ್ತಿಗಳು 3:5–6.**

"ಕೆಲವೊಂದು ಸಮಯಗಳಲ್ಲಿ ನಾವು ಬಲಕ್ಕೆ ಅಥವಾ ಎಡಕ್ಕೆ ಹೋಗಬೇಕೋ ಎಂಬ ಗೊಂದಲಕ್ಕೀಡಾದ ಸಂದರ್ಭಗಳಲ್ಲಿ ನಮ್ಮ ಹೃದಯಗಳನ್ನು ಕರ್ತನೆಡೆಗೆ ಎತ್ತಿ ಆತನ ಮುಂದೆ "ಯೆಹೋವನಲ್ಲಿ ಭರವಸವಿಟ್ಟು ಒಳ್ಳೆಯದನ್ನು ಮಾಡು; ದೇಶದಲ್ಲಿ ವಾಸವಾಗಿದ್ದು ನಂಬಿಕೆಯನ್ನು ಅನುಸರಿಸು. ಆಗ ಯೆಹೋವನಲ್ಲಿ ಸಂತೋಷಿಸುವಿ; ಮತ್ತು ಆತನು ನಿನ್ನ ಇಷ್ಟಾರ್ಥಗಳನ್ನು ನೆರವೇರಿಸುವನು. ನಿನ್ನ ಎಲ್ಲಾ ಮಾರ್ಗಗಳಲ್ಲಿ ಆತನ ಚಿತ್ತಕ್ಕೆ ವಿಧೇಯನಾಗಿರು. ಆತನು ನಿನ್ನ ಮಾರ್ಗಗಳನ್ನು ಸರಾಗಮಾಡುವನು" ಎಂಬ ದೈವೀಕ ಭರವಸೆಯೊಂದಿಗೆ ಕಾದಿರೋಣ. ಹೀಗೆ ಆತನ ಪ್ರೀತಿಯ ಸ್ವರವು ನಮ್ಮ ಹಾದಿಯ ನಡುವೆ ಇರುವ ಎಲ್ಲಾ ಚಿಂತೆ ಮತ್ತು ಸಂಕಷ್ಟಗಳಲ್ಲಿ ಆದರಣೆ, ಬಲ ಮತ್ತು ನೆಮ್ಮದಿಯನ್ನು ತರುತ್ತದೆ. 'ಈ ಸೂತ್ರಕ್ಕೆ ಸರಿಯಾಗಿ ನಡೆಯುವವರೆಲ್ಲರಿಗೆ, ಅಂದರೆ ದೇವರ ಇಸ್ರಾಯೇಲ್ಯರಿಗೆ ಶಾಂತಿಯೂ ಕರುಣೆಯೂ ಉಂಟಾಗಲಿ." (ಗಲಾತ್ಯ. 6:16) ಆರ್.5807, ಸಿ.2, ಪಿ.3.

**"ಸಂಪೂರ್ಣವಾದ ದಿನಕ್ಕೆ ಹೆಚ್ಚೆಚ್ಚಾಗಿ ಹೊಳೆಯುವ ದೀಪದಂತೆ ನ್ಯಾಯವಂತರ ದಾರಿಯು ಹೊಳೆಯುವದು." ಜ್ಞಾನೋಕ್ತಿಗಳು 4:18.**

"ನಮ್ಮ ಪ್ರಧಾನ ಗುರು ಪ್ರತ್ಯಕ್ಷ್ಯವಾಗಿ "ಸುಗ್ಗಿಯ" ಕೆಲಸವನ್ನು ಮೇಲ್ವಿಚಾರಿಸುತ್ತಿರುವುದು ನಾವು ನಂಬಿರುವಂತೆ, ಈ ಹಾದಿಯಲ್ಲಿ ಇನ್ನೂ ಹೆಚ್ಚಾದ ಆಶ್ವಾಸನೆಯನ್ನು ತಂದುಕೊಟ್ಟಿದೆ. ಆತನ ಕಣ್ಣು, ಆತನ ಚಿತ್ತ ಮತ್ತು ಕೋಲು ಆತನ ಮಂದೆಯನ್ನು ದಯೆಯಿಂದ ದಯೆಗೆ ಮತ್ತು ಜ್ಞಾನದಿಂದ ಜ್ಞಾನಕ್ಕೆ ಮುನ್ನಡೆಸುತ್ತಿದೆ ಎಂಬ ಯೋಚನೆಯಲ್ಲಿ ನಮ್ಮಲ್ಲೇ ಸಮಾಧಾನವನ್ನು ಹೊಂದಿದ್ದೇವೆ. ಪ್ರವಾದನೆಯಲ್ಲಿ ಭವಿಷ್ಯವಾಣಿಯಾದಂತೆ, ನಾವು ಕಾಣುವ ಹಾಗೆ 'ಸಂಪೂರ್ಣವಾದ ದಿನಕ್ಕೆ ಹೆಚ್ಚೆಚ್ಚಾಗಿ ಹೊಳೆಯುವ ದೀಪದಂತೆ ನ್ಯಾಯವಂತರ ದಾರಿಯು ಹೊಳೆಯುವದು' ಎಂಬುದು ನಮಗೆ ಆಶ್ಚರ್ಯಕರವಲ್ಲ. ದಿನದಿಂದ ದಿನಕ್ಕೆ ಇನ್ನೂ ಸ್ಪಷ್ಟವಾಗಿ ಬೆಳೆಯುವುದಕ್ಕೆ ಸಣ್ಣ ವಿವರಗಳನ್ನು ನಿಶ್ಚಯವಾಗಿಯೂ ನಿರೀಕ್ಷಿಸಬಹುದು, ಆದರೆ ನಮ್ಮ ವಿಶ್ವಾಸಕ್ಕೆ ಭದ್ರಬುನಾದಿಯಾದ ಮೂಲಭೂತ ಸತ್ಯಗಳು ಬದಲಾಗುವುದಿಲ್ಲ." ಆರ್.3856, ಸಿ.2, ಪಿ.1.

**"ಯೆಹೋವನ ಆಶೀರ್ವಾದವು ಭಾಗ್ಯದಾಯಕವು. ಅದು ವ್ಯಸನವನ್ನು ಸೇರಿಸದು." ಜ್ಞಾನೋಕ್ತಿಗಳು 10:22.**

"ರಾಜವಂಶಸ್ಥರಾದ ಯಾಜಕರಿಗೆ ಅವರು ಸ್ವಂತ ಬಲಿಯನ್ನು ನಂಬಿಗಸ್ತತೆಯಿಂದ ನಿರ್ವಹಿಸುವಾಗ ಮತ್ತೊಂದು ರೀತಿಯ ಐಶ್ವರ್ಯಗಳು ಬರುತ್ತವೆ. ಈ ಐಶ್ವರ್ಯಗಳು

ಪವಿತ್ರಾತ್ಮನ ಐಶ್ವರ್ಯಗಳು. ಅವರು ಸ್ವಾರ್ಥದ ಇಷ್ಟಾರ್ಥಗಳನ್ನು, ಲೌಕಿಕ ಗುರಿಗಳನ್ನು, ಭೌತಿಕ ಯೋಜನೆ, ಇತ್ಯಾದಿಗಳನ್ನು ಕರ್ತನ ಸೇವೆಯಲ್ಲಿ ಮತ್ತು ಸತ್ಯದ ನಿಮಿತ್ತ ಬಲಿಯಾಗಿ ಕೊಡುವಾಗ, ಅವರು ಪರಲೋಕದ ತಂದೆಯ ಮತ್ತು ಕ್ರಿಸ್ತನ ಸ್ವಾರುಪ್ಯದಲ್ಲಿ ಹೆಚ್ಚೆಚ್ಚಾಗಿ ಬೆಳೆಯುವಾಗ, ಪವಿತ್ರಾತ್ಮದ ಫಲಗಳಾದ ಸಾಧುತ್ವ, ದೀರ್ಘಶಾಂತಿ, ಶಮೆದಮೆ, ಸಹೋದರ ಸ್ನೇಹ, ಪ್ರೀತಿ ಎಂಬವುಗಳು ಅವರಲ್ಲಿ ಸಮೃದ್ಧವಾಗಿರುತ್ತವೆ. ಇನ್ನೂ ಮೊದಲುಗೊಂಡು ಹಿಂದೆ ಅಪರಿಚಿತವಾಗಿದ್ದ ಸಂತೋಷ ಮತ್ತು ಸಮಾಧಾನವನ್ನು ಕಂಡುಕೊಳ್ಳುತ್ತಾರೆ... ಅವರನ್ನೇ ಸಂಪೂರ್ಣವಾಗಿ ದೇವರಿಗೆ ಒಪ್ಪಿಸಿಕೊಟ್ಟಾಗ ಆತನ ಎಲ್ಲಾ ಅಮೂಲ್ಯ ಉತ್ಕೃಷ್ಟವಾಗಿಯೂ ಇರುವ ವಾಗ್ದಾನಗಳು ತಮ್ಮದಾಗಿವೆ ಎಂಬುದನ್ನು ಸ್ಪಷ್ಟವಾಗಿ ಗ್ರಹಿಸುವ ಮೂಲಕ ಈ ಸಂತೋಷ ಮತ್ತು ಸಮಾಧಾನ ಬರುತ್ತದೆ. ಈಗ ಅವರ ನಂಬಿಕೆಯು ಈ ವಾಗ್ದಾನಗಳು ತಮ್ಮದಾಗಿವೆ ಎಂಬ ಗ್ರಹಿಕೆಯನ್ನು ಮೂಡಿಸುತ್ತದೆ." ಆರ್.2762, ಸಿ.2, ಪಿ.2,3.

## "ಮನುಷ್ಯನ ಭಯ ಉರುಲು; ಯೆಹೋವನ ಭರವಸೆ ಉದ್ಧಾರ" ಜ್ಞಾನೋಕ್ತಿಗಳು 29:25.

"ಪ್ರಾಮಾಣಿಕವಾದ, ವಿಧೇಯತೆಯ ಹೃದಯವುಳ್ಳವರು ಯಾರೇ ಆಗಲಿ, ತಮ್ಮ ಎಲ್ಲಾ ಅಗತ್ಯದ ಸಮಯದಲ್ಲಿ, ಎಲ್ಲಾ ಕಷ್ಟಸಂಕಟಗಳ, ಕಳವಳಗಳ ಸಮಯಗಳಲ್ಲಿ, ಜೀವನದ ಎಲ್ಲಾ ಸಂಗತಿಗಳಲ್ಲಿ ತನಗೆ ದೊರಕುವ ಬಲ ಹಾಗೂ ಕೃಪೆಯಿಂದ ಈ ರೀತಿಯಾಗಿ ತನ್ನ ನಂಬಿಕೆಯನ್ನು ಪ್ರಯೋಗಿಸುತ್ತಾನೆ – ಅದು ಹಡಗು ಹೊಯ್ದಾಡದ ಹಾಗೆ ಇಡುವ ನಿಲು ಭಾರದಂತೆ ಇರುತ್ತದೆ. ನಮ್ಮ ಜೀವನದ ಕಹಿ ಹಾಗೂ ಸಿಹಿಯಾದ ಎಲ್ಲಾ ಅನುಭವಗಳಲ್ಲಿ ಸಮಸ್ಥಿತಿಯನ್ನೂ ಉಂಟುಮಾಡುತ್ತದೆ." ಆರ್.3545, ಸಿ.1, ಮೇಲೆ.

## "ಸ್ಥಿರಚಿತ್ತನನ್ನು ಶಾಂತಿಯಲ್ಲಿ ನೆಲೆಗೊಳಿಸಿ ಕಾಯುವಿ; ಅವನಿಗೆ ನಿನ್ನಲ್ಲಿ ಭರವಸವಿದೆ." ಯೆಶಾಯ 26:3.

"ಸ್ತೇಫನರಿಗೆ ಅವರ ಶತ್ರುಗಳು ಕಲ್ಲೆಸೆದು ಕೊಲ್ಲುವಾಗಲೂ ಇದೇ ರೀತಿಯ ಸ್ಥಿರಚಿತ್ತವಿತ್ತು ಮತ್ತು ಸಂತೋಷವಿತ್ತು ಮತ್ತು ಹೀಗೆಯೇ ದೇವರ ಸಾವಿರಾರು ಸಂತಭಕ್ತರು ಬಡತನ, ಕಾಯಿಲೆ, ಕಷ್ಟಗಳಲ್ಲಿ, ಶೋಧನೆಗಳಲ್ಲಿ ಮತ್ತು ಸುತ್ತಲಿರುವ ಶತ್ರುಗಳ ಮತ್ತು ಉಗ್ರ ಹಿಂಸೆಯ ಜ್ವಾಲೆಗಳ ನಡುವೆಯಲ್ಲಿಯೂ ಇದೇ ರೀತಿಯ ಸಾಕ್ಷಿಯನ್ನು ಕೊಡಬಹುದು. ಸ್ಥಿರಚಿತ್ತ ಹಾಗು ಸಂತೋಷಕ್ಕೆ ಅನುರೂಪವಾದ ಸನ್ನಿವೇಶಗಳಲ್ಲಿ ಇದು ಹೇಗೆ ಮತ್ತು ಎಲ್ಲಿಂದ ಬರುತ್ತದೆ? ಮನಸ್ಸಿನ ಸ್ಥಿರಚಿತ್ತದಿಂದಲೇ 'ಸ್ಥಿರಚಿತ್ತವನ್ನು ಶಾಂತಿಯಲ್ಲಿ ನೆಲೆಗೊಳಿಸಿ ಕಾಯುವಿ' ಎಂಬುವದಾಗಿ ಇದಕ್ಕೆ ಉತ್ತರನೀಡಬಹುದು, ಅನುಭದಿಂದಲ್ಲದೆ ಬೇರೆ ಯಾವುದರಿಂದಲೂ ಈ ದೈವಕೃಪೆಯ ಸ್ಥಿರಚಿತ್ತವನ್ನು ಅರಿತುಕೊಳ್ಳಲು ಸಾಧ್ಯವಿಲ್ಲ. ವೇದನೆ ಎಂಬ ಪರೀಕ್ಷೆಯಲ್ಲಿ ಹಾಕದೆ ಯಾರೊಬ್ಬನೂ ಇದರ ಉತ್ಕೃಷ್ಟ ಬೆಲೆಯನ್ನು ತಿಳಿದುಕೊಳ್ಳಲು ಸಾಧ್ಯವಿಲ್ಲ." ಆರ್.1961, ಸಿ.2, ಪಿ.6.

### "ಶಾಂತರಾಗಿ ಭರವಸದಿಂದಿರುವುದೇ ನಿಮಗೆ ಬಲ."ಯೆಶಾಯ 30:15.

"ನಾನು ಸಾತ್ವಿಕನೂ ದೀನ ಮನಸ್ಸುಳ್ಳವನೂ ಆಗಿರುವುದರಿಂದ ನನ್ನಿಂದ ಕಲಿತುಕೊಳ್ಳಿರಿ" ಎಂಬ ಮಾತುಗಳ ಮೂಲಕ ಈ ವಿಶ್ರಾಂತಿಗೆ ಕರ್ತನು ಗೂಡಾರ್ಥವನ್ನು ಕೊಡುತಾನೆ. ನಿಜವಾಗಿಯೂ ಸಾತ್ವಿಕ ಮತ್ತು ಶಾಂತವಾಗಿರುವ ಮನಸ್ಸಿನಲ್ಲಿಯೇ ವಿಶ್ರಾಂತಿಯ ಗುಟ್ಟು ಅಡಗಿದೆ. ಸಾತ್ವಿಕತ್ವದಿಂದಿರುವುದೇನೆಂದರೆ ತಾಳ್ಮೆಯ ಅನುಗ್ರಹಗಳನ್ನು ಬೆಳೆಸಿಕೊಳ್ಳುವುದು, ಪ್ರೀತಿಯಿಂದ ದೇವರ ಚಿತ್ತಕ್ಕೆ ಒಪ್ಪಿಸಿಕೊಡುವುದು, ಆತನ ಪ್ರೀತಿಯ ಪೋಷಣೆಯಲ್ಲಿ ಮತ್ತು ಆತನ ಜ್ಞಾನದಲ್ಲಿ ಮುನ್ನಡೆಸುವ ಸಮಾಲೋಚನೆಯಲ್ಲಿ ಮತ್ತು ಆತನ ಮೇಲ್ವಿಚಾರಣೆಯ ಅನುಗ್ರಹದಲ್ಲಿ ದೃಢಭರವಸೆಯಿಂದ ನೆಲೆಗೊಂಡಿರುವುದು ಹಾಗು ಸತತವಾಗಿ ಈ ಶ್ರೇಣಿಯಲ್ಲಿ ಕೆಟ್ಟ ಮತ್ತು ಒಳ್ಳೆಯ ವರದಿಗಳ ಮುಖಾಂತರ ಅಥವಾ ಅನುಕೂಲ ಮತ್ತು ಅನಾನುಕೂಲ ಸಂದರ್ಭಗಳಲ್ಲಿ ಮುಂದುವರೆಸಿಕೊಂಡು ಹೋಗುವುದು ಆಗಿದೆ. ದೇವರ ಅತೀ ಪ್ರೀತಿಯ ಮಕ್ಕಳು ಆತನ ಅನುಗ್ರಹಗಳನ್ನು ಅಂಗೀಕಾರ ಮಾಡಿಕೊಂಡು, ಆತನ ಆಜ್ಞೆಗಳಿಗೆ ಕ್ರಿಸ್ತನು ವಿಧೇಯನಾದಂತೆ ವಿಧೇಯರಾಗಿ, ಆತನಿಂದ ಮಾತ್ರ ಒದಗುವ ಬಲವನ್ನು ಒಪ್ಪಿಕೊಂಡು ಮತ್ತು ಆವೃತವಾಗಿದ್ದುಕೊಂಡು, ಆತನ ನಾಯಕತ್ವಕ್ಕನುಸಾರವಾಗಿ ಆತನ ನೊಗವನ್ನು ಹೊರುವಂಥವರಾಗಿದ್ದು, ಕ್ರಿಸ್ತನ ಸಾತ್ವಿಕ ಮತ್ತು ದೀನ ಮನಸ್ಸನ್ನು ಹೆಚ್ಚೆಚ್ಚಾಗಿ ಅನುಕರಣೆ ಮಾಡಿಕೊಳ್ಳಲಿ ಮತ್ತು ಆತನಿಂದ ಕಲಿತುಕೊಳ್ಳಲಿ." ಆರ್.1962, ಮೇಲೆ.

### "ರೊಟ್ಟಿಯು ಅವನಿಗೆ ಕೊಡಲ್ಪಡುವದು, ನೀರು ತಪ್ಪುವದಿಲ್ಲ." ಯೆಶಾಯ 33:16.

"ದೇವರೇ (ನಾವು ಅಲ್ಲ) ನಮ್ಮ ಅಗತ್ಯತೆಗಳನ್ನು ಮತ್ತು ಇಷ್ಟಾರ್ಥಗಳನ್ನು, ನಮ್ಮ ಪ್ರತಿಯೊಂದು ಅಧಿಕವಾದ ನೆಮ್ಮದಿಯನ್ನು ನೋಡಿಕೊಳ್ಳುತ್ತಾ ಯಾವಾಗಲೂ ನಮ್ಮ ರೊಟ್ಟಿ ಮತ್ತು ನೀರನ್ನು ವಾಗ್ದಾನಿಸಿರುವುದರಿಂದ ಕೃತಜ್ಞತರಾಗಿಯೇ ಇರೋಣ. ಯಾವಾಗಲೂ ನಮ್ಮ ಗಣನೆಗೆ ಮೀರಿದ ದೇವರ ಅಗಾಧವಾದ ಜ್ಞಾನ ಮತ್ತು ನಮ್ಮ ಮೇಲಿರುವ ಎಲ್ಲೆಯಿಲ್ಲದ ಪ್ರೀತಿಯನ್ನು ಮನಗಂಡು, ನಮ್ಮ ಅಗತ್ಯತೆಗಳನ್ನು ಯಾವ ಹಂತದಲ್ಲೂ ಆತನ ಕೈಯಿಂದ ತೆಗೆಯದಂತೆ ಭಯದಿಂದಿರಬೇಕು. ಈ ರೀತಿ ಇರುವುದರಿಂದ ನಮಗೆ ಏನೇನು ಸಂಭವಿಸಿದರೂ ನಮ್ಮ ಹಿತಕ್ಕಾಗಿಯೇ ಅಂದುಕೊಂಡು ಯಾವಾಗಲೂ ಸಂತೋಷದಿಂದಲೇ ಬಾಳಬಹುದು. ನೋವಿನಲ್ಲಿರುವಾಗ ಅಥವಾ ತಬ್ಬಿಬ್ಬುಗೊಂಡ ಸಂದರ್ಭದಲ್ಲಿ ಮತ್ತು ಅತೀ ಬೇಕಾಗುವ ಸಮಯದಲ್ಲಿ, ಅಗತ್ಯವಾಗಿ ನಮಗೆ ಅನುಭವವನ್ನು ಅಥವಾ ಶೋಧನೆಯನ್ನು ಅಥವಾ ಶಿಕ್ಷೆಯನ್ನು ಕೊಡಲು ನಮಗೊಂದು ಪರಿಚಯಸ್ಥರ ಸಹಾಯ ಬೇಕಾಗಬಹುದು. ಮತ್ತು ನಾವು ಶಿಕ್ಷೆಯನ್ನು ಅಥವಾ ಪಾಠವನ್ನು ಬೇಗನೆ ಹುಡುಕಿ ಗೌರವಿಸಲು ಕಲಿತುಕೊಳ್ಳಬೇಕು ಮತ್ತು ನಾವು ಕ್ರಿಸ್ತನ ಶಾಲೆಯಲ್ಲಿ ಯೋಗ್ಯ ವಿಧ್ಯಾರ್ಥಿಗಳು ಎಂಬುದನ್ನು ನಾವೇ ಸಾಬೀತುಪಡಿಸಬೇಕು." ಆರ್.2009, ಸಿ.2, ಪಿ.5.

## “ರಾಜನ ಸೌಂದರ್ಯವನ್ನು ನಿನ್ನ ಕಣ್ಣುಗಳು ನೋಡುವವು.” ಯೆಶಾಯ. 33:17.

“ಓ, ವಿಶ್ರಾಂತಿ ಮತ್ತು ನೆಮ್ಮದಿಯ, ಮಹಿಮೆಯ ಮತ್ತು ಆಶೀರ್ವಾದದ, ಹರ್ಷಭರಿತ ಸಾಂಗತ್ಯದ, ಮರಣವಿಲ್ಲದ ಪ್ರೀತಿಯ, ಕಳಂಕರಹಿತ ಪವಿತ್ರತೆಯ ಮತ್ತು ಅಂತ್ಯವಿಲ್ಲದ ಅತ್ಯಾನಂದವನ್ನು ಕೊಡುವ ಎಂಥಾ ದರ್ಶನವಿದು. ಯಾರೆಲ್ಲ ಇದರ ಮಹಿಮೆಯ ಪ್ರಕಾಶದ ಕ್ಷಣಿಕ ದರ್ಶನವನ್ನು ಹಿಡಿದುಕೊಂಡಿದ್ದಾರೋ ಅವರು ಮಾತ್ರ ಇದರ ಪ್ರಭಾವವನ್ನು ಪವಿತ್ರ ಉಲ್ಲಾಸದೊಂದಿಗೆ ಕಂಡುಕೊಳ್ಳಬಹುದು ಮತ್ತು ತಾಳ್ಮೆಯಿಂದ ಮಾಡುವ ಪ್ರಯತ್ನವು ಎಲ್ಲಾ ನಷ್ಟಗಳಲ್ಲಿ ಹಾಗು ಶಿಲುಬೆಗಳಲ್ಲಿ ಅದರ ಹಾದಿಯೆಡೆಗೆ ಶಿಸ್ತಿನಿಂದ ಸಾಗಿಸುತ್ತದೆ. ಯಾರೆಲ್ಲರು ಕ್ರಿಸ್ತನ ಹೆಸರನ್ನು ಹೊಂದಿದ್ದಾರೋ ಅವರೆಲ್ಲರು ಈ ಆಶೀರ್ವಾದವುಳ್ಳ ದರ್ಶನದ ಪ್ರಭಾವದಿಂದ ತುಂಬಿರುವುದಿಲ್ಲ ಎಂದರೆ ಅದೇನೂ ಆಶ್ಚರ್ಯಪಡುವಂಥಹ ಸಂಗತಿಯೇನಲ್ಲ. ಆದರೆ ಯಾರೆಲ್ಲರು ತಾತ್ವಿಕವಾಗಿ ಈ ಸಂಗತಿಗಳನ್ನು ಗೊತ್ತು ಮಾಡಿಕೊಂಡಿದ್ದಾರೋ ಅವರು ನಿಜವಾಗಿಯೂ ಈ ದರ್ಶನವನ್ನು ದರ್ಶಿಸುತ್ತಾರೆ. ಮತ್ತು ಅದರಲ್ಲಿ ನಮಗೂ ಒಂದು ಸ್ಥಾನವಿದೆ ಎಂಬ ನಂಬಿಕೆಯನ್ನು ಕಂಡುಕೊಳ್ಳುತ್ತಾರೆ... ನೀನು ಕೇಳುವವನು ಮಾತ್ರವಾಗಿರದೆ ದೇವರ ವಾಕ್ಯದ ನಂಬಿಗಸ್ತ ಕಾರ್ಯಸಾಧಕನಾಗಿದ್ದರೆ ಖಂಡಿತವಾಗಿಯೂ ಈ ನಿನ್ನ ನಂಬಿಕೆಯ ಕಣ್ಣುಗಳು ದೈವಪ್ರೇರಣೆಯಿಂದ ಗೋಚರವಾಗುವ ಮಹಿಮೆಯನ್ನು ಕಾಣುವವು ಮತ್ತು ನಿನ್ನ ಹೆಜ್ಜೆಗಳು ನೀತಿಯ ಹಾದಿಯಲ್ಲಿ ವೇಗವಾಗಿ ಚುರುಕುಗೊಳ್ಳುವವು.” ಆರ್. 2087, ಸಿ.2, ಪಿ.3.

## “ಯೆಹೋವನನ್ನು ನಿರೀಕ್ಷಿಸುವವರೋ ಹೊಸ ಬಲವನ್ನು ಹೊಂದುವರು; ಅವರು ಹದ್ದುಗಳಂತೆ ರೆಕ್ಕೆಗಳಿಂದ ಬೆಟ್ಟವನ್ನು ಏರುವರು. ಓಡಿ ದಣಿಯರು, ನಡೆದು ಬಳಲರು.” ಯೆಶಾಯ. 40:31.

“ಯಾರಾದರು ತಮ್ಮಲ್ಲೇ ನಂಬಿಕೆಯುಳ್ಳವರಾಗಿದ್ದು, ತಮ್ಮದೇ ಶಕ್ತಿಯ ಮೇಲೆ ಮುಖ್ಯವಾಗಿ ಅವಲಂಬಿತವಾಗಿದ್ದರೆ ಅವರ ಸ್ವಂತ ಪ್ರಯೋಜನಕ್ಕಾಗಿ ಕರ್ತನು ಅವರನ್ನು ಎದೆಗುಂದುವಂತೆ ಮಾಡಿ, ಅವರು ಇನ್ನು ಹೆಚ್ಚಾಗಿ ಭಯಪಟ್ಟು, ಎಲ್ಲಾ ಸ್ವಂತ ಭರವಸೆಯನ್ನು ಕಳೆದುಕೊಂಡು, ತಮ್ಮ ಅಸಹಾಯಕತೆಯನ್ನು ಮತ್ತು ಬಲಹೀನತೆಯನ್ನು ಅರ್ಥಮಾಡಿಕೊಂಡು, ಕರ್ತನ ಮೇಲೆಯೇ ಅವಲಂಬಿಸಿರಬೇಕು ಎಂಬ ಅಗತ್ಯತೆಯನ್ನು ಮನಗಾಣವಂತೆ ಮಾಡಿ, ಹಾಗೆಯೇ ಸತತವಾಗಿ ಆತನ ಮುನ್ನಡೆಸುವಿಕೆಗೆ ಮತ್ತು ಬೆಂಬಲಕ್ಕಾಗಿ ಎದುರುನೋಡುವಂತಹ ಸನ್ನಿವೇಶಕ್ಕೆ ಅವರನ್ನು ತರುತ್ತಾರೆ. ದೇವರ ಮಕ್ಕಳು ಹೀಗೆ ಕರ್ತನಿಗಾಗಿ ಕಾದುಕೊಂಡಿರುವುದನ್ನು ಕಲಿತುಕೊಳ್ಳುವಾಗ ಅವರಲ್ಲಿ “ಯೆಹೋವನನ್ನು ನಿರೀಕ್ಷಿಸುವವರೋ ಹೊಸ ಬಲವನ್ನು ಹೊಂದುವರು; ಅವರು ಹದ್ದುಗಳಂತೆ ರೆಕ್ಕೆಗಳಿಂದ ಬೆಟ್ಟವನ್ನು ಏರುವರು. ಓಡಿ ದಣಿಯರು, ನಡೆದು ಬಳಲರು” ಎಂಬ ವಾಗ್ದಾನವು ನೆರವೇರುತ್ತದೆ.” ಆರ್. 5712, ಸಿ.2, ಪಿ.6.

**“ನೀನಂತೂ ಹೆದರಬೇಡ; ನಾನೇ ನಿನ್ನೊಂದಿಗಿದ್ದೇನೆ; ದಿಗ್ಭ್ರಮೆಗೊಳ್ಳದಿರು. ನಾನೇ ನಿನ್ನ ದೇವರು; ನಾನು ನಿನ್ನನ್ನು ಬಲಪಡಿಸುತ್ತೇನೆ; ಹೌದು, ನಾನು ನಿನಗೆ ಸಹಾಯ ಮಾಡುತ್ತೇನೆ. ಹೌದು, ನನ್ನ ನೀತಿಯ ಬಲಗೈಯಿಂದ ನಿನ್ನನ್ನು ಎತ್ತಿ ಹಿಡಿಯುತ್ತೇನೆ.” ಯೆಶಾಯ. 41:10.**

“ಕ್ರಿಸ್ತನ ಶರೀರದ ಪ್ರತಿಯೊಬ್ಬ ಸದಸ್ಯನೂ, ದೇವರ ನಿಜವಾದ ಇಸ್ರಾಯೇಲ್ಯನು ಈ ಅರಣ್ಯಮಾರ್ಗದ ನಮ್ಮ ಪ್ರಯಾಣದ ಪ್ರತಿಯೊಂದು ಅನುಭವದಲ್ಲಿ ಕರ್ತನ ಸತತವಾದ ಮುನ್ನಡೆಸುವಿಕೆಯನ್ನು ಪಡೆಯುವ ಭಾಗ್ಯವನ್ನು ಹೊಂದಿದ್ದಾನೆ. ಪರಲೋಕದ ಮನ್ನಾವನ್ನು ನಮ್ಮ ದಿನನಿತ್ಯದ ಪೋಷಣೆಗೆ ಒದಗಿಸಿದ್ದಾನೆ. ಜೀವ ನೀರು ಹೊಡೆಯಲ್ಪಟ್ಟ ಯುಗದ ಬಂಡೆಯಿಂದ ನಮ್ಮ ದಿನನಿತ್ಯದ ಚೈತನ್ಯಕ್ಕೆ ಹರಿಯುತ್ತದೆ. ನಾವು ಅಪಾಯದಲ್ಲಿರುವಾಗ ಅಥವಾ ಯಾವುದಾದರೂ ದಾರಿತಪ್ಪಿದ ಹಾದಿಯಲ್ಲಿ ಅಲೆಯುತ್ತಿರುವಾಗ ತಂದೆಯ ಶಿಕ್ಷಿಸುವ ಕೋಲು ನಮ್ಮನ್ನು ಹತೋಟಿಯಲ್ಲಿಡುತ್ತದೆ, ಹೀಗೆ ಪ್ರೀತಿಯಿಂದ ನಮ್ಮನ್ನು ಸರಿಯಾದ ದಾರಿಗೆ ಕರೆದುಕೊಳ್ಳುತ್ತಾರೆ. ಮತ್ತು ನಮ್ಮ ಗಾಯಗಳನ್ನು ಗುಣಪಡಿಸುತ್ತಾರೆ ಮತ್ತು ದಯಾಪೂರ್ವಕವಾಗಿ ನಮ್ಮ ಎಡವುವಿಕೆಗಳನ್ನು ಬಲಹೀನತೆಗಳನ್ನು ಕ್ಷಮಿಸುತ್ತಾರೆ. ನಿಜವಾಗಿಯೂ ನಮ್ಮ ಪರಲೋಕದ ಮಾರ್ಗದರ್ಶಕನಲ್ಲಿ ಸಂಪೂರ್ಣಭರಿತ ಭರವಸೆಯನ್ನು ಹೊಂದಬಹುದು. ಹೀಗೆ ನಾವು ಆತನಲ್ಲಿ ಮತ್ತು ಆತನು ನಮಗೆ ಇಟ್ಟಿರುವ ಪರಿಪೂರ್ಣ ಸಮಾಧಾನದಲ್ಲಿ ವಿಶ್ರಾಂತಿಯನ್ನು ಹೊಂದಬಹುದಾಗಿದೆ.” ಆರ್. 5548, ಸಿ.2, ಮೇಲೆ.

**“ಭಯಪಡಬೇಡ ನಿನಗೆ ಸಹಾಯ ಮಾಡುತ್ತೇನೆಂದು ನಿನಗೆ ಹೇಳುವ ನಿನ್ನ ದೇವರಾದ ಯೆಹೋವನೆಂಬ ನಾನೇ ನಿನ್ನ ಕೈಹಿಡಿಯುತ್ತೇನಲ್ಲಾ.” ಯೆಶಾಯ. 41:13.**

“ಕ್ರಿಸ್ತನ ಉತ್ತಮ ಸೈನಿಕನಾಗಿ ಶ್ರಮೆಯನ್ನು ಅನುಭವಿಸುವಾಗ, ಯಾವ ನಾಲಿಗೆಯೂ ಉದ್ಗರಿಸದಂಥಹ ಶೋಧನೆಯ ಸಮಯಗಳಲ್ಲಿ ಎಂಥಹಾ ಆಶೀರ್ವಾದಭರಿತ, ಸಮಾಧಾನ ಮತ್ತು ಪೋಷಣಯುಕ್ತವಾದ ಬಲವು ಈ ಉತ್ಕೃಷ್ಟಯುಕ್ತ ಭರವಸೆಯಲ್ಲಿ ಅಡಗಿದೆ. ನಂಬಿಗಸ್ತ ಭಕ್ತರು ಈ ಹಿಂದೆ ಅನೇಕ ಕರಾಳ ಮತ್ತು ಶೋಧನೆಯ ಅನುಭವಗಳಲ್ಲಿ ಹಾದುಹೋಗುವಂತೆ ಮಾಡುವಾಗ ಅವರ ಮನೋಸ್ಥೈರ್ಯವು ಜಗತ್ತನ್ನೇ ಆಶ್ಚರ್ಯಗೊಳಿಸುವಂತೆ ಮಾಡಿದೆ, ಹಾಗೂ ಅವರನ್ನು ಉರಿಯುವ ಬೆಂಕಿಯ ಜ್ವಾಲೆಯಲ್ಲಿ ನೋಡುವಂತೆ ಅನುಮತಿಸಲಾಗಿದೆ. ಆದರೆ ಅಲ್ಲಿ ಅವರೊಂದಿಗಿದ್ದ ದೇವರ ಮಗನ ಸ್ವಾರೂಪ್ಯವನ್ನು ನೋಡಲಿಲ್ಲ. (ದಾನಿಯೇಲ 3:25) ಅವರಾದರೋ ಅದೃಶ್ಯವಾಗಿರುವಾತನನ್ನು ದೃಷ್ಟಿಸುವವನೋ ಎಂಬಂತೆ ದೃಢಚಿತ್ತರಾಗಿದ್ದರು.” (ಹಿಬ್ರಿಯ. 11:27) ಆರ್.4784, ಸಿ.2, ಪಿ.4.

**"ನೀನು ಜಲರಾಶಿಯನ್ನು ದಾಟಿ ಹೋಗುವಾಗ ನಾನು ನಿನ್ನೊಂದಿಗಿರುವೆನು;
ನದಿಗಳನ್ನು ನೀನು ದಾಟುವಾಗ ಅವು ನಿನ್ನನ್ನು ಮುಳುಗಿಸುವದಿಲ್ಲ;
ಬೆಂಕಿಯಲ್ಲಿ ನೀನು ನಡೆಯುವಾಗ ಸುಡಲ್ಪಡುವದಿಲ್ಲ;
ಇಲ್ಲವೆ ಜ್ವಾಲೆಯು ನಿನ್ನನ್ನು ದಹಿಸದು." ಯೆಶಾಯ 43:2.**

"ಇಸ್ರಾಯೇಲ್ಯರು ಯೊರ್ದಾನ್ ನದಿಯನ್ನು ದಾಟುವಾಗ ಯೆಹೋವನ ದೈವೀಕ ಪ್ರಸನ್ನತೆಯ ಚಿಹ್ನೆಯಾಗಿದ್ದ ಮಂಜೂಷ ಪೆಟ್ಟಿಗೆಯು ಭಯಂಕರವಾದ ಹೊಳೆಯ ಮಧ್ಯದಲ್ಲಿ ನಿಂತಿದ್ದರಿಂದ ಭಯಪಡಬೇಕಾದ ಯಾವ ಅವಶ್ಯಕತೆಯೂ ಇರಲಿಲ್ಲ. ಹಾಗೆಯೇ ಕ್ರೈಸ್ತನೂ ದೈವೀಕ ಪ್ರಸನ್ನತೆ ಮತ್ತು ಅಂಗೀಕಾರ ಇರುವ ತನಕ ಆತನೂ ಯಾವುದಕ್ಕೂ ಭಯಪಡಬೇಕಾದ ಅವಶ್ಯಕತೆ ಇಲ್ಲ. ಜಲರಾಶಿಗಳ ಮತ್ತು ಸಮುದ್ರದ ಕಷ್ಟಗಳಲ್ಲಿ ಆತನು ದಾಟಬಹುದು ಮತ್ತು ಉರಿಯುವ ಜ್ವಾಲೆಗಳ ವೇದನೆಗಳ ನಡುವೆಯೂ ಹಾದುಹೋಗಬಹುದು. ಆದರೆ ಕರ್ತನು ಅವನೊಂದಿಗಿರುವುದರಿಂದ ಯಾವುದೂ ಅವನಿಗೆ ಹಾನಿಮಾಡದು. ಅಂಥಹ ಸನ್ನಿವೇಶಗಳಲ್ಲಿ ಕರ್ತನ ಪ್ರಸನ್ನತೆ, ನಿರೀಕ್ಷೆ ಮತ್ತು ಪ್ರೀತಿಯ ಗ್ರಹಿಕೆ ಉಂಟಾಗುವದು ಮತ್ತು ನಂಬಿಕೆ ಹಾಗು ನಿರೀಕ್ಷೆಗಳಿಗೆ ಬಲವನ್ನು ಒದಗಿಸುವುದು, ಇದನ್ನು ಅನ್ಯಥಾ ಹೊಂದಿಕೊಳ್ಳಲು ಸಾಧ್ಯವಿಲ್ಲ. ಹೀಗೆ ದೇವರ ಸಂಕಲ್ಪದ ಮೇರೆಗೆ ಕರೆಯಲ್ಪಟ್ಟು ಆತನನ್ನು ಪ್ರೀತಿಸುವವರ ಹಿತಕ್ಕಾಗಿ ಎಲ್ಲಾ ಕಾರ್ಯಗಳು ಅನುಕೂಲವಾಗುತ್ತವೆ." ಆರ್.1857, ಮಧ್ಯ.

**"ನನ್ನ ಸಂಕಲ್ಪವು ನಿಲ್ಲುವುದು. ನನ್ನ ಇಷ್ಟಾರ್ಥವನ್ನೆಲ್ಲಾ ನೆರವೇರಿಸುವೆನು...
ನಾನು ನುಡಿದಿದ್ದೇನೆ, ಅದನ್ನು ನಾನು ಈಡೇರಿಸುವೆನು;
ನಾನು ನಿರ್ಣಯಿಸಿದ್ದೇನೆ, ಅದನ್ನು ನಾನು ಮಾಡುವೆನು."
ಯೆಶಾಯ 46:10,11.**

"ಅವರು (ಕ್ರಿಸ್ತನು ಮತ್ತು ಅಪೋಸ್ತಲರು) ಪಾಡುಗಳನ್ನು ಪಡುತ್ತಿರುವಾಗಲೂ ಸಮಾಧಾನಕರವಾದ ಮನಸ್ಸನ್ನು ಹೊಂದುವಂತೆ ಅವರನ್ನು ಬಿಗಿಯಾಗಿ ಹಿಡಿದಿಟ್ಟುಕೊಂಡ ಆ ಬಂಧನ ಯಾವುದು? ಅದು ಯಾವುದೆಂದರೆ ಅವರ ನಂಬಿಕೆ–ದೇವರ ಪ್ರೀತಿ, ಬಲ ಮತ್ತು ಜ್ಞಾನದಲ್ಲಿ ಅವರಿಗಿದ್ದ ನಂಬಿಕೆಯಾಗಿದೆ. ದೇವರು ಏನನ್ನು ವಾಗ್ದಾನ ಮಾಡಿದ್ದಾರೋ ಅದನ್ನು ಖಂಡಿತವಾಗಿ ನೆರವೇರಿಸುತ್ತಾರೆ, ಹಾಗೆಯೇ ಅವರ ನೀತಿಯುತ ಮತ್ತು ದಯಾಶೀಲ ದಯಾಳತ್ವದ ಯೋಜನೆಯು ಯಾವ ಸೋಲನ್ನೂ ಕಾಣುವುದಿಲ್ಲ ಎಂಬ ನಂಬಿಕೆಯಾಗಿದೆ. ಏಕೆಂದರೆ "ನನ್ನ ಸಂಕಲ್ಪವು ನಿಲ್ಲುವುದು. ನನ್ನ ಇಷ್ಟಾರ್ಥವನ್ನೆಲ್ಲಾ ನೆರವೇರಿಸುವೆನು... ನಾನು ನುಡಿದಿದ್ದೇನೆ, ಅದನ್ನು ನಾನು ಈಡೇರಿಸುವೆನು; ನಾನು ನಿರ್ಣಯಿಸಿದ್ದೇನೆ, ಅದನ್ನು ನಾನು ಮಾಡುವೆನು"– ಎಂದು ಪ್ರವಾದಿಗಳ ಬಾಯಿಂದ ಹೇಳಿಸಿದ ಉದ್ಗಾರವನ್ನು ಅವರು ನಂಬಿದ್ದರು. ಸೇನೆಗಳ ಕರ್ತನು ಅರುಹಿದ್ದಾರೆ ಮತ್ತು

ಯಾರದನ್ನು ರದ್ದುಪಡಿಸುವರು? ದೇವರ ಭರವಸೆಯ ಮೇಲೆ ಅವರು ವಿಶ್ರಾಂತಿಯನ್ನು ಪಡೆದರು. ಆತನಲ್ಲಿ ಅವರ ನಂಬಿಕೆಯು ಲಂಗರು ಹಾಕಿತ್ತು. ಮತ್ತು ಅದಕ್ಕೆ ವಿರುದ್ಧವಾಗಿ ಎಷ್ಟೇ ಭಯಂಕರವಾದ ಅಲೆಗಳು ಆರ್ಭಟಿಸಿದರೂ ಲೆಕ್ಕಕ್ಕೆ ಬರಲಿಲ್ಲ ಅಥವಾ ಅವರ ಜೀವನವು ಯಾವ ರೀತಿಯ ಚಂಡಮಾರುತಕ್ಕೆ ಅತ್ತಿತ್ತ ಹೊಯ್ದಾಡಿದರೂ ಅವರು ಇನ್ನೂ ಭದ್ರವಾಗಿ ದೇವರ ಸಿಂಹಾಸನವನ್ನು ಹಿಡಿದುಕೊಂಡಿದ್ದರು." ಆರ್. 1834, ಸಿ.2, ಪಿ.4.

## "ಒಬ್ಬ ಹೆಂಗಸು ತಾನು ಹೆತ್ತ ಮಗುವಿನ ಮೇಲೆ ಕರುಣೆಯಿಡದೆ ತನ್ನ ಮೊಲೆಕೂಸನ್ನು ಮರೆತಾಳೇ? ಒಂದು ವೇಳೆ ಮರೆತಾಳು, ನಾನಾದರೆ ನಿನ್ನನ್ನು ಮರೆಯೆ. ಇಗೋ, ನನ್ನ ಅಂಗೈಗಳಲ್ಲಿ ನಿನ್ನನ್ನು ಚಿತ್ರಿಸಿದ್ದೇನೆ." ಯೆಶಾಯ 49:15-16.

"ನಮ್ಮ ಪರಲೋಕ ತಂದೆಯ ಕಡೆಯಿಂದ ನಮಗಿರುವ ಈ ಮಧುರವಾದ ಪ್ರೀತಿಯ ಭರವಸೆಗಳನ್ನು ಓದುವಾಗ ಮತ್ತು ನಮ್ಮ ದುರ್ಬಲಾವಸ್ಥೆಯನ್ನು ವಿಚಾರಮಾಡುವಾಗ ನಾವು ನಿಜವಾಗಿಯೂ ಆ ಪ್ರೀತಿಯ ವಸ್ತುಗಳು ಮಾತ್ರ ಎಂಬುದನ್ನು ಖಚಿತವಾಗಿ ಗ್ರಹಿಸಬಹುದು. ಅದಾಗ್ಯೂ ಇಕ್ಕಟ್ಟಾದ ದಾರಿಯಲ್ಲಿ ನಾವು ದೀನತೆಯಿಂದ ನಡೆದರೆ ಈ ಭರವಸೆಗಳು ನಮ್ಮ ಹಿತಕ್ಕಾಗಿ ಮತ್ತು ಸಮಾಧಾನಕ್ಕಾಗಿ ಇವೆ." ಆರ್. 957, ಸಿ.1, ಪಿ.1.

## "ಕರ್ತನಾದ ದೇವರು ನನಗೆ ಸಹಾಯ ಮಾಡುವನು; ಆದಕಾರಣ ನಾನು ಆಶಾಭಂಗಪಡುವದಿಲ್ಲ; ಆದದರಿಂದ ನನ್ನ ಮುಖವನ್ನು ಬೆಣಚುಕಲ್ಲಿನಂತೆ ಮಾಡಿಕೊಂಡಿದ್ದೇನೆ; ನಾನು ನಾಚಿಕೆಪಡಲಾರೆನೆಂದು ನನಗೆ ಗೊತ್ತು." ಯೆಶಾಯ 50:7.

ಲೋಕದ ದೃಷ್ಟಿಯಲ್ಲಿ ಕ್ರಿಸ್ತೀಯನ ಹಾದಿಯು ಸಮಾಧಾನದಿಂದ ದೂರವಿರುವಂತೆ ಕಾಣಿಸುತ್ತದೆ, ಕಾರಣವೇನೆಂದರೆ ಕರ್ತನ ಭಕ್ತರ ಪ್ರಯಾಣವು ಆಗಾಗ್ಗೆ ಬಿರುಗಾಳಿಯಿಂದ ಕೂಡಿದೆ. ಬಿರುಗಾಳಿಯು ಎಷ್ಟು ಬಲವಾಗಿ ಬೀಸಿದರು ಕೂಡ, ನಾವು ಎಷ್ಟು ಘೋರವಾಗಿ ಎಸೆಯಲ್ಪಟ್ಟರೂ, ಒಂದುವೇಳೆ ನಮ್ಮ ಹೃದಯಗಳು ವಿಶ್ವಾಸದಿಂದ ಕ್ರಿಸ್ತನಲ್ಲಿ ನಿರಂತರವು ನೆಲೆಗೊಂಡಿದ್ದರೆ ಮತ್ತು ನಾವು ನಮ್ಮ ಲಂಗರನ್ನು ಬಿಟ್ಟುಬಿಡದಿದ್ದರೆ, ನಾವು ಸಕಲ ಸಂಕಷ್ಟ-ಗಳಿಂದ ಕಾಪಾಡಲ್ಪಡುವೆವು. ವಿಶ್ವಾಸದ ಮೂಲಕ ಪ್ರವಾದಿ ಯೆಶಾಯನ ಜೊತೆಗೂಡಿ ಮೇಲಿನ ಆಧಾರ ವಚನದಂತೆ ನಾವು ಹೇಳಬಹುದಾಗಿದೆ. ಕರ್ತನ ಭರವಸೆಗಳಿಂದ ನಾವು ಆರೈಕೆ ಹೊಂದಬಹುದು, ಯಾಕೆಂದರೆ ನಮ್ಮ ಲಂಗರು ದೇವರ ಸಿಂಹಾಸನವನ್ನು ಗಟ್ಟಿಯಾಗಿ ಹಿಡಿದುಕೊಳ್ಳುತ್ತದೆ. ನಮ್ಮ ಯಜಮಾನನ ಹೃದಯದ ಭಾಷೆ ಹೀಗಿತ್ತು, 'ಓ ನೀತಿಯುಳ್ಳ ತಂದೆಯೇ, ಈ ಲೋಕವು ನಿನ್ನನ್ನು ತಿಳಿದಿಲ್ಲ. ಆದರೆ ನಾನು ನಿನ್ನನ್ನು ತಿಳಿದಿರುವೆ.' ಆತನು ಮೊದಲಿನಿಂದಲೂ ತಂದೆಯೊಂದಿಗೆ ಇದ್ದನು ಮತ್ತು ಆತನ ಪ್ರೀತಿ ಹಾಗು ಒಳ್ಳೇತನವನ್ನು ತಿಳಿದುಕೊಂಡಿದ್ದನು. ಆತನ ಪ್ರಭಾವದ ಪ್ರಕಟಣೆಗಳನ್ನು

ನೋಡಿದ್ದನು; ಆತನ ಪ್ರೀತಿಯ–ದಯೆಯನ್ನು ಈತನು ಗಮನಿಸಿದ್ದನು. ಹಾಗೆಯೇ ದೇವ–ರೊಂದಿಗೆ ಇದೇ ರೀತಿಯಾದ ಸಂಬಂಧದೊಳಗೆ ಬಂದಿರುವ ನಾವು ಕೂಡ ಆತನ ಪ್ರೀತಿ ಹಾಗು ನಂಬಿಗಸ್ತತೆಯನ್ನು ಅರಿತು ನಂಬಿಕೆಗೆ ಒಳಗಾಗಿದ್ದೇವೆ." ಆರ್. 5432, ಸಿ.1, ಪಿ.2,3.

**'ನೀತಿಯನ್ನು ಅರಿತು ನನ್ನ ನ್ಯಾಯಪ್ರಮಾಣವನ್ನು ಹೃದಯದಲ್ಲಿಟ್ಟುಕೊಂಡಿರುವ ಜನರೇ, ನನಗೆ ಕಿವಿಗೊಡಿರಿ, ಮನುಷ್ಯರ ನಿಂದೆಗೆ ಭಯಪಡಬೇಡಿರಿ; ಇಲ್ಲವೆ ಅವರ ದೂಷಣೆಗೆ ಹೆದರಬೇಡಿರಿ. ನಾನೇ, ನಾನೇ ನಿನ್ನನ್ನು ಆದರಿಸುವವನಾಗಿದ್ದೇನೆ; ಹಾಗಾದರೆ ಸಾಯುವ ಮನುಷ್ಯನಿಗೂ ಹುಲ್ಲಿನಂತೆ ಮಾಡಲ್ಪಟ್ಟಿರುವ ನರಪುತ್ರನಿಗೂ ಭಯ ಪಡುವ ನೀನು ಯಾರು?' ಯೆಶಾಯ 51:7,12**

"ಶತ್ರುಗಳ ಬಾಣಗಳು ನಮ್ಮ ಹೃದಯವನ್ನು ಗಾಯಗೊಳಿಸಿದಾಗ, ನಮ್ಮ ದೌರ್ಬಲ್ಯವನ್ನು ಪರಿಗಣಿಸಿಕೊಂಡು, ಸಮಾಧಾನಪಡಿಸುವ ಮುಲಾಮನ್ನು ಸುರಿಸುವಂಥದ್ದು ಸರ್ವಶಕ್ತನ ವಿಷಯದಲ್ಲಿ ಎಂಥದ್ದಾಗಿದೆ ನೋಡಿರಿ. ಕ್ರಿಸ್ತನು ಬಿಡುಗಡೆ ಮಾಡಿರುವಂಥಹ ಆತನ ಮಕ್ಕಳಲ್ಲಿ ಒಬ್ಬನೂ ಪುನಃ 'ಮನುಷ್ಯನ ಭಯವು ತರುವಂಥಹ ಉರುಲಿನ ದಾಸತ್ವಕ್ಕೆ ಹೋಗಲು ಆತನು ಆಶಿಸುವುದಿಲ್ಲ. ಕ್ರಿಸ್ತನಲ್ಲಿರುವ ಪ್ರತಿಯೊಬ್ಬನೂ ಪಾಪ ಮತ್ತು ಮೂಢನಂಬಿಕೆಯಿಂದ ಬಿಡಿಸಲ್ಪಟ್ಟಿರುವುದರಿಂದ ತನ್ನ ಸ್ವಾತಂತ್ರ್ಯವನ್ನು ಗ್ರಹಿಸಿಕೊಳ್ಳಲು ಬಯಸುವುದಲ್ಲದೆ, ಆತನ ಎಲ್ಲಾ ಆಲೋಚನೆಗಳು, ಮಾತುಗಳು ಮತ್ತು ಕ್ರಿಯೆಗಳಿಗೆ ದೇವರ ಮುಂದೆ ತಾನೇ ಗಂಭೀರ ಹೊಣೆಗಾರಿಕೆ ಹೊಂದಿರುವುದನ್ನು ತಿಳಿದುಕೊಳ್ಳಲು ಆತನು ಅಪೇಕ್ಷಿಸುತ್ತಾನೆ. –'ಸೈನ್ಯಗಳ ಕರ್ತನನ್ನೇ ಪ್ರತಿಷ್ಠೆಪಡಿಸಿಕೊಳ್ಳಿರಿ; ಆತನೇ ನಿಮ್ಮ ಭಯವೂ ಭಯಂಕರನೂ ಆಗಿರಲಿ.'" ಆರ್. 1788,ಸಿ.2,ಪಿ.2.

**'ಆಕಾಶಗಳನ್ನು ನಿಲ್ಲಿಸುವದಕ್ಕೂ ಭೂಮಿಗೆ ಅಸ್ತಿವಾರವನ್ನು ಹಾಕುವದಕ್ಕೂ ಚೀಯೋನಿಗೆ ನೀನು ನನ್ನ ಜನರೆಂದು ಹೇಳುವದಕ್ಕೂ ನನ್ನ ವಾಕ್ಯಗಳನ್ನು ನಿನ್ನ ಬಾಯಲ್ಲಿಟ್ಟು ನನ್ನ ಕೈ ನೆರಳಿನಿಂದ ನಿನ್ನನ್ನು ಮುಚ್ಚಿದ್ದೇನೆ.' ಯೆಶಾಯ 51:16.**

"ಇದು ನಂಬಿಕೆಯನ್ನು ಪ್ರೇರೇಪಿಸುವುದಕ್ಕಾಗಿ... ಕರ್ತನು ತನ್ನ ಎಲ್ಲಾ ಅಮೂಲ್ಯ ವಾಗ್ದಾನಗಳ ಜೊತೆಗೆ, ಆತನ ಮೇಲೆ ಸರಳವಾದ, ಮಕ್ಕಳ ರೀತಿಯ ನಂಬಿಕೆಗೆ ಅನೇಕ ಪ್ರೋತ್ಸಾಹಗಳನ್ನು ನೀಡಿದ್ದಾನೆ ಮತ್ತು ಮನುಷ್ಯರ ನಿಂದನೆಗೆ ಕಿವುಡ ಕಿವಿಯನ್ನು ತಿರುಗಿಸುವಂತೆ ಆತನು ನಮಗೆ ಆಜ್ಞಾಪಿಸಿದ್ದಾನೆ...'ಆಕಾಶಗಳನ್ನು ನಿಲ್ಲಿಸುವದಕ್ಕೂ (ನೂತನ ಆಕಾಶಗಳನ್ನು ಸ್ಥಾಪಿಸುವುದಕ್ಕೂ) ಭೂಮಿಗೆ ಅಸ್ತಿವಾರವನ್ನು ಹಾಕುವದಕ್ಕೂ (ನೂತನ ಭೂಮಿ) ಚೀಯೋನಿಗೆ (ನೂತನ ರಾಜ್ಯ–ನೂತನ ಆಕಾಶಗಳು ಮತ್ತು ಭೂಮಿಯ ಯೋಗ್ಯ ಬಾಧ್ಯಸ್ಥರಾಗುವುದಕ್ಕಾಗಿ ಸಂಕಟ ಮತ್ತು ಬಾಧೆಗಳ ಮೂಲಕ ಸಾಬೀತಾದ ಜನರು) ನೀನು ನನ್ನ ಜನರೆಂದು ಹೇಳುವದಕ್ಕೂ' ಎಂಬುವದಾಗಿದೆ. ಆರ್.1788, ಸಿ.2, ಪಿ.1.

**"ನಿನಗೆ ವಿರೋಧವಾಗಿ ರೂಪಿಸಲ್ಪಟ್ಟ ಆಯುಧಗಳು ಸಫಲವಾಗುವದಿಲ್ಲ." ಯೆಶಾಯ 54:17.**

ಕರ್ತನ ಚಿಯೋನಿನ ವಿರುದ್ಧ ಒಟ್ಟಾರೆಯಾಗಿ ಮತ್ತು ವ್ಯಕ್ತಿಗತ ಸದಸ್ಯರ ವಿರುದ್ಧ ಅನೇಕ ನಾಲಿಗೆಗಳು ಎದ್ದಿವೆ, ಅದೇನೆಂದರೆ 'ಅಸಹ್ಯವಾದ ವಿಷ'ಗಳಿಂದ ಕೂಡಿದ ನಾಲಿಗೆಗಳು, ಅಸೂಯೆ, ಕೆಟ್ಟತನ, ದ್ವೇಷ ಮತ್ತು ಕಲಹದಿಂದ ಕೂಡಿದ ಕಹಿಯಾದ ನಾಲಿಗೆಗಳು– ದೂಷಣೆ ಮತ್ತು ತಪ್ಪಾಗಿ ಹೇಳುವಂಥಹ, ಎಲ್ಲಾ ತರದ ಕೆಟ್ಟದ್ದನ್ನು ಸುಳ್ಳಾಗಿ ಹೇಳಲು ಹಿಂಜರಿಯದಂಥಹ ನಾಲಿಗೆಗಳು ಎದ್ದಿವೆ. ಅಧಿಕ ಪ್ರಮಾಣದಲ್ಲಿ ಈ ಶಸ್ತ್ರಾಸ್ತ್ರಗಳು ಮತ್ತು ನಾಲಿಗೆಗಳು ಯಶಸ್ವಿಯಾಗಿವೆ, ಕುರುಬನಿಗೆ ಸಂಭವಿಸಿದಂತೆ ಕುರಿಗಳಿಗೂ ಕೂಡ ಹಾನಿಯನ್ನುಂಟು ಮಾಡಿವೆ; ಮತ್ತು ದೇವರು ಇದನ್ನು ಅನುಮತಿಸಿದರು–ಆತನು ಆಯುಧವನ್ನು ತಡೆಯಲಿಲ್ಲ ಅಥವಾ ನಾಲಿಗೆಯನ್ನು ಸುಮ್ಮನಾಗಿಸಲಿಲ್ಲ; ಆದರೂ ಇದಕ್ಕೆ ತದ್ವಿರುದ್ಧವಾದ ಭರವಸೆಯನ್ನು ಈ ಮೇಲಿನ ವಚನದಂತೆ ಕೊಡುತ್ತಾರೆ. ಸರಿಯಾದ ವಿವರಣೆ ಏನು?... ವಿವರಣೆಯೇನೆಂದರೆ 'ಶರೀರಧೀನರಲ್ಲ, ಆತ್ಮನಿಗೆ ಅಧೀನರಾಗಿದ್ದೀರಿ' ಎಂಬುವದಾಗಿದೆ. ಅವನು ಕ್ರಿಸ್ತನಲ್ಲಿ ನೂತನ ಸೃಷ್ಟಿಯಾಗಿದ್ದಾನೆ. (ರೊಮಾಪುರ. 8:9; 2 ಕೊರಿಂಥ. 5:17) ಆಯುಧಗಳು ಮತ್ತು ನಾಲಿಗೆಗಳು ಎಲ್ಲಾ ವಿಧಗಳಲ್ಲಿಯೂ ನಾವು ಈಗಾಗಲೇ ಮರಣಕ್ಕೆ ಅರ್ಪಿಸಿರುವ ಮಾಂಸಕ್ಕೂ, ಹಳೆಯ ಸೃಷ್ಟಿಗೆ ಮಾತ್ರವೇ ಹಾನಿಯನ್ನುಂಟುಮಾಡುತ್ತದೆ." ಆರ್. 3050, ಸಿ.2, ಪಿ.8,9.

**"ಅದೇ ಪ್ರಕಾರ ನನ್ನ ಬಾಯಿಂದ ಹೊರಟ ಮಾತು ನನ್ನ ಇಷ್ಟಾರ್ಥವನ್ನು ನೆರವೇರಿಸಿ ನಾನು ಉದ್ದೇಶಿಸಿದ್ದನ್ನು ಕೈಗೂಡಿಸಿದ ಹೊರತು ನನ್ನ ಕಡೆಗೆ ವ್ಯರ್ಥವಾಗಿ ಹಿಂದಿರುಗುವುದಿಲ್ಲ." ಯೆಶಾಯ 55:11.**

ಯೆಹೋವ ದೇವರು ಕಳೆದ ಆರು ಸಾವಿರ ವರ್ಷಗಳಿಂದ ಜಗತ್ತನ್ನು ಮತಾಂತರಿಸಲು ಪ್ರಯತ್ನಿಸುತ್ತಿದ್ದಾರೆ ಮತ್ತು ಎಲ್ಲಾ ಸಮಯಗಳಲ್ಲಿ ಸೋತುಹೋಗುತ್ತಿದ್ದಾರೆ ಎಂದು ಅಧಿಕಾರಯುತವಾಗಿ ಯಾರೆಲ್ಲರೂ ಹೇಳುತ್ತಿದ್ದಾರೋ ಅಂಥವರು ದೇವರ ಎಲ್ಲಾ ಉದ್ದೇಶಗಳು ಕೈಗೂಡುವವು ಮತ್ತು ಆತನ ಬಾಯಿಂದ ಹೊರಟ ಮಾತು ಆತನ ಇಷ್ಟಾರ್ಥವನ್ನು ನೆರವೇರಿಸದೆ ಹಿಂದಿರುಗದು, ಆದರೆ ಅವುಗಳು ಕಳುಹಿಸಲ್ಪಟ್ಟ ಕಡೆಗಳಲ್ಲಿ ಕೈಗೂಡುವವು ಎಂಬ ಸತ್ಯವೇದದ ಭರವಸೆಗಳೊಂದಿಗೆ ಸರಿಹೊಂದಿಸಲು ಕಷ್ಟಪಡುತ್ತಾರೆ. ಪ್ರಸ್ತುತ ಸಂಗತಿಯೇನೆಂದರೆ, ಜಗತ್ತು ಇನ್ನೂ ಪರಿವರ್ತನೆಯನ್ನು ಹೊಂದಿಲ್ಲ ಹಾಗು ದೇವರ ಜ್ಞಾನವು ಜಗತ್ತಿನೆಲ್ಲೆಡೆ ಇನ್ನೂ ತುಂಬಿಲ್ಲ ಎಂಬುವುದೇ ದೇವರ ವಾಕ್ಯ ಇನ್ನೂ ಆ ಕಾರ್ಯಕ್ಕಾಗಿ ಕಳುಹಿಸಲ್ಪಟ್ಟಿಲ್ಲ ಎಂಬುದಕ್ಕೆ ಆಧಾರವಾಗಿದೆ." ಎ.95, ಪ್ಯಾರ.2.

**"ಯೆಹೋವನು ನಿಮ್ಮನ್ನು ನಿತ್ಯವೂ ನಡೆಸುವನು..." ಯೆಶಾಯ 58:11.**

"ಒಂದು ವೇಳೆ ತಂದೆಯ ಮುಂಜಾಗ್ರತೆಯ ಅನುಗ್ರಹದಲ್ಲಿ ನಮ್ಮ ಭೂಸಂಬಂಧ ಜೀವಿತದ ಕಾರ್ಯಗಳು ಕೆಲವೊಂದು ಸಂದರ್ಭಗಳಲ್ಲಿ ಈ ಕಡೆ ಅಥವಾ ಆ ಕಡೆಯ ದಿಕ್ಕಿಗೆ ತಿರುಗಿದಾಗ ನಮ್ಮ ಹೃದಯಗಳು ದೇವರ ಮಾರ್ಗದರ್ಶನಕ್ಕಾಗಿ ಎದುರು ನೋಡಿಕೊಂಡು ಅಲ್ಲಿಂದ ಪಾಠಗಳನ್ನು ಸೆಳೆದುಕೊಳ್ಳಬೇಕು ಹಾಗು ಅವುಗಳಿಂದ ದೇವರನ್ನು ಮಹಿಮೆಪಡಿಸಬೇಕು. ಕ್ರೈಸ್ತನು ಯಾವ ಅನುಭವಗಳನ್ನೂ ಅದೃಷ್ಟ ಅಥವಾ ದುರದೃಷ್ಟ ಎಂಬ ದೃಷ್ಟಿಕೋನದಲ್ಲಿ ಪರಿಗಣಿಸಬಾರದು, ಹಾಗೆಯೇ ಆತನು ದೇವರಿಗೆ ಹತ್ತಿರವಾಗಿ ಜೀವಿಸುತ್ತಿದ್ದು, ಆತನಿಂದ ಅಪ್ಪಣೆಯನ್ನು ಹೊಂದಿಕೊಂಡು ಮತ್ತು ಆತನಿಂದಲೇ ಮಾರ್ಗದರ್ಶನವನ್ನು ಹೊಂದುತ್ತಿದ್ದಲ್ಲಿ ಎಲ್ಲಾ ವಿಷಯಗಳೂ ಆತನ ನಿರ್ದೇಶನದಂತೆ ನೆರವೇರುತ್ತವೆ ಎಂಬುದನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕು." ಆರ್. 4628, ಸಿ.2, ಪಿ.3.

**"ಆಗ ಅನ್ಯಜನಾಂಗಗಳು ನಿನ್ನ ನೀತಿಯನ್ನು, ಅರಸರೆಲ್ಲರು ನಿನ್ನ ಮಹಿಮೆಯನ್ನು ನೋಡುವರು; ಯೆಹೋವನ ಬಾಯಿ ಉಚ್ಚರಿಸುವ ಹೊಸ ಹೆಸರಿನಿಂದ ನೀನು ಕರೆಯಲ್ಪಡುವಿ. ಯೆಹೋವನ ಕೈಯಲ್ಲಿ ಮಹಿಮೆಯ ಕಿರೀಟವಾಗಿಯೂ ನಿನ್ನ ದೇವರ ಅಂಗೈಯಲ್ಲಿ ರಾಜತ್ವದ ಕಿರೀಟವಾಗಿಯೂ ಇರುವಿ." ಯೆಶಾಯ 62:2,3.**

"ಆದುದರಿಂದ ದೇವರ ಕೈಯಲ್ಲಿರುವ ಸಭೆಯು ದೈವೀಕ ಶಕ್ತಿಯ ಹಸ್ತದಲ್ಲಿರುವ ಸಭೆಯಾಗಿದೆ. ಈ ಬಲವು ಸಭೆಯನ್ನು ಉಪಯೋಗಿಸುತ್ತದೆ ಮತ್ತು ಆಕೆಯು ಮಹಿಮೆಯ ಕಿರೀಟವು ಮತ್ತು ಸುಂದರ ವಸ್ತುವೂ ಆಗಿದೆ, ದೇವರ ಕೈಕೆಲಸದಿಂದ ಕೂಡಿದ ಮಹಿಮೆಯನ್ನು ಶಾಶ್ವತವಾಗಿ ಪ್ರತಿಬಿಂಬಿಸುತ್ತದೆ. ಎಂಥಹಾ ಮಹಿಮೆಯುಳ್ಳದ್ದು ಇದು! ಎಷ್ಟು ಸುಂದರವಾದದ್ದು! ದೇವರು ಈ ಅಮೂಲ್ಯವಾದ ಹರಳುಗಳನ್ನು ಜೋಡಿಸುತ್ತಿದ್ದಾರೆ. ಆ ಕಿರೀಟದಲ್ಲಿ ಇವು ಒಂದರ ಮೇಲೆ ಒಂದರಂತೆ ಶೋಭಿಸುವವು. ಮತ್ತು ಕರ್ತನಾದ ಯೇಸು ರಾಜಶಿರೋವೇಷ್ಟನವಾಗಿ ಅದರ ಅತ್ಯುನ್ನತ ಸ್ಥಾನದಲ್ಲಿರುವನು. ಅಂದರೆ ದೇವರು ಕರ್ತನಾದ ಕ್ರಿಸ್ತನಿಗೆ ಮಹಿಮೆಯನ್ನು ಕೊಡದೆ ಸಭೆಗೆ ಯಾವ ಮಹಿಮೆಯನ್ನೂ ಕೊಡುವುದಿಲ್ಲ. ಸಭೆಯು ದೇವರ ಕೈಕೆಲಸವಾಗಿ ಸುಂದರತೆಯ ಚಿಹ್ನೆಯಾಗಿಯೂ ಎಂದೆಂದಿಗೂ ಸಂತೋಷದ ಬುಗ್ಗೆಯಾಗುವಂತೆ ಜನರ ಮುಂದೆ ಪ್ರದರ್ಶಿಸಲ್ಪಡುವುದು." ಆರ್. 4914, ಸಿ.1, ಪಿ.2.

**"ಅವರು ಶ್ರಮೆಪಡುತ್ತಿರುವಾಗೆಲ್ಲಾ ಆತನೂ ಶ್ರಮೆಪಟ್ಟನು..." ಯೆಶಾಯ 63:9.**

"ಕರ್ತನ ಪ್ರತಿಷ್ಠಿಸಲ್ಪಟ್ಟ ಭಕ್ತರೆಲ್ಲರೂ ಸಂಪೂರ್ಣವಾಗಿ ಆತನಿಗೇ ಸೇರಲ್ಪಟ್ಟವರು, ಹಾಗೆಯೇ ಅವರು ಶ್ರಮೆಪಡುತ್ತಿರುವಾಗಲೆಲ್ಲಾ ಆತನೂ ಶ್ರಮೆಪಟ್ಟನು ಎಂಬುದೆಡೆಗೆ ವಚನಗಳು ಸನ್ನೆಮಾಡಿ ತೋರಿಸುತ್ತವೆ. ತಾರ್ಸದ ಸೌಲನು ಆದಿಸಭೆಯನ್ನು ಹಿಂಸಿಸುತ್ತಿರುವಾಗ ನಮ್ಮ

ಕರ್ತನು ಅವನನ್ನು ದಮಸ್ಕದ ಹಾದಿಯಲ್ಲಿ ಕರೆದು ಸೌಲನೇ, ಸೌಲನೇ, ನನ್ನನ್ನು ಯಾಕೆ ಹಿಂಸೆಪಡಿಸುತ್ತೀ? ಎಂದು ಕೇಳಿದರು ಮತ್ತು ಅವನು ಕರ್ತನೇ ನೀನ್ಯಾರು ಎಂದು ಕೇಳಿದ್ದಕ್ಕೆ, ಕರ್ತನು ನೀನು ಹಿಂಸೆಪಡಿಸುವ ಯೇಸುವೇ ನಾನು ಎಂದು ಹೇಳಿದರು. ಸೌಲನು ಮಹಿಮಾನ್ವಿತ ರಕ್ಷಕನನ್ನು ನೇರವಾಗಿ ಹಿಂಸಿಸುತ್ತಿರಲಿಲ್ಲ, ಆದರೆ ಆತನ ಶರೀರವನ್ನು ಹಿಂಸಿಸುತ್ತಿದ್ದನು." ಆರ್. 5173, ಸಿ.1, ಪಿ.7.

## "ಆಗ ಅವರು ಬೇಡುವುದರೊಳಗೆ ಸದುತ್ತರವನ್ನು ದಯಪಾಲಿಸುವೆನು; ಅವರು ಇನ್ನೂ ಮಾತಾಡುತ್ತಿರುವಾಗಲೇ ನಾನು ಕೇಳಿಸಿಕೊಳ್ಳುವೆನು." ಯೆಶಾಯ 65:24.

"ಕೇಳುವವನು ಮೊದಲು ತನ್ನನ್ನೇ ಶುದ್ಧೀಕರಿಸಿಕೊಂಡು ತನ್ನ ಹೃದಯದ ಕಪಟವನ್ನು ತೆಗೆದು ಹಾಕದೆ ಇರುವುದರಿಂದ ಎಷ್ಟೊಂದು ಪ್ರಾರ್ಥನೆಗಳು ಕೇಳಲ್ಪಟ್ಟಿಲ್ಲ ಅಥವಾ ತಡೆಯಾಗಿ ಅಡಚಣೆಗೆ ಒಳಪಟ್ಟಿವೆ? 'ನೀವು ಬೇಡಿದರೂ ಬೇಡಿದ್ದನ್ನು ನಿಮ್ಮ ಭೋಗಗಳಿಗಾಗಿ ಉಪಯೋಗಿಸಬೇಕೆಂದು ದುರಾಭಿಪ್ರಾಯಪಟ್ಟು ಬೇಡಿಕೊಳ್ಳುವುದರಿಂದ ನಿಮಗೆ ದೊರೆಯುವುದಿಲ್ಲ.' ಅಂದರೆ ನೀವು ಸ್ವಾರ್ಥಕ್ಕಾಗಿ ಕೇಳುತ್ತೀರಿ ಮತ್ತು ದೇವರ ಚಿತ್ತಕ್ಕೆ ಅನುಸಾರವಾಗಿ ಕೇಳುವುದಿಲ್ಲ ಎಂದರ್ಥ. ಆದರೆ ಶಿಕ್ಷಿಸಿ ಸುಧಾರಿಸಲ್ಪಟ್ಟವನಿಗೆ ಮತ್ತು ಪವಿತ್ರೀಕರಿಸಲ್ಪಟ್ಟವನಿಗೆ ತಾನು ಬೇಡುವುದರೊಳಗೆ (ಹೃದಯದ ಅಭಿಲಾಷೆಯನ್ನು ಓದಿ ಅದು ಬಾಯಿಯ ಮಾತುಗಳ ರೂಪದಲ್ಲಿ ಅರಿಕೆ ಮಾಡುವ ಮೊದಲೇ) ಸದುತ್ತರವನ್ನು ದಯಪಾಲಿಸುವೆನು. ಕೇಳಿದ ಪ್ರಾರ್ಥನೆಗೆ ಉತ್ತರವನ್ನು ಬೇಗನೆ ಅಥವಾ ನಿಧಾನವಾಗಿ ಅವು ಸಿಗುವ ಹಾಗೆ ಘಟನೆಗಳನ್ನು ಕ್ರಮಪಡಿಸಲು ಆರಂಭಿಸಿ ಮತ್ತು ಅವರು ಹೇಳುತ್ತಿರುವಾಗಲೇ ಕೇಳಿಸಿಕೊಳ್ಳುತ್ತೇನೆ ಎಂದು ಸೂಚಿಸುತ್ತದೆ. ಈ ಪ್ರವಾದನೆಯು ಸಾವಿರ ವರ್ಷದ ಯುಗಕ್ಕೆ ಅನುಗುಣವಾಗಿದ್ದರೂ ನಂಬಿಗಸ್ಥರಾದ ದೇವಜನರಿಗೆ ಈ ಯುಗದಲ್ಲೂ ಅದು ನಿಜವಾಗಿಯೇ ಇದೆ. ಕಡೆಯ ಕಾಲದಲ್ಲಿ ತಾಳ್ಮೆಯುಳ್ಳ ಮಕ್ಕಳಿಗೂ ಆತನ ಪ್ರೀತಿಯ ದಯೆಯನ್ನು ತೋರಿಸುವ ದೇವರನ್ನು ಕೊಂಡಾಡಿರಿ." ಆರ್. 1866, ಸಿ.1, ಪಿ.2.

## "ತಾಯಿ ಮಗನನ್ನು ಸಂತೈಸುವ ಪ್ರಕಾರ ನಾನು ನಿಮ್ಮನ್ನು ಸಂತೈಸುವೆನು." ಯೆಶಾಯ 66:13.

"ದೇವರ ಪ್ರಜೆಗಳು ಸತ್ಯವನ್ನು ತಬ್ಬಿಕೊಂಡಿರುವುದರಿಂದ ಎಲ್ಲಾ ಕಡೆಗಳಿಂದಲೂ ಕೆಟ್ಟವನಿಂದ ಮತ್ತು ಅವನ ಸೇವಕರಿಂದ ಆಕ್ರಮಣಗಳನ್ನೂ, ವಿರೋಧಗಳನ್ನು ಅವರಾಗಿಯೇ ಕಂಡುಕೊಳ್ಳಬಹುದು ಹಾಗು ಒಂದು ವೇಳೆ ವಾಕ್ಯಗಳ ಮೂಲಕ ಜಗತ್ತು ಕೊಡದ ತೆಗೆದುಕೊಳ್ಳಲಾಗದ ಸಂತೋಷ ಮತ್ತು ಸಮಾಧಾನದ ಭರವಸೆ ಮತ್ತು ಆದರಣೆಗಳು ಇಲ್ಲದಿದ್ದಲ್ಲಿ ಅವರದು ಒಂದು ನಿರಾಶಭರಿತ ಜೀವಿತವಾಗಿರುತ್ತಿತ್ತು. ಆದರೆ ದೇವರು ಅವರಿಗೆ ಏರ್ಪಡಿಸಿರುವ ನಿಯಮಗಳಲ್ಲಿ, ಲೌಕಿಕ ಜೀವಿತದಲ್ಲಿ ನೀತಿಯ ನಿಮಿತ್ತ ಶ್ರಮೆಯನ್ನನುಭವಿಸುತ್ತಿರುವಾಗ ಉಪದ್ರವಗಳಲ್ಲಿಯೂ ಸಂತೋಷಪಡಬಹುದು ಮತ್ತು

ಎಲ್ಲಾ ವಿಷಯಗಳಲ್ಲಿಯೂ ಕೃತಜ್ಞತೆಯನ್ನು ಹೇಳಲು ಇದೊಂದು ಭಾಗ್ಯವೇ ಸರಿ. ಉಪದ್ರವಗಳಲ್ಲಿ ಸಂತೋಷಪಡುವ ಈ ರಹಸ್ಯದ ಗುಟ್ಟೇನು? ಎಲ್ಲಿಂದ ಇಷ್ಟೊಂದು ಅತ್ಯುನ್ನತ ಆದರಣೆ ಬರುತ್ತದೆ? ಪವಿತ್ರಾತ್ಮನ ತೇಜೋಮಯತೆಯಿಂದ ಕೂಡಿದ ವಚನಗಳ ಮುಖಾಂತರವೇ ಬರುವ ಆದರಣೆಯೇ ಎಂಬುದಾಗಿ ನಾವು ಉತ್ತರ ಕೊಡಬಹುದಾಗಿದೆ." ಆರ್. 3436, ಸಿ.1, ಪಿ.3,4.

## "ನನ್ನನ್ನು ಕೇಳಿಕೋ, ನಾನು ನಿನಗೆ ಸದುತ್ತರವನ್ನು ದಯಪಾಲಿಸಿ ನಿನಗೆ ತಿಳಿಯದ ಮಹತ್ತಾದ ಗೂಢಾರ್ಥಗಳನ್ನು ಗೋಚರಪಡಿಸುವೆನು." ಯೆರೆಮೀಯ 33:3

"ಹಿಂದೆ ಎಷ್ಟೋ ಪ್ರವಾದಿಗಳು ಮತ್ತು ನೀತಿಯುತ ಭಕ್ತರು ನೋಡಲು ಹೊಂದದೆ ಇರುವ (ಭಾಗ್ಯವನ್ನು) ದೇವರ ರಾಜ್ಯದ ಗುಟ್ಟುಗಳನ್ನು ತಿಳಿಯುವ ವರವು ನಮಗೆ ಕೊಡಲ್ಪಟ್ಟಿದೆ. ಪ್ರಸ್ತುತ ಸತ್ಯದ ಬೆಳಕಿಗಾಗಿ ದೇವರಿಗೆ ಸ್ತೋತ್ರ! ಈಗ ನಾವು ದೇವರ ಯೋಜನೆಯನ್ನು ನೋಡಬಹುದು. ಈ ಯೋಜನೆಯು ಹಿಂದಿನ ಎಲ್ಲಾ ಐತಿಹಾಸಿಕ ವಿವರಣೆಗಳನ್ನು, ಮುಂದಿನ ಪ್ರಕಟಣೆಗಳನ್ನೂ ಒಳಗೊಂಡಿದೆ. ಇದೊಂದು ಸಂಪೂರ್ಣವಾದ ಯೋಜನೆಯಾಗಿದೆ, ಎಲ್ಲೂ ಕೊರತೆಯಿಲ್ಲದೆ ಹಾಗು ಯಾವ ಭಾಗದಲ್ಲೂ ಕೀಲು ತಪ್ಪದೆ ದೈವೀಕ, ನೀತಿ, ಜ್ಞಾನ, ಬಲ ಮತ್ತು ಪ್ರೀತಿಯ ಕಟ್ಟುನಿಟ್ಟಿಗೆ ಅನುಸಾರವಾದ ಮತ್ತು ಪ್ರತಿಯೊಂದು ಮೂಲಪಾಠವನ್ನು ಹೊಂದಿರುವ ದೈವೀಕ ವಾಕ್ಯದ ಯೋಜನೆಯಾಗಿದೆ. ಮತ್ತು ಇದರ ತುಲನೆಯಲ್ಲಿ ಬೇರೆಲ್ಲಾ ವಿಚಾರಣೆಗಳು, ಯೋಜನೆಗಳು ದೋಷವುಳ್ಳವುಗಳೂ ಮತ್ತು ಸ್ಪಷ್ಟವಾಗಿ ತಪ್ಪಾದವುಗಳೂ ಆಗಿದ್ದು, ದೇವರ ಸಾಮರಸ್ಯದ ಲಕ್ಷಣಗಳಿಂದಲೂ ಮತ್ತು ದೈವೀಕ ವಾಕ್ಯಗಳಿಂದಲೂ ಹೊರತಾಗಿವೆ ಎಂದು ಸಾಬೀತಾಗುತ್ತದೆ. ಯಾರೆಲ್ಲರೂ ದೇವರ ಯುಗಯುಗಾಂತರ ಯೋಜನೆಯ ತಿಳುವಳಿಕೆಗೆ ಬಂದಿದ್ದಾರೋ ಅವರು ಈ ಯೋಜನೆಯನ್ನು ದೈವೀಕವಾದದ್ದು ಮತ್ತು ಮನುಷ್ಯನ ಮೂಲದಿಂದಲ್ಲ ಎಂಬುದನ್ನು ಅರ್ಥೈಸಿಕೊಂಡಿದ್ದಾರೆ." ಆರ್.1867, ಸಿ.1, ಪಿ.5–6.

## "...ಆತನ ಕೃಪಾವರಗಳು ನಿಂತುಹೋಗವು, ದಿನದಿನವು ಹೊಸಹೊಸದಾಗಿ ಒದಗುತ್ತವೆ; ನಿನ್ನ ಸತ್ಯ ಸಂಧತೆಯು ದೊಡ್ಡದು." ಪ್ರಲಾಪ. 3:22,23.

"ನಾವು ದೇವರನ್ನು ಅರಿತುಕೊಂಡು ಆತನ ವಾಕ್ಯದಲ್ಲಿ ಭರವಸೆಯಿಂದಿದ್ದು, ಅದರಲ್ಲಿ ನಂಬಿಗಸ್ತತೆಯಿಂದಿರಲು ಕಲಿತುಕೊಂಡಿದ್ದೇವೆ. ಆತನ ದಯಾಭರಿತ ವಾಗ್ದಾನಗಳನ್ನು ಅನೇಕ ಒತ್ತಡದ ಮತ್ತು ಸಂಕಷ್ಟದ ಸಂದರ್ಭಗಳಲ್ಲಿ ಸಾಬೀತುಪಡಿಸಿದ್ದೇವೆ. ಮತ್ತು ಆತನು ನಮ್ಮನ್ನು ಅಪಜಯಪಡಿಸುವುದಿಲ್ಲ ಎಂಬುದನ್ನು ಗೊತ್ತುಮಾಡಿಕೊಂಡಿದ್ದೇವೆ... ನಮ್ಮ ಆತ್ಮಗಳಿಗೆ ಲಂಗರಾಗಿರುವ ಈ ನಿರೀಕ್ಷೆಯನ್ನು ನಮ್ಮಿಂದ ಹೋಗಗೊಟ್ಟರೆ ನಾವು ತೀರವಿಲ್ಲದೆ ಸಾಗರದಲ್ಲಿ ಗೊತ್ತುಗುರಿಯಿಲ್ಲದೆ ಇರುತ್ತೇವೆ. ಹಾಗೆಯೇ ಅವುಗಳ ಪ್ರಚಂಡ ಅಲೆಗಳು ನಮ್ಮನ್ನು ನಿತ್ಯ ಮರಣಕ್ಕೆ ಜಾಡಿಸಿ ಬಿಡುತ್ತವೆ. ಮಹಾಉಪದ್ರವ ಕಾಲವು ಇದೀಗಲೇ ಇಡೀ

ಜಗತ್ತಿನ ಮೇಲೆ ಎರಗಲಿದೆ. ಮತ್ತು ಯಾವ ದೇವಜನರ ನಂಬಿಕೆ ಮತ್ತು ನಿರೀಕ್ಷೆಯು ದೃಢವಾಗಿ ಯುಗಗಳ ಬಂಡೆಯ ಮೇಲೆ ಲಂಗರು ಹಾಕಿಲ್ಲವೋ, ಯಾರು ಅವರ ವಾಗ್ದಾನಗಳನ್ನು ನಂಬುವಲ್ಲಿ ಭಯಪಡುತ್ತಾರೋ ಅವರು ಈ ಅಲೆಯಲ್ಲಿ ಕೊಚ್ಚಿಕೊಂಡು ಹೋಗುತ್ತಾರೆ. ಇದು ನಮ್ಮ ಅನುಭವವಾಗಬೇಕೇ? ದೇವರ ಕೆಲವು ಮಕ್ಕಳಿಗೆ ತಮ್ಮ ಅನುಭವದ ಭಾಗವು ಈ ಮಹಾಉಪದ್ರವ ಕಾಲದಲ್ಲಿರುವುದು; ಆದರೂ ಯಾರೊಬ್ಬರೂ ನಂಬಿಗಸ್ತರೂ, ವಿಧೇಯರೂ ಆಗಿರುವವರು ಹೀಗೆ ಕಷ್ಟಪಡುವುದಿಲ್ಲ. ಇವರು ಪರಿಪೂರ್ಣ ಭದ್ರತೆಯಲ್ಲಿ ಜೀವಿತದ ಕಡೆಯ ಗಳಿಗೆಯವರೆಗೆ ಕಾಪಾಡಲ್ಪಡುವರು ಮತ್ತು ನಾವು ನಂಬುವಂತೆ (ತೆರೆಯ ಒಳಗೆ), ಭಯಂಕರ ಬಿರುಗಾಳಿ ಅದರ ಕೋಪೋದ್ರೇಕದಿಂದ ಕಳಚಿ ಹೊರಬೀಳುವ ಮೊದಲು ತೆರೆಯ ಒಳಗೆ ಸೇರಿಸಲ್ಪಡುವರು." ಆರ್. 5499, ಸಿ.2, ಪಿ.2,3,4.

## "ಯೆಹೋವನ ರಕ್ಷಣಾಕಾರ್ಯವನ್ನು ಎದುರುನೋಡುತ್ತಾ ಶಾಂತವಾಗಿ ಕಾದುಕೊಂಡಿರುವದು ಒಳ್ಳೇದು." ಪ್ರಲಾಪ. 3:26.

"ದೇವರ ವಾಕ್ಯದ ಉತ್ಕೃಷ್ಟ ವಾಗ್ದಾನಗಳು ಯಾರೆಲ್ಲರು ಸಂಪೂರ್ಣವಾಗಿ ಆತನವರಾಗಿ ದ್ದಾರೋ ಆ ಜನರಿಗೆ ಮಾತ್ರ; ಇದು ನಂಬಿಕೆಗೆ ಒಂದು ಕಾರಣವನ್ನು ಕೊಡುತ್ತದೆ. ಅವರು ದೃಢವಾಗಿ ಇರುವುದಕ್ಕೆ ಮತ್ತು ಉತ್ತಮ ಸ್ಥೈರ್ಯವನ್ನು ಹೊಂದಿರಲು ಪೂರ್ಣಪ್ರಮಾಣದ ಅಧಿಕಾರಯುತ ಧೈರ್ಯವನ್ನು ಕೊಡುತ್ತದೆ. ದೇವರ ಮಕ್ಕಳಿಗೆ, ಇದು ಕ್ರಿಸ್ತನ ಅನುಯಾಯಿಗಳಿಗೆ ವಿಶಿಷ್ಟವಾಗಿ ಎದುರಾಗುವ ಪರೀಕ್ಷೆಗಳಲ್ಲದೆ ಲೋಕದವರಿಗೆ ಉಂಟಾಗು –ವಂತೆ ಇನ್ನೂ ಅನೇಕ ಪರೀಕ್ಷೆಗಳೂ, ಅನುಭವಗಳೂ ಎದುರಾಗುತ್ತವೆ. ಲೋಕದವರಿಗೆ ಹೇಗಾದರೂ ಇರುವ ಹಾಗೆ ಇವು ನಮಗೆ ಆಕಸ್ಮಿಕ ರೀತಿಯಲ್ಲಿ ಬರುವಂಥವುಗಳಲ್ಲ. ಆದರೆ ಕರ್ತನ ಪ್ರತ್ಯಕ್ಷ್ಯ ಮೇಲ್ವಿಚಾರಣೆಯಲ್ಲಿಯೇ ಬರುವಂಥವುಗಳಾಗಿವೆ... ಆದುದರಿಂದ ಇವರು ಉತ್ತಮ ಭರವಸೆಯನ್ನು ಹೊಂದಿ ಆತನ ಹಾದಿಯಲ್ಲಿ ಮುಂದುವರಿಯುವಾಗ ಕರ್ತನ ಮಾರ್ಗದರ್ಶನದ ಮೇರೆಗೆ ನಡೆಸಲ್ಪಟ್ಟ ಆತನ ವಚನದಿಂದ ಕಲಿಯುತ್ತಾರೆ. ಅನೇಕ ಕಷ್ಟಗಳನ್ನು ಜಯಿಸಬೇಕಾಗುತ್ತದೆ. ಮತ್ತು ಆ ಕಷ್ಟಗಳನ್ನು ಜಯಿಸಲು ಧೈರ್ಯ ಬೇಕಾಗುತ್ತದೆ. ಆದರೆ ದೇವರ ಮೇಲಿರುವ ಧೈರ್ಯದಿಂದ ಹುಟ್ಟಿದ ನಂಬಿಕೆಯು ಮತ್ತು ಆತನ ಮೀರಿದ ಶ್ರೇಷ್ಟ ಮತ್ತು ಉತ್ಕೃಷ್ಟವಾದ ವಾಗ್ದಾನಗಳು ಬಲವನ್ನು ಕೊಡುತ್ತದೆ. ಇತರರಿಗೆ ಪರಿಚಯವಿಲ್ಲದ ಬಲವನ್ನು ಅದು ಅವರಿಗೆ ನೀಡುತ್ತದೆ." ಆರ್. 5712, ಸಿ.1, ಪಿ.4,7.

## "ಯೆಹೋವನು ಒಳ್ಳೆಯವನು; ಇಕ್ಕಟ್ಟಿನ ದಿನದಲ್ಲಿ ಆಶ್ರಯದುರ್ಗವಾಗಿದ್ದಾನೆ; ತನ್ನ ಮೊರೆಹೊಕ್ಕುವವರನ್ನು ಬಲ್ಲನು." ನಹೂಮ. 1:7.

"ದೇವರ ಯೋಜನೆಯಲ್ಲಿ ಉಪದ್ರವವು ಇಡೀ ಲೋಕಕ್ಕೆ ಆಶೀರ್ವಾದವನ್ನು ಕೊಡುವಂತಹ ಒಂದು ಸಿದ್ಧತೆ ಎಂಬುದನ್ನು ಅವರು (ಸಂತರು) ಗ್ರಹಿಸುತ್ತಾರೆ. ಮತ್ತು ಅವೆಲ್ಲವುಗಳಿಂದ

ಅವರು ಪ್ರೋತ್ಸಾಹವನ್ನು ಮತ್ತು ಸಾಂತ್ವಾನವನ್ನು ಹೊಂದುತ್ತಾರೆ. ಹೀಗೆ ದೈವೀಕ ಅನುಗ್ರಹದಿಂದ ಸಾಂತ್ವಾನ ಹೊಂದಿರುವ ಮತ್ತು ಆಶೀರ್ವದಿಸಲ್ಪಟ್ಟ ಸಂತರ ಮೊದಲ ಧ್ಯೇಯವೇನೆಂದರೆ, ಎದುರಾಗುವ ಎಲ್ಲಾ ಸಂಕಟಗಳ ಮಧ್ಯೆಯೂ, ಅತೃಪ್ತಿಗಳಲ್ಲಿಯೂ ಅವರು ಆ ತೊಂದರೆಗಳಲ್ಲಿ ತಮ್ಮ ಪಾಲು ಹೊಂದಿಕೊಂಡು, ಅವುಗಳಿಂದ ಶ್ರಮಪಡುತ್ತಿರುವಾಗಲೂ ಅವರು ನಿರೀಕ್ಷೆಯುಳ್ಳವರಾಗಿದ್ದಾರೆ, ಸಂತೋಷವುಳ್ಳವರಾಗಿದ್ದಾರೆ ಮತ್ತು ದೇವರ ವಾಕ್ಯಗಳಲ್ಲಿ ಮುಂತಿಳಿಸಿರುವ ವೈಭವಪೂರಿತ ನೋಟಗಳ ಸಲುವಾಗಿ ಯಾವಾಗಲೂ ಉಲ್ಲಾಸದಿಂದ ಇರುತ್ತಾರೆ." ಎ.338, ಪಿ.2,3.

**"ಸೇನಾಧೀಶ್ವರ ಯೆಹೋವನು ಇಂತೆನ್ನುತ್ತಾನೆ–ನಾನು ಕಾರ್ಯಸಾಧಿಸುವ ದಿನದಲ್ಲಿ ಅವರು ನನಗೆ ಸ್ವಕೀಯ ಜನರಾಗಿರುವರು; ಒಬ್ಬನು ತನ್ನನ್ನು ಸೇವಿಸುವ ಸ್ವಂತ ಮಗನನ್ನು ಕರುಣಿಸುವಂತೆ ನಾನು ಅವರನ್ನು ಕರುಣಿಸುವೆನು." ಮಲಾಕಿ. 3:17.**

"ಈ ಆಭರಣಗಳಲ್ಲಿ ಮೊದಲನೆಯವರು ನಮ್ಮ ಕರ್ತನಾದ ಯೇಸುಕ್ರಿಸ್ತನು. ಆತನು (ಯೆಹೋವನು) ಬೇರೆ ಆಭರಣಗಳೂ ಆತನ ಮಗನ ಸಾದೃಶ್ಯರೂಪದಲ್ಲಿಯೇ ಕತ್ತರಿಸಲ್ಪ – ಡಬೇಕು ಮತ್ತು ಹೊಳಪು ಹೊಂದಬೇಕು ಎಂದು ವ್ಯವಸ್ಥೆಮಾಡಿದ್ದಾರೆ. ವಚನಗಳಲ್ಲಿ ಬರೆಯಲ್ಪಟ್ಟ ಪ್ರಕಾರ... ನಾವು ಆತನ ನಿರ್ಮಾಣವಾಗಿದ್ದು ಸತ್ಕಾರ್ಯಗಳನ್ನು ಮಾಡುವುದ– ಕ್ಕಾಗಿಯೇ ಕ್ರಿಸ್ತಯೇಸುವಿನಲ್ಲಿ ಸೃಷ್ಟಿಸಲ್ಪಟ್ಟೆವು. ಈ ಎಲ್ಲಾ ರತ್ನಗಳೂ ಆಭರಣಗಳನ್ನು ತಯಾರಿಸುವ ದೇವರಿಂದಲೇ ಕಂಡುಹಿಡಿಯಲ್ಪಡಬೇಕು. ಆತನಿಂದ ಕಂಡುಹಿಡಿಯಲ್ಪಟ್ಟ ನಂತರ ಅವರನ್ನು ಮಹಾನ್ ಸಾಣೆ ಹಿಡಿಯುವವನಾದ ಯೇಸುವಿನ ಕೈಗೆ ಒಪ್ಪಿಸಲಾಗುವುದು. ಆತನು ಅವರನ್ನು ಕತ್ತರಿಸಿ, ಹೊಳಪು ನೀಡಿ ಅವರು ದೇವರ ರಾಜ್ಯದಲ್ಲಿ ಆತನೊಂದಿಗೆ ಪ್ರಜ್ವಲಿಸುವ ಭವ್ಯಕಾರ್ಯಕ್ಕೆ ಸಿದ್ಧ ಮಾಡುತ್ತಾನೆ... ಅವರನ್ನು ಬಿಡುಗಡೆ ಮಾಡುವ ಅರ್ಥದಲ್ಲಿ ಈ ವರ್ಗದವರನ್ನು ಆತನು ಕಾಪಾಡಲಿಲ್ಲ. ಯಾಕೆಂದರೆ ಅವರು ಈ ರೀತಿಯಾಗಿ ಕಾಪಾಡಲ್ಪಟ್ಟಿದ್ದರೆ ಈ ಕಷ್ಟದ ಸಮಯದ ಫಲಿತಾಂಶದ ಮಹಿಮೆಯಲ್ಲಿ ಪಾಲುಗಾರರಾಗಲು ಸಾಧ್ಯವಾಗುತ್ತಿರಲಿಲ್ಲ. ಆತನು ಶಿರಸ್ಸಾದ ಯೇಸುವನ್ಉು ಸಹಾ ಉಳಿಸಲಿಲ್ಲ, ಆದರೆ ಅವರುಗಳು ಯಾವುದನ್ನೂ ಸಹಿಸಿಕೊಳ್ಳಬಹುದೋ ಅದರಿಂದಲೇ ಪ್ರಲೋಭನೆಗೊಳ್ಳಲು ಅನುಮತಿಸಿಲ್ಲ, ಅವರ ಬಗ್ಗೆ ಆತನಿಗೆ ಆಸಕ್ತಿಯಿದೆ, ಅನುಕಂಪವೂ ಇದೆ. ಹೀಗಾಗಿ ಅವರನ್ನು ಬಹಳ ಭಾರವಾದ ಶೋಧನೆಗಳಿಂದ ಕಾಪಾಡುತ್ತಾನೆ." ಆರ್. 5119, ಸಿ.1, ಪಿ.2,3,4.

# ಅತ್ಯಂತ ಶ್ರೇಷ್ಠ ಮತ್ತು ಅಮೂಲ್ಯವಾದ ವಾಗ್ದಾನಗಳು

## ಹೊಸ ಒಡಂಬಡಿಕೆ

### "ಮನುಷ್ಯನು ರೊಟ್ಟಿತಿಂದ ಮಾತ್ರದಿಂದ ಬದುಕುವದಿಲ್ಲ, ದೇವರ ಬಾಯಿಂದ ಹೊರಡುವ ಪ್ರತಿಯೊಂದು ಮಾತಿನಿಂದಲೂ ಬದುಕುವನು." ಮತ್ತಾಯ 4:4.

"ಆದರೆ ದೇವರ ಬಾಯಿಂದ ಹೊರಡುವ ಮಾತುಗಳಿಂದ ನಾವು ಜೀವಿಸಲು ಹೇಗೆ ಸಾಧ್ಯ? ಕ್ರಿಸ್ತನು ಹೇಳಿದ ಮಾತಿನ ಅರ್ಥವೇನು? ದೇವರ ಮಾತುಗಳು ಜೀವ ಕೊಡಲು ಹೇಗೆ ಸಾಧ್ಯ? ಆತನ ಮಾತಿನ ಅರ್ಥವೇನೆಂದರೆ, ನಿತ್ಯಜೀವವನ್ನು ಪಡೆಯುವುದರ ಎಲ್ಲಾ ನಿರೀಕ್ಷೆಯು ದೇವರ ಮೇಲೂ, ದೈವೀಕ ಯೋಜನೆಯ ಮೇಲೂ ಹಾಗೂ ಅದರ ವಾಗ್ದಾನಗಳ ಮೇಲೂ ಅವಲಂಬಿತವಾಗಿದೆ. ಈ ವಾಗ್ದಾನಗಳನ್ನು ನೋಡುವಾಗ ನಾವು ಸುಸ್ಪಷ್ಟವಾಗಿ ಕಾಣುವುದೇನೆಂದರೆ, ಜಗತ್ತಿಗೆ ಅಸ್ಥಿವಾರ ಹಾಕುವದಕ್ಕಿಂತ ಮೊದಲೇ ರೂಪಿಸಿದ ದೈವೀಕ ಯೋಜನೆಯ ಪ್ರಕಾರ ಆತನ ಸ್ವರೂಪದಲ್ಲಿ ಸೃಷ್ಟಿಸಲ್ಪಟ್ಟ ಎಲ್ಲಾ ಸೃಷ್ಟಿಗಳು ಆತನೊಂದಿಗೆ ವಿಶ್ವಾಸ, ಪ್ರೀತಿ ಹಾಗೂ ಸಾಮರಸ್ಯದ ವಿಧೇಯತೆಯಿಂದ ನೆಲೆಸುವುದಾದರೆ, ಅವರಿಗೆ ನಿತ್ಯಜೀವವು ದೊರಕುವುದು. ಇದೇ ಈ ವಿಷಯದ ಬಗ್ಗೆ ದೇವರ ಮಾತಾಗಿದೆ. ಅಂದರೆ, ಆ ವಿಧೇಯತೆಯು ನಿತ್ಯಜೀವದ ಸ್ಥಿತಿಯಾಗಿದೆ. ನಿಸ್ಸಂದೇಹವಾಗಿಯೂ ಇದೇ ವಿಚಾರವು ಯೇಸುಕ್ರಿಸ್ತನು ಮೇಲಿನ ವಾಕ್ಯವನ್ನು ಹೇಳುವಾಗ ಆತನ ಮನಸ್ಸಿನಲ್ಲಿತ್ತು." ಆರ್. 4896, ಸಿ.2, ಪಿ.5,6.

### "ಆತ್ಮದಲ್ಲಿ ಬಡವರಾಗಿರುವವರು ಧನ್ಯರು; ಪರಲೋಕ ರಾಜ್ಯವು ಅವರದು." ಮತ್ತಾಯ 5:3

"ಕರ್ತನ ಮೇಲೆ ಅವಲಂಬಿತರಾಗಿ, ಆತನ ಮೇಲೆ ನಂಬಿಕೆಯನ್ನಿಟ್ಟು ಬೆಳೆಯುವವರಿಗೆ ಪ್ರಸ್ತುತ ಸ್ಥಿತಿಗಳು ನಿಜವಾಗಿಯೂ ವಿಶೇಷವಾಗಿ ಉಪಯುಕ್ತವಾಗಿವೆ. ಈ ವಿಚಾರದಲ್ಲಿ ನಾವು ನೋಡುವಂತೆ, ಶ್ರೀಮಂತರು ಬಡವರ ಮೇಲೆ ಲಾಭವನ್ನು ಗಳಿಸಿಕೊಂಡಿದ್ದಾರೆ ಮತ್ತು ಅಡವಿಯ ಹೂವುಗಳಂತೆ ಇರುವ ಆ ಬಡವರ ಬಗ್ಗೆ ಕರ್ತನಾದ ಯೇಸು ಇಲ್ಲಿ ಸಂಭೋಧಿಸುತ್ತಿದ್ದಾರೆ... ಹೀಗೆ ಆತ್ಮದಲ್ಲಿ ಬಡವರಾಗಿರುವವರಿಗೆ, ತಮ್ಮ ದುರ್ಬಲತೆಯನ್ನು ಗ್ರಹಿಸಿಕೊಳ್ಳುವವರಿಗೆ ಯೇಸುಕ್ರಿಸ್ತನು ಮಾತ್ರ ಕೊಡಲು ಸಾಧ್ಯವಾದ ವಿಶ್ರಾಂತಿ ಮತ್ತು ಸಮಾಧಾನವನ್ನು ಹಂಬಲಿಸುವವರಿಗೆ, ಈ ವಿಶ್ರಾಂತಿಗೋಸ್ಕರ ಆತನಲ್ಲಿಗೆ ಬರುವವರಿಗೆ ಪ್ರಭುವಿನ ಅನುಗ್ರಹವುಳ್ಳ ವಾಗ್ದಾನಗಳನ್ನು ಹಾಗೂ ಜ್ಞಾನದ ಪಾಠಗಳನ್ನು, ಹಿತವನ್ನು ಮತ್ತು ಬೋಧನೆಯನ್ನು ಕೊಡಲಾಗುವದು." ಆರ್. 5991, ಸಿ.2, ಪಿ.3.

**"ದುಃಖಪಡುವವರು ಧನ್ಯರು; ಅವರೆಲ್ಲರು ಸಮಾಧಾನ ಹೊಂದುವರು." ಮತ್ತಾಯ 5:4.**

"ಯಾರೆಲ್ಲರು ತಮ್ಮ ಸ್ವಂತ ಲೋಕ ಹಾಗೂ ಪಾಪದ ವಿರುದ್ಧ ಜಯಹೊಂದಲು ಶ್ರದ್ಧೆಯಿಂದ ಪ್ರಯಾಸಪಡುತ್ತಾರೋ ಅಂಥವರು ಈ ಬಲಹೀನತೆಗಳಿಗಾಗಿ ದುಃಖಪಡುವಾಗ ಗಣನೀಯವಾಗಿ ಗಳಿಸುವ ಅನುಭವಗಳನ್ನು ಭದ್ರಪಡಿಸುವ ಹಾದಿಯಲ್ಲಿ ಖಂಡಿತವಾಗಿಯೂ ಬಹಳಷ್ಟು ವಿಫಲತೆಯನ್ನು ಕಾಣುತ್ತಾರೆ, ಇದು ಒಂದುವೇಳೆ ಕರ್ತನ ಕಡೆಗೆ ಅವರ ಹೃದಯಗಳು ಸರಿಯಾದ ಮನೋಪ್ರವೃತ್ತಿಯನ್ನು ಹೊಂದಿರುವುದಾದರೆ ಮಾತ್ರ ಸಾಧ್ಯವಾಗುತ್ತದೆ. ನಿಜವಾಗಿಯೂ ಅಂಥವರಿಗೆ ಅನುಗ್ರಹವುಳ್ಳ ವಾಗ್ದಾನವೇನೆಂದರೆ 'ಅವರು ಸಮಾಧಾನ ಹೊಂದುವರು' ಎಂಬುವದಾಗಿದೆ. ನಮ್ಮ ಕರ್ತನು ಅಂಥವರನ್ನು ಹೇಗೆ ಭರವಸೆಯ ಮೂಲಕ ಸಮಾಧಾನಪಡಿಸುತ್ತಾರೆಂದರೆ, ಪಾಪಕ್ಕೆ ವಿರುದ್ಧವಾಗಿ ಅವರ ಪ್ರಯಾಸ ಹಾಗೂ ಅವರ ಕಣ್ಣೀರನ್ನು ಆತನು ಪಟ್ಟಿಮಾಡುತ್ತಾನೆ ಮತ್ತು ಆತನು ಅವರನ್ನು ಈ ಪ್ರಸ್ತುತ ಅನುಭವಗಳ ಮೂಲಕ ಹಾಗೂ ಅವರ ಗುಣಲಕ್ಷಣಗಳನ್ನು ಬೆಳೆಸುವುದರ ಮೂಲಕ ರಾಜ್ಯಕ್ಕಾಗಿ ಸಿದ್ಧಗೊಳಿಸುತ್ತಿದ್ದಾನೆ. ಆರ್. 2250, ಸಿ.1, ಪಿ.4.

**"ಶಾಂತರು ಧನ್ಯರು; ಅವರು ಭೂಮಿಗೆ ಬಾಧ್ಯರಾಗುವರು." ಮತ್ತಾಯ 5:5.**

"ಸೆಂಚುರಿ ಶಬ್ಧಕೋಶವು ನಿರೂಪಿಸುವ ಪ್ರಕಾರ, ಶಾಂತತೆ ಎಂದರೆ 'ಸ್ವ–ಹತೋಟಿಯಲ್ಲಿರುವುದು ಮತ್ತು ಮೃದುಸ್ವಭಾವದವರಾಗಿರುವದು; ಸುಲಭವಾಗಿ ಕೋಪಗೊಳ್ಳದಿರುವುದು; ತೊಂದರೆಗಳಲ್ಲಿ ತಾಳ್ಮೆಯಿಂದ ಸಹಿಸಿಕೊಳ್ಳುವದು.' ವೆಬ್‌ಸ್ಟರ್ ಶಬ್ಧಕೋಶವು ಶಾಂತತೆಯ ಬಗ್ಗೆ ಹೀಗೆ ಹೇಳುತ್ತದೆ 'ದೈವೀಕ ಚಿತ್ತಕ್ಕೆ ದೀನತೆಯಿಂದ ಒಪ್ಪಿಸಿಕೊಡುವದು; ನೈತಿಕ ಹಾಗೂ ಧಾರ್ಮಿಕ ಉದ್ದೇಶಗಳಲ್ಲಿ ತಾಳ್ಮೆ ಹಾಗೂ ಮೃದು ಸ್ವಭಾವ ಎಂಬ ಅರ್ಥವಿದೆ.' ಆರ್. 3734, ಸಿ.2, ಪಿ.2.

"ಈ ಅನುಗ್ರಹಕ್ಕೆ ಪ್ರತಿಫಲವೇನೆಂದರೆ... ಇತರರಿಗೆ ಸಿಗುವಂತ ಭವಿಷ್ಯದ ಆಶೀರ್ವಾದ–ವಾಗಿದೆ; ಇವರು ದೇವರೊಂದಿಗೆ ಬಾಧ್ಯಸ್ಥರಾಗುವರು, ಯೇಸುಕ್ರಿಸ್ತನೊಂದಿಗೆ ಸಹ ಬಾಧ್ಯಸ್ಥರಾಗುವರು; ಮತ್ತು ಈ ಶ್ರೇಷ್ಟ ಬಾಧ್ಯತೆಯಲ್ಲಿ ಭೂಮಿಯೂ ಸೇರಿಕೊಂಡಿದೆ, ಹೀಗಾಗುವುದರಿಂದ ದೈವೀಕಯೋಜನೆಯ ಪ್ರಕಾರ ಈ ಆಶೀರ್ವಾದವನ್ನು ಅವರು ರಾಜ್ಯದ ಅಂತ್ಯದಲ್ಲಿ ಭೂಮಿಯ ಎಲ್ಲಾ ಜನರ ಮೇಲೆ ಸುರಿಸುವರು." ಆರ್. 2585, ಸಿ.1, ಪಿ.5.

**"ನೀತಿಗೋಸ್ಕರ ಹಸಿದು ಬಾಯಾರಿದವರು ಧನ್ಯರು; ಯಾಕಂದರೆ ಅವರು ತೃಪ್ತಿ ಹೊಂದುವರು." ಮತ್ತಾಯ 5:6.**

"ಅವರು ತೃಪ್ತಿ ಹೊಂದುವರು ಎಂದರೆ, ಕ್ರಿಸ್ತನು ನೀಡುವಂಥಹ ಆತ್ಮೀಕ ದಣಿವಾರಿಸುವಿಕೆಯನ್ನು ಹುಡುಕುವ ಹಾಗೂ ಅದನ್ನು ಉಪಯೋಗಿಸುವ ಮನಸ್ಸಿನ ಗುಣವನ್ನು ಹೊಂದಿರುವವರಿಗೆ ಆಶೀರ್ವಾದವನ್ನುಂಟುಮಾಡುವ ಭರವಸೆಯನ್ನು ಆತನು ನೀಡುತ್ತಾರೆ." ಆರ್.3735, ಸಿ.1, ಪಿ.1,2.

“ನಿನ್ನ ನಂಬಿಕೆಯಂತೆಯೇ ನಿನಗಾಗಲಿ’ ಎಂಬ ವಾಗ್ದಾನ ಇದಾಗಿದೆ. ದೇವರ ಹತ್ತಿರಕ್ಕೆ ಸಮೀಪಿಸುವ ಆಸೆಯು ನಮ್ಮ ಹೃದಯದಲ್ಲಿ ಇರಬೇಕು; ಇಲ್ಲವಾದಲ್ಲಿ ನಾವು ಮುಂದೆ ಸಾಗಲು ವಿಫಲರಾಗಿ, ಕ್ರಿಸ್ತನಲ್ಲಿರುವ ನಮ್ಮ ಭಾಗ್ಯವನ್ನು ಗಳಿಸಲು ವಿಫಲರಾಗುತ್ತೇವೆ. ಇಂಥಹ ಆಸೆಯು ನೀತಿಗೋಸ್ಕರ ನಮಗಿರುವ ಹಸಿವು ಹಾಗೂ ದಾಹವನ್ನು ವ್ಯಕ್ತಪಡಿಸುತ್ತದೆ, ಇದನ್ನೇ ಕರ್ತನು ಅವರಿಗೆ ತಾನು ಒಳ್ಳೇದನ್ನು ಮಾಡಿ ತೃಪ್ತಿಪಡಿಸಲು ನಿಶ್ಚಯಿಸುವ ಮೊದಲು ಅವರಿಂದ ಎದುರು ನೋಡುತ್ತಾರೆ.” ಆರ್. 5425, ಸಿ.1, ಪಿ.1.

### “ಕರುಣೆಯುಳ್ಳವರು ಧನ್ಯರು; ಅವರು ಕರುಣೆ ಹೊಂದುವರು.” ಮತ್ತಾಯ 5:7.

“ನೀವು ಹೃದಯಪೂರ್ವಕವಾಗಿ ಮನುಷ್ಯರ ತಪ್ಪುಗಳನ್ನು ಕ್ಷಮಿಸದೆ ಹೋದರೆ ನಿಮ್ಮ ತಂದೆಯೂ ನಿಮ್ಮ ಅಪರಾಧಗಳನ್ನು ಕ್ಷಮಿಸುವದಿಲ್ಲ ಎಂಬುವದಾಗಿ ಕರ್ತನು ಹೇಳಿದ್ದಾನೆ. ಹೀಗೆ ಆತನು ಬೋಧಿಸುವುದೇನೆಂದರೆ, ನಾವು ವ್ಯಕ್ತಪಡಿಸುವ ಕರುಣೆಯು ಔಪಚಾರಿಕತೆಗಿಂತಲೂ, ಬಾಹಿರವಾದ ಕ್ಷಮಾಪಣೆಗಿಂತಲೂ ಮೀರಿದ್ದಾಗಿರಬೇಕು. ಅಂದರೆ, ಇದು ಹೃದಯದಿಂದ ನಿಷ್ಕಪಟವಾಗಿರಬೇಕು. ಆದುದರಿಂದ ಕ್ರಿಸ್ತನ ಮೂಲಕ ನಮಗೆ ದೈವೀಕ ಕರುಣೆಯು ಅಧಿಕ ಪ್ರಮಾಣದಲ್ಲಿ ಬೇಕಾಗಿರುವುದನ್ನು ನಾವು ಗ್ರಹಿಸಿಕೊಳ್ಳುವ ಅದೇ ಪ್ರಮಾಣದಲ್ಲಿ ನಾವು ಇತರರಿಗೆ ಕರುಣೆ ತೋರಿಸಬೇಕು – ವಿಶೇಷವಾಗಿ ಸಹೋದರರಿಗೆ ತೋರಿಸಬೇಕು ಎಂಬುವದಾಗಿದೆ.” ಆರ್. 3527, ಸಿ.1, ಪಿ.5.

### “ಶುದ್ಧ ಹೃದಯವುಳ್ಳವರು ಧನ್ಯರು; ಯಾಕಂದರೆ ಅವರು ದೇವರನ್ನು ನೋಡುವರು.” ಮತ್ತಾಯ 5:8.

“ಶುದ್ಧ ಹೃದಯವು ಸಂಪೂರ್ಣವಾಗಿ ಸಮರ್ಪಿಸಿಕೊಟ್ಟ ಹೃದಯವಾಗಿದೆ, ಸಂಪೂರ್ಣ ಮನಸ್ಸನ್ನು ಕರ್ತನ ಚಿತ್ತಕ್ಕೆ ಒಪ್ಪಿಸಿರುವುದು ಆಗಿದೆ.”

“ಈ ಯೋಚನೆಯು ಎಷ್ಟು ಅಮೂಲ್ಯವಾಗಿದೆ. ಇದರಿಂದಾಗಿ ಎಲ್ಲಾ ಮನುಷ್ಯರ ಮೇಲೂ, ನಮ್ಮ ಕರ್ತನ ಮೇಲೂ ಪೂರ್ಣವಾದ ಶುದ್ಧತೆಯ ಉದ್ದೇಶ, ಪ್ರೀತಿ ಇತ್ಯಾದಿಗಳನ್ನು ಗಳಿಸಬಹುದು. ಮತ್ತು ಹೀಗೆ ನಾವು ಗ್ರಹಿಸಿಕೊಳ್ಳುವ ಹಾಗೂ ಪ್ರಾಯಶಃ ಇತರರು ನಮಗಿಂತ ಹೆಚ್ಚಾಗಿ ಗ್ರಹಿಸಿಕೊಳ್ಳುವ ನಮ್ಮ ಉದ್ದೇಶಪೂರ್ವಕವಲ್ಲದ ಬಲಹೀನತೆ ಹಾಗೂ ನ್ಯೂನ್ಯತೆಗಳನ್ನು ದೇವರು ನಮ್ಮ ಲೆಕ್ಕಕ್ಕೆ ಪರಿಗಣಿಸದೆ ತನ್ನ ಪ್ರಿಯ ಮಗನಲ್ಲಿ ನಮ್ಮನ್ನು ಅಂಗೀಕರಿಸಿಕೊಳ್ಳುತ್ತಾರೆ, ಅಂಥವರು ದೇವರನ್ನು ಕಾಣುವ ಆಲೋಚನೆಯು ಎಷ್ಟು ಆಶೀರ್ವಾದಕರವಾಗಿದೆಯಲ್ಲವೇ?, ಅಂಥವರಿಗೆ ಪ್ರಸ್ತುತದಲ್ಲಿ ದೇವರ ಗುಣಲಕ್ಷಣ ಹಾಗೂ ಯೋಚನೆಯ ಸ್ಪಷ್ಟವಾದ ನೋಟವಿರುವುದು, ಅಂಥವರು ಅತೀ ಶೀಘ್ರದಲ್ಲಿ ಪುನರುತ್ಥಾನದಲ್ಲಿ ಮಾರ್ಪಾಡಾದ ಮೇಲೆ ತಮ್ಮ ರಕ್ಷಕನ ಸ್ವಾರೂಪ್ಯದಲ್ಲಿ ಎಬ್ಬಿಸಲ್ಪಟ್ಟಾಗ ಆತನನ್ನು ಕಾಣುವರು.” ಆರ್. 3735, ಸಿ.2, ಪಿ.4.

## “ಸಮಾಧಾನ ಮಾಡುವವರು ಧನ್ಯರು; ಯಾಕಂದರೆ ಅವರು ದೇವರ ಮಕ್ಕಳೆಂದು ಕರೆಯಲ್ಪಡುವರು.” ಮತ್ತಾಯ 5:9.

“ಯಾರೆಲ್ಲರು ಸತ್ಯದ, ಪ್ರೀತಿಯ, ಒಳ್ಳೆಯ ಹಾಗೂ ಸುಂದರವಾದ ಕಾರ್ಯಗಳ ಬಗ್ಗೆ ಅಲೋಚಿಸುತ್ತಾರೋ ಅಂಥವರು ಒಬ್ಬರಿಗೊಬ್ಬರಲ್ಲಿ ಅದನ್ನೇ ಮಾತನಾಡುವರು; ಹೃದಯದಲ್ಲಿ ತುಂಬಿರುವ ಒಳ್ಳೆಯ ಕಾರ್ಯಗಳೇ ನಮ್ಮ ಬಾಯಿಯಲ್ಲಿ ಯಾವಾಗಲೂ ಬರುವುದು. ಆದುದರಿಂದ ನಮ್ಮ ಹೃದಯಗಳು ಒಳ್ಳೆಯ ಕಾರ್ಯಗಳಿಂದ ತುಂಬಿರುವುದು ಅವಶ್ಯವಾಗಿದೆ. ಅಂಥವರಿಗೆ ಅಮೂಲ್ಯವಾದ ವಾಗ್ದಾನವನ್ನು ಕೊಡಲಾಗಿದೆ, ಅವರ ಪ್ರಯತ್ನಗಳಿಗೆ ಅತೀ ಯೋಗ್ಯವಾಗಿ ‘ಅವರು ದೇವರ ಮಕ್ಕಳು ಅನ್ನಿಸಿಕೊಳ್ಳುವರು.’ ಅವರಲ್ಲಿ ದೇವರ ಆತ್ಮವಿದೆ, ಆತನ ಪ್ರೀಯ ಮಗನ ಸ್ವಾರುಪ್ಯವನ್ನು ಅವರ ಹೃದಯಗಳಲ್ಲಿ ಬರೆಯಲಾಗಿದೆ... ಅದೂ ಅಲ್ಲದೆ ಇದು ನಿರ್ದಿಷ್ಟವಾಗಿ ನಮಗೂ ಹಾಗು ಸ್ವಲ್ಪಮಟ್ಟಿಗೆ ಇತರರಿಗೂ ಇರುವ ಪರೀಕ್ಷೆಯೆಂದು ಗ್ರಹಿಸಿಕೊಳ್ಳಬೇಕು. ಯಾಕೆಂದರೆ ನಾವು ದೇವರ ಮಕ್ಕಳಾಗಿ ಬೆಳೆದಿರುವ ಅಂತಸ್ತಿಗೆ ಇದು ಸಾಕ್ಷಿಯಾಗಿರುವುದಲ್ಲದೆ, ನಮ್ಮ ಸಮಾಧಾನದ ಮನೋಭಾವ ಹಾಗೂ ಶಾಂತಿಯುತ ಪ್ರವೃತ್ತಿಗಳನ್ನು ಮತ್ತು ಸಮಾಧಾನದೆಡೆಗೆ ಕಾಪಾಡಲ್ಪಡುವಂಥಹ ಕ್ರಮವನ್ನು ಬೆನ್ನಟ್ಟುವ ನಮ್ಮ ಜಾಗರೂಕತೆಯನ್ನು ಗ್ರಹಿಸಿಕೊಳ್ಳಬಹುದು.” ಆರ್. 2588, ಸಿ.1, ಪಿ.4,5.

## “ನೀತಿಯ ನಿಮಿತ್ತವಾಗಿ ಹಿಂಸಿಸಲ್ಪಡುವವರು ಧನ್ಯರು; ಯಾಕಂದರೆ ಪರಲೋಕರಾಜ್ಯವು ಅವರದು.” ಮತ್ತಾಯ 5:10.

“ಭವಿಷ್ಯದ ಜೀವನಕ್ಕಾಗಿ ಕರ್ತನಲ್ಲಿರುವ ಹಾಗೂ ಆತನ ಅನುಗ್ರಹವುಳ್ಳ ವಾಗ್ದಾನಗಳ ಮೇಲೆ ನಮಗಿರುವ ನಂಬಿಕೆ ಹಾಗೂ ವಿಶ್ವಾಸವು ಎಷ್ಟರ ಮಟ್ಟಿಗೆ ಬಲವುಳ್ಳದ್ದಾಗಿರಬೇಕೆಂದರೆ, ಅವುಗಳು ಲೋಕದ ವಿರುದ್ಧತ್ವಕ್ಕೆ, ಸುಳ್ಳು ಸಹೋದರರ ಹಾಗೂ ಸೈತಾನನ ಕುರುಡು ಸೇವಕರ ತೂಕಕ್ಕಿಂತ ಅಧಿಕವಾದ ತೂಕವುಳ್ಳದ್ದಾಗಿರಬೇಕು. ಎಷ್ಟರ ಮಟ್ಟಿಗೆಂದರೆ ಈ ಉಪದ್ರವಗಳು ದೇವರು ನಿರ್ಮಿಸುತ್ತಿರುವಂಥಹ ಮಹಿಮೆಯುಳ್ಳ ಆಲಯಕ್ಕಾಗಿ ಬೇಕಾಗಿರುವ ಜೀವ ಕಲ್ಲುಗಳನ್ನು ಕೆತ್ತಿ, ಆಕಾರಕೊಟ್ಟು, ಹೊಳಪುಕೊಡುವುದಕ್ಕಾಗಿ ದೈವೀಕ ಅನುಗ್ರಹದಿಂದ ನೇಮಿಸಲ್ಪಟ್ಟ ಸಾಧನಗಳೆಂಬುದಾಗಿ ಗ್ರಹಿಸಿಕೊಂಡು ಉಲ್ಲಾಸಪಡಬೇಕು. ನಮ್ಮ ಶೋಧನೆಗಳನ್ನು ಈ ದೃಷ್ಟಿಕೋನದಿಂದ ನೋಡುವುದರ ಮೂಲಕ ನಾವು ನಿಜವಾಗಿಯೂ ನಮ್ಮ ಆತ್ಮವನ್ನು, ಜೀವನವನ್ನು ಅಧೀನಪಡಿಸಿಕೊಳ್ಳುವುದು ಮಾತ್ರವಲ್ಲದೆ, ಅಂಥಹ ಉಪದ್ರವಗಳ ನಡುವೆಯೂ ದೃಢತೆಯಿಂದ ನಲ್ಮೆಯ ಸಹನೆಯುಳ್ಳವರಾಗಿ ಆನಂದಿಸಬಹುದು.” ಆರ್.2791, ಸಿ.1, ಪಿ.5.

## “ನನ್ನ ನಿಮಿತ್ತವಾಗಿ ಜನರು ನಿಮ್ಮನ್ನು ದೂಷಿಸಿ ಹಿಂಸಿಸಿ ನಿಮಗೆ ವಿರೋಧವಾಗಿ ಎಲ್ಲಾ ತರದ ಕೆಟ್ಟದ್ದನ್ನು ಸುಳ್ಳಾಗಿ ಹೇಳಿದರೆ ನೀವು ಧನ್ಯರು.” ಮತ್ತಾಯ 5:11.

“‘ನೀವು ಧನ್ಯರು’ ಎಂಬುದು ಹಿಂಸೆಯು ದೇವರ ಕೃಪೆ ಎಂಬುದಾಗಿ ಸೂಚಿಸುತ್ತದೆ... ನಿಂದನೆಗೊಳಗಾಗಿದ್ದೇವೆಂದು ಅಲ್ಲದೆ, ಬದಲಾಗಿ ಕ್ರಿಸ್ತನ ನಿಮಿತ್ತವಾಗಿ ಈ ಎಲ್ಲವುಗಳನ್ನು ನಮ್ಮ ಮೇಲೆ ಸುಳ್ಳಾಗಿ ಹೊರಿಸುವುದಕ್ಕಾಗಿಯೇ ಆಗಿದೆ... ಒಂದುವೇಳೆ ಆತನಿಗೋಸ್ಕರ ಸಹಿಸುವುದಾದರೆ, ಈಗ ಪಾಡುಪಡುವ ನಾವೆಲ್ಲರೂ ನಮಗೋಸ್ಕರ ಅತ್ಯಾಂತಾಧಿಕ ಮತ್ತು ನಿರಂತರವಾಗಿರುವ ಗೌರವವುಳ್ಳ ಮಹಿಮೆಯನ್ನು ಶೇಖರಿಸಿ ಇಡುತ್ತಿದ್ದೇವೆ. ಈ ದೃಷ್ಟಿಕೋನದಿಂದ ನಾವು ನಿಜವಾಗಿಯೂ ಹಿಂಸೆಯನ್ನು ಅಪೇಕ್ಷಿಸಬೇಕು... ಒಂದುವೇಳೆ ಇದರಲ್ಲಿ ಕೊರತೆ ಇರುವಂಥದ್ದು ನಾವು ಕ್ರಿಸ್ತನ ನಿಜವಾದ ಶಿಷ್ಯರಾಗಲು ಇರುವ ಕೊರತೆಯ ಸೂಚನೆ ಎಂಬುದಾಗಿ ಗ್ರಹಿಸಿಕೊಳ್ಳಬೇಕು, ಇದು ದೇವರ ಅನುಗ್ರಹದಿಂದ ನಮ್ಮ ಪಾಲು ಆಗಿರುವುದಾದರೆ ನಾವು ಹರ್ಷಿಸುತ್ತೇವೆ.” ಆರ್. 5544, ಸಿ.1, ಪಿ.4–6.

## “ಸಂತೋಷಿಸಿರಿ, ಅತಿ ಉಲ್ಲಾಸದಿಂದಿರ್ರಿ; ಯಾಕಂದರೆ ಪರಲೋಕದಲ್ಲಿ ನಿಮ್ಮ ಪ್ರತಿಫಲವು ದೊಡ್ಡದಾಗಿದೆ; ನಿಮಗಿಂತ ಮುಂಚೆ ಇದ್ದ ಪ್ರವಾದಿಗಳನ್ನು ಅವರು ಹೀಗೆಯೇ ಹಿಂಸಿಸಿದರಲ್ಲಾ.” ಮತ್ತಾಯ 5:12.

“ಈ ಅನುಭವಗಳಿಂದ ಮನಗುಂದಿ, ಧೈರ್ಯಗೆಟ್ಟವರಾಗಿರುವ ಬದಲು ಮತ್ತು ಅವುಗಳನ್ನು ವಿಚಿತ್ರವೆಂದೆಣಿಸಿ, ದೇವರು ನಮ್ಮ ವಿರುದ್ಧವಾಗಿದ್ದಾರೆ ಎಂದು ಆಲೋಚಿಸುವ ಬದಲು ನಾವು ಅದಕ್ಕೆ ತದ್ವಿರುದ್ಧವಾಗಿ ನಿರ್ಧರಿಸಬೇಕು. ನಾವು ನಮ್ಮಷ್ಟಕ್ಕೆ ಹೇಳಿಕೊಳ್ಳಬೇಕಾಗಿರುವು–ದೇನೆಂದರೆ, ‘ಇದೇ ರೀತಿಯ ಅನುಭವವು ನಮಗಿಂತ ಮುಂಚೆ ಇದ್ದ ನಮ್ಮ ಕರ್ತನಿಗೂ ಆತನ ಜನರಿಗೂ ಇತ್ತು’... ಮನಗುಂದಿದವರಾಗಿರದೆ ಸಂತೋಷಪಡಬೇಕು, ಯಾರೊಬ್ಬನೂ ತನ್ನ ಒಳ್ಳೆಯದಕ್ಕೋಸ್ಕರ ಹಿಂಸೆಗಳಲ್ಲಿ ಸಂತೋಷಪಡಲಾಗುವುದಿಲ್ಲ, ಯಾಕೆಂದರೆ ಹಿಂಸೆಯು ಬಹಳ ಘೋರವಾಗಿರುತ್ತದೆ; ಆದರೆ ನಾವು ಸಂತೋಷಪಡಬೇಕು, ಯಾಕೆಂದರೆ ‘ಪರಲೋಕದಲ್ಲಿ ನಮ್ಮ ಪ್ರತಿಫಲವು ದೊಡ್ಡದಾಗಿದೆ.” ಆರ್.5545, ಸಿ.1, ಪಿ.5.

## “ಅಡವಿಯ ಹೂವುಗಳು ಬೆಳೆಯುವ ರೀತಿಯನ್ನು ಯೋಚಿಸಿ ತಿಳಿಯಿರಿ; ಈ ಹೊತ್ತು ಇದ್ದು ನಾಳೆ ಒಲೆಯ ಪಾಲಾಗುವ ಅಡವಿಯ ಹುಲ್ಲಿಗೆ ದೇವರು ಹೀಗೆ ಉಡಿಸಿದರೆ ಅದಕ್ಕಿಂತ ಎಷ್ಟೋ ಹೆಚ್ಚಾಗಿ ನಿಮಗೆ ಉಡಿಸಿ ತೊಡಿಸುವನಲ್ಲವೇ.” ಮತ್ತಾಯ 6:28, 30

“ಬಡತನವು ನಮ್ಮನ್ನು ಹಿಸುಕಿ, ವ್ಯಾಕುಲತೆಗೆ ಒಳಪಡಿಸುತ್ತಿದೆಯೇ? ಅದನ್ನು ಪ್ರಾರ್ಥನೆಯಲ್ಲಿ ದೇವರಲ್ಲಿಗೆ ಕೊಂಡುಹೋಗಿ ಮತ್ತು ಆನಂತರ ಕೈಯಲ್ಲಿರುವುದನ್ನು ಸಮಯೋಚಿತವಾಗಿ ಪೂರೈಸುವುದರ ಮೂಲಕ ಉಪಯೋಗಿಸಿ... ತಾಳ್ಮೆಯಿಂದಲೂ

ಭರವಸೆಯಿಂದಲೂ ಅನುಗ್ರಹದ ಸೂಚನೆಗಳಿಗೆ ನಿರೀಕ್ಷಿಸಬೇಕು, ನಮಗೆ ಕೊಟ್ಟಿರುವ ಭರವಸೆಯೇನೆಂದರೆ, ಆತನು... ಅಡವಿಯ ಹುಲ್ಲಿಗೆ ಉಡಿಸಿದರೆ ಅದಕ್ಕಿಂತ ಎಷ್ಟೋ ಹೆಚ್ಚಾಗಿ ನಿಮಗೂ ನಿಮ್ಮಲ್ಲಿರುವವರಿಗೂ ಉಡಿಸುವನು ಎಂಬುದಾಗಿದೆ." ಆರ್.1865, ಸಿ.2, ಪಿ.6.

## "ಇವೆಲ್ಲಾ ನಿಮಗೆ ಬೇಕಾಗಿದೆ ಎಂದು ಪರಲೋಕದಲ್ಲಿರುವ ನಿಮ್ಮ ತಂದೆಗೆ ತಿಳಿದಿದೆಯಷ್ಟೆ. ಹೀಗಿರುವದರಿಂದ, ನೀವು ಮೊದಲು ದೇವರ ರಾಜ್ಯಕ್ಕಾಗಿಯೂ ನೀತಿಗಾಗಿಯೂ ತವಕಪಡಿರಿ. ಇವುಗಳ ಕೂಡ ಅವೆಲ್ಲವೂ ನಿಮಗೆ ದೊರಕುವವು." ಮತ್ತಾಯ 6:32,33.

"ನಾವೆಲ್ಲರೂ ದೇವರ ರಾಜ್ಯವನ್ನು ನಮ್ಮ ಜೀವನದ ಪ್ರಧಾನ ವಿಷಯವಾಗಿಟ್ಟುಕೊಂಡು ತವಕಪಡೋಣ... ಒಂದುವೇಳೆ ದೇವರ ರಾಜ್ಯಕ್ಕಾಗಿ ತವಕಪಡುವುದು ನಮ್ಮ ಕೆಲವು ಲೌಕಿಕ ಸಂತೋಷಕ್ಕೆ ಅಡ್ಡಿಮಾಡಿದರೆ ಅದು ಒಳ್ಳೆಯದು. ಕರ್ತನು ಹೇಳಿದಂತೆ ನಮ್ಮಲ್ಲಿರುವಂಥವುಗಳೆಲ್ಲವನ್ನು ನಿರಾಕರಿಸಬೇಕು." ಆರ್.5048, ಸಿ.2, ಪಿ.5.

"ಒಂದುವೇಳೆ ದೇವರ ರಾಜ್ಯವನ್ನು ಮೊದಲಾಗಿ ಪರಿಗಣಿಸಿದರೆ, ಅವರ ಎಲ್ಲಾ ಲೌಕಿಕ ಅವಶ್ಯಕತೆಗಳನ್ನು ಪೂರೈಸಲಾಗುವದು ಎಂಬ ಭರವಸೆ ನಮಗಿದೆ." ಆರ್.5917, ಸಿ.2, ಪಿ.4.

## "ನಿಮ್ಮ ತಲೇಕೂದಲುಗಳು ಸಹ ಎಲ್ಲವೂ ಎಣಿಕೆಯಾಗಿವೆ." ಮತ್ತಾಯ 10:30

"ಓ, ನಿರಂತರ ನೆಲೆಸುವಂಥಹ ಪ್ರೀತಿಯನ್ನು ಗ್ರಹಿಸಿಕೊಳ್ಳುವುದು ಎಷ್ಟು ಮಧುರವುಳ್ಳದ್ದಾಗಿದೆ!" ಆರ್.5803, ಸಿ.1, ಮೇಲೆ.

"ಇವರ ಜೀವನದಲ್ಲಿ ಸಂಭವಿಸುವ ಯಾವುದೇ ಕಾರ್ಯಗಳು ಆಕಸ್ಮಿಕವೆಂದು ಪರಿಗಣಿಸಬಾರದು, ತಮ್ಮನ್ನೇ ಸಂಪೂರ್ಣವಾಗಿ ಕರ್ತನಿಗೆ ಪ್ರತಿಷ್ಠೆಪಡಿಸಿಕೊಂಡಿರುವುದರಿಂದ ಹಾಗೂ ಅವರು ಆತನಿಂದ ಸಂಪೂರ್ಣವಾಗಿ ಅಂಗೀಕೃತವಾಗಿರುವುದರಿಂದ, ಅವರ ಜೀವನದ ಎಲ್ಲಾ ದೊಡ್ಡ ಹಾಗೂ ಸಣ್ಣ ಕಾರ್ಯಗಳು ದೈವೀಕ ಮೇಲ್ವಿಚಾರಣೆಯ ಅಧೀನದಲ್ಲಿವೆ–ಅವುಗಳೆಂದರೆ, ಅವರ ಆರೋಗ್ಯ ಅಥವಾ ಅನಾರೋಗ್ಯ, ಅವರ ಹಕ್ಕು ಅಥವಾ ಭಾಗ್ಯಗಳು, ಅವರ ಸುಖ ಅಥವಾ ದುಃಖಗಳು." ಆರ್. 3415, ಸಿ.2, ಕೆಳಗೆ.

"ನಮ್ಮ ತಲೆಕೂದಲುಗಳನ್ನು ಸಹ ಎಣಿಸುವವರ ಗಮನಕ್ಕೆ ಯಾವ ಕಾರ್ಯವು ಅಲ್ಪವಾಗಿದೆ? ಈಗಿನ ಸಾಂಸಾರಿಕ ಅಥವಾ ವ್ಯವಹಾರಿಕ ಚಿಂತೆಗಳಲ್ಲಿ ಆತನ ಪ್ರೀತಿಯ ಕನಿಕರ ಹಾಗೂ ಸಹಾಯಗಳನ್ನು ನಮ್ಮದಾಗಿಸಿಕೊಳ್ಳಬಹುದಾಗಿದೆ."
ಆರ್.1865, ಸಿ.2, ಪಿ.4.

**"ತಂದೆಯೇ ಹೊರತು ಇನ್ನಾವನೂ ಮಗನನ್ನು ತಿಳಿದವನಲ್ಲ; ಮಗನೇ ಹೊರತು ಇನ್ನಾವನೂ ತಂದೆಯನ್ನು ತಿಳಿದವನಲ್ಲ; ಮತ್ತು ಮಗನು ತಂದೆಯನ್ನು ಯಾರಿಗೆ ಪ್ರಕಟಿಸುವದಕ್ಕೆ ಮನಸ್ಸುಳ್ಳವನಾಗಿದ್ದಾನೋ ಅವನೂ ಆತನನ್ನು ತಿಳಿದವನಾಗಿದ್ದಾನೆ." ಮತ್ತಾಯ 11:27.**

"ಒಬ್ಬ ಸರಾಸರಿ ಓದುಗಾರನಿಗೆ ಮೊದಲಿಗೆ ಈ ವಚನದ ಬಗ್ಗೆ ಸ್ವಲ್ಪವೇ ಅರ್ಥವಾಗುತ್ತದೆ. ಅನೇಕ ವರ್ಷಗಳಿಂದ ದೇವರ ಕೃಪೆಯಲ್ಲಿಯೂ ಜ್ಞಾನದಲ್ಲಿಯೂ ಪ್ರಗತಿ ಹೊಂದುತ್ತಿರುವ ಕ್ರೈಸ್ತರು ಇದನ್ನು ಇನ್ನೂ ಅಧಿಕವಾಗಿ ಪ್ರಶಂಶಿಸಬಹುದು. ಕ್ರಿಸ್ತನ ಹಾಗೂ ತಂದೆಯ ಬಗ್ಗೆ ಮೊದಲು ತನಗೆ ಸ್ವಲ್ಪ ಜ್ಞಾನವಿರುವುದನ್ನು ಗ್ರಹಿಸಿಕೊಂಡಿದ್ದರೂ.... ತಂದೆಗೂ ಹಾಗೂ ಮಗನಿಗೂ ಇರುವ ನಿಕಟ ಬಾಂಧವ್ಯವನ್ನು ಅರಿತುಕೊಳ್ಳುವುದು ಭಿನ್ನವಾದ ವಿಷಯವಾಗಿದೆ. ಅಂದರೆ, ಒಬ್ಬ ಆಪ್ತ ಸ್ನೇಹಿತನ ಮನಸ್ಸನ್ನು, ಹೃದಯವನ್ನು ಅರ್ಥಮಾಡಿಕೊಳ್ಳುವ ಹಾಗೆ ಅವರ ಮನಸ್ಸಿನ ಬಗ್ಗೆ ಚಿರಪರಿಚಿತವಾಗುವುದು, ಅಂಥಹ ಚಿರಪರಿಚಿತತೆಯನ್ನು ಪಡೆಯುವಂಥದ್ದು ಭಾಗ್ಯವೇ ಸರಿ. ಇದು ಎಲ್ಲರಲ್ಲಿಯೂ ಇರುವಂಥದ್ದಲ್ಲ; ಇದಕ್ಕಾಗಿ ಹುಡುಕುವುದು ತಟ್ಟುವುದೂ ಅವಶ್ಯವಾಗಿದೆ ಮತ್ತು ಹೀಗೆ ಈ ಹುಡುಕುವಂಥದ್ದೂ ತಟ್ಟುವಂಥದ್ದೂ ಆತನೊಂದಿಗೆ ನಿಕಟವಾದ ಅನ್ಯೋನ್ಯತೆ ಹಾಗೂ ಐಕ್ಯತೆಯನ್ನು ಹೊಂದಲು ಇರುವ ಶ್ರದ್ಧೆಯುಳ್ಳ ಆಕಾಂಕ್ಷೆಯನ್ನು ತೋರ್ಪಡಿಸುತ್ತದೆ." ಆರ್. 2624, ಸಿ.2, ಪಿ.4.

**"ಈ ಚಿಕ್ಕವರಲ್ಲಿ ಒಬ್ಬನನ್ನಾದರೂ ತಾತ್ಸಾರಮಾಡಬಾರದು ನೋಡಿರಿ; ಪರಲೋಕದಲ್ಲಿ ಅವರ ದೂತರು ಪರಲೋಕದಲ್ಲಿರುವ ನನ್ನ ತಂದೆಯ ಮುಖವನ್ನು ಯಾವಾಗಲೂ ನೋಡುತ್ತಲಿದ್ದಾರೆ ಎಂದು ನಿಮಗೆ ಹೇಳುತ್ತೇನೆ." ಮತ್ತಾಯ 18:10,11.**

"ಪ್ರತಿಷ್ಠೆಪಡಿಸಿಕೊಂಡವರ, ಆಯ್ದುಕೊಂಡವರ ಮೇಲೆ ಕಡಿಮೆಯೆಂದರೆ ಒಬ್ಬರು ಅಥವಾ ಅಧಿಕ ದೇವದೂತರು ಕಾವಲಿರುವುದನ್ನು ಕರ್ತನ ಈ ಮಾತುಗಳು ಸೂಚಿಸುತ್ತವೆ. ಆತನು ಈ ವಿಷಯವನ್ನು ವಿವರಿಸುವುದಕ್ಕಾಗಿ ಇನ್ನೂ ಭಿನ್ನವಾದ ಮಾತಿನ ಶೈಲಿಯನ್ನು ಉಪಯೋಗಿಸುತ್ತಾನೆ. ಅದೇನೆಂದರೆ ದೂತರು ನಮ್ಮ ಹಿತಾಸಕ್ತಿಗಳನ್ನು ಕಾಪಾಡುವಲ್ಲಿ ತಡಮಾಡುವುದಿಲ್ಲ, ಬೇರೆ ಯಾವುದೇ ಮುಖ್ಯವಾದ ಪರಲೋಕದ ವ್ಯವಹಾರಗಳು ಇದಕ್ಕೆ ಅವರನ್ನು ಅಡ್ಡಿಪಡಿಸುವುದಿಲ್ಲ, ಬದಲಾಗಿ ಒಬ್ಬೊಬ್ಬರಿಗೂ ದೈವೀಕ ಪ್ರಸನ್ನತೆಗೆ ನೇರ ಪ್ರವೇಶವಿರುವುದಾಗಿ ಮತ್ತು ನಮ್ಮನ್ನು ಗಮನಿಸುವುದರ ನಿಮಿತ್ತವಾಗಿ ನಮ್ಮ ಅವಶ್ಯಕತೆಗಳನ್ನು ಯೋಗ್ಯವಾಗಿ ಪರಿಗಣಿಸಲಾಗುವುದು ಎಂಬ ಭರವಸೆಯನ್ನು ಇಲ್ಲಿ ನೀಡುತ್ತಾನೆ." ಆರ್. 3441, ಸಿ.1, ಪಿ.2.

## “ನಾನು ಯುಗದ ಸಮಾಪ್ತಿಯವರೆಗೂ ಎಲ್ಲಾ ದಿವಸ ನಿಮ್ಮ ಸಂಗಡ ಇರುತ್ತೇನೆ.” ಮತ್ತಾಯ 28:20.

“ಆತನಲ್ಲಿ ನಂಬಿಗಸ್ತರಾಗಿ ನೆಲೆಸಿರುವವರು ನಿಜವಾಗಿ ಹೇಳಬಹುದೇನೆಂದರೆ, ‘ನಾನು ನನ್ನ ಪ್ರಿಯನವಳು, ನನ್ನ ಪ್ರಿಯನು ನನ್ನವನು’ ಎಂಬುವದಾಗಿದೆ, ಭವಿಷ್ಯದಲ್ಲಿ ಸಿಗಲಿರುವ ಜೀವದ ಬಗ್ಗೆ ಮಾತ್ರವಲ್ಲದೆ, ಈ ಪ್ರಸ್ತುತ ಜೀವನಕ್ಕೂ ವಾಗ್ದಾನ ಮಾಡಲಾಗಿದೆ. ಅವರು ಕರ್ತನ ಸ್ವರವನ್ನು ‘ನಾನು ಯುಗದ ಸಮಾಪ್ತಿಯವರೆಗೂ ಎಲ್ಲಾ ದಿವಸ ನಿಮ್ಮ ಸಂಗಡ ಇರುತ್ತೇನೆ’ ಎಂಬುವದಾಗಿ ಕೇಳುತ್ತಾರೆ ಮತ್ತು ಯುಗದ ಸಮಾಪ್ತಿಯಲ್ಲಿ ಆತನು ಅವರಿಗೆ ತುಂಬಾ ಹತ್ತಿರವಿರುತ್ತಾನೆ, ವಿಶೇಷವಾಗಿ ಅಮೂಲ್ಯವಾಗಿರುತ್ತಾನೆ ಹಾಗೂ ಆತನನ್ನು ಮಹಿಮೆಯಲ್ಲಿ ಆಕೆಯು ಕಾಣುವುದಕ್ಕಿಂತ ಮುಂಚೆಯೇ ತನ್ನ ನಂಬಿಗಸ್ತರಿಗೆ ತನ್ನನ್ನೇ ವಿಶಿಷ್ಟ ರೀತಿಯಲ್ಲಿ ಪ್ರಕಟಿಸಪಡಿಸುವನು. ಹೀಗಿರುವುದರಿಂದ ದೈವೀಕ ವಾಕ್ಯದ ಅತೀ ಶ್ರೇಷ್ಟ ಹಾಗೂ ಅಮೂಲ್ಯ ವಾಗ್ದಾನಗಳನ್ನು ತಮ್ಮದೇ ಎಂದು ಗ್ರಹಿಸಿಕೊಳ್ಳುವ ಹಾಗೂ ತಮಗೋಸ್ಕರವೇ ಅನ್ವಯಿಸಿಕೊಳ್ಳುವ ಭಾಗ್ಯವು ಅವರದ್ದಾಗಿರುತ್ತದೆ.” ಆರ್. 4784, ಸಿ.1, ಪಿ.3,4.

## “ಹಾಗಾದರೆ ಕೆಟ್ಟವರಾದ ನೀವು ನಿಮ್ಮ ಮಕ್ಕಳಿಗೆ ಒಳ್ಳೇ ಪದಾರ್ಥಗಳನ್ನು ಕೊಡಬಲ್ಲವರಾದರೆ ಪರಲೋಕದಲ್ಲಿರುವ ನಿಮ್ಮ ತಂದೆಯು ತನ್ನನ್ನು ಬೇಡಿಕೊಳ್ಳುವವರಿಗೆ ಎಷ್ಟೋ ಹೆಚ್ಚಾಗಿ ಪವಿತ್ರಾತ್ಮವರವನ್ನು ಕೊಡುವನಲ್ಲವೇ.” ಲೂಕ 11:13.

“ನಾವು ಅಧಿಕವಾಗಿ ಪವಿತ್ರಾತ್ಮವರವನ್ನು ಕೇಳುವ ಆಸೆಯನ್ನು ಸ್ವರ್ಗೀಯ ತಂದೆಯು ಮೆಚ್ಚುತ್ತಾರೆ–ಅಂದರೆ, ಆತನ ಯೋಚನೆಯ ಸಾಮರಸ್ಯದಲ್ಲಿ ಇರುವ ಅಧಿಕಧಿಕವಾದ ಮನೋಭಾವವು ಇದಾಗಿದೆ ಮತ್ತು ಈ ರೀತಿ ಆಶಿಸುವವರು, ಹುಡುಕುವವರು ಹಾಗೂ ಬೇಡುವವರು ಅವುಗಳನ್ನು ಹೊಂದುವರು; ಅವರಿಂದಾಗಲೀ ಅಥವಾ ಅವರ ಸುತ್ತಮುತ್ತಲಿನ ವಾತಾವರಣದಿಂದಾಗಲೀ ಅವರ ಮನಸ್ಸಿಗೆ ತಡೆಯಾಗುವಂಥಹ ಕಾರ್ಯಗಳನ್ನು ಜಯಿಸುವುದರ ಮೂಲಕ ಆತನ ಸಮೃದ್ಧವಾದ ಪ್ರೀತಿಯ ಆತ್ಮವು ನೆಲೆಸಲು ಅವರ ಜೀವನದ ಎಲ್ಲಾ ಕಾರ್ಯಗಳನ್ನು ಈ ರೀತಿಯಾಗಿ ಕ್ರಮಪಡಿಸಲು ತಂದೆಯು ಮೆಚ್ಚುತ್ತಾರೆ, ಹೀಗೆ ಅವರು ಆತ್ಮದಿಂದ ತುಂಬಿರುತ್ತಾರೆ... ಈ ಪರಿಶುದ್ಧ ಆತ್ಮವನ್ನು ಯಾರೆಲ್ಲರು ಪೂರ್ಣ ಮನಸ್ಸಿನಿಂದ ಮತ್ತು ಪ್ರಾರ್ಥನೆ ಪ್ರಯಾಸಗಳಿಂದ ಅಪೇಕ್ಷಿಸುತ್ತಾರೋ ಅವರು ಮಾತ್ರ ಹೊಂದುವರು.” ಈ. 223.

## “ಚಿಕ್ಕ ಹಿಂಡೇ, ಹೆದರಬೇಡ; ಆ ರಾಜ್ಯವನ್ನು ನಿಮಗೆ ದಯಪಾಲಿಸುವದಕ್ಕೆ ನಿಮ್ಮ ತಂದೆಯು ಸಂತೋಷವುಳ್ಳವನಾಗಿದ್ದಾನೆ.” ಲೂಕ 12:32.

“ಇಂಥಹ ಒಲವಿನ ಸೂಚನೆಯನ್ನು ಕ್ರಿಸ್ತನ ಪ್ರಿಯ ಭಾಗವಾಗಿರುವ ಮದುವಣಗಿತ್ತಿಯ ಹೊರತು ಪರಲೋಕದಲ್ಲಿರುವ ಅಥವಾ ಭೂಮಿಯಲ್ಲಿರುವ ಯಾರೂ ಹೊಂದಲಾರರು.

ಪರಲೋಕದ ಹಾಗೂ ಭೂಮಿಯಲ್ಲಿರುವ ಎಲ್ಲಾ ಕುಟುಂಬಗಳು ಆತನ ಮೂಲಕ ಆಶೀರ್ವದಿಸಲ್ಪಟ್ಟರೂ ಕೂಡ, ಆತನ ಕೆಲಸದಲ್ಲಿ ಸಹಕಾರಿಯಾಗಿರುವ ಆತನ ಪತ್ನಿಯು ಮಾತ್ರ ಆತನ ಸಂಗಾತಿ, ಆಪ್ತಮಿತ್ರೆ ಹಾಗೂ ಆತನ ಸಂಪತ್ತೂ ಆಗಿರುವಳು." ಆರ್. 5862, ಸಿ.2, ಪಿ.4.

"ಕೆಲವರು ಮಾತ್ರ ದೇವರ ಚಿತ್ತಕ್ಕೆ ತಮ್ಮನ್ನೇ ಸಂಪೂರ್ಣವಾಗಿ ಪ್ರತಿಷ್ಠೆಪಡಿಸಿಕೊಳ್ಳುವ ಹೆಜ್ಜೆ ತೆಗೆದುಕೊಂಡರೂ ಸಹ ಅದರಲ್ಲೂ ಕೆಲವರು ಮಾತ್ರ ತಮ್ಮ ಹೃದಯಗಳಲ್ಲಿ ಸತತವಾಗಿ ಕರ್ತನ ಚಿತ್ತಕ್ಕೆ ಮಾತ್ರ ಶರಣಾಗಿ ಕಾರ್ಯತಃ ಜೀವಿಸುತ್ತಾರೆ." ಆರ್.1563, ಸಿ.2, ಮೇಲೆ.

## "ಆತನೇ ನಡುಕಟ್ಟಿಕೊಂಡು ಅವರನ್ನು ಊಟಕ್ಕೆ ಕೂಡ್ರಿಸಿ ಹತ್ತಿರಕ್ಕೆ ಬಂದು ಅವರಿಗೆ ಸೇವೆ ಮಾಡುವನು ಎಂದು ನಿಮಗೆ ಸತ್ಯವಾಗಿ ಹೇಳುತ್ತೇನೆ." ಲೂಕ 12:37.

"ಯಾರೆಲ್ಲರು ನಾವು ಸುಗ್ಗಿಯ ಕಾಲದಲ್ಲಿದ್ದೇವೆ ಎಂದು ಒಪ್ಪಿಕೊಳ್ಳುತ್ತಾರೋ ಅವರೆಲ್ಲರು ಇದರಲ್ಲಿ 1874ರಿಂದ ಇದ್ದೇವೆ ಎಂಬುವದಾಗಿ ಹೇಳಬಹುದು. ಕರ್ತನು ವಾಗ್ದಾನಮಾಡಿದಂತೆ, ಆತನು ಆ ಸಮಯದಲ್ಲಿ ತನ್ನ ಜನರನ್ನು ಉದಾರವಾದ ವಿಶಿಷ್ಟ ರೀತಿಯ ಊಟಕ್ಕೆ ಕೂಡ್ರಿಸಿ, ಆತನು ಅವರ ಸೇವಕನಾಗಿ, ಅವರಿಗೆ 'ಹೊಸ ಹಾಗೂ ಹಳೆಯ ಕಾರ್ಯ'ಗಳನ್ನು ಕೊಂಡುಬರುವನು ಎಂಬುದಾಗಿಯೂ ಅಂಗೀಕಾರ ಮಾಡಿಕೊಳ್ಳಬೇಕು. ಈ ಕಾರ್ಯಗಳನ್ನು ಗ್ರಹಿಸಿಕೊಳ್ಳುವವರೆಲ್ಲರು ಆ ವಾಗ್ದಾನದ ನೆರವೇರುವಿಕೆಯ ಸಂಕೇತವಾಗಿ 'ಸತ್ಯವೇದದ ಅಧ್ಯಯನ'ಗಳನ್ನು ಗುರುತಾಗಿ ನೀಡಲಾಗಿದೆ ಎಂಬ ವಿಷಯವನ್ನು ಗ್ರಹಿಸಿಕೊಳ್ಳಬೇಕು." ಆರ್.4709, ಶಿ.2, ಪಿ.5.

## "ಅವರೆಲ್ಲರು ದೇವರಿಂದ ಶಿಕ್ಷಿತರಾಗಿರುವರು." ಯೋಹಾನ 6:45.

"ಕರ್ತನಿಂದ ಶಿಕ್ಷಿತರಾಗಿ ಮುಂದುವರೆಯಬೇಕೆಂದಿರುವವರು ಆತನ ಸ್ವರವನ್ನು ಆಲಿಸುತ್ತಾ ಮುಂದುವರಿಯಬೇಕು, ಕೇಳುವಂತಹ ಹಾಗೂ ವಿಧೇಯವಾಗಿರುವ ಹೃದಯದ ಸ್ವಭಾವದಲ್ಲಿ ಮುಂದುವರಿಯಬೇಕು. ಕೆಲವರಲ್ಲಿ ಸಹಜವಾಗಿ ಕಾಣುವ ತೊಡಕು ಏನೆಂದರೆ, ತಮ್ಮ ಸ್ವಂತ ಇಚ್ಛೆಗಳು ಸಂಪೂರ್ಣವಾಗಿ ನಾಶಹೊಂದದೇ ಇರುವುದು, ಅಂದರೆ, ಅವರ ಸಮರ್ಪಣೆಯು ಸಂಪುರ್ಣವಾಗಿದೆ ಇರುವಂಥದ್ದು; ಹೀಗಿರುವುದರಿಂದ, ಸಾಕಷ್ಟು ಪ್ರತಿಷ್ಠೆ ಮಾಡಿಸಿಕೊಂಡವರು ಕರ್ತನ ಸ್ವರಕ್ಕೆ ಅವಿಧೇಯರಾಗದಿರಲು ಬಯಸುವಾಗ, ಆತನ ಸ್ವರವು ಹೇಳಲಿಕ್ಕಿರುವ ವಿಷಯದ ಸಂಬಂಧವಾಗಿ ತಮ್ಮದೇ ಆದ ನಿಶ್ಚಯ ಕಲ್ಪನೆಗಳು ಹುಟ್ಟಿಕೊಳ್ಳುತ್ತವೆ, ಆತನ ಸಂದೇಶಕ್ಕೆ ತಮ್ಮ ಸ್ವಂತ ಇಷ್ಟಕ್ಕೆ ಒಗ್ಗುವ ಹಾಗೆ ಅರ್ಥವಿವರಣೆಯನ್ನು ಕೊಡಲು ಇಷ್ಟಪಡುತ್ತಾರೆ: ಅವರು ಹೆಚ್ಚು ಕಡಿಮೆ ತಮ್ಮ ಸ್ವಂತ ಚಿತ್ತವನ್ನು ಮಾಡಲು ಇಚ್ಛಿಸುತ್ತಾರೆ ಮತ್ತು ಕರ್ತನ ಸಂದೇಶವನ್ನು ತಮ್ಮ ಇಚ್ಛಾನುಸಾರಕ್ಕೆ ತಕ್ಕಂತೆ ದಿಕ್ಕು ಬದಲಾಯಿಸುವುದಕ್ಕಾಗಿ ಆಶಿಸುತ್ತಾರೆ. ಇದು ತುಂಬಾ ಅಪಾಯಕರವಾದ ಸ್ಥಿತಿ

ಮತ್ತು ಸಾಮಾನ್ಯವಾಗಿ ಇದು ಹೆಮ್ಮೆ ಹಾಗೂ ತಮ್ಮ ಪಂಥವನ್ನೇ ಸಾಧಿಸುವ ಗುಣದೊಂದಿಗೆ ಸಂಚರಿಸುತ್ತಾ ಅಂತಿಮವಾಗಿ ಕ್ರಿಸ್ತೀಯ ಗುರಿಯಿಂದ ದೂರಕ್ಕೆ ಸಾಗಿಸುತ್ತದೆ. ಆದುದರಿಂದ ನಾವು ಪ್ರತಿಯೊಬ್ಬರು ಕರ್ತನ ಕೃಪೆಯಿಂದ, ನಮ್ಮ ಪ್ರಾಮಾಣಿಕ ಹೃದಯದಿಂದ ದೇವರ ಮಾತುಗಳನ್ನು ಕೇಳಲು ಸತತವಾಗಿ ಬಯಸುವುದು ಮಾತ್ರವಲ್ಲದೆ ನಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ವಿಧೇಯರಾಗಿರುವ ಪ್ರತಿಜ್ಞೆಯನ್ನು ಮಾಡಿಕೊಳ್ಳೋಣ." ಆರ್. 4902, ಸಿ.2, ಪಿ.3.

**"ಆತನ ಚಿತ್ತದಂತೆ ನಡೆಯುವದಕ್ಕೆ ಯಾರಿಗೆ ಮನಸ್ಸದೆಯೋ ಅವರಿಗೆ ಈ ಬೋಧನೆಯು ದೇವರಿಂದ ಬಂದದ್ದೋ ನಾನೇ ಕಲ್ಪಿಸಿ ಹೇಳಿದ್ದೋ ಗೊತ್ತಾಗುವದು." ಯೋಹಾನ 7:17.**

"ಈ ಮಾತುಗಳು ಕ್ರಿಸ್ತನ ಸ್ವಂತ ತುಟಿಗಳಿಂದ ಹೊರಟ ಸಂದೇಶವಾಗಿದೆ. ಆತನು ತನ್ನ ಬೋಧನೆಯಲ್ಲಿರುವ ಸ್ಪಷ್ಟವಾದ ಜ್ಞಾನಕ್ಕೆ ಕೀಲಿಕೈಯನ್ನು ಕೊಡುತ್ತಾರೆ, ಅದೇನೆಂದರೆ, ವಿದ್ಯಾರ್ಥಿಯು ದೇವರಿಗೆ ಸಂಪೂರ್ಣ ಪ್ರತಿಷ್ಠಿಸಿಕೊಂಡವನಾಗಿ ಆತನ ಚಿತ್ತವನ್ನೂ ಯೋಜನೆಯನ್ನೂ ತಿಳಿದುಕೊಳ್ಳಲು ಆಕಾಂಕ್ಷೆವುಳ್ಳವನಾಗಿರಬೇಕು... ನಮ್ಮ ಹೃದಯದಲ್ಲಿ ಪ್ರತಿಷ್ಠೆಪಡಿಸಿಕೊಂಡು ಮನಸ್ಸಿನ ಆಲೋಚನೆಗಳಿಂದ ದೈವೀಕ ಪ್ರೇರಣೆಯ ದೈವೀಕ ದೃಷ್ಟಿಕೋನದಿಂದ ಸತ್ಯವನ್ನು ನೋಡಲು ಹತ್ತಿರಕ್ಕೆ ಸಾಗಬೇಕು... ಆತನ ಚಿತ್ತವನ್ನು ನೆರವೇರಿಸಲು ಇಚ್ಛಿಸಬೇಕು... ಇಂಥವರಿಗೆ ಈ ಮೇಲಿನ ವಾಗ್ದಾನವು ಅನ್ವಯಿಸುತ್ತದೆ.. .ಆದುದರಿಂದ ನಮ್ಮ ಚಿತ್ತವೇನಿದ್ದರೂ ಆತನ ಚಿತ್ತವನ್ನು ನೆರವೇರಿಸುವುದಕ್ಕಾಗಿ ನಿಶ್ಚಯಿಸಬೇಕಲ್ಲವೇ? ಹಾಗಾದರೆ ಸತ್ಯವೇದದ ಉಪದೇಶವನ್ನು ಅನುಸರಿಸುವುದರಿಂದ ನಾವು ನಿಸ್ಸಂದೇಹವಾಗಿಯೂ ಆಶೀರ್ವದಿಸಲ್ಪಟ್ಟು, ಕ್ರಿಸ್ತನ ಬೋಧನೆಯನ್ನು ಸಂಪೂರ್ಣವಾಗಿ ಅರಿತುಕೊಳ್ಳಲು, ಪ್ರಶಂಶಿಸಲು, ಅರ್ಥಮಾಡಿಕೊಳ್ಳಲು ನಮ್ಮನ್ನು ಬಲಪಡಿಸಲಾಗುತ್ತದೆ. ದೇವರ ಆಳವಾದ ವಿಷಯಗಳನ್ನು ಆತನ ಆತ್ಮದಿಂದ ಈ ತರಗತಿಗೆ ಪ್ರಕಟಪಡಿಸಲಾಗುತ್ತದೆ." ಆರ್. 5137, ಸಿ.2, ಪಿ.3,5,6.

**"ನೀವು ನನ್ನ ವಾಕ್ಯದಲ್ಲಿ ನೆಲೆಗೊಂಡಿದ್ದರೆ ನಿಜವಾಗಿಯೂ ನೀವು ನನ್ನ ಶಿಷ್ಯರಾಗುವಿರಿ. ಇದಲ್ಲದೆ ನೀವು ಸತ್ಯವನ್ನು ತಿಳಿದುಕೊಳ್ಳುವಿರಿ; ಆ ಸತ್ಯವು ನಿಮ್ಮನ್ನು ಬಿಡುಗಡೆ ಮಾಡುವದು." ಯೋಹಾನ 8:31,32.**

"ಕರ್ತನ ವಾರ್ತೆಯ ಪ್ರಕಾರ ನಡೆಯುವುದು ಎಂದರೆ, ದೈವ ಪ್ರೇರಿತ ಬರಹಗಳಿಂದ ಸ್ಥಾಪಿತವಾದ ಬೋಧನೆಯಲ್ಲಿ ಮುಂದುವರಿಯುವುದು, ಅವುಗಳ ಬಗ್ಗೆ ಅಧ್ಯಯನ ಮಾಡಿ ಧ್ಯಾನ ಮಾಡುವುದು, ಸ್ವಲ್ಪವೂ ಸಂಶಯವಿಲ್ಲದೆ ಅವುಗಳನ್ನು ನಂಬುವುದು ಹಾಗೂ ನಿಷ್ಠೆಯಿಂದ ಅವುಗಳಿಗೆ ನಮ್ಮ ಗುಣಲಕ್ಷಣಗಳನ್ನು ಅನುವರ್ತಿಸುವುದಾಗಿದೆ." ಆರ್. 3153, ಸಿ.2, ಪಿ.2.

“ಆಶೀರ್ವಾದವುಳ್ಳ ವಾಗ್ದಾನ ಇದಾಗಿದೆ!.... ಪ್ರಿಯ ಸ್ನೇಹಿತರೇ, ದೇವರಿಂದ ಈ ಕೃಪೆಯನ್ನು ಹೊಂದಿದ ಮೇಲೆ ಸುಳ್ಳು ಬೋಧನೆಗಳಿಗೆ ಗಮನಕೊಡದೆ ಇದರಲ್ಲೇ ಮುಂದುವರಿಯ – ಬೇಕಲ್ಲವೇ? ಮತ್ತು ಎಲ್ಲಾ ಪರಿಸ್ಥಿತಿಗಳಲ್ಲೂ ಇದಕ್ಕೆ ನಂಬಿಗಸ್ತರಾಗಿದ್ದು, ಎಲ್ಲಾ ಆಕ್ರಮಣಗಳಿಂದ ಇದನ್ನು ಕಾಪಾಡಿ, ಇದರ ಜೊತೆಗೆ ಬರುವ ನಿಂದನೆಯನ್ನು ನಾವು ಅನುಭವಿಸಬೇಕಲ್ಲವೇ? ನಾವು ಅದಕ್ಕೆ ನಿಷ್ಠೆಯಿಂದಲೂ ಇರುವುದರ ಮೂಲಕ ನಮ್ಮ ಪ್ರಶಂಸೆಯನ್ನು ಸಾಬೀತುಪಡಿಸೋಣ.” ಆರ್. 3154, ಸಿ.2, ಪಿ.1.

## “ಕುರಿಗಳು ಅವನ ಸ್ವರಕ್ಕೆ ಕಿವಿಗೊಡುತ್ತವೆ. ಕುರುಬನು ತನ್ನ ಸ್ವಂತ ಕುರಿಗಳನ್ನು ಹೆಸರು ಹಿಡಿದು ಕರೆದು ಹೊರಗೆ ಬಿಡುತ್ತಾನೆ.” ಯೋಹಾನ 10:3.

“ಕರ್ತನ ಮಕ್ಕಳಾದ ನಮ್ಮಲ್ಲಿ ಕೆಲವರು, ಆತನು ನಮ್ಮ ಬಗ್ಗೆ ತೆಗೆದುಕೊಳ್ಳುವ ವಿಶೇಷ ಆಸಕ್ತಿಯನ್ನು ತಿಳಿದುಕೊಳ್ಳಲು ವಿಫಲರಾಗಬಹುದು. ಬಲಿಯ ಒಡಂಬಡಿಕೆಯ ಮೂಲಕ ಪ್ರವೇಶಿಸಿರುವ ದೇವರ ಪ್ರತಿಯೊಬ್ಬ ಮಕ್ಕಳು ನಿಜವಾಗಿ ಕರ್ತನವರು ಆಗಿದ್ದಾರೆ. ಇದನ್ನು ನಾವು ಯಾವಾಗಲೂ ಜ್ಞಾಪಕದಲ್ಲಿ ಇಟ್ಟುಕೊಳ್ಳಬೇಕು.... ಕ್ರಿಸ್ತನು ತನ್ನ ಹಿಂಬಾಲಕರ ಬಗ್ಗೆ ಆತನಿಗಿರುವ ಪ್ರತ್ಯೇಕ ಹಾಗೂ ವಯುಕ್ತಿಕ ಆಸಕ್ತಿಯನ್ನು ಒತ್ತಿಹೇಳಿದ್ದಾರೆ. ಆತನೇ ಅವರ ಕರುಬನು ಎಂದು ಹೇಳುತ್ತಾ, ‘ಆತನು ತನ್ನ ಸ್ವಂತ ಕುರಿಗಳನ್ನು ಹೆಸರು ಹಿಡಿದು ಕರೆದು ಹೊರಗೆ ಬಿಡುತ್ತಾನೆ’ ಎಂದು ಹೇಳುತ್ತಾರೆ. ಇದರ ಅರ್ಥವೇನೆಂದರೆ, ಆತನ ನಿಜವಾದ ಹಿಂಬಾಲಕರ ಆಸಕ್ತಿ ಹಾಗೂ ಕಾರ್ಯಗಳ ಮೇಲೆ ವಿಶೇಷ ಮೇಲ್ವಿಚಾರಣೆಯನ್ನು ವಹಿಸುವುದಾಗಿದೆ. ಇವರಿಗೆ ಸಂಭವಿಸುವ ಯಾವುದೇ ಘಟನೆಗಳು ಅನಿರೀಕ್ಷಿತವಾಗಿ ಅಥವಾ ಅದೃಷ್ಟದಿಂದ ಸಂಭವಿಸುವುದಾಗಿರುವುದಿಲ್ಲ.” ಆರ್. 5711, ಸಿ.2, ಪಿ.3.

## “ಆವನು ತನ್ನ ಕುರಿಗಳನ್ನು ಹೊರಗೆ ಬಿಟ್ಟ ಮೇಲೆ ಅವುಗಳ ಮುಂದೆ ಹೋಗುತ್ತಾನೆ. ಕುರಿಗಳು ಅವನ ಸ್ವರವನ್ನು ತಿಳುಕೊಳ್ಳುವದರಿಂದ ಅವನನ್ನು ಹಿಂಬಾಲಿಸುತ್ತವೆ; ಅವು ಅನ್ಯರ ಸ್ವರವನ್ನು ತಿಳಿಯುವದಿಲ್ಲ.” ಯೋಹಾನ 10:4,5.

“ದೇವರ ಈ ಮಂದೆಯ ಒಳಗಡೆ ಬಂದ ನಂತರ ಶ್ರೇಷ್ಠ ಕುರುಬನ ಮೇಲೆ ಆತ್ಮವಿಶ್ವಾಸ – ವಿರಲು ನಮಗೆ ಎಲ್ಲಾ ಕಾರಣಗಳಿವೆ. ಮತ್ತು ನಮ್ಮ ಬಗ್ಗೆ ಆತನು ಸತತವಾಗಿ ಚಿಂತಿಸುವುದನ್ನೂ, ನಮ್ಮ ಆತ್ಮೀಕ ಕ್ಷೇಮಾಭಿವೃದ್ಧಿಯ ಬಗ್ಗೆ ಆತನಿಗೆ ಇರುವ ಪ್ರಧಾನ ಆಸಕ್ತಿಯನ್ನು ಅರಿತುಕೊಳ್ಳಬೇಕು. ನಾವು ಒಳ್ಳೆಯ ಕುರಿಗಳಂತಿರೋಣ. ನಾವು ಮಂದೆಯನ್ನು ಬಿಟ್ಟು ದಾರಿತಪ್ಪಿ ಎಡಕ್ಕಾಗಲೀ ಬಲಕ್ಕಾಗಲೀ ಹೋಗದಿರೋಣ ಅಥವಾ ಹಾದಿಯಲ್ಲಿ ಆಕರ್ಷಿತರಾಗಿ ದತ್ತೂರಿ ಹಾಗೂ ವಿಷಭರಿತ ಕಳೆಗಳಲ್ಲಿ ಅನಂದವನ್ನು ಅನುಭವಿಸಲು ಹೋಗಿ ಹಸಿರು ಹುಲ್ಲುಗಾವಲಿನಿಂದಲೂ, ಶುದ್ಧವಾದ ನೀರಿನಿಂದಲೂ ದೂರ ಹೋಗದಿರೋಣ. ಅಥವಾ ಮನುಷ್ಯ ವಿಚಾರ ಹಾಗೂ ಮರುಳುಗೊಳಿಸುವಂಥಹ ಸಿದ್ಧಾಂತಗಳಿಂದ ಕೂಡಿದ ಕೆಸರಿನ ಕೊಳಕು ನೀರಿನಿಂದ ಕುಡಿಯಲು ಆಕರ್ಷಿತರಾಗದೇ

ಇರೋಣ... ಒಂದುವೇಳೆ ನಾವು ಕರ್ತನ ನಿಜವಾದ ಕುರಿಗಳಾಗಿದ್ದರೆ ಆತನ ಸ್ವರವು ನಮಗೆ ತಿಳಿದಿರುತ್ತದೆ, ನಾವು ತಪ್ಪು ಮಾಡದೇ ಇರುವೆವು. ನಿಜವಾದ ಕುರಿಯು... ಆತನ ಕರೆಗೆ ಬೇಗನೇ ಪ್ರತಿಕ್ರಿಯಿಸುತ್ತದೆ; ಇದು ಆತನ ಮಾರ್ಗದರ್ಶನವನ್ನು ಎದುರು ನೋಡುತ್ತದೆ." ಆರ್.5491, ಸಿ.2, ಪಿ.2, ಪಿ.1.

## "ನನ್ನ ಕುರಿಗಳು ನನ್ನ ಸ್ವರಕ್ಕೆ ಕಿವಿಗೊಡುತ್ತವೆ, ನಾನು ಅವುಗಳನ್ನು ಬಲ್ಲೆನು; ಅವು ನನ್ನನ್ನು ಹಿಂಬಾಲಿಸುತ್ತವೆ." ಯೋಹಾನ 10:27.

"ತಾವು ಕರ್ತನ ಕುರಿಮಂದೆಯ ನಿಜವಾದ ಕುರಿಗಳು ಎಂದು ಅನೇಕರು ಹೇಳಿಕೊಳ್ಳುತ್ತಾರೆ, ಆದರೆ ಕುರುಬನ ಪ್ರಸನ್ನತೆಯ ಈ ದಿನದಲ್ಲಿ ಆತನ ಸ್ವರ ಮತ್ತು ಸತ್ಯದ ವಿಚಾರದಲ್ಲಿ ಪರೀಕ್ಷೆಗೊಳಗಾಗುವರು." ಆರ್.2673, ಸಿ.1, ಪಿ.1.

"ಎಂದೂ ಇಲ್ಲದ ರೀತಿಯಲ್ಲಿ ಕುರಿಗಳನ್ನು ವಿವಿಧ ದಿಕ್ಕಿನಲ್ಲಿ ಕರೆಯುವ ಸ್ವರಗಳನ್ನು ಈಗ ನಾವು ಕೇಳುತ್ತೇವೆ. ಇದರ ಉದ್ದೇಶವೇನೆಂದರೆ, ಆತನ ಅನುಗ್ರಹದಿಂದ ತನ್ನ ಸ್ವಂತ 'ಚಿಕ್ಕ ಕುರಿಮಂದೆ'ಯಿಂದ ಇತರ ಎಲ್ಲರನ್ನು ಬೇರ್ಪಡಿಸುವುದಾಗಿದೆ. ಆತನ ಕುರಿಗಳು ತನ್ನ ಸ್ವರವನ್ನು ಕೇಳಿ, ಆತನನ್ನು ಹಿಂಬಾಲಿಸುತ್ತವೆ. ಇತರ ಕುರಿಗಳು ಮನುಷ್ಯ ನಾಯಕರಿಗೆ, ಮಾನವ ಸಂಸ್ಥೆಗಳಿಗೆ, ಮಾನವ ತತ್ವಗಳಿಗೆ, ಮಾನವ ಪ್ರಯಾಸಗಳಿಗೆ ಪ್ರತಿಷ್ಠೆಪಡಿಸಿಕೊಂಡು ತಮ್ಮ ಸ್ವಂತ ಒಲವುಗಳನ್ನು ಹಿಂಬಾಲಿಸುವುದರ ಮೂಲಕ ಚಿಕ್ಕ ಹಿಂಡಿನಿಂದ ಬೇರ್ಪಡಿಸಿಕೊಳ್ಳುತ್ತಾರೆ. ಇದು ಈಗ ಕರ್ತನಿಗೆ ಸಂತೋಷವುಳ್ಳದ್ದಾಗಿದೆ." ಆರ್.2672, ಸಿ.1, ಪಿ.4.

## "ತಿರಿಗಿ ಬಂದು ನಿಮ್ಮನ್ನು ನನ್ನ ಬಳಿಗೆ ಸೇರಿಸಿಕೊಳ್ಳುವೆನು; ಆಗ ನಾನಿರುವಲ್ಲಿ ನೀವು ಸಹ ಇರುವಿರಿ." ಯೋಹಾನ. 14:3.

"ಈ ವಾಗ್ದಾನದ ಗೊಂಚಲಿನ ಸುತ್ತಲೂ ದೇವರ ನೀತಿವಂತ ಭಕ್ತರ ಹೃದಯಗಳಲ್ಲಿ ಎಂಥಹಾ ಹರ್ಷಭರಿತ ನಿರೀಕ್ಷೆ, ಸಮೃದ್ಧವಾದ ಪೂರ್ವ ನಿರೀಕ್ಷಣೆಯು ಅಡಗಿದೆ! ಕೆಲವೇ ಮಾತುಗಳಲ್ಲಿ ದೇವರು ತನ್ನನ್ನು ಪ್ರೀತಿಸುವವರಿಗಾಗಿ ಕಾಯ್ದಿರಿಸಿರುವ ಎಲ್ಲಾ ಒಳ್ಳೆಯ ಸಂಗತಿಗಳನ್ನು ಇದು ಒಟ್ಟುಗೂಡಿಸುತ್ತದೆ. ಎಷ್ಟರ ಮಟ್ಟಿಗೆ ದೇವರ ವಾಕ್ಯದ ಪ್ರಮಾಣವು ನಮ್ಮಲ್ಲಿ ಸರಿಯಾದ ರೀತಿಯಲ್ಲಿ ನೆಲೆಗೊಂಡು ದೈವೀಕ ಪ್ರೀತಿ ಹಾಗೂ ಅನುಕಂಪದ ಉದ್ವಗಲವನ್ನು ಗ್ರಹಿಸಿಕೊಳ್ಳುವಂತೆ ಶಕ್ತಗೊಳಿಸಿ, ಉದ್ದೇಶಪೂರ್ವಕವಲ್ಲದ ಬಲಹೀನತೆಗಳನ್ನು ಮರೆಮಾಡುತ್ತದೋ ಅಷ್ಟರ ಮಟ್ಟಿಗೆ ಕರ್ತನ ನೀತಿವಂತರು ಈ ವಾಗ್ದಾನದಲ್ಲಿ ಹರ್ಷಿಸಲು ಶಕ್ತರಾಗಿ ಮತ್ತು ಕರ್ತನನ್ನು ಮುಖಾಮುಖಿಯಾಗಲು ಹರ್ಷದಿಂದ ಎದುರುನೋಡಲು ಸಮರ್ಥಗೊಳಿಸುವುದು ಮಾತ್ರವಲ್ಲದೆ ಅವರು ಆತನ ಪ್ರಸನ್ನತೆಯುಲ್ಲಿ ಹಾಗೂ ಒಡನಾಟದಲ್ಲಿ ನಿತ್ಯಕ್ಕೂ ನೆಲೆಯಾಗಿರುವದನ್ನು ಎದುರುನೋಡುವರು. ಆದರೆ ಇತರರಿಗೆ... ಕ್ರಿಸ್ತನ ಹೆಜ್ಜೆಜಾಡಿನಲ್ಲಿ ಎಚ್ಚರಿಕೆಯಿಂದ

ನಡೆಯಲು ಪ್ರಯತ್ನಿಸದವರಿಗೆ ಈ ಮೇಲಿನ ವಾಗ್ದಾನವು ಕೇವಲ ಸ್ವಲ್ಪಮಟ್ಟಿಗೆ ಮಾತ್ರ ಹರ್ಷವನ್ನು, ನಿರೀಕ್ಷೆಯನ್ನು ಉಂಟುಮಾಡುವುದನ್ನು ಬಿಟ್ಟರೆ ಹೊರ ಉಕ್ಕುವಂಥಹ ಹರ್ಷವನ್ನು ನೀಡುವುದಿಲ್ಲ." ಆರ್.3191, ಸಿ.1, ಪಿ.5,6.

**"ನನ್ನ ಆಜ್ಞೆಗಳನ್ನು ಹೊಂದಿ ಅವುಗಳನ್ನು ಅನುಸರಿಸುವವನೇ ನನ್ನನ್ನು ಪ್ರೀತಿಸುವವನು; ನನ್ನನ್ನು ಪ್ರೀತಿಸುವವನನ್ನು ನನ್ನ ತಂದೆಯೂ ಪ್ರೀತಿಸುವನು. ನಾನು ಅವನನ್ನು ಪ್ರೀತಿಸಿ ಅವನಿಗೆ ನನ್ನನ್ನು ವ್ಯಕ್ತಪಡಿಸಿಕೊಳ್ಳುವೆನು." ಯೋಹಾನ. 14:21.**

"ದೇವರ ಮಕ್ಕಳೂ, ಮಹಿಮೆಯ ಬಾಧ್ಯಸ್ಥರೂ, ಮಿತಿಮೀರಿದ ಶ್ರೇಷ್ಠ ಹಾಗೂ ಅಮೂಲ್ಯ ವಾದ ವಾಗ್ದಾನಗಳ ಸಹಬಾಧ್ಯಸ್ಥರೂ ಹಾಗೂ ಪ್ರಸ್ತುತದಲ್ಲಿ ನಮ್ಮ ಹೀನಸ್ಥಿತಿಯಲ್ಲಿ ಕೃಪೆ ತೋರುವ ದೈವೀಕತೆಗೆ ಜೊತೆಗಾರರಾಗಿರುವವರೂ ಎಂದಾದರೂ ದುಃಖಕ್ರಾಂತರಾಗಿದ್ದೇವೆ ಅಥವಾ ಕೈಬಿಡಲ್ಪಟ್ಟಿದ್ದೇವೆ ಅಥವಾ ಏಕಾಂಗಿಯಾಗಿದ್ದೇವೆಯೆಂದು ಯೋಚಿಸಬಹುದೇ? ಅಥವಾ ಆತನ ಪ್ರೀತಿಯು ನಮ್ಮನ್ನು ತೊರೆದುಬಿಟ್ಟು ಅಥವಾ ಈ ಅಪ್ರಾಮಾಣಿಕ ಜನರ ಹೃದಯಗಳಲ್ಲಿ ಕ್ರೀಯೆ ನಡಿಸುತ್ತಿರುವ ಈ ಲೋಕದ ಅಧಿಪತಿಯ ಕರುಣೆಯ ದುರದೃಷ್ಟಕರ –ವಾದ ದೊಡ್ಡ ಅಲೆಗಳಿಗೆ ಸಿಲುಕಿ ಅಸಾಯಕತೆಯಿಂದ ಹೊಯ್ದಾಡುವಂತೆ ಬಿಟ್ಟು ಬಿಡಲಾಗುವುದೆಂಬ ಭಯವು ಇದೆಯೇ? ಆಹಾ, ಇಲ್ಲ! ನಮ್ಮನ್ನು ಎದುರಿಸುವವರಿಗಿಂತ ನಮ್ಮಲ್ಲಿರುವಾತನು ದೊಡ್ಡವನಾಗಿದ್ದಾನೆ. ನಾವು ಲೋಕದಲ್ಲಿ ಏಕಾಂಗಿಯಲ್ಲ; ಯಾಕೆಂದರೆ ನಮಗೆ ಆಶೀರ್ವಾದಯುತವಾದ ವಾಗ್ದಾನವು ಕೊಡಲ್ಪಟ್ಟಿದೆ, 'ನಾನು ನಿನ್ನನ್ನು ಎಂದಿಗೂ ಕೈಬಿಡುವುದಿಲ್ಲ, ಎಂದಿಗೂ ತೊರೆಯುವುದಿಲ್ಲ' (ಹಿಬ್ರಿಯ. 13:5). ನಮ್ಮ ಅತೀ ಚಿಕ್ಕದಾದ ಹಿತಾಸಕ್ತಿಯನ್ನು ಲಕ್ಷಿಸದೇ ಇರುವುದಿಲ್ಲ" ಎಂಬ ಭರವಸೆ ನಮಗಿದೆ. ಆರ್.1906, ಸಿ.2, ಪಿ.2.

**"ಯಾವನಾದರೂ ನನ್ನನ್ನು ಪ್ರೀತಿಸುವದಾದರೆ ಅವನು ನನ್ನ ಮಾತುಗಳನ್ನು ಕೈಕೊಳ್ಳುವನು; ನನ್ನ ತಂದೆಯು ಅವನನ್ನು ಪ್ರೀತಿಸುವನು. ಇದಲ್ಲದೆ ನಾವು ಅವನ ಬಳಿಗೆ ಬಂದು ಅವನೊಂದಿಗೆ ನಮ್ಮ ನಿವಾಸವನ್ನು ಮಾಡಿಕೊಳ್ಳುವೆವು." ಯೊಹಾನ 14:23.**

"ಕ್ರಿಸ್ತನ ಮೂಲಕ ನಿಕಟವಾದ ವ್ಯಕ್ತಿಗತ ಪರಿಚಯ ಹಾಗೂ ಆತನೊಂದಿಗೆ ಆತ್ಮದ ಅನ್ಯೋನ್ಯತೆಯ ಕೃಪೆಯಲ್ಲಿ ಬೆಳೆಯುವಂಥದ್ದು ಆತನ ದಯೆಯಲ್ಲಿ ಬೆಳೆಯುವುದಾಗಿದೆ. ಇದು ಅನ್ವಯಿಸುವಂತೆ, ಮೊದಲನೆಯದಾಗಿ, ಆತನ ಅಮೂಲ್ಯವಾದ ರಕ್ತದ ಮೂಲಕ ನಮಗೋಸ್ಕರವಾದ ವಿಮೋಚನೆಯ ಜ್ಞಾನ ಹಾಗೂ ಅಂಗೀಕರಿಸಿಕೊಳ್ಳುವಿಕೆಯನ್ನು ಹಾಗೂ ಆತನ ಮೂಲಕ ತಂದೆಯು ಮಾಡಿರುವ ವಾಗ್ದಾನಗಳ ಮೇಲೆ ವ್ಯಕ್ತಿಗತ ನಂಬಿಕೆಯನ್ನು ಹಾಗೂ ಅವಲಂಬನೆಯನ್ನು ಮತ್ತು ಆನಂತರ ದಿನನಿತ್ಯ ಪ್ರಾರ್ಥನೆಯ ಜೀವಿತದಲ್ಲಿ ಆತನೊಂದಿಗೆ ನಿಕಟ ಅನ್ಯೋನ್ಯತೆ ಮತ್ತು ಆತನ ಚಿತ್ತವನ್ನು ಲಕ್ಷ್ಯಕ್ಕೆ ತಂದುಕೊಂಡು ಅದಕ್ಕೆ

ವಿಧೇಯರಾಗಿ ನಡೆಯುವುದಾಗಿದೆ. ಒಂದುವೇಳೆ ಅಂಥಹ ಸ್ಥಿರವಾದ ಗುಣಲಕ್ಷಣವು ನಮ್ಮ ಹೃದಯ ಹಾಗೂ ಮನಸ್ಸಿನದಾಗಿದ್ದರೆ, ಅಲ್ಲಿ ಅಚಲವಾದ ಪವಿತ್ರಾತ್ಮದಿಂದ ಉಂಟಾದ ಮಾಗಿದ ಫಲವು ಉಂಟಾಗಬೇಕು ಮತ್ತು ಅವುಗಳು ನಮಗೆ ಹೆಚ್ಚು ಹೆಚ್ಚು ಆನಂದಕರವಾಗಿ ಮತ್ತು ನಮ್ಮ ಕರ್ತನಿಗೆ ಅಂಗೀಕಾರವುಳ್ಳದ್ದಾಗಿಯೂ ಸಮರ್ಪಿತವಾಗಬೇಕು. ಕರ್ತನ ಈ ಮೇಲಿನ ವಾಗ್ದಾನವು ಈಡೇರುವುದಕ್ಕಾಗಿ ದೈವೀಕವಾದ ಅಂಗೀಕಾರ ಹಾಗೂ ಅನುಗ್ರಹದ ತಿಳುವಳಿಕೆಯನ್ನು ನಮಗೆ ದಿನದಿಂದ ದಿನಕ್ಕೆ ಅಧಿಕವಾದ ಪ್ರಮಾಣದಲ್ಲಿ ನೀಡಲಾಗುತ್ತದೆ." ಅರ್.3215, ಸಿ.1, ಪಿ.6.

**"ನಾನು ನಿಮಗೆ ಸಮಾಧಾನವನ್ನು ಬಿಟ್ಟು ಹೋಗುತ್ತೇನೆ, ನನ್ನ ಸಮಾಧಾನವನ್ನು ನಾನು ನಿಮಗೆ ಕೊಡುತ್ತೇನೆ; ಲೋಕವು ಕೊಡುವ ರೀತಿಯಲ್ಲಿ ನಾನು ನಿಮಗೆ ಕೊಡುವದಿಲ್ಲ, ನಿಮ್ಮ ಹೃದಯವು ಕಳವಳಗೊಳ್ಳದಿರಲಿ ಇಲ್ಲವೆ ಅಂಜದಿರಲಿ." ಯೋಹಾನ 14:27.**

"ಹೀಗೆ ವಿಪುಲವಾದ ಅನುಕಂಪ ಹಾಗೂ ಕೋಮಲತೆಯಿಂದ ನಮ್ಮ ಕರ್ತನು ಇಹಲೋಕ ಜೀವನದ ಕಡೆಯ ರಾತ್ರಿಯಲ್ಲಿ ತನ್ನ ಶಿಷ್ಯರ ಮೇಲೆ ತನ್ನ ಅಗಲುವಿಕೆಯ ಅಶೀರ್ವಾದ-ವನ್ನೂ, ತನ್ನ ಶಾಂತಿಯ ಸಂಪತ್ತನ್ನು ಸುರಿಸಿದನು. ಅದೊಂದು ಅತ್ಯಂತ ಶ್ರೀಮಂತವಾದ ಮೃತ್ಯು ಪತ್ರವಾಗಿದ್ದು ಬೆಲೆಕಟ್ಟದ್ದಾಗಿದೆ. ಇದು ಸಮಾಧಾನವುಳ್ಳ ಆತ್ಮದ ನಿಶ್ಚಿಂತತೆಯ ಮನಸ್ಸು ಹಾಗೂ ವಿಶ್ರಾಂತಿಯ ವಾಗ್ದಾನವಾಗಿದ್ದು, ಆತನೇ ಸ್ವಾಧೀನಪಡಿಸಿಕೊಂಡಂಥಹ ಸಮಾಧಾನವಾಗಿದೆ, ಅಂದರೆ ದೇವರ ಸಮಾಧಾನವಾಗಿದೆ, ಇದೇ ಸಮಾಧಾನವನ್ನು ತಂದೆಯು ಸಹ ಯಾವಾಗಲೂ ಆಸ್ವಾದಿಸುತ್ತಿದ್ದರು, ಕೇಡಿನ ಅನುಮತಿಯುಂದುಂಟಾದ ಕೋಲಾಹಲದ ನಡುವೆಯೂ ಸಹ ಈ ಸಮಾಧಾನವಿತ್ತು; ಆದರೆ ಇದನ್ನು ಅದೇ ಮೂಲದಿಂದ ಹೊಂದಲಾಗಿಲ್ಲ, ಈ ಸಮಾಧಾನವು ಯೆಹೋವನಲ್ಲಿಯೇ ಕೇಂದ್ರೀಕೃತವಾಗಿತ್ತು, ಯಾಕೆಂದರೆ ಆತನು ತನ್ನಲ್ಲಿರುವ ಶಕ್ತಿಯ ಮತ್ತು ವಿವೇಕದ ಸರ್ವತ್ರಾಣವನ್ನೂ ಗ್ರಹಿಸಿಕೊಂಡಿದ್ದಾರೆ; ಹೀಗಿರುವಾಗ ಕ್ರಿಸ್ತನ ಸಮಾಧಾನವು ತನ್ನಲ್ಲೇ ಕೇಂದ್ರೀಕೃತವಾಗಿರದೆ ದೇವರಲ್ಲಿ ಕೇಂದ್ರೀಕೃತವಾಗಿತ್ತು. ಅದು ಹೇಗೆಂದರೆ, ದೇವರ ಜ್ಞಾನ, ಬಲ ಹಾಗೂ ಕೃಪೆಯಲ್ಲಿರುವ ನಂಬಿಕೆಯಿಂದಲೇ ಆಗಿತ್ತು. ಹಾಗೆಯೇ ಒಂದುವೇಳೆ 'ದೇವರ ಸಮಾಧಾನ'ವು-'ನನ್ನ ಶಾಂತಿ'-ನಮ್ಮಲ್ಲಿದ್ದರೆ, ಆತನದರಂತೆ ನಂಬಿಕೆಯ ಮೂಲಕ ದೇವರಲ್ಲಿ ಕೇಂದ್ರೀಕೃತವಾಗಿರಬೇಕು." ಆರ್.1834, ಸಿ.1, ಪಿ.3.

**"ನನ್ನಲ್ಲಿ ಫಲಫಲಿಸದ ಪ್ರತಿಯೊಂದು ಕೊಂಬೆಯನ್ನು ಆತನು ತೆಗೆದುಹಾಕುತ್ತಾನೆ; ಫಲಕೊಡುವ ಪ್ರತಿಯೊಂದು ಕೊಂಬೆಯು ಹೆಚ್ಚಾಗಿ ಫಲಕೊಡುವ ಹಾಗೆ ಅದನ್ನು ಶುದ್ಧಿ ಮಾಡುತ್ತಾನೆ." ಯೋಹಾನ 15:2.**

"ಕರ್ತನು ಕಸಿ ಮಾಡುವ ವಿಧಾನವನ್ನು ಎಲ್ಲಾ ಕೊಂಬೆಗಳು ಅರ್ಥಮಾಡಿಕೊಳ್ಳಬೇಕು, ಇಲ್ಲವಾದಲ್ಲಿ ಅವರು ಎದೆಗುಂದಿ, ಶಕ್ತಿಗುಂದಿ ಸರಿಯಾದ ಫಲವನ್ನು ಕೊಡುವಲ್ಲಿ ವಿಫಲರಾಗಬಹುದು. ಕೆಲವೇಳೆ ಶ್ರೇಷ್ಠ ತೋಟಗಾರನು ಕರ್ತನ ಕೊಂಬೆಗಳ ಲೌಕಿಕ ಐಶ್ವರ್ಯ

ಅಥವಾ ಆಸ್ತಿ ಅಥವಾ ಕೆಲವುವೇಳೆ ಅದರಲ್ಲಿರುವ ತುಂಬಾ ಒಲವಿನ ವ್ಯವಸ್ಥೆ ಹಾಗೂ ಯೋಜನೆಗಳಿಗೆ ತಡೆಯೊಡ್ಡುವುದರ ಮೂಲಕ ಅದನ್ನು ಕಸಿಮಾಡುವಂತೆ ಕಂಡುಬರುತ್ತದೆ. ಕೆಲವೊಂದು ಸಮಯದಲ್ಲಿ ಉಪದ್ರವವನ್ನು ಅನುಮತಿಸುವುದರೊಂದಿಗೆ ಹಾಗೂ ಹೆಸರು, ಕೀರ್ತಿಗೆ ಹಾನಿಯನ್ನುಂಟುಮಾಡುವುದರಿಂದ ಕಸಿಮಾಡುತ್ತಾರೆ, ಮತ್ತು ಕೆಲವುವೇಳೆ.... ನಮ್ಮ ಹೃದಯದ ಬಳ್ಳಿಯ ಕುಡಿಯು ಲೋಕದ ಗೆಳೆತನದೆಡೆಗೆ ಬಲವಾಗಿ ವಿಸ್ತರಿಸಿಕೊಂಡಿರುವುದಕ್ಕೆ ಹಾನಿಯಾಗಲು ಅನುಮತಿಸುವುದರ ಮೂಲಕ ಕಸಿಮಾಡುತ್ತಾರೆ... ಕರ್ತನ ಜನರಾದ ಅನೇಕರಲ್ಲಿ ಕೆಲವರು ತಮ್ಮ ಜೀವನದ ಬೆಲೆಯುಳ್ಳ ಪಾಠಗಳನ್ನು ಹಾಸಿಗೆಯ ವೇದನೆಯ ಮೇಲೆ ಕಂಡುಕೊಂಡಿದ್ದಾರೆ... ಅಂಥಹ ಕಸಿಯು, ಎದೆಗುಂದಿಸುವ ಬದಲು ನಮ್ಮನ್ನು ಪ್ರೋತ್ಸಾಹಿಸುವ ಮೂಲವೆಂದು ಸರಿಯಾಗಿ ಅರ್ಥಮಾಡಿಕೊಳ್ಳಬೇಕು. ನಾವು ಗ್ರಹಿಸಿಕೊಳ್ಳುವುದೇನೆಂದರೆ... ಇಂಥಹ ವಿಶೇಷ ಕಸಿಯು ನಡೆಯುವಾಗ, ಇದು ತಂದೆಯು ನಮ್ಮನ್ನು ಪ್ರೀತಿಸುವ ಸೂಚನೆಯು ಮಾತ್ರವಲ್ಲದೆ, ಆತನು ನಮ್ಮ ಅತ್ಯುತ್ತಮ ಹಿತಾಸಕ್ತಿಗಳ ಮೇಲೆ ಗಮನವಿರಿಸುತ್ತಾರೆ ಎಂದು ಗ್ರಹಿಸಿಕೊಳ್ಳುತ್ತೇವೆ." ಆರ್.3545, ಸಿ.1, ಪಿ.3–5.

## "ನೀವು ನನ್ನಲ್ಲಿಯೂ ನನ್ನ ವಾಕ್ಯಗಳು ನಿಮ್ಮಲ್ಲಿಯೂ ನೆಲೆಗೊಂಡಿದ್ದರೆ ನಿಮಗೆ ಬೇಕಾದದ್ದನ್ನು ಬೇಡಿಕೊಳ್ಳಿರಿ, ನಿಮಗೆ ಅದು ದೊರೆಯುವದು." ಯೋಹಾನ 15:7.

"ಒಂದುವೇಳೆ ನಿಮ್ಮ ಹೃದಯಗಳು ಹಾಗೂ ಸಾಮರ್ಥ್ಯವು ಹೀಗೆ ತಂದೆಯ ಯೋಜನೆಯಲ್ಲಿ ಹೀರಿಕೊಂಡಿದ್ದರೆ, ನೀವು ನಿಮ್ಮ ಹೃದಯಗಳ ಎಲ್ಲಾ ಆಸೆಗಳನ್ನು ಬೇಡಿಕೊಳ್ಳಬಹುದು–'ನೀವು ಏನು ಬೇಕಾದರೂ ಬೇಡಿಕೊಳ್ಳಿರಿ' ಎಂಬುವದಾಗಿ ಹೇಳಲಾಗಿದೆ. ನಾನು ಈ ಉದಾರವಾದ ವಾಗ್ದಾನವನ್ನು ಕೊಡುತ್ತೇನೆ ಎಂಬುವದಾಗಿ ಹೇಳಲಾಗಿದ್ದರೂ... ತಂದೆಯು ನಿಮ್ಮ ಯೋಜನೆಗಳನ್ನು ನೆರವೇರಿಸುವುದಕ್ಕಾಗಿ ನಿಮ್ಮ ಆಲೋಚನೆಗಳಂತೆ ಆತನ ಯೋಜನೆಗಳನ್ನು ಬದಲಾಯಿಸುತ್ತಾರೆ ಎಂಬುದು ಇದರ ಅರ್ಥವಲ್ಲ. ಆದರೆ ತಂದೆಯು ಕಾರ್ಯರೂಪಕ್ಕೆ ತರುತ್ತಿರುವ ಆತನ ಯುಗಯುಗಾಂತರಗಳ ಯೋಜನೆ ಹಾಗೂ ಆತನೊಂದಿಗೆ ಸಂಪೂರ್ಣರಾಗಿ ಅಂಥಹಾ ಸಹಾನುಭೂತಿಗೆ ಬರುವಂಥದ್ದಾಗಿದೆ, ಹೀಗಾಗುವುದರಿಂದ ನಾವು ಎಂದಿಗೂ ಅತೃಪ್ತಿಗೆ ಒಳಗಾಗಲಾರೆವು, ಇದರೊಂದಿಗೆ ಯಾವಾಗಲೂ ನಮ್ಮ ಬಯಕೆಗಳು ಈಡೇರುವಂಥದ್ದನ್ನು ಕಾಣಬಹುದು, ಯಾಕೆಂದರೆ ನಿಮ್ಮ ಇಚ್ಛೆ ಹಾಗೂ ಬಯಕೆಗಳು, ನಿಮ್ಮ ಆನಂದ ಹಾಗೂ ತೃಪ್ತಿಯು ಏನಿದ್ದರೂ, ದೇವರ ಇಚ್ಛೆ ಹಾಗೂ ಆತನ ಯೋಜನೆಗಳ ಪ್ರಗತಿಯನ್ನು ಆತನದೇ ಆದ ಸಮಯದಲ್ಲಿ ಈಡೇರುವಂತೆ ನೋಡುವುದಾಗಿದೆ. ಹೀಗೆ ನಿಮ್ಮ ಪ್ರತಿಯೊಂದು ಬೇಡಿಕೆ ಹಾಗೂ ಬಯಕೆಗಳು ಈಡೇರುವವು–ತಮ್ಮ ಸ್ವಂತ ಆಸೆಗಳಿಗಾಗಿ ಪ್ರಾರ್ಥಿಸುವವರು ಹಾಗೂ ತಮ್ಮ ಸ್ವಂತ ಇಚ್ಛೆಗಳನ್ನು ಈಡೇರಿಸಲು ಎದುರು ನೋಡುವವರ ಅನುಭವವು ಇದಕ್ಕೆ ವಿರುದ್ಧವಾಗಿ ಇರುತ್ತದೆ." ಆರ್. 1999, ಸಿ.1, ಕೊನೇ ಭಾಗ.

## “ತಂದೆಯು ನನ್ನನ್ನು ಪ್ರೀತಿಸಿದ ಹಾಗೆಯೇ ನಾನು ನಿಮ್ಮನ್ನು ಪ್ರೀತಿಸಿದ್ದೇನೆ; ನೀವು ನನ್ನ ಪ್ರೀತಿಯಲ್ಲಿ ನೆಲೆಯಾಗಿರ್ರಿ.” ಯೋಹಾನ 15:9.

“ಇದು ಎಂಥಹಾ ಅದ್ಭುತವಾದ ಆಲೋಚನೆಯಾಗಿದೆ! ಅದೇನೆಂದರೆ, ಪ್ರಭುವಿನ ತಂದೆಗೆ ಆತನ ಬಗ್ಗೆ ಇರುವ ಪ್ರೀತಿಯಂತೆಯೇ ಆತನು ನಮ್ಮ ಬಗ್ಗೆ ಪ್ರೀತಿಯುಳ್ಳವನಾಗಿದ್ದಾನೆ! ನಮ್ಮ ನಂಬಿಕೆಯ ಈ ಆಲೋಚನೆಯನ್ನು ಯಾವಾಗಲೂ ಬಿಗಿಯಾಗಿ ಹಿಡಿದಿಟ್ಟುಕೊಂಡು ಆ ಹಿಡಿತವನ್ನು ಕಾಪಾಡಿಕೊಳ್ಳಬಹುದೇ? ನಿಜವಾಗಿಯೂ ನಾವು ಬೇರೇನೂ ಬಯಸುವಂಥದ್ದು ಮತ್ತು ಅಂಜುವಂಥದ್ದು ಏನೂ ಇಲ್ಲ–ನಮ್ಮ ಸುಗ್ಗಿಯು ವರ್ಷದ ಪರ್ಯಂತರ ನಡೆಯುವುದು. ಆನಂತರದ ಆಲೋಚನೆಯು ಪ್ರಸ್ತಾಪಿಸುವುದೇನೆಂದರೆ, ದೇವರ ಅನುಗ್ರಹದಿಂದ ಈ ಎತ್ತರವಾದ ಸ್ಥಾನಕ್ಕೆ ತಲುಪಿ, ಸಾಧಿಸಿ, ಒಂದುವೇಳೆ ನಾವು ಆತನ ಶಿಷ್ಯರಾಗಿದ್ದು ಈ ಸಂಬಂಧವಾಗಿ ಆತನು ಮಾಡಿದ ಕಾರ್ಯಗಳನ್ನು ನಿಜವಾಗಿಯೂ ಪ್ರಶಂಶಿಸುವುದಾದರೆ ನಾವು ಆತನ ಪ್ರೀತಿಯಲ್ಲಿ ಮುಂದುವರೆಯಲು ಬಯಸುತ್ತೇವೆ. ತದನಂತರ ಕ್ರಮದ ಪ್ರಕಾರ ಆ ಪ್ರೀತಿಯಲ್ಲಿ ಮುಂದುವರೆಯಲು ನಿಯಮ ಹಾಗೂ ಷರತ್ತುಗಳು ಅನ್ವಯಿಸುತ್ತವೆ, ಅದೇನೆಂದರೆ ಆತನ ಆಜ್ಞೆಗಳನ್ನು ಕೈಗೊಂಡು ನಡೆಯುವದಾಗಿದೆ. ಇದು ಅನುಚಿತವಾದ ಹೇಳಿಕೆಯಲ್ಲವೆಂದು ತೋರಿಸುವುದರ ಮೂಲಕ ನಮ್ಮ ಕರ್ತನೊಂದಿಗೆ ಕೂಡ ತಂದೆಯು ಇದೇ ನಿಯಮವುದನ್ವಯು ನಡೆದುಕೊಳ್ಳುತ್ತಾರೆಂಬುದನ್ನು ಪ್ರಕಟಿಸುತ್ತಾರೆ, ಅದೇನೆಂದರೆ, ‘ನಾನು ನನ್ನ ತಂದೆಯ ಆಜ್ಞೆಗಳನ್ನು ಕೈಗೊಂಡು ಆತನ ಪ್ರೀತಿಯಲ್ಲಿ ನೆಲೆಯಾಗಿರುವಂತೆಯೇ’ ಎಂಬುವದಾಗಿದೆ. ನಾವು ಕರ್ತನ ಪ್ರೀತಿಯಲ್ಲಿ ನೆಲೆಯಾಗಿರಲು ನಿರೀಕ್ಷಿಸಿ ಆತನ ಕಟ್ಟಳೆಗಳಿಗೆ ನಿರ್ಲಕ್ಷ್ಯವಾಗಿರಲು ಸಾಧ್ಯವಿಲ್ಲ.” ಆರ್. 3546, ಸಿ.2, ಪಿ.4,5.

## “ನೀವು ನನ್ನನ್ನು ಆರಿಸಿಕೊಳ್ಳಲಿಲ್ಲ; ನಾನು ನಿಮ್ಮನ್ನು ಆರಿಸಿಕೊಂಡೆನು.” ಯೋಹಾನ 15:16.

“ಲೋಕದವರು ಈ ಆರಿಸಿಕೊಂಡ ಜನರನ್ನು ಇಷ್ಟಪಡುವುದಿಲ್ಲ, ಯಾಕೆಂದರೆ ಅವರು ತಮ್ಮ ಸ್ವಂತ ಬಲಹೀನತೆಗಳನ್ನು ಅರಿಕೆಮಾಡಿಕೊಂಡು ಅವುಗಳ ವಿರುದ್ಧವಾಗಿ ಹೋರಾಡುತ್ತಾರೆ ಮತ್ತು ಅವುಗಳಿಗೆ ಸರಿಯಾಗಿ ಹೊಂದುವ ಹೆಸರುಗಳಾದ ಪಾಪ, ಲೋಭ, ಶರೀರದ ಹಾಗೂ ಲೌಕಿಕ ಅಶುದ್ಧತ್ವಗಳೆಂದು ಕರೆಯುತ್ತಾರೆ. ತಮ್ಮನ್ನೇ ಶುದ್ಧೀಕರಿಸಿಕೊಳ್ಳಲು ಅವರು ತೆಗೆದುಕೊಳ್ಳುವ ಪ್ರತಿಯೊಂದು ಪ್ರಯಾಸವು, ಅವುಗಳ ವಿರುದ್ಧ ಹೋರಾಡಿ ತಮ್ಮನ್ನೇ ಶುದ್ಧೀಕರಿಸಿಕೊಳ್ಳದೇ ಇರುವಂಥವರ ಆಕ್ಷೇಪಣೆಗೆ ಒಳಗಾಗುತ್ತಾರೆ ಮತ್ತು ಇವರು ಅಧಿಕವಾಗಿ ಸುಖವನ್ನನುಭವಿಸುವ ಕಾರ್ಯಗಳಿಗೆ ದುರಾಸೆ, ಸ್ವಾರ್ಥ, ಅತಿಯಾದ ವಾತ್ಸಲ್ಯ, ಕಲಹ, ಅಹಂಕಾರ, ವ್ಯರ್ಥಕೀರ್ತಿಯಿಂದ ಕೂಡಿರುವಂಥವುಗಳು ಎಂಬುದಾಗಿ ಮನವರಿಕೆ ಮಾಡುವುದನ್ನು ದ್ವೇಷಿಸುತ್ತಾರೆ. ಯಾರೆಲ್ಲರು ಲೋಕದ ವಿಚಾರಗಳಲ್ಲಿ ತೃಪ್ತಿಯಾಗಿದ್ದಾರೋ ಅಂಥವರು ನಿಜವಾಗಿಯೂ ಕರ್ತನಲ್ಲಿ ತೃಪ್ತಿಹೊಂದಿಲ್ಲ. ಯಾರೆಲ್ಲರು ಕರ್ತನಲ್ಲಿ

ತೃಪ್ತಿಹೊಂದಿದ್ದಾರೋ ಅವರು ಲೋಕದ ವಿಚಾರಗಳಲ್ಲಿ ತೃಪ್ತಿಪಡಬೇಕಾಗುವ ಅಗತ್ಯವಿಲ್ಲ; ಯಾಕೆಂದರೆ ಈ ಲೋಕದ ಜೊತೆ ಅನ್ಯೋನ್ಯತೆಯನ್ನು ಬೆಳೆಸುವುದು ದೇವರಿಗೆ ವೈರತ್ವ–ವಾಗಿದೆ. ಆದುದರಿಂದ ಲೋಕವು ದೈವೀಕ ಗುಣಮಟ್ಟಕ್ಕೆ ಅಧೀನವಾಗಿಲ್ಲ, ನಿಜವಾಗಿಯೂ ಇಲ್ಲ... ಇದರ ಹೃದಯವು ಬೇರೆ ದಿಕ್ಕಿನಲ್ಲಿಯೇ ಇದೆ." ಆರ್.5737, ಸಿ.2, ಪಿ.5.

**"ಸತ್ಯದ ಆತ್ಮನು ಬಂದಾಗ ಆತನು ನಿಮ್ಮನ್ನು ಎಲ್ಲಾ ಸತ್ಯಕ್ಕೆ ನಡಿಸುವನು. ಆತನು ತನ್ನಿಷ್ಟಕ್ಕೆ ತಾನೇ ಮಾತನಾಡದೆ ತಾನು ಕೇಳಿದವುಗಳನ್ನೇ ಮಾತನಾಡುತ್ತಾನೆ; ಮುಂದೆ ಬರುವದಕ್ಕಿರುವ ವಿಷಯಗಳನ್ನು ಆತನು ನಿಮಗೆ ತಿಳಿಸುವನು." ಯೋಹಾನ 16:13.**

"ಪಂಚಾಶತ್ತಮ ದಿನದಂದು ಅಪೋಸ್ತಲರು ಸ್ವೀಕರಿಸಿದಂಥಹ ಮನಸ್ಸಿನ ಪ್ರಕಾಶವು ದೇವರ ಆಳವಾದ ವಿಷಯಗಳನ್ನು ಅರ್ಥಮಾಡಿಕೊಳ್ಳುವಂತೆ ಶಕ್ತಗೊಳಿಸಿತು. ಕೆಲವೊಂದು ವಿಷಯಗಳನ್ನು ಆ ಸಮಯದಲ್ಲಿ ತನ್ನ ಶಿಷ್ಯರು ಅರ್ಥಮಾಡಿಕೊಳ್ಳಲಾಗದು ಎಂದು ಯೇಸು ತಾನೇ ಪ್ರಕಟಿಸಿದಂಥಹ ಸಮಯದಲ್ಲಿ ಈ ಆಲೋಚನೆಯು ಆತನ ಮನಸ್ಸಿನಲ್ಲಿತ್ತು. ಆದರೆ ಆನಂತರ ತಾನು ಕಳುಹಿಸಿದಂಥಹ ಆತ್ಮವು ತಾನು ಮಾತಾನಾಡಿದಂಥಹ ಎಲ್ಲಾ ಕಾರ್ಯಗಳನ್ನು ಅವರ ನೆನಪಿಗೆ ತಂದುಕೊಡುವುದರ ಮೂಲಕ ಅರಿತುಕೊಳ್ಳುವರು ಹಾಗೂ ಮುಂದಾಗುವ ಸಂಗತಿಗಳನ್ನು ಅದು ತಿಳಿಸುವುದು ಎಂಬುದಾಗಿ ಆತನಿಗೆ ತಿಳಿದಿತ್ತು. ಇದು ಕೇವಲ ಅಪೋಸ್ತಲರಲ್ಲಿ ಮಾತ್ರ ನಿಜವಾಗಿರುವುದಲ್ಲದೆ, ಸುವಾರ್ತೆ ಯುಗದ ಪರ್ಯಂತರ ಕ್ರಿಸ್ತನ ದೇಹದ ಎಲ್ಲಾ ಅಗಾಂಗಗಳ ಸಂಬಂಧವಾಗಿಯೂ ನಿಜವಾಗಿದೆ... ಇವರಿಗೆ ಸತ್ಯವೇದವು 'ಮುಂದಾಗುವ ಸಂಗತಿಗಳನ್ನು ನಿಮಗೆ ತಿಳಿಸುವೆನು' ಎಂಬ ವಾಗ್ದಾನವನ್ನು ನೀಡಿದೆ. ಕಾಲಕ್ಕೆ ತಕ್ಕದಾದ ಸತ್ಯದಲ್ಲಿ ಇವರು ನಡೆಸಲ್ಪಡುವರು. ಇಂಥವರಿಗೆ ದೇವರ ವಾಕ್ಯವು ಉಗ್ರಾಣವಾಗಿದ್ದು, ಇದರಿಂದಲೇ ಪವಿತ್ರಾತ್ಮದ ಮಾರ್ಗದರ್ಶನದಿಂದ ವಿಶ್ವಾಸದ ಮನೆತನದವರಿಗೆ ಕಾಲಕ್ಕೆ ಸರಿಯಾದ ಆಹಾರವಾಗಿ 'ನೂತನ ಹಾಗೂ ಹಳೆಯ' ಕಾರ್ಯಗಳನ್ನು ತಯಾರಿಸಲ್ಪಡಲಾಗುವದು." ಆರ್.5088, ಸಿ.1, ಪಿ.6–8.

**"ಹಾಗೆಯೇ ನಿಮಗೂ ಈಗ ದುಃಖವಿದ್ದರೂ ನಾನು ನಿಮಗೆ ತಿರುಗಿ ನೋಡುವೆನು, ಆಗ ನಿಮ್ಮ ಹೃದಯಕ್ಕೆ ಆನಂದವಾಗುವದು, ಮತ್ತು ನಿಮ್ಮ ಆನಂದವನ್ನು ಯಾರೂ ನಿಮ್ಮಿಂದ ತೆಗೆಯುವದಿಲ್ಲ." ಯೋಹಾನ 16:22.**

"ನಮ್ಮಿಂದ ಯಾರೂ ತೆಗೆಯಲಾಗದಂಥಹ ನಮ್ಮ ಆನಂದವು ಯಾವುದು? ಮತ್ತು ಯಾವ ಹಿಂಸೆ, ಕಷ್ಟ, ತೊಂದರೆಯು ನಮ್ಮಲ್ಲಿ ಆಳವಾಗಿಯೂ ಅಗಲವಾಗಿಯೂ ಶೋಧಿಸಿ ಸಿಹಿಯಾದ ಅನುಭವವನ್ನು ಉಂಟುಮಾಡುವುದು? ಇದು ಯಾವ ಆನಂದವು? ಇದು ಮುಂದೆ ಬರುವಂಥಹ ಆಶೀರ್ವಾದವನ್ನು ಮೊದಲೇ ಅನುಭವಿಸುವ ರುಚಿಯಾಗಿದೆ. ನಮ್ಮ ಬಾಧ್ಯತೆಯ ಅಭಿಲಾಷೆಯ ಆನಂದವಾಗಿದೆ. ಇದು ನಾವು ನಂಬಿ ಆತನ ಮೇಲೆ ಭರವಸೆಯಿಟ್ಟಿರುವುದರಿಂದ ಪ್ರೇರಿತವಾಗಿದೆ. ಈ ಆತ್ಮವಿಶ್ವಾಸವೇನೆಂದರೆ, ಆತನು ನಮ್ಮಲ್ಲಿ

ಪ್ರಾರಂಭವಮಾಡಿರುವ ಕಾರ್ಯವನ್ನು ಪರಿಪೂರ್ಣಗೊಳಿಸಲು ಶಕ್ತನೂ ಹಾಗೂ ಮನಸ್ಸುಳ್ಳವನೂ ಆಗಿದ್ದಾನೆ ಮತ್ತು ಇದನ್ನು ಆತನ ಇಷ್ಟದಂತೆ ಪರಿಪೂರ್ಣಗೊಳಿಸುವುದೇ ನಮ್ಮ ಆಸೆಯಾಗಿದೆ: ಆತ್ಮವಿಶ್ವಾಸವೇನೆಂದರೆ, ನಂಬಿಕೆಯೆಂಬ ಆಯುಧದಿಂದ ಆತನ ಅನುಗ್ರಹವುಳ್ಳ ವಾಗ್ದಾನಗಳನ್ನು ದೃಢವಾಗಿ ಹಿಡಿದಿಟ್ಟುಕೊಂಡಿರುವ ತನಕ ಆತನು ನಮ್ಮನ್ನು ತನ್ನಿಂದ ಬೇರ್ಪಡಲು ಅನುಮತಿ ನೀಡುವುದಿಲ್ಲ... ನಮ್ಮ ಆತ್ಮವಿಶ್ವಾಸವೇನೆಂದರೆ, 'ನಮ್ಮ ತಂದೆಯ ಕೈಯೊಳಗಿಂದ ನಮ್ಮನ್ನು ಯಾವನೂ ಕಸಕೊಳ್ಳಲಾಗದು' ಮತ್ತು ತಂದೆಯು ತಾನೇ ನಮ್ಮ ಮೇಲೆ ಮಮತೆ ಇಟ್ಟಿದ್ದಾನೆ. ಮತ್ತು ನಾವು ಆತನ ಪ್ರೀತಿಯಲ್ಲಿ ವಿಧೇಯರಾಗಿ ನೆಲೆಸಲು ಅಪೇಕ್ಷಿಸುವವರೆಗೆ ನಮ್ಮನ್ನು ತ್ಯಜಿಸುವುದಿಲ್ಲ ಎಂಬುವದಾಗಿದೆ" ಆರ್. 2232, ಸಿ.1, ಪಿ.1.

## "ಬೇಡಿಕೊಳ್ಳಿರಿ, ನಿಮಗೆ ಸಿಕ್ಕುವದು; ಆಗ ನಿಮ್ಮ ಆನಂದವು ಪರಿಪೂರ್ಣವಾಗುವದು." ಯೋಹಾನ 16:24.

"ನಮ್ಮ ದಿನನಿತ್ಯ ಜೀವನದಲ್ಲಿ ಕರ್ತನನ್ನು ನಮ್ಮ ಜೀವನವಾಗಿಯೂ, ವ್ಯಕ್ತಿಗತ ಸಂಗಾತಿಯಾಗಿಯೂ, ಭರವಸೆಯ ಗೆಳೆಯನಾಗಿಯೂ ಸಲಹೆಗಾರನಾಗಿಯೂ ಸಮಾಧಾನಪಡಿಸುವವನಾಗಿಯೂ ಮಾರ್ಗದರ್ಶಕನಾಗಿಯೂ ಮಾತ್ರವಲ್ಲದೆ, ನಮ್ಮ ರಕ್ಷಕನನ್ನಾಗಿಯೂ ಸ್ವೀಕರಿಸುವ ತನಕ, ಆತನ ಶಿಷ್ಯರು ಈ ಲೋಕವು ಕೊಡಲಾಗದಂಥಹ ಹಾಗೂ ಅವರಿಂದ ಕಸಕೊಳ್ಳಲಾಗದಂಥಹ ಆನಂದವನ್ನೂ, ಅವರಿಗೆ ಕೊಡುವಂಥಹ ಅಮೂಲ್ಯವಾದ ಪಾಠಗಳನ್ನು ಆತನಿಂದ ಕಲಿತುಕೊಳ್ಳಲಾಗುವುದಿಲ್ಲ. ಕ್ರಿಸ್ತನಲ್ಲಿ ಈ ಆತ್ಮೀಯ ಗೆಳೆತನ ಹಾಗೂ ಅನ್ಯೋನ್ಯತೆಯು ಒಬ್ಬೊಬ್ಬರಿಗೂ ಅಧಿಕಧಿಕವಾಗಿ ಆತನ ಸ್ವಂತ ಆತ್ಮವನ್ನು ಸುರಿಸಲಿ, ಈ ರೀತಿಯಲ್ಲಿ ಲೋಕದವರು ನಮ್ಮ ಮತ್ತು ಇತರರ ಜ್ಞಾನವನ್ನು ತೆಗೆದುಕೊಂಡು ನಾವು ಯೇಸುವಿನೊಂದಿಗೆ ಇದ್ದವರೆಂದು ತಿಳಿದುಕೊಳ್ಳಲಿ. (ಅ.ಕೃ.4:13)." ಆರ್.1789, ಮಧ್ಯಭಾಗ.

## "ತಂದೆಯು ತಾನೇ ನಿಮ್ಮನ್ನು ಪ್ರೀತಿಸುತ್ತಾನೆ." ಯೋಹಾನ 16:27.

"ನನ್ನ ಪ್ರಿಯ ಸಹೋದರರೇ, ದೇವರ ಮಕ್ಕಳಾಗಿರುವ ನಮ್ಮ ಮೇಲೆ ಆತನ ಪ್ರೀತಿಯನ್ನು ಈ ಮೇಲಿನ ವಾಕ್ಯವು ಕಲಿಸುವುದನ್ನು ಹೇಗೆ ಅರ್ಥಮಾಡಿಕೊಳ್ಳುತ್ತೀರಿ? ದೇವರಾಗಿ, ಸೃಷ್ಟಿಕರ್ತನಾಗಿ, ತನ್ನ ಎಲ್ಲಾ ಸೃಷ್ಟಿಯ ಮೇಲ್ವಿಚಾರಣೆಯನ್ನು ಆತನು ವಹಿಸಿಕೊಂಡಿದ್ದಾನೆ. ದೇವರು ಎಲ್ಲಾ ಸೃಷ್ಟಿಗೂ ಮುನ್ನೇರ್ಪಾಡು ಮಾಡಿದ್ದಾನೆ, ಗುಬ್ಬಚ್ಚಿಗೂ ಕೂಡ. ಆದರೆ ನಿಷ್ಠೆಯುಳ್ಳ ಮನಸ್ಸಿನಿಂದ ಬಂದಿರುವವರಿಗೆ ಆತನಲ್ಲಿ ಪ್ರೀತಿ, ಅನುಕಂಪ ಮತ್ತು ಅಧಿಕವಾದ ಗೌರವವಿದೆ!.... ನೀವು ಯೋಚಿಸುವಂತೆ ನಾನೂ ಆಲೋಚಿಸುವುದೇನೆಂದರೆ, ದೇವರು ನಮ್ಮನ್ನು ಬಹಳ ಪ್ರೀತಿಸುತ್ತಾನೆ, ಇಲ್ಲವಾದಲ್ಲಿ ನಾವು ಕ್ರಿಸ್ತನಲ್ಲಿರುವಾಗ ನಮಗಾಗಿ ಕರುಣೆಯ ಮೂಲಕ ತನ್ನ ಅಪಾರವಾದ ಕೃಪಾತಿಶಯದಿಂದುಂಟಾದ ಮುನ್ನೇರ್ಪಾಡುಗಳನ್ನು ಮಾಡುತ್ತಿರಲಿಲ್ಲ... ನಾನು ಅಂದುಕೊಳ್ಳುವಂತೆ, ಪ್ರತೀದಿನ, ಪ್ರತೀವಾರ, ಪ್ರತೀತಿಂಗಳು,

ಪ್ರತೀವರ್ಷ ಈ ಕಾರ್ಯಗಳ ಬಗ್ಗೆ ಆಲೋಚಿಸಿ, ಅದನ್ನು ಪರಿಗಣಿಸಿ, ಅಧ್ಯಯನ ಮಾಡಿ, ದೇವರು ತನ್ನ ಭವ್ಯವಾದ ಯೋಜನೆಯಲ್ಲಿ ವ್ಯಕ್ತಪಡಿಸಿರುವ ಶ್ರೇಷ್ಠ ಪ್ರೀತಿಯನ್ನು ಅರ್ಥಮಾಡಿಕೊಂಡರೆ, ದೇವರು ತಾನೇ ನಮ್ಮನ್ನು ಎಷ್ಟೊಂದು ಪ್ರೀತಿ ಮಾಡುತ್ತಾರೆ ಎಂಬುದನ್ನು ಗ್ರಹಿಸಿಕೊಳ್ಳುತ್ತೇವೆ. ಆದರೂ ನಾವು ಇದನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳಲಾಗುವುದಿಲ್ಲ. ಆದರೆ ಸತ್ಯಾಂಶವೇನೆಂದರೆ, ಯಾವ ತಂದೆಯಾದರೂ ತನ್ನ ಮಕ್ಕಳಿಗೆ ಭವ್ಯವಾದ ಕಾರ್ಯಗಳನ್ನು ಮಾಡುವುದರಲ್ಲಿ ಶ್ರೇಷ್ಠ ಪ್ರೀತಿಯು ಒಳಗೊಂಡಿರುತ್ತದೆ." ಆರ್.5725, ಸಿ.2, ಪಿ.4,6,7.

**"ನೀನು ನನ್ನನ್ನು ಕಳುಹಿಸಿಕೊಟ್ಟಿದ್ದೀ ಎಂದೂ ನೀನು ನನ್ನನ್ನು ಪ್ರೀತಿಸಿದಂತೆ ಅವರನ್ನೂ ಪ್ರೀತಿಸಿದ್ದೀ ಎಂದೂ ಲೋಕಕ್ಕೆ ತಿಳಿದುಬರುವದು." ಯೋಹಾನ 17:23.**

"ಅತೀ ಆಶ್ಚರ್ಯದಿಂದ ನಾವು ವಿಚಾರಿಸುವುದೇನೆಂದರೆ, ಇದು ಹೇಗೆ ಸಾಧ್ಯ?... ಆದರೆ ನಮ್ಮನ್ನು ತೊಳೆದು ಶುದ್ಧೀಕರಿಸಲಾಗಿದೆ ಮತ್ತು ನಮ್ಮ ಮಣ್ಣಿನ ಘಟಕಗಳು ಎಷ್ಟೇ ಅಪರಿಪೂರ್ಣವಾಗಿದ್ದರೂ, ಹೃದಯವನ್ನು ತಿಳಿದುಕೊಳ್ಳಬಲ್ಲ ಆತನ ದೃಷ್ಟಿಯಲ್ಲಿ ನಮ್ಮ ಹೃದಯಗಳು ಪರಿಪೂರ್ಣವಾಗಿವೆ. ಹಾಗೂ ದೇವರು ನಮ್ಮನ್ನು ಪರಿಪೂರ್ಣ ಹೃದಯದಿಂದ ನೋಡುತ್ತಾರೆ, ಅಂದರೆ ನಮ್ಮ ಪರಿಪೂರ್ಣ ಉದ್ದೇಶ ಹಾಗೂ ಸಂಕಲ್ಪವನ್ನು ನೋಡುತ್ತಾರೆ. ತಮ್ಮ ಅಪರಿಪೂರ್ಣ ಶರೀರದ ಬಲಹೀನತೆ ಹಾಗೂ ದೌರ್ಬಲ್ಯತೆಗಳ ವಿರುದ್ಧ ಗೆಲ್ಲಲು ಪ್ರಯಾಸಪಡುವವರು ನೋವಿನ ಹೊರತಾಗಿಯೂ ದೃಢತೆಯಿಂದ ಆತನ ಚಿತ್ತವನ್ನು ನೆರವೇರಿಸಲು ಪ್ರಯತ್ನಿಸುವುದಲ್ಲದೆ, ನಮ್ಮನ್ನು ಪತನದಿಂದ ವಿಮೋಚನೆ ಮಾಡುವುದಕ್ಕೋಸ್ಕರ ಆತನು ಮಾಡಿರುವ ಅನುಗ್ರಹಗಳಲ್ಲಿ ಹಂಬಲದಿಂದ ನಂಬಿಕೆಯಿಡುವುದರಿಂದ ತಂದೆಯು ನಮ್ಮಲ್ಲಿ ಆತನ ಪ್ರೀತಿಗೆ ಪಾತ್ರವಾದುದನ್ನು ಅಂಗೀಕರಿಸಿಕೊಳ್ಳುತ್ತಾರೆ. ಮತ್ತು ಹೀಗೆ ತಂದೆಯು ಮಗನನ್ನು ಪ್ರೀತಿಸಿದಂತೆ ನಮ್ಮನ್ನೂ ಪ್ರೀತಿಸುತ್ತಾರೆ ಎಂಬುವ ಸ್ಪಷ್ಟವಾದ ಅರಿವನ್ನು ನಮ್ಮ ಯೇಸುಕ್ರಿಸ್ತನು ನೀಡುತ್ತಾರೆ." ಆರ್.3161, ಸಿ.2, ಪಿ.2.

**"ಹೇಗಂದರೆ ಆತನ ಮರಣದ ಹೋಲಿಕೆಯಲ್ಲಿ ನಾವು ಒಟ್ಟಾಗಿ ನೆಲೆಸಿದ್ದರೆ ಆತನ ಪುನರುತ್ಥಾನದ ಹೋಲಿಕೆಯಲ್ಲಿಯೂ ಇರುವೆವು." ರೋಮಾ. 6:5.**

"ಆತನ ಪುನರುತ್ಥಾನದ ಸ್ವಭಾವವನ್ನು ಈಗ ಮನಸ್ಸಿಗೆ ತಂದುಕೊಳ್ಳಿರಿ. ಇದು ಮಿತಿಮೀರಿದ ಅತ್ಯಂತ ಉನ್ನತವಾದದ್ದು, ಮನುಷ್ಯ ಸ್ವಭಾವಕ್ಕಿಂತ ಎಷ್ಟೋ ಮೇಲಾದದ್ದು, 'ಸಕಲ ರಾಜತ್ವ, ಅಧಿಕಾರ, ಮಹತ್ವ ಪ್ರಭುತ್ವಾದಿಗಳ ಮೇಲೆಯೂ, ಹೆಸರುಗೊಂಡವರೆಲ್ಲರ ಮೇಲೆಯೂ' ಇರುವಂಥದ್ದು. ಇದರ ಉನ್ನತವು ದೈವೀಕ ಸ್ವಭಾವವೇ ಆಗಿದ್ದು, ಇದರ ಬಗ್ಗೆ ಪೇತ್ರನು ಹೇಳಿದಂತೆ, ನಮಗೆ ಮಾದರಿಯಾಗಿರುವ ಆತನ ಹೆಜ್ಜೆಜಾಡಿನಲ್ಲಿ ನಡೆಯುವವರಾದರೆ ಆತನಲ್ಲಿ ಸಹಬಾಧ್ಯಸ್ಥರಾಗುವೆವು. (2 ಪೇತ್ರನು. 1:4) ಮರಣದವರೆಗೆ ಕರ್ತನ ಅವಮಾನ

ಹಾಗೂ ಬಲಿಯ ಹೆಜ್ಜೆಜಾಡಿನಲ್ಲಿ ಹಿಂಬಾಲಿಸುವುದು ಸರಳವಾದ ಹೊಣೆಯಲ್ಲ. ಇದರ ಅರ್ಥವೇನೆಂದರೆ, ದೈವೀಕ ಚಿತ್ತವು ನೆರವೇರುವುದಕ್ಕೋಸ್ಕರ ನಮ್ಮ ಚಿತ್ತವನ್ನು ನಿರಾಕರಿಸುವುದಾಗಿದೆ." ಆರ್.1262, ಸಿ.2, ಪಿ.4.

## "ನಾವು ಕ್ರಿಸ್ತನೊಡನೆ ಸತ್ತ ಪಕ್ಷದಲ್ಲಿ ಆತನೊಡನೆ ಜೀವಿಸುವೆವೆಂದು ನಂಬುತ್ತೇವೆ." ರೋಮಾ. 6:8.

"ಮುಂದೆ ಸಿಗುವ ಮಹಿಮೆ ಹಾಗೂ ಘನತೆಯನ್ನು ಕ್ರಿಸ್ತನೊಂದಿಗೆ ಹಂಚಿಕೊಳ್ಳಲು ಕೊಟ್ಟಿರುವ ಆಹ್ವಾನಕ್ಕೆ ಹೊಂದಿಕೊಂಡಿರುವ ಅವಶ್ಯಕತೆ ಅಥವಾ ಷರತ್ತುಗಳನ್ನು ಇಲ್ಲಿ ಸ್ಪಷ್ಟವಾಗಿ ವಿವರಿಸಲಾಗಿದೆ: ಅಂಥವರು ಆತನ ಮರಣದಲ್ಲಿ ಪಾಲುಗಾರರಾಗಬೇಕು, ಆತನ ಮರಣದಲ್ಲಿ ಮುಳುಗಬೇಕು ಅಥವಾ ಹೂಣಲ್ಪಡಬೇಕು... ಆತನ ಮರಣದಲ್ಲಿ ಪಾಲುಗಾರ ರಾಗುವುದೇನೆಂದರೆ, ನಮ್ಮ ರಕ್ಷಕನು ತನ್ನ ಜೀವನವನ್ನು ಸ್ವ-ತೃಪ್ತಿಯಲ್ಲಿ ಕಳೆಯದೆ, ಬದಲಾಗಿ ಪಾಪವನ್ನು ವಿರೋಧಿಸಿ, ತಂದೆಯ ಯೋಜನೆಯ ಕೆಲಸ ಮಾಡುವುದಕ್ಕೂ ಅದನ್ನು ನೆರವೇರಿಸುವುದಕ್ಕೂ, ಸತ್ಯದ ಹಾಗೂ ನೀತಿಯ ಹಿತಾಸಕ್ತಿಗಾಗಿ ಉಪಯೋಗಿಸಿ-ದರು. ಹಾಗೆಯೇ ನಾವು ಕೂಡ ನಮ್ಮ ಸಮಯ, ತಾಲೆಂತು ಬಲ, ಹಕ್ಕು ಹಾಗೂ ಬಾಧ್ಯತೆಗಳನ್ನು ಉಪಯೋಗಿಸಿಕೊಳ್ಳಬೇಕು, ಆತನು ನಮ್ಮನ್ನು ಸಂಪಾದಿಸಿ ನಮಗೆ ಕೊಟ್ಟಿರುವುದರಿಂದ, ನಾವು ಇವುಗಳೆಲ್ಲವನ್ನು ತಂದೆಯ ಸೇವೆಗಾಗಿ ಸಮರ್ಪಿಸಿವುದಲ್ಲದೆ, ಸಾಧ್ಯವಾದಷ್ಟು ಮಟ್ಟಿಗೆ ಆತನ ಹೆಜ್ಜೆಜಾಡಿನಲ್ಲಿ ನಡೆಯುವುದರಿಂದ, ಆತನು ಮಾದರಿಯಾಗಿ ಬಿಟ್ಟುಹೋದಂತೆ, ಮರಣದವರೆಗೆ ನಂಬಿಗಸ್ತತೆಯಿಂದ ಅವುಗಳನ್ನು ಉಪಯೋಗಿಸಿ ಕೊಳ್ಳಬೇಕು. ಒಂದುವೇಳೆ ಹೀಗೆ ಆತನೊಂದಿಗೆ ಸತ್ತ ಪಕ್ಷದಲ್ಲಿ ತಕ್ಕ ಕಾಲದಲ್ಲಿ ಆತನೊಡನೆ ಜೀವಿಸುವೆವು." ಆರ್.1542, ಸಿ.2, ಪಿ.3.

## "ನಾವು ದೇವರ ಮಕ್ಕಳಾಗಿದ್ದೇವೆಂಬದಕ್ಕೆ ಪವಿತ್ರಾತ್ಮನೇ ನಮ್ಮ ಆತ್ಮದೊಂದಿಗೆ ಸಾಕ್ಷಿ ಹೇಳುತ್ತಾನೆ." ರೋಮಾ. 8:16.

"ದೇವರ ಮಕ್ಕಳಲ್ಲಿ ಒಬ್ಬರಾಗಿ ಎಣಿಸಿಕೊಳ್ಳುವುದು ಶ್ರೇಷ್ಠ ಸೌಭಾಗ್ಯವಾಗಿದೆ; ಆದರೆ ಇದರ ಅರ್ಥವು ಅನೇಕರು ಗ್ರಹಿಸಿಕೊಳ್ಳುವುದಕ್ಕಿಂತ ಅತ್ಯಂತ ಹೆಚ್ಚಿನದಾಗಿದೆ, ಅವರ ಪಕ್ಷದಲ್ಲಿಯೂ ಹಾಗೂ ದೇವರ ಪಕ್ಷದಲ್ಲಿಯೂ ಅತೀ ಹೆಚ್ಚಿನದಾಗಿದೆ... ದೇವರ ಪಕ್ಷದಲ್ಲಿ ನೋಡುವು-ದಾದರೆ, ಕ್ರಿಸ್ತನ ಮೂಲಕ ಅಂಥವರಿಗೆ ಆತನು ಮಾಡಿರುವ ಕೃಪೆಯ ವಾಗ್ದಾನಗಳನ್ನು ನೇರವೇರಿಸುವುದನ್ನು ಸೂಚಿಸುತ್ತದೆ... ಪ್ರಸ್ತುತ ಜೀವನದಲ್ಲಿ ಆತನ ಪಿತೃಸದೃಶ ಪ್ರೀತಿ, ಪಾಲನೆ, ಶಿಸ್ತು, ಸಲಹೆ, ಉಪದೇಶ, ರಕ್ಷಣೆ ಹಾಗೂ ಅಂತ್ಯದವರೆಗೆ ಪ್ರೋತ್ಸಾಹ ಇರುವುದನ್ನು ಇದು ಸೂಚಿಸುತ್ತದೆ; ಮತ್ತು ಆನಂತರ ನಾವು ಆತನ ಮಹಿಮೆಯ ಪ್ರಸನ್ನತೆ, ನಿತ್ಯದ ವಿಶ್ರಾಂತಿ, ಹರ್ಷ ಹಾಗೂ ಸಮಾಧಾನದಲ್ಲಿ ಸ್ವೀಕರಿಸಲ್ಪಡುವೆವು. ಓಹೋ, ದೇವರ ಮಕ್ಕಳೆನಿಸಿಕೊಳ್ಳುವುದು ಎಷ್ಟೊಂದು ಆಶೀರ್ವಾದಯುತವಾಗಿದೆ! ಪ್ರಸ್ತುತ ಜೀವನದಲ್ಲಿ ಆತನ ದಯೆಯ ಕೊಡುಗೆಯು ಗಣನೆಗೂ ಮಿತಿಮೀರಿದೆ." ಆರ್.1787, ಸಿ.2, ಕೊನೆ ಅಂಕಣ; ಆರ್.1788, ಸಿ.1, ಪಿ.1.

**“ಮಕ್ಕಳಾಗಿದ್ದರೆ ಬಾಧ್ಯರಾಗಿದ್ದೇವೆ; ದೇವರಿಗೆ ಬಾಧ್ಯರು, ಕ್ರಿಸ್ತನೊಂದಿಗೆ ಸಹ ಬಾಧ್ಯರು; ಆತನೊಂದಿಗೆ ಶ್ರಮೆಯನ್ನನುಭವಿಸುವದಾದರೆ ಒಟ್ಟಾಗಿ ನಾವು ಸಹ ಮಹಿಮೆಯನ್ನು ಹೊಂದುವೆವು.” ರೋಮಾ. 8:17.**

“ಕ್ರೈಸ್ತನು ತನ್ನ ಮುಂದೆ ಅತ್ಯಂತ ಉತ್ತಮವಾದ ಮಹತ್ವಾಕಾಂಕ್ಷೆಯನ್ನು ಇಟ್ಟುಕೊಂಡಿದ್ದಾನೆ. ದೇವರು ತನ್ನ ಹೆಸರಿಗಾಗಿ ಲೋಕದಿಂದ ಜನರನ್ನು ಕರೆಯುತ್ತಿದ್ದಾರೆ. ಇವರ ಮುಂದೆ ಎತ್ತರವಾದ ಮಹತ್ವಾಕಾಂಕ್ಷೆಯನ್ನು ಇಡುತ್ತಾನೆ. ಇವರನ್ನು ನಮ್ಮ ಕರ್ತನಾದ ಯೇಸುಕ್ರಿಸ್ತನೊಂದಿಗೆ ಸಹ–ಬಾಧ್ಯರಾಗುವುದಕ್ಕಾಗಿ ಆಹ್ವಾನಿಸಲಾಗಿದೆ. ಸ್ವರ್ಗೀಯ ತಂದೆಯ ಮತ್ತು ಕರ್ತನ ಸಮಾಜದ ಆತನ ಸ್ನೇಹ ಮತ್ತು ಅನ್ಯೋನ್ಯತೆಗೆ ತಮ್ಮನ್ನೇ ತಯಾರು ಮಾಡಿಕೊಳ್ಳುವ ಸಲುವಾಗಿ, ಮನಸ್ಸಿನ ಮತ್ತು ನಡತೆಗಳ ಎಲ್ಲಾ ಉನ್ನತವಾದ ಗುಣಮಟ್ಟಗಳನ್ನು ಬೆಳೆಸಿಕೊಳ್ಳುವಂತೆ ಅವರಿಗೆ ಸ್ಫೂರ್ತಿ ನೀಡುವ ಮಹತ್ವಾಕಾಂಕ್ಷೆ ಇದಾಗಿದೆ. ಕರ್ತನ ವಾಕ್ಯಕ್ಕೆ ಅತೀ ಶ್ರದ್ಧೆಯಿಂದ ಲಕ್ಷ್ಯಕೊಡುವ ಉತ್ತೇಜಕವಾಗಿ ಈ ಉನ್ನತ ಮಹತ್ವಾಕಾಂಕ್ಷೆಯು ನಮ್ಮ ಮುಂದೆ ಎಂದಿಗೂ ಇರಲಿ... ಕುರಿಯಾದಾತನ ವಧು ತನ್ನನ್ನು ಸಿದ್ಧಪಡಿಸಿಕೊಂಡಿದ್ದಾಳೆ. (ಪ್ರಕ. 19:7) ಆದುದರಿಂದ ಇವರು ತಮ್ಮನ್ನೇ ಸಿದ್ಧಪಡಿಸಿಕೊಳ್ಳಲು ಮತ್ತು ದೇವರ ಪ್ರೀತಿಯ ಕುಟುಂಬದ ಇತರರಿಗೆ ಸಹಾಯ ಮಾಡಲು ಬಯಸಬೇಕು.” ಆರ್. 5185, ಸಿ.1, ಪಿ.3, 5.

**“ನಮ್ಮಲ್ಲಿ ಪ್ರತ್ಯಕ್ಷವಾಗಲಿರುವ ಮಹಿಮೆಯೊಂದಿಗೆ ಈಗಿನ ಕಾಲದ ಶ್ರಮೆಗಳನ್ನು ಹೋಲಿಸುವದು ಯೋಗ್ಯವಲ್ಲವೆಂದು ನಾನು ಎಣಿಸುತ್ತೇನೆ.” ರೋಮಾ. 8:18.**

"ಧೈರ್ಯಶಾಲಿಯಾದ ಹೃದಯವನ್ನು ತತ್ತರಿಸುವಂತೆ ಮಾಡುವಂಥಹ ಸನ್ನಿವೇಶಗಳಲ್ಲಿ ಕರ್ತನ ಅಲ್ಪ ವಿನಮ್ರ ವ್ಯಕ್ತಿಗಳ ಶಾಂತತೆಯನ್ನು ಕಂಡು ಲೋಕವು ಆಗಾಗ್ಗೆ ಆಶ್ಚರ್ಯಕ್ಕೊಳಗಾಗಿದೆ".

"ಆದರೆ ನಮ್ಮ ದೇವರನ್ನು ಮಹಿಮೆಪಡಿಸುವಂಥಹ ಮತ್ತು ಆತನ ಅನುಗ್ರಹವನ್ನು ಘನಪಡಿಸುವಂಥಹ ಮಾರ್ಗವನ್ನು ಜೀವನದಲ್ಲಿ ಅನುಸರಿಸಲು, ನಾವು ಸ್ವರ್ಗೀಯ ರಾಜನ ಪ್ರತಿನಿಧಿಗಳಾಗಿ, ಕ್ರೈಸ್ತರಾಗಿ ನಮಗೆ ಸಂಭವಿಸುವಂಥಹ ಕಷ್ಟ ಮತ್ತು ಶೋಧನೆಗಳನ್ನು ಬುದ್ಧಿವಂತಿಕೆಯಿಂದಲೂ ಧೈರ್ಯದಿಂದಲೂ ಎದುರಿಸಲು ಸಾಧ್ಯವಾಗುವಂತೆ ಮತ್ತು ನಮ್ಮ ಉಪದ್ರವಗಳನ್ನು ಸಂತೋಷವೆಂದೆಣಿಸಿ ಅವುಗಳನ್ನು ಹರ್ಷದ ಆತ್ಮದಿಂದ ಎದುರಿಸಲು, ನಮ್ಮ ಹೃದಯಗಳು ಕರ್ತನಿಗೆ ಯೋಗ್ಯವಾಗಿರುವುದು ಅವಶ್ಯವಾಗಿದೆ. ಅಂದರೆ, ನಮ್ಮಲ್ಲಿ ಆತನ ಚಿತ್ತವು ಮಾತ್ರವಿದ್ದರೆ, ಉರುಲನ್ನು ತರುವಂಥಹ ಮನುಷ್ಯನ ಭಯವನ್ನು ಜಯಿಸಬಹುದು. ಇದನ್ನು ನಮ್ಮ ಸ್ವಂತ ಶಕ್ತಿಯಿಂದ ಸಾಧಿಸಲು ಸಾಧ್ಯವಿಲ್ಲ, ಬದಲಾಗಿ ದೇವರ ಶಕ್ತಿಯಿಂದ ಮಾತ್ರ ಸಾಧ್ಯವಾಗಿದೆ.” ಆರ್. 5540, ಸಿ.2, ಪಿ.4.

## “ಇದಲ್ಲದೆ ದೇವರ ಸಂಕಲ್ಪದ ಮೇರೆಗೆ ಕರೆಯಲ್ಪಟ್ಟು ಆತನನ್ನು ಪ್ರೀತಿಸುವವರ ಹಿತಕ್ಕಾಗಿ ಎಲ್ಲಾ ಕಾರ್ಯಗಳು ಅನುಕೂಲವಾಗುತ್ತವೆ ಎಂದು ನಮಗೆ ಗೊತ್ತದೆ.” ರೋಮಾ. 8:28.

“ನಮ್ಮ ಕರ್ತನು ಕೊಟ್ಟಿರುವ ಖಾತರಿ ಏನೆಂದರೆ, ‘ಆತನನ್ನು ಪ್ರೀತಿಸುವವರ ಹಿತಕ್ಕಾಗಿ ಎಲ್ಲಾ ಕಾರ್ಯಗಳು ಅನುಕೂಲವಾಗುತ್ತವೆ,’ ಆತನ ಮೇಲೆ ನಂಬಿಯನ್ನಿಟ್ಟುವವರಿಗೆ ನಮಗೆ ಆಶೀರ್ವಾದವನ್ನು ಉಂಟುಮಾಡದ ಯಾವುದೇ ಕಾರ್ಯಗಳನ್ನು ಅನುಮತಿಸ ಲಾಗುವುದಿಲ್ಲ ಅಂಬುವದಾಗಿದೆ” ಆರ್. 5546, ಸಿ. 2, ಪಿ.6.

“ಚೆನ್ನಾಗಿ ಬೋಧಿಸಲ್ಪಟ್ಟಂಥಹ ಆತ್ಮವು ಕಲಿತುಕೊಂಡಿರುವುದೇನೆಂದರೆ, ಇಲ್ಲಿ ಸೂಚಿಸಲ್ಪಟ್ಟಿರುವ ‘ಅನುಕೂಲವೆಂಬುದು’ ಯಾವಾಗಲೂ ಅಥವಾ ಆಗಾಗ್ಗೆ, ಲೌಕಿಕ ಅನುಕೂಲತೆ, ತಾತ್ಕಾಲಿಕ ಸೌಕರ್ಯಗಳ ಬಗ್ಗೆ ಪ್ರಸ್ತಾಪಿಸುವುದಿಲ್ಲ: ದೇವರನ್ನು ಪ್ರೀತಿಸುವವರಿಗೆ ತಿಳಿಸಿರುವಂತೆ...‘ಎಲ್ಲಾ ಕಾರ್ಯ’ಗಳೆಂಬುದು ಮುಖ್ಯವಾಗಿ ತಾವು ನಡೆಯಲು ತಮ್ಮನ್ನೇ ಸಮರ್ಪಿಸಿಕೊಟ್ಟಂಥಹ ಇಕ್ಕಾಟ್ಟಾದ ಹಾದಿಯ ಶೋಧನೆ, ನಿರಾಸೆ, ಕಳವಳ, ಕಷ್ಟ ಹಾಗೂ ಪ್ರಚೋದನೆಗಳಾಗಿವೆ; ಮತ್ತು ‘ಅನುಕೂಲ’ವೆಂದು ಸಾಧಿಸಿದ ಕಾರ್ಯಗಳು ಕ್ರಿಸ್ತನ ಸ್ವಭಾವದ ಗುಣಲಕ್ಷಣಗಳಿಗೆ ಹೊಂದುವಂತೆ ಮೆರುಗುಗೊಳಿಸಿದ ಹೊಳಪಿನ ಗುಣಲಕ್ಷಣಗಳಾಗಿರುತ್ತವೆ, ಇವುಗಳನ್ನು ಮರಣದವರೆಗೂ ನಂಬಿಗಸ್ತರಾಗಿರು-ವುದರ ಮೂಲಕ ದೈವೀಕ ಘನತೆ ಹಾಗೂ ಮಹಿಮೆಯಲ್ಲಿ ಪರಿಪೂರ್ಣ-ಗೊಳಿಸಲಾಗುವುದು.” ಆರ್.2241, ಸಿ.2, ಪಿ.5.

## “ದೇವರು ನಮ್ಮ ಕಡೆ ಇದ್ದರೆ ನಮ್ಮನ್ನು ಎದುರಿಸುವವರು ಯಾರು?” ರೋಮಾ. 8:31.

‘ದೇವರು ನಮ್ಮ ಕಡೆ ಇದ್ದರೆ’ ಎಂಬ ಸುಂದರವಾದ ಮಾತುಗಳನ್ನು ಈ ಪ್ರತಿಯೊಬ್ಬರು (ಸಂತರು) ತಮಗೇ ಹೇಳಿಕೊಂಡು, ತನಗೇ ಅನ್ವಯವಾಗುತ್ತದೆಂದು ತನ್ನ ಹೃದಯದ ಆಳದಿಂದ ಗ್ರಹಿಸಿಕೊಳ್ಳಬಹುದು. ಆದರೆ ಅವನು ಅವುಗಳ ಅದ್ಭುತವಾದ ಅರ್ಥವನ್ನು ಪೂರ್ಣವಾಗಿ ಅರಿತುಕೊಳ್ಳಲು ವಿಫಲನಾಗುವನು. ದೈವೀಕ ಅನುಗ್ರಹ, ಪ್ರೀತಿ ಹಾಗೂ ಪರಾಕ್ರಮದ ಶ್ರೇಷ್ಠತೆಯನ್ನು ಅರಿಯಲು ಮನುಷ್ಯನ ಮನಸ್ಸಿಗೆ ಸಾಧ್ಯವಿಲ್ಲ. ನಾವು ಅವುಗಳನ್ನು ಗ್ರಹಿಸಿಕೊಳ್ಳಲಾಗುವುದಿಲ್ಲ. ಅವುಗಳನ್ನು ಕೇವಲ ಗೌರವಿಸಬಹುದಾಗಿದೆ. ಇದು ದೇವರು ತನ್ನ ಅನಂತ ಜ್ಞಾನ ಹಾಗೂ ಪರಾಕ್ರಮದಿಂದ ನಮ್ಮ ಕಡೆ ಇರುವುದು, ಕ್ರಿಸ್ತನೂ ನಮ್ಮ ಕಡೆ ಇರುವುದನ್ನು ಸೂಚಿಸುತ್ತದೆ, ಯಾಕೆಂದರೆ ಆತನು ತಂದೆಯಲ್ಲಿ ಒಂದಾಗಿದ್ದಾನೆ; ಇದಲ್ಲದೆ ಎಲ್ಲಾ ದೇವದೂತರು, ಕೆರೂಬಿಯರು ಹಾಗೂ ಸೆರಾಫಿಯರು ಮತ್ತು ನಮ್ಮ ಜ್ಞಾನಕ್ಕೆ ಎಟುಕುವಂಥಹ ಹಾಗೂ ಎಟುಕದಂಥಹ ಎಲ್ಲಾ ಸ್ವರ್ಗೀಯ ಬಲವು ನಮ್ಮ ಕಡೆ ಇರುವುದನ್ನು ಸೂಚಿಸುತ್ತದೆ, ಪಟ್ಟಿಯಲ್ಲಿ ಸೇರಿಸಿರುವ ಎಲ್ಲರೂ ನಮಗೆ ಒಳ್ಳೆಯದನ್ನು ಮಾಡಲು, ನಮಗೆ ಸಹಾಯ ಮಾಡಲು, ಅಗತ್ಯ ಸಮಯಗಳಲ್ಲಿ ನೆರವು ನೀಡಲು,

ಶೋಧನೆಯ ಕಾಲದಲ್ಲಿ ನಮ್ಮನ್ನು ಎತ್ತಿಹಿಡಿಯಲು, ತಂದೆಯ ಚಿತ್ತವನ್ನು ನಾವು ನೆರವೇರಿಸುವಂತೆ ಬಲಗೊಳಿಸಲು ನಮ್ಮ ಕಡೆ ಇದ್ದಾರೆ... ಸತ್ಯಾಂಶವೇನೆಂದರೆ, ದೇವರು ನಮ್ಮ ಕಡೆ ಇದ್ದಾರೆ ಮತ್ತು ಆತನು ಎಲ್ಲಾ ಕಾರ್ಯಗಳನ್ನು ನಮ್ಮ ಹಿತಕ್ಕಾಗಿ ರಚಿಸಿದ್ದಾರೆ ಎಂಬುದು ಕೇಂದ್ರೀಯ ವಿಚಾರವೂ, ಸಾರವೂ ಹಾಗೂ ನಮಗೆ ಈ ವಾರ್ತೆಯ ಬಲವೂ ಆಗಿದೆ. ಆರ್.4214, ಸಿ.1, ಪಿ.9.

**"ಯಾಕಂದರೆ ಸಮಸ್ತವೂ ನಿಮ್ಮದು; ನೀವಂತೂ ಕ್ರಿಸ್ತನವರು, ಕ್ರಿಸ್ತನು ದೇವರವನು." 1 ಕೊರಿಂಥ. 3:21, 23.**

"ಲೋಕದಲ್ಲಿ ಈಗ ಇರುವ ಇತರ ಎಲ್ಲರಿಗಿಂತ ಇವರಿಗೆ ಅಧಿಕವಾದ ಆನಂದವಿದೆ; ಇತರರು ಇನ್ನೂ ಗ್ರಹಿಸಿಕೊಳ್ಳುತ್ತಿರುವಾಗಲೇ ಇವರು ಅನಂದಿಸುತ್ತಿದ್ದಾರೆ. ಅಪೋಸ್ತಲನು ಪ್ರಕಟಿಸುವಂತೆ, 'ದೇವರು ನಮ್ಮ ಅನುಭೋಗಕ್ಕೋಸ್ಕರ ನಮಗೆ ಎಲ್ಲವನ್ನೂ ಹೇರಳವಾಗಿ ದಯಪಾಲಿಸಿದ್ದಾರೆ.' (1 ತಿಮೋಥಿ. 6:17) ಗ್ರಹಿಸಿಕೊಳ್ಳುವ ಆತ್ಮದಿಂದ ಮುಕ್ತರಾಗಿ, ನಾವು ಬೀದಿಗಳಲ್ಲಿ ನಡೆದು ಹೋಗುವಾಗ ವ್ಯಾಪಾರ ಮಳಿಗೆಗಳ ಕಿಟಕಿಗಳಲ್ಲಿ ಗಮನಿಸಿರುವ ಭವ್ಯವಾದ ಪ್ರದರ್ಶನಗಳಲ್ಲಿ ಯಾವುದೇ ಬಯಕೆಯಿಲ್ಲದೆ, ನಮ್ಮಲ್ಲೂ ಕಲೆಯ ಕೌಶಲ್ಯವಿದ್ದರೂ, ಆ ಸೌಂದರ್ಯವು ನಮ್ಮ ವಿಶೇಷವಾದ ಹತೋಟಿಯಲ್ಲಿರುವುದಕ್ಕೆ ಆಶಿಸದೆ ನಾವು ಮುಂದೆ ಸಾಗಬಹುದು. ನಮ್ಮ ಎಲ್ಲಾ ತಾಲೆಂತುಗಳನ್ನು ಕರ್ತನಿಗೆ ಮತ್ತು ಆತನ ಸೇವೆಗೆ ಪ್ರತಿಷ್ಠೆಪಡಿಸಿರುವುದರಿಂದ, ನಮಗೆ ಲೋಕದ ತಂತ್ರವೆನಿಸಿಕೊಳ್ಳುವ ಕಲೆಯ ಕ್ರಿಯೆಗಳ ಬಗ್ಗೆ ಚಿಂತಿಸುವದಕ್ಕಿಂತ ಮಿಗಿಲಾದ ಸಂಗತಿಗಳಿರುವುದರಿಂದ ಅಂಥವುಗಳ ಮೇಲೆ ನಮ್ಮ ಕಣ್ಣುಗಳು ಸಂಭ್ರಮಿಸಿ, ಅವುಗಳ ಮೇಲೆ ಯಾವುದೇ ಆಸಕ್ತಿ ಇಲ್ಲದೆ ಇರಬಹುದಾಗಿದೆ." ಆರ್. 3734, ಸಿ.2, ಪಿ.4.

**"ದೇವರು ನಂಬಿಗಸ್ತನು; ನಿಮ್ಮ ಶಕ್ತಿಯನ್ನು ಮೀರುವ ಶೋಧನೆಯನ್ನು ನಿಮಗೆ ಬರಗೊಡಿಸದೆ ನೀವು ಅದನ್ನು ಸಹಿಸುವದಕ್ಕೆ ಶಕ್ತರಾಗುವಂತೆ ಶೋಧನೆಯಾಗುತ್ತಲೇ ತಪ್ಪಿಸಿಕೊಳ್ಳುವ ಮಾರ್ಗವನ್ನು ಸಿದ್ಧಮಾಡುವನು." 1 ಕೊರಿಂಥ. 10:13.**

"ಸಭೆಯ ಕಷ್ಟ, ಶೋಧನೆಯ ವಿಚಾರವಾಗಿ ನಮ್ಮ ಕರ್ತನ ಮಾತುಗಳು ನಮಗೆ ಕೊಡುವ ಭರವಸೆಯೇನೆಂದರೆ, ಈ ತರಗತಿಯು ಭಯಪಡಬೇಕಾಗಿರುವುದು ಏನೂ ಇಲ್ಲ, ಅವರನ್ನು ಸುರಕ್ಷಿತವಾಗಿಡಲಾಗುವುದು, ಅವರು ಪರಿಶೋಧನೆಗೊಳಗಾಗಲು ಸಾಧ್ಯವಿಲ್ಲ, ಯಾಕೆಂದರೆ ಪ್ರತಿಯೊಂದು ಶೋಧನೆಯಲ್ಲೂ ತಪ್ಪಿಸಿಕೊಳ್ಳುವುದಕ್ಕೆ ಕರ್ತನು ಮಾರ್ಗವನ್ನು ಒದಗಿಸುವನು... ನಾವು ಅಪೇಕ್ಷಿಸುವುದೇನೆಂದರೆ, ಪ್ರತಿಷ್ಠೆಪಡಿಸಿಕೊಂಡ ಪ್ರತಿಯೊಬ್ಬ ದೇವರ ಮಕ್ಕಳು ದೇವರು ಒದಗಿಸುವ ತಪ್ಪಿಸಿಕೊಳ್ಳುವ ಮಾರ್ಗವನ್ನು ಎದುರು ನೋಡಬೇಕು ಮತ್ತು ಅದನ್ನೇ ಉಪಯೋಗಿಸಬೇಕು. ಹೀಗೆ ಕರ್ತನ ಪೂರ್ವಸಿದ್ಧತೆಯ ಪ್ರಕಾರದಲ್ಲಿ ಮತ್ತು

ಗುರಾಣಿಯಿಂದ ಆವರಿಸಲ್ಪಟ್ಟವರ ಮಧ್ಯದಲ್ಲಿ, ಅಂದರೆ ಆಯ್ದುಕೊಂಡವರಾದ 'ಕರೆಯಲ್ಪಟ್ಟವರು, ಆರಿಸಲ್ಪಟ್ಟವರು, ನಂಬಿಗಸ್ತರು ಇರಬೇಕು... ನಮ್ಮ ಅನೇಕ ಓದುಗಾರರು ಒಪ್ಪಿಕೊಳ್ಳುವ ಪ್ರಕಾರ, ನಮ್ಮನ್ನು ದುಷ್ಟನ ಶಕ್ತಿಯಿಂದ ಸುರಕ್ಷಿತವಾಗಿಡಲು ಪ್ರಸ್ತುತ ಸತ್ಯವು ಕರ್ತನು ಮಾಡಿರುವ ವಿಶೇಷವಾದ ಪೂರ್ವ ಸಿದ್ಧತೆಯಾಗಿದೆ, ಇದನ್ನು ವಾಚ್‌ಟವರ್ ಪ್ರಕಾಶನದ ಮೂಲಕ ಹೇರಳವಾಗಿ ಆತನು ಪೂರೈಸಿದ್ದಾರೆ ಎಂಬುವದಾಗಿ ನಾವು ನಂಬುತ್ತೇವೆ." ಆರ್.4253, ಸಿ.1, ಪಿ.2,3.

**"ಸರ್ವವಿಧದಲ್ಲಿಯೂ ನಮಗೆ ಇಕ್ಕಟ್ಟು ಇದ್ದರೂ ನಾವು ಅತಿ ಸಂಕಟಪಡುವವರಲ್ಲ; ನಾವು ದಿಕ್ಕುಕಾಣದವರಾಗಿದ್ದರೂ ಕೇವಲ ದೆಸೆಗೆಟ್ಟವರಲ್ಲ; ಹಿಂಸೆಪಡುವವರಾಗಿದ್ದರೂ ಕೈಬಿಡಲ್ಪಟ್ಟವರಲ್ಲ; ಕೆಡವಲ್ಪಟ್ಟವರಾಗಿದ್ದರೂ ಪ್ರಾಣ ನಷ್ಟಪಡುವವರಲ್ಲ; ಯೇಸುವಿನ ಜೀವವು ನಮ್ಮ ದೇಹದಲ್ಲಿ ಉಂಟೆಂದು ತೋರಿಬರುವದಕ್ಕಾಗಿ ಯೇಸುವಿನ ಮರಣಾವಸ್ಥೆಯನ್ನು ನಾವು ಯಾವಾಗಲೂ ದೇಹದಲ್ಲಿ ಅನುಭವಿಸುತ್ತಾ ತಿರುಗಾಡುತ್ತೇವೆ." 2 ಕೊರಿಂಥ. 4:8-10.**

"ಆದುದರಿಂದ ನಮ್ಮ ಜೀವನದ ಇಕ್ಕಟ್ಟುಗಳು ಇತರ ಜನರನ್ನು ಸಂಕಷ್ಟಕ್ಕೊಳಪಡಿಸುವಂತೆ ನಮ್ಮನ್ನು ಸಂಕಟಕ್ಕೊಳಪಡಿಸುವಂತೆ ಅವಕಾಶಕೊಡಬಾರದು. ಇತರರಲ್ಲಿ ಇಲ್ಲದಂಥಹ ಒಂದು ವಿಷಯವು ನಮಗಿದೆ, ಅದೇನೆಂದರೆ ಕರ್ತನ ಮೇಲಿರುವ ಭರವಸೆಯಾಗಿದೆ, ಅಂದರೆ ನಾವು ನಂಬಿಗಸ್ತರಾಗಿದ್ದರೆ ನಮ್ಮ ಜೀವನದ ಎಲ್ಲಾ ಸಂಭವಗಳು ನಮಗೆ ಆಶೀರ್ವಾದವನ್ನು ಉಂಟುಮಾಡುತ್ತವೆ. ತಂದೆಯ ವಾಕ್ಯದಲ್ಲಿರುವ ಈ ವಾಗ್ದಾನವನ್ನು ನಾವು ನಿಜವಾಗಿಯೂ ನಂಬುವುದಾದರೆ ಇದು ನಮ್ಮನ್ನು ಸಂಕಟದಲ್ಲಿಯೂ ಹರ್ಷಿಸುವಂತೆ ಮಾಡುತ್ತದೆ... ಕರ್ತನ ಕೆಲಸದಲ್ಲಿ ನಿರತರಾಗಿರುವವರು ದಿಕ್ಕು ಕಾಣದೆ ಹೋಗುತ್ತಾರೆ. ಆದರೆ ಕರ್ತನ ಮಕ್ಕಳ ಚಿಂತೆ ಹಾಗೂ ಅನಿಶ್ಚಿತತೆಗಳು ಎಂದಿಗೂ ದೆಸೆಗೆಟ್ಟ ಸ್ಥಿತಿಗೆ ಹೋಗಲೇಬಾರದು. ಈ ಲೋಕದವರು, ಕೆಲಸದ ಹೊರಗಿರುವವರು ಹಾಗೂ ಅನೇಕ ಕಷ್ಟಗಳನ್ನು ಅನುಭವಿಸುವವರು ಬಹಳ ಖಿನ್ನರಾಗುತ್ತಾರೆ. ಆಗಾಗ ನಾವು ಆತ್ಮಹತ್ಯೆಯ ಬಗ್ಗೆ ಕೇಳುತ್ತೇವೆ. ತಮ್ಮ ಪ್ರಾಣವನ್ನೇ ತೆಗೆದುಕೊಳ್ಳುವವರಿಗೆ ವಿಷಯಗಳು ಗಾಢ ಅಂಧಕಾರವಾಗಿ ಕಾಣುತ್ತವೆ. ಇದು ಕರ್ತನ ಜನರ ವಿಚಾರದಲ್ಲೂ ನಿಜವಾಗಿ, ಕಾರ್ಯಗಳು ತುಂಬಾ ಅಂಧಕಾರವಾಗಿ ಕಾಣುತ್ತವೆ; ಆದರೆ ಏನೇ ಬರಲಿ ಅವರು ದೆಸೆಗೆಟ್ಟುಹೋಗುವುದಿಲ್ಲ; ಯಾಕೆಂದರೆ ಕರ್ತನು ಹೇಳಿರುವ ಪ್ರಕಾರ, ಆತನು ನಮ್ಮನ್ನು ಎಂದಿಗೂ ಕೈಬಿಡುವದಿಲ್ಲ, ಎಂದಿಗೂ ತೊರೆಯುವದಿಲ್ಲ. ಈ ಕೃಪಾಪೂರ್ಣ ವಾಗ್ದಾನವು ದೃಢವಾದ ಹಾಗೂ ನಿಶ್ಚಲವಾದ ನಿರೀಕ್ಷೆಯನ್ನು ನಮಗೆ ಕೊಡಬೇಕು. ನಾವು ನಮ್ಮ ನಿರೀಕ್ಷೆಯ ಲಂಗರನ್ನು ಹಿಡಿದಿಟ್ಟುಕೊಳ್ಳಬೇಕು." ಆರ್.5670, ಸಿ.2, ಪಿ.6; ಆರ್.5671, ಸಿ.1, ಪಿ.ಇ2,3.

**“ಹೇಗಂದರೆ ಕ್ಷಣಮಾತ್ರವಿರುವ ನಮ್ಮ ಹಗುರವಾದ ಸಂಕಟವು ಅತ್ಯಂತಾಧಿಕವಾದ ಪ್ರತಿಫಲವನ್ನು ಉಂಟುಮಾಡಿ ನಮಗೆ ನಿರಂತರವಾಗಿರುವ ಗೌರವವಾದ ಪ್ರಭಾವವನ್ನು ದೊರಕಿಸುತ್ತದೆ.” 2 ಕೊರಿಂಥ. 4:17.**

“ಈಗ ಪರಲೋಕದಲ್ಲಿ ಈ ನಿಧಿಯನ್ನು ಶೇಖರಿಡಿಸುತ್ತಿರುವ ಕ್ರಿಸ್ತನ ದೇಹವಾಗಿ ಆಯ್ದುಕೊಂಡ ಎಲ್ಲಾ ಸದಸ್ಯರ ಬಾಧ್ಯಸ್ಥತೆಯಾಗಿ ನಿರಂತರವಾದ ಘನತೆ ಹಾಗೂ ಪ್ರಭಾವವನ್ನು ನಿಶ್ಚಯಮಾಡಿರುವಂತೆ, ಈ ನಿಧಿಯು ಪ್ರಸ್ತುತ ಸಮಯದ ವಿಶಿಷ್ಟ ಶೋಧನೆಗಳ ನಡುವೆ ನಮ್ಮ ವೈರಾಗ್ಯ ಹಾಗೂ ನಂಬಿಗಸ್ತತೆಯಾಗಿ ಹೆಚ್ಚಾಗುವದು. ಪ್ರಸ್ತುತ ಶೋಧನೆ ಹಾಗೂ ಅನುಭವಗಳಲ್ಲಿ ನಾವು ಆತನ ಸನಿಹ ಬರುವುದಾದರೆ... ಭವಿಷ್ಯದಲ್ಲಿ ಆತನ ಸನಿಹ ಇರುವೆವು ಎಂಬುವದನ್ನು ನೆನಪಿನಲ್ಲಿಟ್ಟುಕೊಳ್ಳುವಾಗ, ಅಪೋಸ್ತಲನು ತನ್ನ ಘೋರವಾದ ಸಂಕಷ್ಟಗಳ ಬಗ್ಗೆ ಮೇಲಿನ ವಾಕ್ಯಭಾಗದ ಮಾತುಗಳಲ್ಲಿ ಅದರ ಅರ್ಥವನ್ನು ವಿವರಿಸುತ್ತದೆ.” ಆರ್.3362, ಸಿ.2, ಪಿ.5.

**“ಭೂಮಿಯ ಮೇಲಿರುವ ನಮ್ಮ ಮನೆಯು ಅಂದರೆ ನಮ್ಮ ದೇಹವೆಂಬ ಗುಡಾರವು ಕಿತ್ತುಹಾಕಲ್ಪಟ್ಟರೂ ದೇವರಿಂದುಂಟಾದ ಒಂದು ಕಟ್ಟಡವು ಪರಲೋಕದಲ್ಲಿ ನಮಗುಂಟೆಂದು ಬಲ್ಲೆವು. ಅದು ಕೈಯಿಂದ ಕಟ್ಟಿದ ಮನೆಯಾಗಿರದೆ ನಿತ್ಯವಾಗಿರುವಂಥದಾಗಿದೆ.” 2 ಕೊರಿಂಥ. 5:1.**

“ನಮ್ಮ ಸ್ಥಾನವು... ಲೋಕದ ಜನರಿಗಿಂತ ತುಂಬಾ ಪ್ರತ್ಯೇಕವಾಗಿರುವುದಾಗಿದೆ, ಯಾಕೆಂದರೆ ಅವರಿಗೆ ನಿರ್ದಿಷ್ಟವಾದ ನಿರೀಕ್ಷೆಯಿಲ್ಲ. ಲೋಕದವರಿಗೆ ಸ್ಥಿರವಾದ ಲಂಗರು ಇಲ್ಲ. ಗಟ್ಟಿಯಾಗಿ ಹಿಡಿದುಕೊಳ್ಳಲು ಅಮೂಲ್ಯವಾದ ವಾಗ್ದಾನಗಳು ಇಲ್ಲ. ನಮಗೆ ತಿಳಿದಿರುವಂತೆ, ನಮಗೆ ಹೀನತೆಯಲ್ಲಿ ಅತೀ ಹೀನ ಸ್ಥಿತಿ ಬಂದರೂ, ಹಸಿವೆಯಿಂದ ಸಾಯಬೇಕಾದರೂ, ನಮ್ಮ ನಿರೀಕ್ಷೆಯು ಪರದೆಯ ಆಚೆ ನೆಲೆಗೊಂಡಿದೆ. ಆದುದರಿಂದ ಇಂದಿನ ದೇವ ಭಕ್ತರು ಮರಣವನ್ನು ಪೂರ್ಣ ಜೀವಿತಕ್ಕೆ ನಡೆಸುವ ದ್ವಾರವೆಂದು ಪರಿಗಣಿಸಿ, ತಮ್ಮ ಎಲ್ಲಾ ನಿರೀಕ್ಷೆಗಳ, ಸಂತೋಷಗಳ ತಿಳುವಳಿಕೆಗೂ ಅದರ ಮೂಲಕ ಪ್ರವೇಶಿಸುವುದಕ್ಕೆ ಎದುರು ನೋಡುತ್ತಿದ್ದಾರೆ.” ಆರ್.5671, ಸಿ.1, ಪಿ.3.

**“ನಾನು ನಿಮ್ಮನ್ನು ಸೇರಿಸಿಕೊಂಡು ನಿಮಗೆ ತಂದೆಯಾಗಿರುವೆನು; ನೀವು ನನಗೆ ಕುಮಾರ ಕುಮಾರಿಯರು ಆಗಿರುವಿರಿರೆಂದು ಸರ್ವಶಕ್ತನಾದ ಕರ್ತನು ಹೇಳುತ್ತಾನೆ.” 2 ಕೊರಿಂಥ. 6:18.**

“ಎಂಥಹಾ ವಾಗ್ದಾನ! ಎಂಥಹಾ ಸಲಹೆ! ನಾವು ಸ್ವಭಾವದಲ್ಲಿ ಕಳಂಕಿತರೂ ಹಾಗೂ ಅಪರಿಪೂರ್ಣರೂ ಆಗಿದ್ದರೂ, ನಮ್ಮ ಬಗ್ಗೆ ಸರ್ವಶಕ್ತ ಸೃಷ್ಟಿಕರ್ತನ ಗಮನವಿರುವುದು ಮಾತ್ರವಲ್ಲದೆ, ನಮ್ಮನ್ನು ಆತನ ಮಕ್ಕಳಾಗಲು ಆಹ್ವಾನ ಕೊಟ್ಟು, ಪಿತೃವಾತ್ಸಲ್ಯದ ಭರವಸೆಯನ್ನು ನಮಗೆ ಕೊಟ್ಟಿರುವುದು, ಅಂದರೆ ‘ತಂದೆಯು ತನ್ನ ಮಕ್ಕಳನ್ನು

ಕನಿಕರಿಸುವಂತೆ ಕರ್ತನು ತನಗೆ ಭಯಪಡುವವರನ್ನು ಕನಿಕರಿಸುತ್ತಾನೆ.' ಎಷ್ಟೊಂದು ಸುಂದರವಾಗಿ ಇದು ತೋರಿಬರುತ್ತದೆ! ಮತ್ತು ನಂತರ ಅಪೋಸ್ತಲರು ಮತ್ತೊಂದೆಡೆ ಪ್ರಸ್ತಾಪಿಸುವಂತೆ, ಇದು ಈ ವಿಷಯದ ಕೊನೆಯಲ್ಲ, ಬದಲಾಗಿ ಕೇವಲ ಪ್ರಾರಂಭವಾಗಿದೆ, ಯಾಕೆಂದರೆ ಆತನು ಹೇಳುವಂತೆ, 'ಮಕ್ಕಳಾಗಿದ್ದರೆ ಬಾಧ್ಯರಾಗಿದ್ದೇವೆ; ದೇವರಿಗೆ ಬಾಧ್ಯರು, ಕ್ರಿಸ್ತ ನೊಂದಿಗೆ ಸಹ ಬಾಧ್ಯರು, ಆತನೊಂದಿಗೆ ಶ್ರಮೆಯನ್ನನುಭವಿಸುವದಾದರೆ ಒಟ್ಟಾಗಿ ನಾವು ಸಹ ಮಹಿಮೆಯನ್ನು ಹೊಂದುವೆವು ಎಂಬುವದಾಗಿದೆ.'' ಆರ್.5739, ಸಿ.2, ಪಿ.2.

## "ದೇವರು ಸಕಲ ವಿಧವಾದ ಕೃಪೆಯನ್ನು ನಿಮಗೆ ಧಾರಾಳವಾಗಿ ಅನುಗ್ರಹಿಸುವದಕ್ಕೆ ಶಕ್ತನಾದ್ದರಿಂದ ನೀವು ಯಾವಾಗಲೂ ಎಲ್ಲಾ ವಿಷಯಗಳಲ್ಲಿ ಪರಿಪೂರ್ಣತೆಯುಳ್ಳವರಾಗಿ ಸಕಲಸತ್ಕಾರ್ಯಗಳನ್ನು ಹೇರಳವಾಗಿ ಮಾಡುವವರಾಗಿರುವಿರಿ." 2 ಕೊರಿಂಥ. 9:8.

"ಕರ್ತನನ್ನು ಪ್ರಶಂಶಿಸಬೇಕಾದರೆ, ಆ ಕೊಡುಗೆಯು ಕೃತಜ್ಞತಾ ಸಮರ್ಪಣೆಯಾಗಿರಬೇಕು. ಇದನ್ನು ಎಲ್ಲಾ ಒಳ್ಳೆಯ ಹಾಗೂ ಎಲ್ಲಾ ಪರಿಪೂರ್ಣ ಕೊಡುಗೆಗಳನ್ನು ದಯಪಾಲಿಸುವಂಥಹ ಆತನಲ್ಲಿ ನಮಗೆ ಇರುವ ನಿತ್ಯದ ಕೃತಜ್ಞತೆಯ ಋಣವನ್ನು ತಡವಿಲ್ಲದೆ ಗ್ರಹಿಸಿಕೊಳ್ಳಬೇಕಾಗಿದೆ. ಮತ್ತು ಅಂಥವರಿಗೆ 'ದೇವರು ಸಕಲವಿಧವಾದ ದಾನಗಳನ್ನು ಧಾರಾಳವಾಗಿ ಅನುಗ್ರಹಿಸುತ್ತಾನೆ.' ಯಾವನಾದರೂ ದೈವೀಕ ಸೇವೆಯಲ್ಲಿ ಏನನ್ನೇ ಕೊಟ್ಟರೂ–ಸಮಯ, ತಾಲೆಂತು, ಬಲ ಸಂಪತ್ತು ಅಥವಾ ಪ್ರಭಾವವನ್ನೊ ಕೊಟ್ಟರೆ ಅಂಥವನು ವಿವಿಧ ಅನುಗ್ರಹಗಳಲ್ಲಿ ಸರಿಯಾದ ಪ್ರಮಾಣದಲ್ಲಿ ಹೇರಳವಾಗಿರುವ ಹಾಗೆ ಕಂಡುಬರುತ್ತಾನೆ; ಯಾಕೆಂದರೆ ಅಂಥವರು ಅನುಗ್ರಹದಲ್ಲಿ ಬೆಳೆಯುವಂಥಹ ಸರಿಯಾದ ಲಕ್ಷಣವನ್ನು ಹೊಂದಿದ್ದಾರೆ. ಅಪೋಸ್ತಲನು ಅಂಥವರನ್ನು 'ಎಲ್ಲಾ ವಿಷಯಗಳಲ್ಲಿ ಪರಿಪೂರ್ಣತೆಯುಳ್ಳವರು' ಮಾತ್ರವಲ್ಲದೆ 'ಸಕಲಸತ್ಕಾರ್ಯಗಳನ್ನು ಹೇರಳವಾಗಿ ಮಾಡುವವರಾಗಿರುವಿರಿ' ಎಂದು ಸೂಚಿಸುತ್ತಾರೆ. ಪರಿಪೂರ್ಣತೆಯು ಎಲ್ಲಾ ಸುಖಭೋಗ ಹಾಗೂ ಸಕಲ ಅನುಕೂಲತೆಗಳು ಇರುವ ಅರ್ಥವಲ್ಲ; ಆದರೆ 'ಎಲ್ಲಾ ವಿಷಯಗಳಲ್ಲಿ ಪರಿಪೂರ್ಣತೆ'ಯನ್ನು ಎಲ್ಲಿ 'ಸಂತುಷ್ಟಿಸಹಿತವಾದ ಭಕ್ತಿಯು' ಇದೆಯೋ ಅಲ್ಲಿ ಹೊಂದಲಾಗುವದು." ಆರ್.5739, ಸಿ.2, ಪಿ.2.

## "ನನ್ನ ಕೃಪೆಯೇ ನಿನಗೆ ಸಾಕು; ಬಲಹೀನತೆಯಲ್ಲಿಯೇ ಬಲವು ಪೂರ್ಣಸಾಧಕವಾಗುತ್ತದೆ." 2 ಕೊರಿಂಥ. 12:9.

"ಕರ್ತನ ಈ ಒಳ್ಳೆಯ ಸಲಹೆಯನ್ನು ನಾವು ಆಗಾಗ್ಗೆ ನೆನೆಸಿಕೊಳ್ಳುವುದಾದರೆ, ವೈರಿಯು ನಮ್ಮ ಮನಸ್ಸಿನಲ್ಲಿ ನಾವು ನಿವಾರಿಸಿಕೊಳ್ಳಲಾಗದಂಥಹ ನಮ್ಮ ದೌರ್ಬಲ್ಯತೆಗಳು ಹಾಗೂ ಅಪರಿಪೂರ್ಣತೆಗಳು ನಾವು ಕರ್ತನ ಜನರಲ್ಲವೆಂಬುದಕ್ಕೆ ಪುರಾವೆಗಳೆಂಬುದಾಗಿ ನಾವು ನಂಬುವಂತೆ ಮಾಡುವ ಆಕ್ರಮಣಗಳಿಂದ ನೆಮ್ಮದಿಯನ್ನೂ ಆಶೀರ್ವಾದವನ್ನು ತರುತ್ತದೆ.

ಈ ಸಲಹೆಯು ನಮ್ಮ ಮುಂದೆ ಇದ್ದರೆ, ಲೋಕದ, ಶರೀರದ ಹಾಗೂ ಸೈತಾನನ ಆಕ್ರಮಣದ ವಿರುದ್ಧವಾಗಿ ಹೋರಾಡಲು ಎಂಥಹಾ ಬಲವು ನಮಗೆ ಸಿಗುವುದು. ಇದು ನಮ್ಮ ಶೋಧನೆಯ ಕಾಲದಲ್ಲಿ ನಮ್ಮ ಹೃದಯಗಳನ್ನು ಪ್ರಾರ್ಥನೆಯಲ್ಲಿ ಕರ್ತನ ಕಡೆ 'ಸಮಯೋಚಿತವಾದ ಸಹಾಯವು ನಮಗೆ ದೊರೆಯುವಂತೆಯೂ' ಪ್ರೇರೇಪಿಸಿ ನಡೆಸಬೇಕು. ಕರ್ತನು, ನಮ್ಮ ಸ್ವಂತ ಬಲಹೀನತೆ ಹಾಗೂ ಅಪರಿಪೂರ್ಣತೆಯಲ್ಲಿರುವ ಪಾಠವನ್ನು ನಾವು ಕಲಿಯಲು ಮತ್ತು ಬಲಕ್ಕಾಗಿಯೂ, ನೆರವಿಗಾಗಿಯೂ ಆತನಲ್ಲಿಗೆ ಹೋಗುವ ಪಾಠವನ್ನು ನಾವು ಕಲಿಯಲು ಬಯಸುತ್ತಾರೆ, ನಮಗೆ ಅಗತ್ಯವಿರುವುದಕ್ಕಿಂತ ಮೊದಲು ಅಲ್ಲ, ಬದಲಾಗಿ 'ಸಮಯೋಚಿತವಾಗಿ,' ಎಲ್ಲಾ ಸಂಕಷ್ಟ ವೇಳೆಯಲ್ಲಿ ಆತನ ಬಳಿಗೆ ಹೋಗುವುದನ್ನು ಸಹ ಕಲಿಸಿಕೊಡುತ್ತದೆ." ಆರ್.2241, ಸಿ.2, ಪಿ.2.

## "ನೀವು ಕ್ರಿಸ್ತನವರಾಗಿದ್ದರೆ ಅಬ್ರಹಾಮನ ಸಂತತಿಯವರೂ ವಾಗ್ದಾನಕ್ಕನುಸಾರವಾಗಿ ಬಾಧ್ಯರೂ ಆಗಿದ್ದೀರಿ." ಗಲಾತ್ಯ. 3:29.

"'ಕ್ರಿಸ್ತನವರಾಗಿರುವುದು' ಸ್ಪಷ್ಟವಾಗಿಯೂ ವಿಶ್ವಾಸಕ್ಕಿಂತ ಅಧಿಕವಾದ ಶ್ರೇಷ್ಠ ಪಾಲಾದ ಮಾನ್ಯತೆ ಹಾಗೂ ಉತ್ತಮ ದೃಢೀಕರಣವನ್ನು ಅರ್ಥೈಸುತ್ತದೆ. ಇದು ಕ್ರಿಸ್ತನ ಸ್ವತ್ತಾಗಿರುವುದನ್ನು ತಿಳಿಸುತ್ತದೆ; ಅಂದರೆ ಆತನ ದೇಹ, ಆತ್ಮ, ಪ್ರಾಣಕ್ಕೆ ಸಂಬಂಧಿಸಿರುವುದಾಗಿದೆ. ಈಗಲೂ ಯಾವಾಗಲೂ ಆತನವರಾಗಿರುವುದು; ಅನುಕೂಲವಾಗಲೀ ಅನಾನುಕೂಲವಾಗಲೀ, ಸುಖದಲ್ಲಾಗಲೀ, ನೋವಿನಲ್ಲಾಗಲೀ, ಕಷ್ಟದಲ್ಲಾಗಲೀ ಆತನ ಸೇವಕರೂ, ಆತನ ಮಾರ್ಗದಲ್ಲಿ ಹಾಗೂ ಆತನ ಸಮಯದಲ್ಲಿ ಆತನ ಚಿತ್ತವನ್ನು ನೆರವೇರಿಸುವವರೂ ಆಗಿರುವರು. ಅದಕ್ಕಿಂತ ಹೆಚ್ಚಾಗಿ ನಾವು ಪೂರ್ಣವಾಗಿ ಬೇರೆ ಯಾರದೇ ಸ್ವತ್ತಾಗಲು ಸಾಧ್ಯವಿಲ್ಲ, ಯಾಕೆಂದರೆ ಯಾವ ಮನುಷ್ಯನೂ ಇಬ್ಬರು ಯಜಮಾನರ ಸೇವೆಯನ್ನು ಮಾಡಲಾಗುವುದಿಲ್ಲ. ಇಲ್ಲಿ ರಹಸ್ಯ ಅಥವಾ ಇತರ ಸಮಾಜಕ್ಕೆ ಸೇರಿದವರಿಗೆ ಕಷ್ಟವು ಎದುರಾಗುತ್ತದೆ. ಯಾಕೆಂದರೆ ಇವರ ಕಾನೂನುಗಳು, ಉದ್ಯೋಗಗಳು ಹಾಗೂ ಸಂಪ್ರದಾಯಗಳು ಕ್ರಿಸ್ತನಲ್ಲಿ ಪ್ರತಿಷ್ಠೆ ಹೊಂದಿದವರೊಂದಿಗೆ ಖಂಡಿತವಾಗಿಯೂ ಘರ್ಷಣೆಯನ್ನೂ ಉಲ್ಲಂಘನೆಯನ್ನು ಉಂಟುಮಾಡುತ್ತದೆ." ಆರ್.1697, ಸಿ.1, ಪಿ.1.

## "ನಾವು ಆತನ ನಿರ್ಮಾಣ; ಸತ್ಕಾರ್ಯಗಳನ್ನು ಮಾಡುವದಕ್ಕಾಗಿಯೇ ಕ್ರಿಸ್ತ ಯೇಸುವಿನಲ್ಲಿ ಸೃಷ್ಟಿಸಲ್ಪಟ್ಟೆವು." ಎಫೆಸ. 2:10.

"ಈ ಜೀವಂತಕಲ್ಲುಗಳನ್ನು ಪುನರುತ್ಥಾನದ ಶಕ್ತಿಯಿಂದ ತೆರೆಯ ಒಳಗೆ ಒಟ್ಟು ಸೇರಿಸಲಾಗುವುದು. ಸೊಲೊಮೋನನ ಆಲಯವನ್ನು ಕಟ್ಟುವುದರಲ್ಲಿ ಇದನ್ನು ಸುಂದರವಾಗಿ ದೃಷ್ಟಾಂತರಿಸಲಾಗಿದೆ, ಇದರ ಬಗ್ಗೆ ಓದುವ ಪ್ರಕಾರ, ಆಲಯದ ಕಲ್ಲುಗಳನ್ನು ಗಣಿಗಳಲ್ಲಿ ತಯಾರಿಸಿದ ನಂತರ ಅಂತಿಮವಾಗಿ ಆಲಯವನ್ನು ಕಟ್ಟುವಲ್ಲಿ ಜೋಡಿಸಲಾಯಿತು ಮತ್ತು ಅವುಗಳಿಗೆ ಎಷ್ಟು ಪರಿಪೂರ್ಣವಾಗಿ ಆಕಾರಕೊಟ್ಟು, ಅವುಗಳ

ಬೇರೆ ಬೇರೆ ಜಾಗಗಳಿಗೆ ಹೊಂದುವಂತೆ ಗುರುತಿಸಲಾಗಿತ್ತೆಂದರೆ, ಆಲಯವನ್ನು ಕಟ್ಟುವ ಸಮಯದಲ್ಲಿ ಸುತ್ತಿಗೆಯ ಶಬ್ಧವಾಗಲೀ, ಹೊಳಪು ಹಾಕುವುದಾಗಲೀ ಅಥವಾ ಬೇರೆ ಯಾವ ಕೆಲಸವೂ ಅವುಗಳ ಮೇಲೆ ನಡೆಯದಂತೆ ಒಟ್ಟಾಗಿ ಸೇರಿಸಲಾಯಿತು. ಅದೇ ರೀತಿ ಅಪೋಸ್ತಲ ಪೌಲರು ಹೇಳುವಂತೆ, ಸಭೆಯು ದೇವರ ನಿರ್ಮಾಣವಾಗಿದೆ ಮತ್ತು ಆತನ ಕೆಲಸವು ಎಷ್ಟು ಪರಿಪೂರ್ಣವಾಗಿ ನೆರವೇರುತ್ತಾದೆಂದರೆ, ತೆರೆಯ ಒಳಗಡೆ ಯಾವುದೇ ಮಾರ್ಪಾಡಿನ ಅಥವಾ ಬದಲಾವಣೆಯ ಅಗತ್ಯವಿರುವುದಿಲ್ಲ. ಈ ದೃಷ್ಟಿಕೋನವು ದೇವಜನರಿಗೆ ವಿಶೇಷವಾಗಿ ಆಸಕ್ತಿಕರವೂ ಲಾಭದಾಯಕವೂ ಆಗಿದೆ. ಅಂಥವರು ಆಲಯದ ಸದಸ್ಯರಾಗಲು ದೇವರ ಉನ್ನತ ಕರೆಯ ಮೂಲಕ ಇದಕ್ಕೆ ಕರೆಲ್ಪಟ್ಟವರೆಂದು ಗ್ರಹಿಸಿಕೊಳ್ಳುವುದಾದರೆ, ತಮ್ಮನ್ನು ಪರಲೋಕದ ಮಹಿಮೆ, ಘನತೆ ಹಾಗೂ ಅಮರತ್ವಕ್ಕಾಗಿ ಆಕಾರ ಕೊಡುವುದಕ್ಕಾಗಿ, ಜೋಡಿಸುವುದಕ್ಕಾಗಿ ತಮ್ಮ ಜೀವನದಲ್ಲಿ ಎದುರಾದಂತಹ ಕಷ್ಟ ತೊಂದರೆಗಳ ಅಗತ್ಯತೆಯನ್ನು ಆಮೇಲೆ ಪೂರ್ಣವಾಗಿ ಪ್ರಶಂಶಿಸಬಹುದಾಗಿದೆ." ಆರ್.5713, ಸಿ.2, ಪಿ.6,7.

## "ಒಳ್ಳೇ ಕೆಲಸವನ್ನು ನಿಮ್ಮಲ್ಲಿ ಪ್ರಾರಂಭಿಸಿದಾತನು ಅದನ್ನು ಯೇಸುಕ್ರಿಸ್ತನ ದಿನದವರೆಗೆ ಸಿದ್ಧಿಗೆ ತರುವನೆಂದು ನನಗೆ ಭರವಸವುಂಟು." ಫಿಲಿಪ್ಪ. 1:6.

"ಕೆಲಸವು ಕರ್ತನದೆಂದು ನಾವು ಮರೆಯಬಾರದು, ಅಂದರೆ ಆತನ ಅನುಗ್ರಹದ ಬಲವು ಅದನ್ನು ನೆರವೇರಿಸುತ್ತದೆ. ಒಳ್ಳೇ ಕೆಲಸವನ್ನು ನಿಮ್ಮಲ್ಲಿ ಪ್ರಾರಂಭಿಸಿದಾತನು ಅದನ್ನು ಸಿದ್ಧಿಗೆ ತರುತ್ತಾನೆ; ಮತ್ತು ನಾವು ಅದನ್ನು ಆತನಿಗೆ ಬಿಟ್ಟುಕೊಡುವುದಾದರೆ, ಅಂದರೆ ಆತನ ನಾಯಕತ್ವವನ್ನು ಅನುಸರಿಸಿದರೆ, ಆತನ ಚಿತ್ತದಂತೆ ಮಾಡುವುದಾದರೆ ಆತನೇ ಈ ರೀತಿಯಾಗಿ ಕಾರ್ಯ ನಿರ್ವಹಿಸುವನು." ಆರ್.2124, ಸಿ.1, ಪಿ.1.

"ಆದರೆ ಹೋಲಿಕೆಯಲ್ಲಿ ಕೆಲವೇ ಕ್ರೈಸ್ತರಲ್ಲಿ ಮಾತ್ರ ಈ ವಿಶ್ವಾಸದ ಸಂಪೂರ್ಣ ಭರವಸೆ ಇದೆ... ಅಪೋಸ್ತಲರು ಹೇಳುವ ಈ ವಾಕ್ಯದ ಸಹಾನುಭೂತಿಯಲ್ಲಿ ಪ್ರವೇಶಿಸುವ ಕೆಲವರಲ್ಲಿ ಮಾತ್ರ...ಅಧಿಕವಾದ ಹರ್ಷವು, ಅಧಿಕವಾದ ಆಶೀರ್ವಾದವು ಹಾಗೂ ಇತರರು ಹೊಂದಿ–ಕೊಳ್ಳಲಾರದಂಥಹ ಹೃದಯದ ವಿಶ್ರಾಂತಿಯು ಇರುವುದು." ಆರ್.2642, ಸಿ.1, ಪಿ.4.

## "ಯಾಕಂದರೆ ದೇವರೇ ತನ್ನ ಸುಚಿತ್ತವನ್ನು ನೆರವೇರಿಸಬೇಕೆಂದು ನಿಮ್ಮಲ್ಲಿ ಉದ್ದೇಶವನ್ನೂ ಪ್ರಯತ್ನವನ್ನೂ ಉಂಟುಮಾಡುವವನಾಗಿದ್ದಾನೆ." ಫಿಲಿಪ್ಪ. 2:13

ಮಿತಿಮೀರಿದ ಶ್ರೇಷ್ಠ ಹಾಗೂ ಅಮೂಲ್ಯ ವಾಗ್ದಾನಗಳನ್ನು ಮತ್ತು ಮಹಿಮೆಯುಳ್ಳ ನಿರೀಕ್ಷಣೆ ಹಾಗೂ ಅದಕ್ಕೆ ಅಂಟಿಕೊಂಡಿರುವ ಘನತೆಯ ಮೂಲಕ ತನ್ನ ಸುಚಿತ್ತವನ್ನು, ಉದ್ದೇಶವನ್ನು ನೆರವೇರಿಸುವುದಕ್ಕಾಗಿ ಆತನು ನಮ್ಮಲ್ಲಿ ಕೆಲಸಮಾಡುತ್ತಿದ್ದಾರೆ; ಆದರೆ ಆತನು ನಮ್ಮಲ್ಲಿ ನಿರ್ವಹಿಸುವ ಉದ್ದೇಶದ ಪ್ರಮಾಣ ಹಾಗೂ ಈ ವಾಗ್ದಾನಗಳ ಮೂಲಕ, ಈ ಕಾರ್ಯಗಳ ಮೂಲಕ ದೊರೆಯುವ ಫಲಿತಾಂಶವು ನಮ್ಮ ಮೇಲೆ ಅವಲಂಬಿತವಾಗಿದೆ... ನಾವು ಆತನ

ವಾಗ್ದಾನಗಳ ಮಾತುಗಳನ್ನು ಅಲಕ್ಷ್ಯಮಾಡಬಹುದು, ನಮ್ಮನ್ನು ಬಲಪಡಿಸುವುದಕ್ಕಾಗಿಯೂ ಸ್ಥಾಪಿಸುವುದಕ್ಕಾಗಿಯೂ ಮತ್ತು ಸತ್ಯದ ಜ್ಞಾನದಲ್ಲಿಯೂ ಕೃಪೆಯಲ್ಲಿಯೂ ಬೆಳೆಯಲು ವಿವಿಧವಾಗಿ ಒದಗಿಸುವ ಅನುಗ್ರಹಗಳನ್ನು ಅಲಕ್ಷ್ಯಮಾಡಬಹುದು. ಈ ರೀತಿಯಾಗಿ ಆತನ ಅನುಗ್ರಹಗಳನ್ನು ಅಲಕ್ಷ್ಯಮಾಡುವುದರ ಪ್ರಮಾಣದ ನಂಬಿಕೆಯಲ್ಲಿ ನೆಲೆಯಾಗಿರಲು ವಿಫಲರಾಗುವೆವು, ವಾಗ್ದಾನದ ದಯೆಯನ್ನು ಪಡೆಯಲು ವಿಫಲರಾಗುವೆವು. ಇದನ್ನು ಅಪೋಸ್ತಲರು 'ನಿಮ್ಮನ್ನು ದೇವರ ಪ್ರೀತಿಯಲ್ಲಿ ಕಾಪಾಡಿಕೊಳ್ಳಿರಿ' ಎಂದು ಹೇಳುವ ಪ್ರಕಾರ ವ್ಯಕ್ತಪಡಿಸುತ್ತಾನೆ." (ಯೂದನು 21) ಆರ್.3021, ಸಿ.2, ಪಿ.2.

## "ಎಲ್ಲಾ ಗ್ರಹಿಕೆಯನ್ನೂ ಮೀರುವ ದೇವರ ಶಾಂತಿಯು ನಿಮ್ಮ ಹೃದಯಗಳನ್ನೂ ಮನಸ್ಸುಗಳನ್ನೂ ಕ್ರಿಸ್ತ ಯೇಸುವಿನ ಮೂಲಕ ಕಾಯುವದು." ಫಿಲಿಪ್ಪ. 4:7.

"ಈ ವಾಕ್ಯದಲ್ಲಿ ಅಪೋಸ್ತಲರು ಮನಸ್ಸಿಗೂ ಹೃದಯಕ್ಕೂ ಇರುವ ವ್ಯತ್ಯಾಸವನ್ನು ತೋರಿಸುತ್ತಾರೆ. ಹೃದಯವು ವಾತ್ಸಲ್ಯವನ್ನು ಪ್ರತಿನಿಧಿಸುತ್ತದೆ. ಈ ವಿಷಯದಲ್ಲಿ ಒಳ್ಳೆಯ ಮನೋಭಾವ ಇರಬೇಕಾಗಿರುವುದು ಮಾತ್ರವಲ್ಲದೆ, ನಮ್ಮ ಮನಸ್ಸು ವಿಶ್ರಾಂತಿಯಿಂದಿರಬೇಕು ಎಂಬುವದಾಗಿ ಅಪೋಸ್ತಲರು ಒತ್ತಾಯಪಡಿಸುತ್ತಾರೆ... ಈ ವಾಕ್ಯವು ನಮ್ಮ ಸ್ವಂತ ಸಮಾಧಾನದ ಬಗ್ಗೆ ಉಲ್ಲೇಖಿಸುವುದಿಲ್ಲ, ಬದಲಾಗಿ ಅದು ದೇವರ ಸಮಾಧಾನದ ಬಗ್ಗೆ, ದೇವರ ಬಲವನ್ನು, ಆತನ ಒಳ್ಳೆಯತನ ಹಾಗೂ ಆತನ ಮಕ್ಕಳಾಗಿ ನಮ್ಮನ್ನು ತನ್ನ ಬಲಗಡೆಯಲ್ಲಿ ಹಿಡಿದುಕೊಳ್ಳುವುದಕ್ಕೆ ಆತನಿಗಿರುವ ಇಷ್ಟಾರ್ಥವನ್ನು ಗ್ರಹಿಸಿಕೊಳ್ಳುವ ಮೂಲಕ ನಮಗೆ ಬರುವ ಸಮಾಧಾನದ ಬಗ್ಗೆ ತಿಳಿಸುತ್ತದೆ. ಈ ಸಮಾಧಾನವು ಯಾವಾಗಲೂ ಸಂರಕ್ಷವಾಗಿ ಇದ್ದು, ಎಲ್ಲಾ ಹಗೆಯನ್ನು ಅಥವಾ ಕಳವಳವನ್ನು ಅಥವಾ ಭಯವನ್ನು ಹುಟ್ಟಿಸುವಂಥಹ ಆಲೋಚನೆಯನ್ನು ಎದುರಿಸಲು ಕಾವಲುಗಾರನಾಗಿ ನಿರಂತರವೂ ನಿಲ್ಲುತ್ತದೆ. ಇದು ಕ್ರಿಸ್ತೀಯನ ಮನಸ್ಸನ್ನು ಹೇಗೆ ಕಾಪಾಡುತ್ತದೆಂದರೆ ಅವನ ಹೃದಯದಲ್ಲಿ ಕರ್ತನೊಂದಿಗೆ ಸಾಂಗತ್ಯವೂ ಅನ್ಯೋನ್ಯತೆಯೂ ಇರುವಂತೆ ಮಾಡುತ್ತದೆ ಮತ್ತು ಅವನನ್ನು ಎಚ್ಚರಿಸುವುದರಿಂದಲೂ ಹಾಗೂ ದೈವೀಕ ಪ್ರೀತಿ, ಜ್ಞಾನ ಪರಾಕ್ರಮದ ವಿಚಾರದಲ್ಲಿ ಅವನಲ್ಲಿ ಭರವಸೆ ಹುಟ್ಟಿಸುವುದರಿಂದಲೂ, ಆತನ ಜ್ಞಾನದ ಸಾಮರ್ಥ್ಯವು ಅವನ ಮನಸ್ಸನ್ನು ಕಾಯುತ್ತದೆ." ಆರ್.4898, ಸಿ.1, ಪಿ.3,4.

## "ನೀವು ಯಾವದನ್ನು ನನ್ನಿಂದ ಕಲಿತು ಹೊಂದಿದಿರೋ ಮತ್ತು ಯಾವದನ್ನು ನನ್ನಲ್ಲಿ ಕೇಳಿಕಂಡಿರೋ ಅದನ್ನೇ ಮಾಡುತ್ತಾ ಬನ್ನಿರಿ. ಆಗ ಶಾಂತಿದಾಯಕನಾದ ದೇವರು ನಿಮ್ಮೊಂದಿಗಿರುವನು." ಫಿಲಿಪ್ಪ. 4:9.

"ಅಪೋಸ್ತಲರು ಹೇಳುವ ಈ ಮಾತನ್ನು ಎಷ್ಟು ಮಂದಿ (ಎಷ್ಟು ಕೆಲವರು) ಹೇಳಬಲ್ಲರು?... ಇದು ಪ್ರತಿಯೊಬ್ಬ ಕ್ರೈಸ್ತರ ಗುಣಮಟ್ಟವಾಗಿರಬೇಕು, ಯಾಕೆಂದರೆ ಪ್ರತಿಯೊಬ್ಬರು ಕರ್ತನ ಪ್ರತಿನಿಧಿಗಳಾಗಿದ್ದು, ಆತನ ರಾಯಭಾರಿಗಳಾಗಿದ್ದೇವೆ; ಆದುದರಿಂದ ಸಾಧ್ಯವಾದಷ್ಟು ಮಟ್ಟಿಗೆ ತಮ್ಮ ನಡವಳಿಕೆಗಳಲ್ಲಿ ಹಾಗೂ ನುಡಿಗಳಲ್ಲಿ ಜೀವಿಸುವ ಪ್ರತಿಗಳಂತಿರಬೇಕು, ಸಹೋದರರು

ಹಾಗೂ ಲೋಕವು ತಮ್ಮ ಲಾಭಕ್ಕಾಗಿ ಇದನ್ನು ಓದುವಂತಿರಬೇಕು. ಹೀಗಾಗುವುದರಿಂದ 'ಶಾಂತಿದಾಯಕ ದೇವರು ನಮ್ಮೊಂದಿಗಿರುವನು' ಎಂದು ಅಪೋಸ್ತಲರು ಹೇಳುವುದರಲ್ಲಿ ಆಶ್ಚರ್ಯವಿಲ್ಲ. ಆತನು ಅಪೋಸ್ತಲರೊಂದಿಗೆ ಇದ್ದಂತೆ ನಿಶ್ಚಯವಾಗಿಯೂ ಅದೇ ರೀತಿ ಕ್ರಿಸ್ತನ ಹೆಜ್ಜೆಜಾಡಿನಲ್ಲಿ ನಡೆಯುವ ಎಲ್ಲರ ಸಂಗಡವೂ ಇರುತ್ತಾನೆ." ಆರ್.3129, ಸಿ.2, ಪಿ.1.

## "ನನ್ನನ್ನು ಬಲಪಡಿಸುವಾತನಲ್ಲಿದ್ದುಕೊಂಡು ಎಲ್ಲಕ್ಕೂ ಶಕ್ತನಾಗಿದ್ದೇನೆ." ಫಿಲಿಪ್ಪ. 4:13.

"ಸ್ವ-ಆತ್ಮವಿಶ್ವಾಸವಾಗಲೀ ಸ್ವಾವಲಂಬನೆಯನ್ನಾಗಲೀ ಅಪೇಕ್ಷೆಪಡದೆ ಬದಲಾಗಿ ದೇವರಲ್ಲಿ ಭರವಸೆಯಿಟ್ಟು ಆತನ ವಾಗ್ದಾನಗಳ ಮೇಲೆ, 'ಆತನ ಕೃಪೆಯ ಸಮಯೋಚಿತವಾದ ಸಹಾಯ'ದ ಮೇಲೆ ಆತುಕೊಳ್ಳುವುದನ್ನು ಅಪೇಕ್ಷಿಸಲಾಗಿದೆ. ಇದು ಅಪೇಕ್ಷಣೀಯ ದೀನತೆ ಹಾಗೂ ನಮ್ರತೆಯನ್ನು ಕಾಪಾಡುತ್ತದೆ, ಹೀಗಿರುವುದರಿಂದ ಅಪೋಸ್ತಲನು ವ್ಯಕ್ತಪಡಿಸುವಂಥಹ 'ನನ್ನನ್ನು ಬಲಪಡಿಸುವ ಕ್ರಿಸ್ತನ ಮೂಲಕ ನಾನು ಎಲ್ಲವುಗಳನ್ನು ಮಾಡಬಲ್ಲೆನು' ಎಂಬುವ ಧೈರ್ಯ ಹಾಗೂ ಬಲವನ್ನು ಕೊಡುತ್ತದೆ: ಪುನಃ ಸಂತ ಪೌಲರು ಹೀಗೆ ಪ್ರಕಟಿಸುತ್ತಾರೆ, 'ನಮಗಿರುವ ಸಾಮರ್ಥ್ಯವು ದೇವರಿಂದಲೇ ಬಂದದ್ದು!' ಹೀಗೆ ದೇವರ ಮೇಲಣ ನಂಬಿಕೆ ಹಾಗೂ ಆತನ ವಾಗ್ದಾನಗಳ ಮೂಲಕ ಪ್ರೇರೇಪಿಸಲ್ಪಟ್ಟು 'ದೇವರಿಂದ ಕಲಿತವರು' 'ಕರ್ತನಲ್ಲಿಯೂ ಆತನ ಅತ್ಯಧಿಕವಾದ ಶಕ್ತಿಯಲ್ಲಿಯೂ ಬಲಗೊಳ್ಳುವೆವು.' (ಎಫೆಸ. 6:10) ನೀತಿವಂತನು ಸಿಂಹದಂತೆ ಬಲಶಾಲಿಯಾಗಿದ್ದಾನೆ, 'ಭಯಪಡೆನು, ಮನುಷ್ಯನು ನನಗೆ ಏನು ಮಾಡಾನು.' ಮನುಷ್ಯನು ನನ್ನ ಬಗ್ಗೆ ಏನಾದರೂ ಹೇಳುವುದನ್ನಾಗಲೀ ಅಥವಾ ನನಗೆ ಮಾಡುವುದನ್ನಾಗಲೀ ನಾನು ಲಕ್ಷಿಸುವುದೇ ಇಲ್ಲ. ಸರ್ವಶಕ್ತ ಸೃಷ್ಠಿಕರ್ತನಾದ ನನ್ನ ತಂದೆಯು ಹಾಗೂ ವಿಮೋಚಕನಾದ ನನ್ನ ಹಿರಿಯ ಸಹೋದರನು ನನ್ನೊಂದಿಗೆ ಇರುವವರೆಗೆ, ಅವರ 'ಮಿತಿಮೀರಿದ ಶ್ರೇಷ್ಠ ಮತ್ತು ಅಮೂಲ್ಯ ವಾಗ್ದಾನಗಳ' ಮೇಲೆ ಭರವಸೆಯಿಟ್ಟು ತೃಪ್ತನಾಗಿರುವೆನು' ಎಂದು ಹೇಳುತ್ತಾನೆ." ಆರ್.5113, ಸಿ.2, ಪಿ.5,6.

## "ನನ್ನ ದೇವರು ಕ್ರಿಸ್ತ ಯೇಸುವಿನ ಮೂಲಕ ತನ್ನ ಪ್ರಭಾವದ ಐಶ್ವರ್ಯಕ್ಕೆ ತಕ್ಕ ಹಾಗೆ ನಿಮ್ಮ ಪ್ರತಿಯೊಂದು ಕೊರತೆಯನ್ನು ನೀಗಿಸುವನು." ಫಿಲಿಪ್ಪ. 4:19.

"ಪೌಲನು ತನ್ನ ಪತ್ರಿಕೆಯಲ್ಲಿ ಎಂಥಹಾ ಪ್ರಭಾವವುಳ್ಳ ವಾಗ್ದಾನವನ್ನು ಫಿಲಿಪ್ಪಿಯರಿಗೆ ಬರೆಯುತ್ತಾರೆ. ಅದೊಂದು ದೈವೀಕ ವಾಗ್ದಾನವಾಗಿದ್ದು ಅದನ್ನು ನೆರವೇರಿಸುವುದಕ್ಕಾಗಿಯೇ ಮಾಡಲಾಗಿದೆ. ಯಾವುದೇ ರೀತಿಯಲ್ಲಿ ದುರುಪಯೋಗವಾಗದಂತೆ ನಿಶ್ಚಯವಾಗಿ ನಿಶ್ಚಿಂತತೆಯಿಂದ ಇಡುವ ಕರಾರುಪತ್ರಗಳನ್ನು ಜಮಾಮಾಡುವ ಸ್ಥಳದಲ್ಲಿ ಇದನ್ನು ನಾನು ಇಡಬಹುದು. ಈ ವಾಕ್ಯವೃಂದವು ಪರಲೋಕದ 'ಸರ್ಕಾರದ ಭದ್ರತೆ'ಯಲ್ಲಿ ಒಂದು. ಈ ವಾಗ್ದಾನವನ್ನು ಹೊರಡಿಸಿದವರು ನನ್ನ ದೇವರು; ನನ್ನ ಸ್ವಂತ ವ್ಯಕ್ತಿಗತ ತಂದೆಯು. ನನ್ನ

ದುರಾಶೆಗಳನ್ನೆಲ್ಲಾ ಅಥವಾ ನಾನು ಪ್ರಾರ್ಥನೆಯಲ್ಲಿ ಕೇಳುವಂಥದ್ದನ್ನೆಲ್ಲಾ ನನಗೆ ಕೊಡಬೇಕೆನ್ನುವ ನಿರ್ಬಂಧದಲ್ಲಿ ತನ್ನನ್ನು ತಾನೇ ಆತನು ಇಟ್ಟುಕೊಂಡಿಲ್ಲ. ನನ್ನ ಅನೇಕ ಆಕಾಂಕ್ಷೆಗಳು ಕೃತಕವಾಗಿದ್ದು, ಸ್ವಾರ್ಥದಿಂದ ಹುಟ್ಟಿದಂಥವುಗಳು. ನಾನು ಸಂಪತ್ತಿಗಾಗಿ ಹಂಬಲಿಸಬಹುದು, ಆದರೆ ನನ್ನ ಆತ್ಮವು ಬಡವನಾಗಿದ್ದರೆ ನಾನು ಶ್ರೀಮಂತನಾಗಿರುತ್ತೇನೆ ಎಂದು ಆತನಿಗೆ ತೋರಬಹುದು. ನಾನು ಪದೋನ್ನತಿಯನ್ನು ಕೋರಬಹುದು, ಆದರೆ ನಾನು ಪರಿಶುದ್ಧವಾಗುವ ಮಾರ್ಗವು ಅವಮಾನ ಹಾಗೂ ನಿರಾಶೆಯ ಕಣಿವೆಯಲ್ಲಿ ಅಡಗಿದೆ ಎಂದು ಆತನಿಗೆ ತಿಳಿದಿರಬಹುದು. ಆದುದರಿಂದ ಆತನು ಕೇವಲ ನನಗೆ ಅಗತ್ಯವಾದದ್ದನ್ನು ಹಾಗೂ ನಾನು ಬಯಸುವುದಕ್ಕಿಂತ ಭಿನ್ನವಾದ ಕಾರ್ಯಗಳನ್ನು ಮಾತ್ರ ಕೊಡಲು ಸಮ್ಮತಿಸುತ್ತಾನೆ." (ಟಿ. ಎಲ್. ಕೈಲರ್‌ರವರಿಂದ) ಅರ್.572, ಸಿ.1, ಪಿ.7.

## "ನೀವೆಲ್ಲರೂ ಕ್ರಿಸ್ತನಲ್ಲಿ ಸಂಪೂರ್ಣರಾಗಿದ್ದೀರಿ." ಕೊಲೊಸ್ಸೆ. 2:10.

"ಕೇವಲ ಸೊನ್ನೆಯು ಮಾತ್ರ ಮೌಲ್ಯವನ್ನು ಹೊಂದಿರುವುದಿಲ್ಲ, ಆದರೆ ಅದು ಯಾವುದಾದರೂ ಸಂಖ್ಯೆಯ ಮುಂದಿದ್ದರೆ ಮಾತ್ರ ಅದಕ್ಕೆ ಬೆಲೆಯಿರುತ್ತದೆ. ಅದೇ ರೀತಿಯಲ್ಲಿ  ನಾನು ಕ್ರಿಸ್ತನನ್ನು ಹಿಂಬಾಲಿಸುವಾಗ ಹಾಗೆಯೇ ಇರುವದು, ಆತನ ಮೌಲ್ಯವು ನಮಗೆ ಆತನೊಂದಿಗೆ ಸಹವಾಸ ಹಾಗೂ ಸಹಕಾರವನ್ನು ಉಂಟುಮಾಡುತ್ತದೆ; ದೇವರ ಬಲ ಹಾಗೂ ಆತನ ಉದ್ದೇಶಕ್ಕೋಸ್ಕರ ಘನತೆ ಹಾಗೂ ಪ್ರಭಾವವನ್ನು ನಮಗೆ ಕೊಡುವದು. ನಾವೆಲ್ಲರೂ ಆತನಲ್ಲಿ ಸಂಪೂರ್ಣರಾಗುತ್ತೇವೆ; ಆ ಪ್ರಿಯನಲ್ಲಿ ಅಂಗೀಕರಿಸಲ್ಪಡುತ್ತೇವೆ." ಆರ್.3149, ಮೇಲೆ.

## "ನಮಗೆ ಜೀವವಾಗಿರುವ ಕ್ರಿಸ್ತನು ಪ್ರತ್ಯಕ್ಷನಾಗುವಾಗ ನೀವು ಸಹ ಆತನ ಜೊತೆಯಲ್ಲಿ ಪ್ರಭಾವದಿಂದ ಕೂಡಿದವರಾಗಿ ಪ್ರತ್ಯಕ್ಷರಾಗುವಿರಿ." ಕೊಲೊಸ್ಸೆ. 3:4

"ದೇವರಿಗೆ ಮೆಚ್ಚಿಗೆಯಾದದ್ದನ್ನು ಮಾಡಲು ಸಂತೋಷಪಡುವವರಿಗೆ ಆತನಿಂದ ವಿಶೇಷವಾದ ಆಶೀರ್ವಾದವಿರುವುದು, ಇಂಥವರಿಗೆ ಸರಿ ಹಾಗೂ ತಪ್ಪುಗಳ ಬಗ್ಗೆ ವಿವೇಚನೆ ಹೊಂದಲು ಚಾವಟಿಯ ಏಟುಗಳ ಅವಶ್ಯಕತೆ ಇಲ್ಲ. ಆತನು ಇವರನ್ನು 'ಜಯ ಹೊಂದಿದವರು' ಎಂಬುದಾಗಿ ಕರೆಯುತ್ತಾನೆ. ಇವರು ಕರ್ತನ ಸ್ವಭಾವವನ್ನು ಹೊಂದಿರುತ್ತಾರೆ ಮತ್ತು ಆತನು ಎಲ್ಲಿದ್ದಾನೋ ಅಲ್ಲಿ ಇವರೂ ಇದ್ದು, ಆತನ ಗೌರವ, ಘನತೆ, ಮಹಿಮೆ, ರಾಜ್ಯಭಾರ ಹಾಗೂ ಪ್ರಭಾವವನ್ನು ಹಂಚಿಕೊಳ್ಳಲು ಯೋಗ್ಯರಾಗಿರುತ್ತಾರೆ. ಜಯಶಾಲಿಗಳಾಗಿರುವ ಚಿಕ್ಕ ಹಿಂಡಿನವರು ಮಹಾಸಮೂಹದವರು ಯಾತನೆ ಪಡುವುದಕ್ಕಿಂತ ಹೆಚ್ಚಾಗಿ ಶ್ರಮಗೆ ಒಳಗಾಗುತ್ತಾರೆ ಎಂಬ ಕಾರಣದಿಂದ ಅವರು ಈ ಬಹುಮಾನವನ್ನು ಹೊಂದುತ್ತಿಲ್ಲ, ಬದಲಾಗಿ ಅವರು ಸಂತೋಷದಿಂದಲೂ, ಸ್ವ-ಇಚ್ಛೆಯಿಂದಲೂ, ಸ್ವ-ಸಮರ್ಪಣೆಯಿಂದಲೂ ಶ್ರಮೆಯನ್ನು ಅನುಭವಿಸುವರು ಎಂಬುವದು ಯುಕ್ತವಾದ ಕಾರಣವಾಗಿದೆ." ಆರ್.1669, ಸಿ.1, ಪಿ.7,8.

## “ನಿಮ್ಮನ್ನು ಕರೆಯುವಾತನು ನಂಬಿಗಸ್ತನು. ಆತನು ತನ್ನ ಕಾರ್ಯವನ್ನು ಸಾಧಿಸುವನು.” 1 ಥೆಸಲೋನಿಕ. 5:24.

“ಪರಿಶುದ್ಧ ಆತ್ಮವನ್ನು ಕೇಳುವವರಿಗೆ ಕೊಡುವುದಕ್ಕೂ, ಎಲ್ಲಾ ಕಾರ್ಯಗಳನ್ನು ಅವರ ಅನುಕೂಲಕ್ಕಾಗಿ ಮಾಡುವುದಕ್ಕೂ, ಅವರ ಶ್ರೇಷ್ಠ ಕುರುಬನ ನಡೆಸುವಿಕೆಯ ಅಧೀನದಲ್ಲಿ ಅವರನ್ನು ತರುವುದಕ್ಕೂ ಹಾಗೂ ಕೊನೆಯದಾಗಿ ರಾಜ್ಯದಲ್ಲಿ ಅವರನ್ನು ಒಂದುಗೂಡಿಸು–ವುದಕ್ಕೂ ತಂದೆಯು ಸಂತೋಷವುಳ್ಳವರಾಗಿದ್ದಾನೆ. ಬೇರೆ ಅರ್ಥದಲ್ಲಿ ಹೇಳುವುದಾದರೆ, ‘ನಮ್ಮನ್ನು ಕರೆಯುವವನು, ಆತನು ತನ್ನ ಕಾರ್ಯವನ್ನು ಸಾಧಿಸುವನು, ಆತನು ವಾಗ್ದಾನಮಾಡಿರುವಂಥಹ ಎಲ್ಲಾ ಕಾರ್ಯಗಳನ್ನು ನಿರೀಕ್ಷಿಸಿದ್ದಕ್ಕಿಂತಲೂ ಅಥವಾ ಆತನಿಂದ ಕೇಳಿದಕ್ಕಿಂತಲೂ ಅಧಿಕವಾಗಿ ನೆರವೇರಿಸುವನು. ಇದರ ಸಂಪೂರ್ಣ ವಿಚಾರವು ನಮಗೆ ಬಿಟ್ಟಿದ್ದು: ಒಂದುವೇಳೆ ನಮ್ಮ ವಿಶ್ವಾಸವು ಕರ್ತನ ವಿಮೋಚನಾ ಕಾರ್ಯದ ಮೇಲೆ ಆಧಾರಿತವಾಗಿದ್ದರೆ, ಒಂದುವೇಳೆ ಪೂರ್ಣವಾಗಿಯೂ ಸಂಪೂರ್ಣವಾಗಿಯೂ ಪ್ರತಿಷ್ಠೆಯಾಗಿದ್ದಲ್ಲಿ ಮತ್ತು ನಾವು ಇದನ್ನು ದಿನನಿತ್ಯವೂ ಜೀವಿಸಿದರೆ, ಅದರ ಫಲಿತಾಂಶವು ಪೂರ್ತಿ–ಯಾಗಿ ನಮ್ಮ ನಿರೀಕ್ಷೆಗಿಂತಲೂ ಅತ್ಯಧಿಕವಾಗಿರುವುದು.” ಆರ್. 3659, ಸಿ.2, ಕೊನೆಭಾಗ.

## “ಆದರೆ ಕರ್ತನು ನಂಬಿಗಸ್ತನು; ಆತನು ನಿಮ್ಮನ್ನು ಕೆಡುಕನ ಕೈಗೆ ಸಿಕ್ಕದಂತೆ ಕಾಪಾಡುವನು.” 2 ಥೆಸಲೋನಿಕ. 3:3.

“ಪ್ರವಾದಿ ದಾನಿಯೇಲನು ನಿರ್ದಿಷ್ಟವಾಗಿ ಹೇಳುವಂತೆ, ಈ ಅಂತ್ಯಕಾಲದಲ್ಲಿ ‘ಅನೇಕರು ಇನ್ನು ಶುದ್ಧಮಾಡಲ್ಪಟ್ಟು, ಶುಭ್ರಮಾಡಲ್ಪಟ್ಟು, ಶೋಧಿಸಲ್ಪಟ್ಟಿರುವರು’; ಮತ್ತು ಮಲಾಕಿಯು ಈ ಕಾಲದ ಶೋಧನೆಗಳನ್ನು ‘ಅಕ್ಕಸಾಲಿಗನ ಬೆಂಕಿ’ಗೂ ಹಾಗೂ ‘ಅಗಸನ ಚೌಳಿ’ಗೂ ಹೋಲಿಸುತ್ತಾರೆ, ಕರ್ತನ ಜನರನ್ನು ಶೋಧಿಸಿ ಶುದ್ಧೀಕರಿಸಲು ಇವುಗಳನ್ನು ನೇಮಿಸಲಾಗಿದೆ. ಅಪೋಸ್ತಲ ಪೌಲರು ನಾವು ನಂಬಿಕೆಯ ಒಳ್ಳೇ ಹೋರಾಟವನ್ನು ಹೋರಾಡಲು ಹಾಗೂ ಸಂಕಟಗಳನ್ನು ಕಡೆಯವರೆಗೂ ತಾಳ್ಮೆಯಿಂದ ಸಹಿಸಿಕೊಳ್ಳಲು ಒತ್ತಾಯಪಡಿಸುತ್ತಾರೆ. ಬಿರುಗಾಳಿಯಿಂದ ಬಡಿಯಲ್ಪಟ್ಟವರಿಗೂ ಹಾಗೂ ಬಾಧೆಯನ್ನನುಭವಿಸುವ ದೇವಜನರಿಗೆ ಕೀರ್ತನೆಗಾರನಿಂದಲೂ ಮತ್ತು ಇತರರಿಂದಲೂ (ಈ ಮೇಲಿನಂತೆ) ಅನೇಕ ಆದರಣೆಯ ಮಾತುಗಳನ್ನೂ ಸಾಂತ್ವಾನವನ್ನೂ ನೀಡಲಾಗಿದೆ.” ಕೀರ್ತನೆ. 77:1–14; 116:1–14; 34:19; 31:24; 2 ಥೆಸಲೋನಿಕ. 3:3.” ಆರ್.1823, ಸಿ.2, ಪಿ.1.

## “ದೇವರು ನಮಗೆ ಕೊಟ್ಟಿರುವ ಆತ್ಮವು ಬಲ ಪ್ರೀತಿ ಸ್ವಸ್ಥಬುದ್ಧಿಯ ಆತ್ಮವೇ ಹೊರತು ಭಯದ ಆತ್ಮವಲ್ಲ.” 2 ತಿಮೋಥಿ. 1:7.

“ಕ್ರೈಸ್ತನಲ್ಲಿರುವ ಭಯದ ಆತ್ಮವು ಸಂದೇಹದ ಆತ್ಮವಾಗಿದೆ, ಮತ್ತು ನಂಬಿಕೆಯ ಕೊರತೆಯನ್ನೂ, ಪರಿಶುದ್ಧ ಆತ್ಮದ ಕೊರತೆಯನ್ನೂ ತೋರ್ಪಡಿಸುತ್ತದೆ. ಭಯದ ಆತ್ಮವು ಕ್ರೈಸ್ತರ ಆತ್ಮೀಕ ವಿಚಾರಗಳಲ್ಲಿ ವ್ಯಕ್ತಿಗತವಾಗಿಯೂ ಹಾಗೂ ಸಭೆಯಾಗಿಯೂ ಆತನ ಎಲ್ಲಾ ಬೆಳವಣಿಗೆಗಳ ವಿಚಾರದಲ್ಲಿ ಕೆಡುಕನ ಫಲದಾಯಕ ಮೂಲವಾಗಿದೆ; ಮತ್ತು ಇದು ದೈಹೀಕ

ಬಲಹೀನತೆ ಹಾಗೂ ದೌರ್ಬಲ್ಯತೆಯೊಂದಿಗೂ ಕಂಡುಬರುತ್ತದೆ. ಪರಿಶುದ್ಧ ಆತ್ಮದಿಂದ ತುಂಬಿದ ದೇವರ ಮಕ್ಕಳು ತಮ್ಮ ಸ್ವಂತ ಪ್ರಾಕೃತಕ್ಕೆ ಹೋಲಿಸಿದರೆ ಒಬ್ಬ ಅಸಾಧಾರಣನಾಗಿ-ದ್ದಾನೆ; ಯಾಕೆಂದರೆ ಅವನ ಭಯವನ್ನು ಇಲ್ಲದಂತೆ ಮಾಡಲಾಗಿದೆ, ಆತನ ಹೃದಯವನ್ನು ಸ್ಥಾಪಿಸಲಾಗಿದೆ, ಅವನ ನಂಬಿಕೆಯು ಬೇರೂರಿ ನೆಲೆಗೊಂಡಿದೆ ಮತ್ತು ಅವನ ಆತ್ಮಕ್ಕೆ ಲಂಗರದ ಹಾಗಿದ್ದು, ಪರದೆಯೊಳಗೆ ನಿಶ್ಚಯವಾಗಿ ಸ್ಥಿರವಾಗಿದೆ. ಹೀಗೆ ಸಂಕಷ್ಟದ ಬಿರುಗಾಳಿಯು ಅಪ್ಪಳಿಸುವಾಗ ಅವನು ವಿಪತ್ತಿನ ಬಂಡೆಗಳಿಗೆ ಹೊಡಿಸಿಕೊಂಡು ಹೋಗ-ದಂತೆ ಹಿಡಿಯಲ್ಪಟ್ಟಿರುವನು. ಹೀಗೆ ಪರಿಶುದ್ಧ ಆತ್ಮವನ್ನು ಹೊಂದಿರುವವರಿಗೆ ಅದೊಂದು ಶಕ್ತಿಯಾಗಿದ್ದು ಹಲವೊಮ್ಮೆ ಅವರ ವೈರಿಗಳಿಗೆ ವಿಸ್ಮಯವನ್ನುಂಟುಮಾಡಿದೆ." ಇ. 249.

## "ಈ ಮಾತು ನಂಬತಕ್ಕದ್ದಾಗಿದೆ, ಏನಂದರೆ – ನಾವು ಆತನೊಡನೆ ಸತ್ತಿದ್ದರೆ ಆತನೊಡನೆ ಜೀವಿಸುವೆವು; ಸಹಿಸಿಕೊಳ್ಳುವವರಾಗಿದ್ದರೆ ಆತನೊಡನೆ ಆಳುವೆವು; ನಾವು ಯೇಸುವಿನವರಲ್ಲವೆಂದು ಹೇಳಿದರೆ ಆತನು ನಮ್ಮನ್ನು ತನ್ನವರಲ್ಲವೆಂದು ಹೇಳುವನು." 2 ತಿಮೋಥಿ. 2:11,12.

"ಇತರರು ತಮ್ಮ ಜೀವನದಲ್ಲಿ ಬರುವ ಜೀವನದ ಶೋಧನೆಗಳು ದೈವೀಕ ಅವಕೃಪೆಯ ಗುರುತು ಎಂದು ಅರ್ಥವಿವರಣೆ ಕೊಡುತ್ತಾರೆ ಮತ್ತು ಅವುಗಳಿಂದ ತಮ್ಮ ಗುಣಲಕ್ಷಣಗಳನ್ನು ರೂಪಿಸಿ, ಹೊಳಪುಕೊಟ್ಟು, ಅದರಿಂದ ಅತ್ಯಂತಾಧಿಕವಾದ ಪ್ರತಿಫಲವನ್ನು ಉಂಟುಮಾಡಲು, ತಮಗೆ ನಿರಂತರವಾಗಿರುವ ಗೌರವವಾದ ಪ್ರಭಾವವನ್ನು ದೊರಕಿಸಲು ಕರ್ತನೇ ಇದನ್ನು ಉದ್ದೇಶಿಸಿದ್ದಾರೆಂದು ಗ್ರಹಿಸಿಕೊಳ್ಳಲು ವಿಫಲರಾಗುತ್ತಾರೆ. ಅವರ ತಪ್ಪಾದ ತಿಳುವಳಿಕೆಯಿಂದಾಗಿ, ಜೀವನದ ಅನೇಕ ಅನುಭವಗಳ ಮೂಲಕ ಸಾಗಲು ಕರೆಕೊಟ್ಟಿದ್ದರೂ ಸ್ವಲ್ಪವೇ ಲಾಭವನ್ನು ಪಡೆಯುತ್ತಾರೆ, ಅವರು ಕೋಲಿನ ಸ್ಪರ್ಶವನ್ನು ಪಡೆಯುತ್ತಾರೆ, ಆದರೆ ಅದರ ಹಿಂದೆ ಇರುವ ಪ್ರೀತಿಯ ಉದ್ದೇಶವನ್ನು ಅರಿತುಕೊಳ್ಳದೆ ಇರುವುದರಿಂದ ಆತನು ಸಂಕಲ್ಪಿಸಿದ ಪಾಠವನ್ನು ಕಲಿತುಕೊಳ್ಳಲು ವಿಫಲರಾಗುತ್ತಾರೆ... ನಾವು ಅನುಭವದ ಹಳ್ಳದ ರುಚಿನೋಡಿದರೆ ಮಾತ್ರ ಸಾಕಾಗದು; ಅಂದರೆ, ನಾವು ವಿಧೇಯತೆಯನ್ನು ಕಲಿತುಕೊಂಡರೂ... ಕೆಲವು ಶೋಧನೆಗಳನ್ನು ಸಹಿಸಿದ್ದೇವೆ, ಕೆಲವು ಸಂದರ್ಭಗಳಲ್ಲಿ ನಾವು ಅನುಭವಿಸಿದ ಬಾಧೆಗಳಿಂದಲೇ ವಿಧೇಯತೆಯನ್ನು ಕಲಿತರೆ ಅಷ್ಟೇ ಸಾಲದು; ನಾವು ಸಂತೋಷದಿಂದ 'ತಂದೆಯೇ, ನಿಮ್ಮ ಚಿತ್ತವೇ ಆಗಲಿ, ನಮ್ಮ ಚಿತ್ತವಲ್ಲ!' ಎಂದು ಹೇಳುವವರೆಗೆ ಹೀಗೆ ಕುಡಿಯುತ್ತಲೇ ಇರಬೇಕು." ಆರ್.2936, ಸಿ.1, ಪಿ.4,2.

## "ತನ್ನವರು ಯಾರಾರೆಂಬದನ್ನು ಕರ್ತನು ತಿಳಿದಿದ್ದಾನೆ." 2 ತಿಮೋಥಿ. 2:19.

"ತಮ್ಮನ್ನು ತಗ್ಗಿಸಿಕೊಳ್ಳುವವರನ್ನೂ, ಯಾವುದೇ ಪರಿಸ್ಥಿತಿಯಲ್ಲಿ ಆತನ ಸತ್ಯವನ್ನು ಸ್ವಾಧೀನದಲ್ಲಿಟ್ಟುಕೊಳ್ಳಲು ಸಂತೋಷಪಡುವವರನ್ನೂ, ಯಾರ ಹೃದಯವು ಸತ್ಯಕ್ಕಾಗಿ ತುಂಬಾ ಬಳಲಿ ಹಸಿದು ಬಾಯಾರಿದೆಯೋ ಹಾಗೂ ಕುರುಬನ ಸ್ವರವನ್ನು

ತಿಳಿದುಕೊಂಡಿದ್ದಾರೋ ಮತ್ತು ಯಾರು ಆತನ ಸಂದೇಶವು 'ಬೇರೆ ಯಾವುದೂ ಕೊಡಲಾರದಂಥಹ ದಾಹಪಟ್ಟ ಪ್ರಾಣವನ್ನು ತೃಪ್ತಿಪಡಿಸುತ್ತದೆಂದು' ತಿಳಿದುಕೊಳ್ಳುತ್ತಾರೋ ಅಂಥವಗಾಗಿ ಆತನು ಎದುರುನೋಡುತ್ತಿದ್ದಾನೆ, ಇವರು ಯುದ್ಧ ಶಸ್ತ್ರಾಸ್ತ್ರಗಳನ್ನು ಸಂತೋಷದಿಂದ ಅಂಗೀಕರಿಸಿಕೊಳ್ಳುತ್ತಾರೆ ಮತ್ತು ಪ್ರಾಮಾಣಿಕ ವಿದ್ಯಾರ್ಥಿಗಳಾಗುವುದರ ಮೂಲಕ ಅವುಗಳನ್ನು ತಮ್ಮದಾಗಿಸಿಕೊಳ್ಳುತ್ತಾರೆ ಮತ್ತು ಅವುಗಳನ್ನು ಧರಿಸಿಕೊಳ್ಳುತ್ತಾರೆ. ಬೇರೆಯವರು ತಮ್ಮ ಪಕ್ಕದಲ್ಲಿ ಬಿದ್ದುಹೋದರೂ ಇವರನ್ನು ಭದ್ರವಾಗಿಡಲಾಗುವುದು." ಆರ್.4439, ಸಿ.1, ಪಿ.1.

## "ಕ್ರಿಸ್ತ ಯೇಸುವಿನಲ್ಲಿ ದೇವರ ಚಿತ್ತಕ್ಕನುಸಾರವಾಗಿ ಜೀವಿಸುವ ಪ್ರತಿಯೊಬ್ಬರೂ ಹಿಂಸೆಗೆ ಒಳಗಾಗುವರು." 2 ತಿಮೋಥಿ. 3:12.

ಇದು ವಾಗ್ದಾನವೂ ಸತ್ಯವೇದದ ಭರವಸೆಯೂ ಆಗಿದೆ. ನಾವು ಹಿಂಸೆಯನ್ನು ಆಹ್ವಾನಿಸ–ಬಾರದು, ಆದರೆ ಇದು ನಮ್ಮ ನಂಬಿಗಸ್ತತೆಯ ಸೂಚನೆಯಾಗಿ ಅಪೇಕ್ಷಿಸಬೇಕು ಮತ್ತು ನಮ್ಮ ಪ್ರಭು ಹೇಳಿರುವಂತೆ, (ಮತ್ತಾಯ. 5:11) 'ನಿಮ್ಮನ್ನು ನಿಂದಿಸಿ ಹಿಂಸೆಪಡಿಸಿ ನಿಮ್ಮ ಮೇಲೆ ಕೆಟ್ಟ ಕೆಟ್ಟ ಮಾತುಗಳನ್ನು ಸುಳ್ಳಾಗಿ ಹೊರಿಸಿದರೆ ನೀವು ಧನ್ಯರು' ಎಂಬ ಆಶೀರ್ವಾದ ಹೊಂದಿದವರಲ್ಲಿ ನಾವೂ ಒಬ್ಬರಾಗುವಂತೆ ಅಪೇಕ್ಷಿಸಬೇಕು. ಆರ್. 5544, ಸಿ.1, ಪಿ.7.

## "ಇವರೆಲ್ಲರು ರಕ್ಷಣೆಯನ್ನು ಬಾಧ್ಯವಾಗಿ ಹೊಂದಬೇಕಾಗಿರುವವರ ಸೇವೆಗೋಸ್ಕರ ಕಳುಹಿಸಲ್ಪಡುವ ಊಳಿಗದ ಆತ್ಮಗಳಲ್ಲವೋ?" ಹಿಬ್ರಿಯ. 1:14.

"ಎಲೀಷ ಹಾಗೂ ಆತನ ಸೇವಕನಿಗೆ ವಾಸ್ತವವಾಗಿ ತೋರಿಸಿದ್ದನ್ನು ನಾವು ನಂಬಿಕೆಯ ಮೂಲಕ ನೋಡಬೇಕೆಂದಿದ್ದರೆ ಪ್ರತಿಯೊಬ್ಬ ಕ್ರೈಸ್ತನ ಮನೋನೇತ್ರಗಳು ತೆರೆದಿರುವುದು ತುಂಬಾ ಅವಶ್ಯ. ಈ ಸುವಾರ್ತಾ ಯುಗದಲ್ಲಿ ಕರ್ತನು ನಮಗೆ ಮಾಡಿರುವ ಭವ್ಯವಾದ ಪೂರ್ವಸಿದ್ಧತೆಗಳನ್ನು ಹಾಗೂ ಆತನು ನಮ್ಮ ಸಂರಕ್ಷಣೆಗೆ ಉಪಯೋಗಿಸುವ ಪರಾಕ್ರಮವನ್ನು ನೋಡುವಂತೆ ಆತನು ನಮ್ಮ ಸ್ವಾಭಾವಿಕ ಕಣ್ಣುಗಳನ್ನು ತೆರೆಯುವುದಿಲ್ಲ; ಬದಲಾಗಿ ಆತನ ಕೃಪೆಯಿಂದ ಕೂಡಿದ ವಾಕ್ಯ ಹಾಗೂ ಸತ್ಯದ ಮೂಲಕ ವಿಷಯದ ಬಗ್ಗೆ ಇನ್ನೂ ಉತ್ತಮವಾದ ಜ್ಞಾನವನ್ನು ಕೊಡುತ್ತಾರೆ, ಇದರಿಂದಾಗಿ ನಾವು ನೋಡುವವರಾಗಿ ನಡೆಯದೆ ನಂಬುವವರಾಗಿಯೇ ನಡೆಯಲು ಸಮರ್ಥರಾಗುತ್ತೇವೆ. ನಾವು ಸ್ವಾಭಾವಿಕ ದೃಷ್ಟಿಯಿಂದ ನೋಡುವಂತೆ ಅದ್ಭುತ ಕಾರ್ಯಗಳನ್ನು ಮಾಡದೆ ಕರ್ತನ ಸೈನ್ಯವು ನಮ್ಮ ಸುತ್ತಲೂ ದಂಡು ಇಳಿದಿರುವುದನ್ನು ಹಾಗೂ ಅವರ ಕಾವಲನ್ನು ಗ್ರಹಿಸಿಕೊಳ್ಳುವಂತೆಯೂ ಮಾಡುತ್ತಾನೆ. ಕರ್ತನು ಒದಗಿಸಿರುವಂಥಹ ಅಂಥಹ ಸಹಾಯವಿಲ್ಲದೆ ನಮ್ಮಲ್ಲಿ ಯಾರೊಬ್ಬರೂ ಕ್ರಿಸ್ತೀಯ ಹೋರಾಟದ ಮೂಲಕ ಜಯದಿಂದ ಸಾಗಲು ಸಾಕಷ್ಟು ಬಲಶಾಲಿ–ಗಳಲ್ಲ ಮತ್ತು ನಂಬಿಕೆಯು ಇದನ್ನು ಅಂಗೀಕರಿಸುತ್ತದೆ, ಹಿಡಿದಿಟ್ಟುಕೊಳ್ಳುತ್ತದೆ, ಅವುಗಳ ಮೇಲೆ ಆತುಕೊಳ್ಳುತ್ತದೆ ಮತ್ತು ಅವುಗಳಿಂದ ಹೊಂದಿಕೊಳ್ಳುತ್ತದೆ." ಆರ್.2350, ಸಿ.1, ಪಿ.1.

**“ಮೊದಲಿನಿಂದಿರುವ ನಮ್ಮ ಭರವಸವನ್ನು ಅಂತ್ಯದವರೆಗೂ ನಾವು ದೃಢವಾಗಿ ಹಿಡುಕೊಳ್ಳುವದಾದರೆ ಕ್ರಿಸ್ತನಲ್ಲಿ ಪಾಲುಗಾರಾಗಿದ್ದೇವಲ್ಲಾ!” ಹಿಬ್ರಿಯ. 3:14.**

“ಅತೃಪ್ತಿಯ ಆತ್ಮವು ದೈವೀಕವಾಗಿ ಪೂರೈಸುವ ಪರಲೋಕ ಮನ್ನಾವನ್ನು ಬಿಟ್ಟು ತಾವು ಸ್ವಂತವಾಗಿ ತಯಾರಿಸಿದ ಇತರ ಆಹಾರಕ್ಕಾಗಿ ಅಥವಾ ಇತರ ಭೂಲೋಕದ ಪೂರೈಕೆಗಾಗಿ ತವಕಪಡುತ್ತದೆ. ಅವರು ಆಶಿಸುವಂಥಹ ಅಂಥಹ ಆಹಾರದಲ್ಲಿ ಅವರು ಸಂಪೂರ್ಣವಾಗಿ ಸಂಭ್ರಮಿಸಲು ಕರ್ತನು ಅವಕಾಶಕೊಡುತ್ತಾರೆ... ಸತ್ಯವೇದವು ದೈವೀಕ ಸತ್ಯವೆಂಬ ಮನ್ನಾವನ್ನು ಪೂರೈಸುತ್ತದೆ. ಸತ್ಯವನ್ನು ಸಂಗ್ರಹಿಸಿ, ಬೀಸಿ, ಬೇಯಿಸಬೇಕಾಗುತ್ತದೆ, ಆದರೆ ಅದು ದೇವರು ಒದಗಿಸುವಂಥದ್ದಾಗಿದೆ. ಅದು ಆರೋಗ್ಯಕರವೂ ಪೌಷ್ಟಿಕರವೂ ಆಗಿದೆ, ಅದು ಮಾತ್ರ ದೇವರ ಮಕ್ಕಳಾದ ನಮ್ಮ ಬಲವರ್ಧನೆಗೂ ಪರಿಪೂರ್ಣತೆಗೂ ಅಗತ್ಯವಾಗಿದೆ. ಆದರೂ ಕೆಲವರು ಲೋಕದ ಸಿದ್ಧಾಂಥಗಳೆಂಬ ಮಾಂಸದ ಪಾತ್ರೆಗಳಿಗಾಗಿ ಹಂಬಲಿಸುತ್ತಾರೆ, ಅದೂ ಕೂಡ ಅವರಿಗೆ ಎಟುಕುವಂತೆ ಆತನು ಅವಕಾಶಕೊಡುತ್ತಾನೆ. ಅವರು ತಮ್ಮನ್ನೇ ಉನ್ನತವಾದ ಟೀಕೆ ಹಾಗೂ ವಿಕಸನ ಶಾಸ್ತ್ರಗಳಿಂದ ತುಂಬಿಸಿಕೊಳ್ಳುತ್ತಾರೆ ಮತ್ತು ಇದರ ಪರಿಣಾಮವಾಗಿ ಅವರು ಹೊಸಸೃಷ್ಠಿಗಳಾಗಿ ನಾಶವಾಗುತ್ತಾರೆ, ದೇವರ ಮಕ್ಕಳಾಗಿರುವುದು ಮುಕ್ತಾಯಗೊಳ್ಳುತ್ತದೆ. ಕ್ರಿಸ್ತನ ಹೆಜ್ಜೆಜಾಡಿನಲ್ಲಿ ನಡೆಯುವುದು ನಿಂತುಹೋಗುತ್ತದೆ. ಇತರ ಅವರು ತಾವು ಬಯಸಿದ ತಪ್ಪುಗಳು ಉತ್ಪತ್ತಿ ಮಾಡುವ ಬೆಂಕಿಗೆ ಅಥವ ಜ್ವರಕ್ಕೆ ಆಹುತಿಯಾಗುತ್ತಾರೆ” ಆರ್. 5306, ಸಿ.2, ಕೆಳಗಡೆ; ಆರ್. 5307, ಸಿ.1, ಪಿ.1.

**“ಆದದರಿಂದ ನಾವು ಕರುಣೆಯನ್ನು ಹೊಂದುವಂತೆಯೂ ಆತನ ಕೃಪೆಯಿಂದ ಸಮಯೋಚಿತವಾದ ಸಹಾಯವು ನಮಗೆ ದೊರೆಯುವಂತೆಯೂ ಧೈರ್ಯದಿಂದ ಕೃಪಾಸಿಂಹಾಸನದ ಬಳಿಗೆ ಬರೋಣ.” ಹಿಬ್ರಿಯ. 4:16.**

“ಆದರೆ ಸಮಯೋಚಿತವಾದ ಈ ಸಹಾಯವು ದೊರೆಯಬೇಕಾದರೆ ನಾವು ಬೇಡಿಕೊಳ್ಳಬೇಕು. ಪ್ರತೀ ದಿನವೂ ಹಾಗೂ ಪ್ರತೀ ಗಳಿಗೆಯು ನಿಜವಾಗಿಯೂ ಅಗತ್ಯದ ಸಮಯವಾಗಿದೆ; ಆದುದರಿಂದ ಎಡೆಬಿಡದೆ ಪ್ರಾರ್ಥನೆ ಮಾಡುವ ವಾತಾವರಣದಲ್ಲಿ ನಾವು ಜೀವಿಸುವುದು ಅಗತ್ಯವಾಗಿದೆ.” ಆರ್. 1802, ಮೇಲೆ.

ದೇವರ ನಿಜವಾದ ಮಕ್ಕಳು ತಮ್ಮ ವಿಫಲತೆಗಳಿಂದ ಎಷ್ಟೊಂದು ದುಃಖಿತರಾಗುತ್ತಾರೆಂದರೆ, ಭವಿಷ್ಯದಲ್ಲಿ ಅಗತ್ಯವಿರುವ ಕರುಣೆಯನ್ನು ಹೊಂದುವಂತೆಯೂ, ಆತನ ಕೃಪೆಯಿಂದ ಸಮಯೋಚಿತವಾದ ಸಹಾಯವು ನಮಗೆ ದೊರೆಯುವಂತೆಯೂ ಕೃಪಾಸಿಂಹಾಸನದ ಬಳಿಗೆ ಕೊಂಡೊಯ್ಯಲ್ಪಡುತ್ತಾರೆ, ಆದರೆ ಇತರರು ತಮ್ಮ ವಿಫಲತೆಗಳನ್ನು ಹಗುರವಾಗಿ ಪರಿಗಣಿಸಿ ಅದರಿಂದುಂಟಾಗುವ ಲಾಭವನ್ನು ಪಡೆಯಲು ವಿಫಲರಾಗುತ್ತಾರೆ... ಪ್ರತಿಷ್ಠಿಸಲ್ಪಟ್ಟವರ ಭಾವನೆಯನ್ನು ಕವಿಯು ಹೀಗೆಂದು ಸುಂದರವಾಗಿ ವ್ಯಕ್ತಪಡಿಸುತ್ತಾನೆ:

‘ಓ, ನಿನ್ನನ್ನು ತನ್ನ ಸೇವಕನ ಕಣ್ಣಿಗೆ ಮರೆಮಾಡುವಂತೆ,
ಭೂಲೋಕದಿಂದ ಹುಟ್ಟಿದ ಮೋಡವು ಏರದಿರಲಿ.’
ಆರ್.3407, ಸಿ.1, ಮೇಲೆ ಹಾಗೂ ಪಿ.1.

**“ಆ ನಿರೀಕ್ಷೆಯು ನಮ್ಮ ಪ್ರಾಣಕ್ಕೆ ಲಂಗರದ ಹಾಗಿದ್ದು ಖಂಡಿತವಾದದ್ದೂ ಸ್ಥಿರವಾದದ್ದೂ ಆಗಿದೆ. ಅದು ತೆರೆಯೊಳಗಿರುವಲ್ಲಿಗೆ ಪ್ರವೇಶಿಸುವಂಥದು.” ಹಿಬ್ರಿಯ. 6:19.**

“ಪರಿಶುದ್ಧದಲ್ಲಿರುವ ಆತ್ಮೀಕ ಮನಸ್ಸುಳ್ಳ ಹೊಸ ಸೃಷ್ಟಿಯು ನಂಬಿಕೆಯ ಮೂಲಕ ಸೀಳಿರುವ ‘ತೆರೆ’ಯ ಒಳಗಡೆ ಇರುವ ‘ಮಹಾಪರಿಶುದ್ಧ’ದ ಮಹಿಮೆಯ ಕ್ಷಣಿಕ ದರ್ಶನವನ್ನು ಪಡೆಯುತ್ತದೆ ಮತ್ತು ಮಾಂಸಿಕ ಶರೀರದ ಆಚೆ ಇರುವ ಅಮರತ್ವವನ್ನು ಎದುರು ನೋಡುತ್ತದೆ. ಈ ನಿರೀಕ್ಷೆಯು ನಮ್ಮ ಆತ್ಮಕ್ಕೆ ಲಂಗರಿನಂತಿದ್ದು ಪರದೆಯ ಆಚೆ ಇರುವ ನಿಶ್ಚಯವಾದದ್ದನ್ನು, ಸ್ಥಿರವಾದದ್ದನ್ನು ಪ್ರವೇಶಿಸುವಂತೆ ಮಾಡುತ್ತದೆ.” ಟಿ. 21, ಪಿ.2.

**“ನಮ್ಮ ನಂಬಿಕೆಯಿಂದಾದ ಅರಿಕೆಯನ್ನು ನಿಶ್ಚಂಚಲದಿಂದ ಬಲವಾಗಿ ಹಿಡಿಯೋಣ. ಯಾಕಂದರೆ ವಾಗ್ದಾನ ಮಾಡಿದಾತನು ನಂಬಿಗಸ್ತನು.” ಹಿಬ್ರಿಯ. 10:23.**

“ನಮ್ಮ ಕ್ರಿಸ್ತೀಯ ಜೀವನವನ್ನು ಆರಂಭಿಸಿದಂಥಹ ನಂಬಿಕೆಯನ್ನು ನಿಶ್ಚಂಚಲವಾಗಿ ಹಿಡಿದಿಟ್ಟುಕೊಳ್ಳಬೇಕು ಮತ್ತು ಇದು ನಮ್ಮ ಜೀವನವನ್ನು ಅಂತ್ಯಗೊಳಿಸಬೇಕು ಎನ್ನುವುದು ಅಪೋಸ್ತಲನ ತರ್ಕವಾಗಿದೆ. ಒಂದುವೇಳೆ ನಮ್ಮ ಪಾಲನ್ನು ನಾವು ನಿಭಾಯಿಸುವುದಾದರೆ, ಕರ್ತನು ನಮ್ಮನ್ನು ಸಾಗಿಸಲು ಸಮರ್ಥರಾಗಿದ್ದಾನೆ ಮತ್ತು ಆತನು ಅದನ್ನು ನೆರವೇರಿಸುತ್ತಾನೆ. ನಾವು ನಂಬಿಗಸ್ತತೆಯಿಂದ ನೆಲೆಸುವ ಉದ್ದೇಶವನ್ನು ಹೊಂದಿರುವ ಷರತ್ತಿನ ಮೇರೆಗೆ ಕ್ರಿಸ್ತನು ನಮ್ಮನ್ನು ಅಂಗೀಕರಿಸಿಕೊಂಡಿದ್ದಾನೆ. ಹೀಗಿರುವುದರಿಂದ ಎಲ್ಲವೂ ನಂಬಿಕೆಯಿಂದಾದ ಅರಿಕೆಯನ್ನು ನಿಶ್ಚಂಚಲದಿಂದ, ಬಲದಿಂದ, ಅನುಮಾನವಿಲ್ಲದೆ, ಸಂದೇಹ ಹಾಗೂ ಭಯಕ್ಕೆ ಆಸ್ಪದ ಕೊಡದೆ ಆತುಕೊಂಡಿರುವುದರ ಮೇಲೆ ಅವಲಂಬಿತವಾಗಿದೆ; ‘ವಾಗ್ದಾನ ಮಾಡಿದಾತನು ನಂಬಿಗಸ್ತನು’ ಎಂಬ ಭರವಸೆಯೇ ನಮ್ಮ ನಂಬಿಕೆಯ ಅಡಿಪಾಯವಾಗಿ ಅಂತಿಮ ಜಯವನ್ನುಂಟುಮಾಡುವುದಾಗಿದೆ. ಸತ್ಯವೇದದಲ್ಲಿ ‘ಮಿತಿಮೀರಿದ ಶ್ರೇಷ್ಠ ಹಾಗೂ ಅಮೂಲ್ಯ ವಾಗ್ದಾನಗಳು’ ಇರುವುದನ್ನು ನಾವು ತಿಳಿದುಕೊಂಡಿದ್ದೇವೆ... ಒಂದುವೇಳೆ ನಂಬಿಕೆಯನ್ನು ನಿಶ್ಚಂಚಲವಾಗಿ ಹಿಡಿದುಕೊಂಡರೆ, ದೇವರು ವಾಗ್ದಾನ ಮಾಡಿದಂಥಹ ಎಲ್ಲವುಗಳನ್ನು ಪಡೆಯುವೆವು. ಆತನು ನಂಬಿಗಸ್ತನಾಗಿರುವನು; ಆತನು ತನ್ನ ವಾಗ್ದಾನಗಳನ್ನು ಅಲಕ್ಷ್ಯಮಾಡುವುದಿಲ್ಲ; ಆತನು ತಾನು ಹೇಳಿರುವದನ್ನೆಲ್ಲಾ ನೆರವೇರಿಸುವನು.” ಆರ್.5698, ಸಿ.1, ಪಿ.5.

**“ಹಾಗಾದರೆ ನಿಮ್ಮ ಧೈರ್ಯವನ್ನು ಬಿಟ್ಟುಬಿಡಬೇಡಿರಿ; ಅದಕ್ಕೆ ಮಹಾ ಪ್ರತಿಫಲ ಉಂಟು.” ಹಿಬ್ರಿಯ. 10:35.**

“ವೈರಿಗಳ ದಂಡು ವಿರೋಧವನ್ನು ಒಡ್ಡುತ್ತಿದೆಯೋ, ನಿಮ್ಮ ದಾರಿಗೆ ಅಡಚಣೆಯನ್ನು ತರುವುದರ ಮೂಲಕ ನಿಮ್ಮ ಪ್ರಾಬಲ್ಯಕ್ಕೆ ಅಡ್ಡಿಮಾಡಿ ಹಾಗೂ ನಿಮ್ಮ ಮೇಲೆ ನಿಂದನೆಯ ರಾಶಿಯನ್ನು ಹೊರಿಸುವುದರ ಮೂಲಕ ಎದೆಗುಂದಿಸಲು ಬಯಸಲಾಗುತ್ತಿದೆಯೋ ಮತ್ತು ಸಮಯ ಸಂದರ್ಭಗಳು ನಿಮ್ಮ ವಿರುದ್ಧ ಹೊಂಚು ಹಾಕಿ ಹೃದಯವನ್ನು

ಭಯಭೀತಿಯಿಂದಲೂ ತುಂಬಿಸುವಂತೆ ತೋರಿಬರುತ್ತಿದೆಯೋ? ನಿನ್ನ ಮನಸ್ಸಿಗೆ 'ಭಯಪಡಬೇಡ,' 'ದೇವರಲ್ಲಿ ನಿರೀಕ್ಷಿಸಿಕೊಂಡಿರು' ಎಂದು ಹೇಳು ಮತ್ತು ಆತನ ಪ್ರೀತಿಯ ಅನುಗ್ರಹದ ಮೂಲಕ 'ಅಲೆಗಳ, ಮೋಡಗಳ ಹಾಗೂ ಬಿರುಗಾಳಿಯ ನಡುವೆಯೂ ಆತನು ನಿನ್ನ ಮಾರ್ಗವನ್ನು ಶಾಂತವಾಗಿ ಸರಾಗ ಮಾಡುವನು,' ಅಂಥಹ ಅನುಭವಗಳ ಮೂಲಕ ದೇವರೊಂದಿಗೆ ಆಶೀರ್ವಾದಯುತವಾದ ಬಾಂಧವ್ಯವು ನಮ್ಮ ಹೃದಯದಲ್ಲಿ ಬೆಳೆದು, ಆ ಪರಿಪೂರ್ಣ ಪ್ರೀತಿಯು ಭಯವನ್ನು ಹೋಗಲಾಡಿಸುತ್ತದೆ. ಆನಂತರ ನೀವು ಹೆಚ್ಚು ಹೆಚ್ಚಾಗಿ ನಂಬಿಕೆಯ ಧನ್ಯವಾದ ವಿಶ್ರಾಂತಿಯೊಳಗೆ ಪ್ರವೇಶಿಸುವಿರಿ ಮತ್ತು ಗಿಡುಗವು ಬಿರುಗಾಳಿಯ ಮೋಡಕ್ಕಿಂತ ಎತ್ತರದಲ್ಲಿ ಹಾರಾಡುವಂತೆ, ನಾವು ಅಂಥಹ ಉನ್ನತವಾದ ಕ್ರಿಸ್ತೀಯ ಅನುಭವಗಳಲ್ಲಿ ಜೀವಿಸುವುವೆವು, ಕರ್ತನಲ್ಲಿ ಯಾವಾಗಲೂ ಉಲ್ಲಾಸಿಸುವವರಾಗಿಯೂ, ಎಲ್ಲಾದರಲ್ಲಿ ಕೃತಜ್ಞತೆ ಸಲ್ಲಿಸುವುದಕ್ಕೂ ಸಮರ್ಥರಾಗುವೆವು." ಆರ್. 1906, ಸಿ.1, ಪಿ.3.

## "ದೇವರ ಚಿತ್ತವನ್ನು ನೆರವೇರಿಸಿ ವಾಗ್ದಾನದ ಫಲವನ್ನು ಹೊಂದಬೇಕಾದರೆ ನಿಮಗೆ ತಾಳ್ಮೆ ಬೇಕು." ಹಿಬ್ರಿಯ. 10:36.

"ದೇವರ ಚಿತ್ತವೇನು? ಎಂಬುವದಕ್ಕೆ 'ದೇವರ ಚಿತ್ತವೇನೆಂದರೆ, ನೀವು ಶುದ್ಧರಾಗಬೇಕೆಂಬುದೇ' (1ಥೆಸಲೋನಿಕ. 4:3) ಎಂಬ ರೀತಿಯಲ್ಲಿ ವ್ಯಕ್ತಪಡಿಸಲಾಗಿದೆ... ನಾವು ನಮ್ಮನ್ನೇ ಸಂಪೂರ್ಣವಾಗಿ ದೇವರಿಗೆ ಪ್ರತಿಷ್ಠೆಪಡಿಸಿಕೊಂಡಾಗ ಆತನ ಚಿತ್ತವನ್ನು ನೆರವೇರಿಸುತ್ತೇವೆ... ಆದರೆ ಆತನು ನಮ್ಮನ್ನು ಪರೀಕ್ಷೆಗೆ ಒಳಪಡಿಸಲು ಸಂಕಲ್ಪಿಸಿದ್ದಾನೆ. ದೇವರನ್ನು ನಾವು ಎಷ್ಟು ಪ್ರೀತಿಸುತ್ತೇವೆ? ನಾವು ಎಷ್ಟು ಪ್ರಾಮಾಣಿಕರಾಗಿದ್ದೇವೆ?... ಹೀಗೆ ನಮ್ಮ ನಿಷ್ಠೆಯನ್ನು ಪರೀಕ್ಷಿಸುತ್ತಾನೆ. ಕ್ರಿಸ್ತನಿಗಾಗಿ ನಾವು ಏನನ್ನು ಸಹಿಸಿಕೊಳ್ಳಲು ಚಿತ್ತವುಳ್ಳವರಾಗಿದ್ದೇವೆ? ನಮ್ಮ ಅಧೀನತೆಯು ಎಷ್ಟು ಆಳವಾಗಿದೆ? ನಾವು ಕರ್ತನ ಚಿತ್ತದಂತೆ ಸಂಪೂರ್ಣವಾಗಿ ಸಾಮರಸ್ಯದಲ್ಲಿ ಇದ್ದೇವೆಯೇ? ನಮ್ಮ ಆಸಕ್ತಿಯು ಕೇವಲ ತೋರಿಕೆಯದ್ದಾಗಿದೆಯೇ? ಅಥವಾ ಇದು ನಮ್ಮ ಹೃದಯದೊಳಗೆ ಸಂಪೂರ್ಣವಾಗಿ ಹೊಕ್ಕಿದೆಯೋ? ಪ್ರಶ್ನೆಯು ಕೇವಲ ನಾವು ಪ್ರತಿಷ್ಠೆಹೊಂದಿದ್ದೇವೆಯೋ ಎಂಬುದಲ್ಲ, ಬದಲಾಗಿ ಕ್ರೈಸ್ತನು ಈ ಎಲ್ಲಾ ಅನುಭವ ಹೆಜ್ಜೆಗಳನ್ನು ಇಟ್ಟ ನಂತರ ಎಷ್ಟರ ಮಟ್ಟಿಗೆ ಆತನು ತಾಳ್ಮೆಯ ಸಹನೆಯನ್ನು, ವಿಧೇಯತೆಯನ್ನು ಹಾಗೂ ನಿಷ್ಠೆಯನ್ನು ತೋರ್ಪಡಿಸುತ್ತಾನೆ ಎಂಬುವದಾಗಿದೆ. ದೇವರು ಇಂಥಹ ಪರೀಕ್ಷೆಗಳಿಗೆ ಒಳಪಡಿಸುತ್ತಾನೆ, ಏಕೆಂದರೆ ಜಯಿಸುವವರ ಮೇಲೆ ಶ್ರೇಷ್ಠವಾದ ಘನತೆಯನ್ನು ಆತನು ಸುರಿಸುವವನಾಗಿದ್ದಾನೆ. ಅವರು ಆಯ್ಕೆಯಾದ ಸಮೂಹವಾಗಲಿದ್ದಾರೆ ಮತ್ತು ವಾಗ್ದಾನವನ್ನು ಹೊಂದುತ್ತಾರೆ." ಆರ್. 5332, ಸಿ.1, ಪಿ.5–7, ಸಿ.2, ಪಿ.3.

**“ಕರ್ತನು ತಾನು ಪ್ರೀತಿಸುವವನನ್ನೇ ಶಿಕ್ಷಿಸುತ್ತಾನೆ; ತಾನು ಸೇರಿಸಿಕೊಳ್ಳುವ ಪ್ರತಿಯೊಬ್ಬ ಮಗನನ್ನು ಹೊಡೆಯುತ್ತಾನೆ ಎಂಬದು. ನೀವು ಶಿಕ್ಷಿತರಾಗುವದಕ್ಕಾಗಿಯೇ ನಿಮಗೆ ಶಿಕ್ಷೆಯಾಗುತ್ತದೆಂದು ತಿಳಿದು ಅದನ್ನು ಸಹಿಸಿಕೊಳ್ಳಿರಿ; ದೇವರು ನಿಮ್ಮನ್ನು ಮಕ್ಕಳೆಂದು ನಡಿಸುತ್ತಾನೆ. ತಂದೆಯಿಂದ ಶಿಕ್ಷೆಹೊಂದದ ಮಗನೆಲ್ಲಿ? ಯಾವ ಶಿಕ್ಷೆಯಾದರೂ ತತ್ಕಾಲಕ್ಕೆ ಸಂತೋಷಕರವಾಗಿ ತೋಚದೆ ದುಃಖಕರವಾಗಿ ತೋಚುತ್ತದೆ; ಆದರೂ ತರುವಾಯ ಅದು ಶಿಕ್ಷೆಹೊಂದಿದವರಿಗೆ ನೀತಿಯೆಂಬ ಫಲವನ್ನು ಕೊಟ್ಟು ಮನಸ್ಸಿಗೆ ಸಮಾಧಾನವನ್ನು ಉಂಟುಮಾಡುತ್ತದೆ.” ಹಿಬ್ರಿಯ. 12:6,7,11.**

“ಅಂಥಹ ಶಿಸ್ತು ಕೋಪದಿಂದ ಉಂಟಾದುದ್ದಲ್ಲ... ಪ್ರೀತಿಯಿಂದ ಉಂಟಾದುದ್ದೆಂದು ಆತನು ವಿವರಿಸುತ್ತಾನೆ ಮತ್ತು ಒಂದುವೇಳೆ ನಾವು ಈ ಜೀವನದ ಶಿಸ್ತುಗಳಿಂದ, ಶೋಧನೆಗಳಿಂದ, ಅನುಭವಗಳಿಂದ ಸರಿಯಾದ ಅಭ್ಯಾಸ ಹೊಂದಿಕೊಳ್ಳುವುದಾದರೆ ಅವುಗಳು ನಮ್ಮಲ್ಲಿ ‘ಅತ್ಯಂತಾಧಿಕವಾದ ಮತ್ತು ನಿರಂತರವಾಗಿರುವ ಗೌರವವುಳ್ಳ ಮಹಿಮೆಯನ್ನುಂಟು ಮಾಡುತ್ತದೆ,’ ಅವುಗಳು ನಮ್ಮಲ್ಲಿ ಎಂಥಹ ಗುಣಗಳನ್ನು ಸಾಧಿಸುತ್ತದೇನೆಂದರೆ ಕರ್ತನು ನಮ್ಮನ್ನು ಯಾವುದಕ್ಕಾಗಿ ಕರೆದಿದ್ದಾರೋ ಅಂಥಹ ಸೇವೆಯಲ್ಲಿ ಉಪಯೋಗಿಸಿಕೊಳ್ಳಲು ಸಾಧ್ಯವಾಗುತ್ತದೆ... ಪುತ್ರಸ್ವೀಕಾರದ ನಿಜವಾದ ಆತ್ಮವಿರುವ ಎಲ್ಲರ ಸ್ಪಂದನದ ವಿಷಯವಾಗಿ ಕರ್ತನ ಹಾಗೂ ಪ್ರಭುವಿನ ಮಾತುಗಳಲ್ಲಿ, ‘ನನ್ನ ಚಿತ್ತವಲ್ಲ, ಆದರೆ ನಿನ್ನ ಚಿತ್ತದಂತೆಯೇ ಆಗಲಿ’, ‘ಓ ನನ್ನ ದೇವರೇ ನಿನಗೆ ಮೆಚ್ಚಿಕೆಯಾದದ್ದನ್ನು ಮಾಡಲು ಸಂತೋಷಿಸುತ್ತೇನೆ; ನಿನ್ನ ನ್ಯಾಯ ಪ್ರಾಮಾಣವು ನನ್ನ ಅಂತರಂಗದಲ್ಲಿ ಇದೆ’ ಎಂಬುವದಾಗಿ ವ್ಯಕ್ತವಾಗುತ್ತದೆ. ಹೀಗೆ ಕರ್ತನಿಂದ ಶಿಕ್ಷೆಗೊಳಗಾಗಿ ಸ್ಪಂದಿಸುವವರು ದೈವೀಕ ಅನುಗ್ರಹಕ್ಕೆ ಹೆಚ್ಚು ಹೆಚ್ಚಾಗಿ ಹೆಜ್ಜೆಯನ್ನಿಡುವರು ಮತ್ತು ಇತರ ಸಂತೈಸುವಿಕೆಯ, ಕೃಪೆಯ, ಸಹಾಯದ ಇತರ ಮಾತುಗಳನ್ನು ಆಲಿಸುವರು.” ಆರ್. 3057, ಸಿ.2, ಪಿ.2.

**“ದ್ರವ್ಯಾಶೆಯಿಲ್ಲದವರಾಗಿರಿ; ನಿಮಗಿರುವವುಗಳಲ್ಲಿ ತೃಪ್ತರಾಗಿರಿ; ನಾನು ನಿನ್ನನ್ನು ಎಂದಿಗೂ ಕೈಬಿಡುವದಿಲ್ಲ. ಎಂದಿಗೂ ತೊರೆಯುವದಿಲ್ಲವೆಂದು ದೇವರು ತಾನೇ ಹೇಳಿದ್ದಾನೆ.” ಹಿಬ್ರಿಯ. 13:5.**

“ನಮ್ಮ ಶ್ರೇಷ್ಠ ಹಿತಾಸಕ್ತಿಗಳೆಂದರೆ, ನಮ್ಮ ತಂದೆಯು ಸತತವೂ ಜಾಗ್ರತೆ ವಹಿಸಿಕೊಳ್ಳುವ ವಿಚಾರಗಳಾಗಿವೆ. ಒಂದುವೇಳೆ ನಾವು ಕರ್ತನಿಗೆ ತುಂಬಾ ಹತ್ತಿರವಿದ್ದರೆ, ನಾವು ಬಿದ್ದುಹೋದ ದೇವದೂತರುಗಳ ಶಕ್ತಿಯಿಂದ ಕಾಪಾಡಲ್ಪಟ್ಟಿದ್ದೇವೆ. ಹೊಸ ಸೃಷ್ಠಿಯ ವಿಚಾರದ ಮಟ್ಟಿಗೆ ಯೋಚಿಸುವುದಾದರೆ, ನಮ್ಮ ನಂಬಿಕೆಯ ಕೊರತೆಯು ಮಾತ್ರ ನಮ್ಮನ್ನು ಅವರ ಶಕ್ತಿಯ ಅಧೀನಕ್ಕೆ ಒಳಪಡಿಸುತ್ತದೆ. ಕರ್ತನು ನಮ್ಮ ಶ್ರೇಷ್ಠ ಒಳಿತಿನ ಸಲುವಾಗಿ ಅನುಮತಿ ಕೊಡದ ಹೊರತು ಅವರು ಯಾವುದೇ ರೀತಿಯಲ್ಲಿ ನಮ್ಮ ದೇಹಗಳಿಗೆ ಕೇಡು ಮಾಡುವುದಾಗಲೀ ಅಥವಾ ಹಿಂಸೆಗೊಳಪಡಿಸುವುದಾಗಲೀ ಆಗುವುದಿಲ್ಲ–ಬಹುಶಃ

ಯೇಸುಕ್ರಿಸ್ತನ ವಿಷಯದಲ್ಲಿ ಸಂಭವಿಸಿದಂತೆ, ನಮ್ಮ ಬಿಡುಗಡೆಗೋಸ್ಕರವೂ ಹಾಗೂ ಉನ್ನತಕ್ಕೋಸ್ಕರವೂ ಇರಬಹುದು... ಕ್ರಿಸ್ತನನ್ನು ಬಂಧಿಸಿ ವಿಚಾರಣೆಗೊಳಪಡಿಸಿದ ಆ ರಾತ್ರಿಯಲ್ಲಿ ಪಿಲಾತನು ಹೇಳಿದಂತೆ, 'ನಾನು ನಿನ್ನನ್ನು ಶಿಲುಬೆಗೆ ಹಾಕಿಸುವುದಕ್ಕೂ ನಿನ್ನನ್ನು ಬಿಡಿಸುವುದಕ್ಕೂ ನನಗೆ ಅಧಿಕಾರ ಉಂಟೆಂದು ನಿನಗೆ ತಿಳಿದಿಲ್ಲವೋ?' ಎಂದು ಪ್ರಶ್ನಿಸಿದಾಗ 'ಮೇಲಿನಿಂದ ನಿನಗೆ ಕೊಡಲ್ಪಡದಿದ್ದರೆ ನನ್ನ ಮೇಲೆ ನಿನಗೆ ಯಾವ ಅಧಿಕಾರವೂ ಇರುತ್ತಿರಲಿಲ್ಲ' ಎಂದು ಉತ್ತರಿಸಿದನು. ಹೀಗೆಯೇ ಕ್ರಿಸ್ತನ ಹೆಜ್ಜೆಜಾಡಿನಲ್ಲಿ ನಡೆಯುವವರೆಲ್ಲರಿಗೂ ಸಂಭವಿಸುವದು. ದೇವರ ಕೃಪೆಯೇ ನಮಗೆ ಸಾಕಾಗುವುದು. ಪರಲೋಕದ ತಂದೆಯು ಆತನ ಮಹಿಮೆ ಹಾಗೂ ನಮ್ಮ ಸ್ವಂತ ಶ್ರೇಷ್ಠ ಒಳಿತಿಗಾಗಿ ಅನುಮತಿ ನೀಡದ ಹೊರತು ಯಾವ ಮನುಷ್ಯನೂ ನಮ್ಮ ತಲೆಯ ಒಂದು ಕೂದಲಿಗೂ ಹಾನಿಯನ್ನುಂಟುಮಾಡಲು ಅಶಕ್ತನು ಆಗಿದ್ದಾನೆ." ಆರ್.5540, ಸಿ.1, ಪಿ.2, ಸಿ.2, ಪಿ.3.

**"ಆದದರಿಂದ – ಕರ್ತನು ನನ್ನ ಸಹಾಯಕನು, ಭಯಪಡೆನು. ಮನುಷ್ಯನು ನನಗೆ ಏನು ಮಾಡಾನು? ಎಂದು ನಾವು ಧೈರ್ಯವಾಗಿ ಹೇಳಬಲ್ಲೆವು." ಹಿಬ್ರಿಯ. 13:6.**

"ಲೋಕದಲ್ಲಿ ಕ್ರೈಸ್ತನ ಸ್ಥಾನವು ಅತೀ ಭಿನ್ನವಾದದ್ದು, ಬೇರೆ ಯಾರೂ ಅವನಷ್ಟು ಧೈರ್ಯಶಾಲಿಯೂ, ಸ್ವತಂತ್ರವಾಗಿಯೂ ಇರಲು ಸಾಧ್ಯವಿಲ್ಲ. ಆದರೂ ದೇವರ ನಿಜವಾದ ಮಕ್ಕಳು ಹೊರಗಿನ ಸಹಾಯವನ್ನು ಬೇಡವೆನ್ನುವಷ್ಟು ಆತ್ಮವಿಶ್ವಾಸವುಳ್ಳವರೂ ಹಾಗೂ ಸ್ವತಂತ್ರರೂ ಅಲ್ಲ. ಸತ್ಯವೇದದಲ್ಲಿ ಎಚ್ಚರಿಸುವ ಪ್ರಕಾರ ಅವನು ಎಚ್ಚಳಪಡಬಾರದು, ಬದಲಾಗಿ ಹಂಬಲ ಮನಸ್ಸುಳ್ಳವನಾಗಿದ್ದು ತನ್ನ ಸ್ವಂತ ಅಶಕ್ತತೆಯನ್ನು ಗ್ರಹಿಸಿಕೊಳ್ಳುವುದಲ್ಲದೆ, ತನಗೆ ದೇವರ ಅವಶ್ಯಕತೆ ಇರುವುದನ್ನು ಅರಿತುಕೊಳ್ಳಬೇಕು. ನಿಜವಾಗಿಯೂ ಅವನಲ್ಲಿ ಹಂಬಲ ಮನಸ್ಸು ಇಲ್ಲದಿದ್ದರೆ, ತಾನು ದೇವರನ್ನು ಮೆಚ್ಚಿಸುವುದು ಸಾಧ್ಯವಾಗದು. ಆದರೆ ಅದೇ ಸಮಯದಲ್ಲಿ ಅವನು ಪೂರ್ಣ ಧೈರ್ಯಶಾಲಿಯೂ ಹಾಗೂ ಆತ್ಮವಿಶ್ವಾಸವುಳ್ಳವನೂ ಆಗಿರಬೇಕು. ವಿಶ್ವದಲ್ಲಿರುವ ಯಾವುದೇ ಬಲವು ದೇವರೊಂದಿಗೆ ಹೋರಾಡಲಾರದು; ಮತ್ತು ಆತನೇ ಪ್ರಕಟಪಡಿಸುವಂತೆ ತನ್ನ ಮಕ್ಕಳಿಗೆ ಆಧಾರವೂ ಗುರಾಣಿಯೂ ಆಗಿರುವನು. ತನ್ನಲ್ಲಿ ಭರವಸವನ್ನಿಡುವವರಿಗೆ ಆತನು ಬಲವಾದ ಕೋಟೆಯೂ ಆಗಿದ್ದಾನೆ." ಆರ್.5539, ಸಿ.1, ಪಿ.6.

**"ನಿಮ್ಮಲ್ಲಿ ಯಾವನಿಗಾದರೂ ಜ್ಞಾನ ಕಡಿಮೆಯಾಗಿದ್ದರೆ ಅವನು ದೇವರನ್ನು ಕೇಳಿಕೊಳ್ಳಲಿ, ಅದು ಅವನಿಗೆ ದೊರಕುವದು; ದೇವರು ಹಂಗಿಸದೆ ಎಲ್ಲರಿಗೂ ಉದಾರ ಮನಸ್ಸಿನಿಂದ ಕೊಡುವವನಾಗಿದ್ದಾನೆ. ಸ್ವಲ್ಪವೂ ಸಂದೇಹಪಡದೆ ನಂಬಿಕೆಯಿಟ್ಟು ಕೇಳಿಕೊಳ್ಳಬೇಕು." ಯಾಕೋಬನು 1:5,6.**

"ದೈವೀಕ ದೃಷ್ಟಿಯಲ್ಲಿ ಅಂಗೀಕರಿಸಲ್ಪಡುವ ವಿಚಾರವೇನೆಂದರೆ ದೀನತೆಯ ಆತ್ಮವಾಗಿದೆ. ಮೇಲಿನಿಂದ ಬರುವ ಜ್ಞಾನವನ್ನು ಹೊಂದುವವರಿಗೆ ಇಂಥಹ ಮನೋಭಾವನೆ ಇರುವುದು ಅವಶ್ಯ. ಅವರು ತಮ್ಮ ಸ್ವಂತ ದೌರ್ಬಲ್ಯ ಹಾಗೂ ಜ್ಞಾನದ ಕೊರತೆಗಳ ಬಗ್ಗೆ ದೀನತೆಯಿಂದ

ಗಣನೆಗೆ ತರಬೇಕು, ಇಲ್ಲದಿದ್ದಲ್ಲಿ ಪ್ರಸ್ತುತ ಕಾಲದಲ್ಲಿ ದೇವರು ಕೊಡಲು ಇಚ್ಛಿಸುವ ಜ್ಞಾನವನ್ನು ಉಚಿತವಾಗಿಯೂ, ಮನಪೂರ್ವಕವಾಗಿಯೂ ಸ್ವೀಕರಿಸಲು ಆಗುವುದಿಲ್ಲ, ಹೃದಯದಲ್ಲಿ ದೀನತೆಯುಳ್ಳವರು ಮಾತ್ರ ಇದನ್ನು ಪಡೆಯುತ್ತಾರೆ ಮತ್ತು ಇನ್ನೂ ಕಂಡುಬರುವಂತೆ, ಸ್ವಸ್ಥಬುದ್ಧಿಯ ಆತ್ಮದ ತಳಹದಿಯಾಗಿ ಈ ದೀನತೆಯ ಮನಸ್ಸು ಅವಶ್ಯವಾಗಿದೆ, ದೀನತೆಯ ಮನೋಭಾವವು ಇಲ್ಲದೇ ಹೋದಲ್ಲಿ ಯಾರಾದರೂ ನೀತಿಯುತವಾಗಿ, ಸಮಂಜಸವಾಗಿ, ನಿಷ್ಪಕ್ಷಪಾತವಾಗಿ ಆಲೋಚಿಸುವ ಪರಿಸ್ಥಿತಿಯಲ್ಲಿರು–ತ್ತಾರೆಯೇ? ಆದುದರಿಂದ ದೀನತೆಯು ಕ್ರಿಸ್ತನ ಮನಸ್ಸಿನಲ್ಲಿ ಅಥವಾ ಮನೋಭಾವನೆಯಲ್ಲಿ ಪ್ರಧಾನವಾದ ಅಂಶವೆಂಬುದನ್ನು ನಾವು ಒಪ್ಪಿಕೊಳ್ಳಬೇಕು." ಆರ್.2585, ಸಿ.2, ಪಿ.3.

**"ಕಷ್ಟವನ್ನು ಸಹಿಸಿಕೊಳ್ಳುವವನು ಧನ್ಯನು; ಅವನು ಪರಿಶೋಧಿತನಾದ ಮೇಲೆ ಜೀವವೆಂಬ ಜಯಮಾಲೆಯನ್ನು ಹೊಂದುವನು; ಸ್ವಾಮಿಯು ತನ್ನನ್ನು ಪ್ರೀತಿಸುವವರಿಗೆ ಇದನ್ನು ವಾಗ್ದಾನಮಾಡಿದ್ದಾನೆ." ಯಾಕೋಬನು. 1:12.**

"ಅಪೋಸ್ತಲನು ಹೇಳುವ ಪ್ರಕಾರ 'ಅಗ್ನಿಯಂತಿರುವ ಶೋಧನೆಯು ನಮ್ಮನ್ನು ಪರಿಶೋಧಿಸಬೇಕು.' ಕ್ರಿಸ್ತನ ರಾಜ್ಯದಲ್ಲಿ ಪಾಲುಹೊಂದಬೇಕಾದರೆ, ಪ್ರಸ್ತುತದಲ್ಲಿ ಆತನ ಶಾಲೆಯಿಂದ ಪದವೀಧರರಾಗಬೇಕಾಗುವವರ ವಿಚಾರಕ್ಕೆ ಸಂಬಂಧಿಸಿದಂತೆ, ಇದು ಅನಿವಾರ್ಯವೂ ಅವಶ್ಯವಾದ ವಿಚಾರವಾಗಿದೆ, ಅಂದರೆ ಅವರ ಈ ಪರೀಕ್ಷೆಯಲ್ಲಿ ತೇರ್ಗಡೆಯಾಗಬೇಕು. ಆಹಾ, ಈ ಆಲೋಚನೆಯನ್ನು ಯಾವಾಗಲೂ ನಮ್ಮ ಮುಂದೆಯೇ ಇಟ್ಟುಕೊಂಡರೆ, ಕರ್ತನ ಉದ್ದೇಶವನ್ನೂ, ಕಾರ್ಯವನ್ನೂ ಸಾಧಿಸಲು ಹೇಗೆ ಉಪಯೋಗವಾಗುತ್ತದೆ. ನಮ್ಮ ಪ್ರಭುವು ನಮ್ಮ ಒಳಿತಿಗಾಗಿ ಅನುಮತಿಸುವುದನ್ನು ನಂಬಿಗಸ್ತತೆಯಿಂದಲೂ ಸಂತೋಷದಿಂದಲೂ ಸಹಿಸಿಕೊಳ್ಳಬೇಕು. ಇದರಿಂದ ಆತನು ಅತ್ಯಾಂತಾಧಿಕವಾದ ಮತ್ತು ನಿರಂತರವಾಗಿರುವ ಗೌರವವದ ಮಹಿಮೆಯನ್ನುಂಟು ಮಾಡುತ್ತಾನೆ ಎಂಬುವುದಾಗಿ ಅರಿತುಕೊಳ್ಳುತ್ತೇವೆ. ಈ ದೃಷ್ಟಿಕೋನದಿಂದ ನಮ್ಮ ಸಂಕಟಗಳು ಎಷ್ಟು ಹಗುರವಾಗಿ ತೋರಿಬರುತ್ತವೆ! ನಮ್ಮ ಪ್ರಯಾಣದ ಹಾದಿಯು ಎಷ್ಟು ಕಿರಿದಾಗಿ ಕಂಡುಬರುತ್ತದೆ!" ಆರ್.2793, ಸಿ.2, ಪಿ.3,4.

**"ದೇವರು ಅಹಂಕಾರಿಗಳನ್ನು ಎದುರಿಸುತ್ತಾನೆ, ದೀನರಿಗಾದರೋ ಕೃಪೆಯನ್ನು ಅನುಗ್ರಹಿಸುತ್ತಾನೆ" ಯಾಕೋಬನು. 4:6.**

"ಪರಲೋಕ ತಂದೆಯು ದೀನರ ಮೇಲೆ ಅತೀ ಆಳವಾದ ಪ್ರೀತಿಯುಳ್ಳವನಾಗಿದ್ದಾನೆ. ಈ ಕಾರಣದಿಂದಲೇ ನಾವು ನಮ್ಮನ್ನೇ ಕುಗ್ಗಿಸಿಕೊಳ್ಳಬೇಕು. ಆದುದರಿಂದ 'ದೇವರು ಅಹಂಕಾರಿಗಳನ್ನು ಎದುರಿಸುತ್ತಾನೆ' ಎಂದು ನಾವು ನೋಡುವಾಗ ಈ ದೀನತೆಯು ಸರಿಯಾಗಿ ಹೊಳಪು ನೀಡಿದ ಗುಣದ ಮೂಲಭೂತ ತತ್ವವಾಗಿದೆ, ನಾವು ಅಧಿಕವಾಗಿ ಈ ಕೃಪೆಯನ್ನು ಬೆಳೆಸಿಕೊಂಡು, ದೇವರು ಶ್ರೇಷ್ಠ ಆಶೀರ್ವಾದವನ್ನು ಕೊಡಬಹುದಾದಂಥಹ ಮನೋವೃತ್ತಿಯನ್ನು ಸಾಧಿಸಲು ಪ್ರಯಾಸಪಡಬೇಕು. ಆರ್. 5843, ಸಿ.2, ಪಿ.1.

"ಕೇವಲ ದೀನಮನಸ್ಸುಳ್ಳವರು ಮಾತ್ರ ಶ್ರೇಷ್ಠ ಪಾಠಗಳನ್ನು ಕಲಿಯಲು ತಯಾರಾಗಿರುತ್ತಾರೆ, ತಮಗೂ ಹಾಗೂ ಇತರರಿಗೂ ಪ್ರಯೋಜನಕಾರಿಯಾಗುವಂಥಹ ಈ ಗುಣವನ್ನು ಉನ್ನತ–ಕ್ಕೇರಿಸಲು ಸಿದ್ಧವಾಗಿರುವುದಕ್ಕಿಂತ ಮುಂಚೆ ಕಲಿತುಕೊಳ್ಳಬೇಕು... ಕ್ರಿಸ್ತನು ಇದಕ್ಕೆ ವ್ಯತಿರಿಕ್ತ –ವಾಗಿ, ಮಹಿಮೆ, ಘನತೆ ಹಾಗೂ ಅಮರತ್ವಕ್ಕೆ ಸಾಗಿಸುವ ಹಾದಿಯನ್ನು ಸರಿಯಾಗಿ ವಿವರಿಸಿ–ದ್ದಾರೆ; ಅದೇನೆಂದರೆ, ಸ್ವಯಂ–ತಗ್ಗಿಸಿಕೊಳ್ಳುವ ಹಾದಿ ಹಾಗೂ ದೇವರ ಚಿತ್ತವು ಏನೇ ಆಗಿದ್ದರೂ ಅದಕ್ಕೆ ಸಂಪೂರ್ಣವಾಗಿ ಒಪ್ಪಿಸಿಕೊಡುವುದಾಗಿದೆ." ಆರ್. 5847, ಸಿ.2, ಪಿ.3,4.

**"ದೇವರ ಸಮೀಪಕ್ಕೆ ಬನ್ನಿರಿ, ಆಗ ಆತನು ನಿಮ್ಮ ಸಮೀಪಕ್ಕೆ ಬರುವನು."**
**ಯಾಕೋಬನು. 4:8.**

"ಪ್ರಾರ್ಥನೆಯ ಮೂಲಕ ಕರ್ತನ ಸನಿಹಕ್ಕೆ ಬರುವುದರಿಂದಲೂ, ಆತನ ಅಮೂಲ್ಯ ವಾಕ್ಯಗಳ ಅಧ್ಯಯನದಿಂದಲೂ, ಆತನ ಉಪಕಾರಗಳನ್ನು ಧ್ಯಾನಮಾಡುವುದರಿಂದಲೂ, ಆತನ ದೈವಾಯುಕ್ತ ಪರಾಮರಿಸುವಿಕೆ, ನಮ್ಮ ವಯುಕ್ತಿಕ ಅನುಭವಗಳಲ್ಲಿ ಆತನು ಗುರುತಾಗಿ ತೋರ್ಪಡಿಸಿರುವ ಕೃಪೆಯನ್ನು ಮತ್ತು ಕ್ರಿಸ್ತನಲ್ಲಿ ಹೌದು ಹಾಗು ಆಮೆನ್ ಆಗಿರುವ ಎಲ್ಲಾ ಅಮೂಲ್ಯ ವಾಗ್ದಾನಗಳಿಂದ ಕರ್ತನ ಪರಿಚಯವನ್ನು ನಾವು ಅಧಿಕವಾಗಿ ಬೆಳೆಸಿಕೊಳ್ಳೋಣ. ಹೀಗೆ 'ದೇವರ ಸಮೀಪಕ್ಕೆ ಬನ್ನಿರಿ, ಆಗ ಆತನು ನಿಮ್ಮ ಸಮೀಪಕ್ಕೆ ಬರುವನು.' ಆತನು ತನ್ನನ್ನೇ ನಿಮಗೆ ಪ್ರಕಟಪಡಿಸುವನು ಮತ್ತು ಅವನೊಂದಿಗೆ ಆತನು ನಿವಾಸವನ್ನು ಮಾಡಿಕೊಳ್ಳುವನು." ಆರ್.1949, ಸಿ.2, ಪಿ.2.

**"ನಮ್ಮ ಕರ್ತನಾದ ಯೇಸುಕ್ರಿಸ್ತನ ತಂದೆಯೂ ದೇವರೂ ಆಗಿರುವಾತನಿಗೆ ಸ್ತೋತ್ರವಾಗಲಿ. ಆತನು ಯೇಸುಕ್ರಿಸ್ತನನ್ನು ಸತ್ತವರೊಳಗಿಂದ ಎಬ್ಬಿಸಿದ್ದರಲ್ಲಿ ತನ್ನ ಮಹಾ ಕರುಣಾನುಸಾರವಾಗಿ ನಮ್ಮನ್ನು ತಿರಿಗಿ ಜೀವಿಸುವಂತೆ ಮಾಡಿ ಜೀವಕರವಾದ ನಿರೀಕ್ಷೆಯನ್ನು ನಮ್ಮಲ್ಲಿ ಹುಟ್ಟಿಸಿ ನಮ್ಮನ್ನು ಲಯ ಕಳಂಕ ಕ್ಷಯಗಳಿಲ್ಲದ ಬಾಧ್ಯತೆಯನ್ನು ಎದುರು ನೋಡುವವರನ್ನಾಗಿ ಮಾಡಿದನು. ಆ ಬಾಧ್ಯತೆಯು ನಿಮಗೋಸ್ಕರ ಪರಲೋಕದಲ್ಲಿ ಇಟ್ಟಿರುವದು." 1 ಪೇತ್ರ. 1:3,4.**

"ನಶ್ವರ ಮನುಷ್ಯನು ಅಷ್ಟೊಂದು ಆಶ್ಚರ್ಯಕರವಾದ ಮಹಿಮೆಯನ್ನು ಮನಸ್ಸಿನಲ್ಲಿ ಊಹಿಸಿಕೊಳ್ಳಬಹುದೇ? ಅಂಥಹ ಆಶ್ಚರ್ಯಕರವಾದ ಕೃಪೆ–ಸರ್ವಾತಿಶಯವಾದ ಅತ್ಯಾನಂದಕ್ಕೆ ನಮ್ಮ ಅಪಾತ್ರತೆಯನ್ನು ನಾವು ಗ್ರಹಿಸಿಕೊಂಡು, ಅಂಥಹ ಶ್ರೇಷ್ಠ ಕರೆಯ ಆಲೋಚನೆಯು ನಮ್ಮ ಹೃದಯಗಳನ್ನು ದೇವರ ಮುಂದೆ ದೂಳಿನಲ್ಲಿ ತಗ್ಗಿಸಿಕೊಳ್ಳುವಂತೆ ಮಾಡಬೇಕು! ಮಾತಿನಲ್ಲಿ ವ್ಯಕ್ತಪಡಿಸಲಾರದಂಥಹ ಅಂಥಹ ಉಪಕಾರಕ್ಕಾಗಿ ನಮ್ಮ ಕೃತಜ್ಞತೆಯನ್ನು ಸೂಕ್ತವಾಗಿ ವ್ಯಕ್ತಪಡಿಸಲು ಕರ್ತನಿಗೆ ನಾವು ಬದಲೇನು ಮಾಡಬಹುದು? ನಿಜವಾಗಿಯೂ ನಮ್ಮನ್ನು ಅಪಾರವಾಗಿ ಪ್ರೀತಿಸಿದ, ಆಶೀರ್ವದಿಸಿದ, ಘನತೆಗೊಳಪಡಿಸಿದ ಆತನಿಗೆ ಶ್ರೇಷ್ಠವಾದ ನಂಬಿಗಸ್ತತೆಯಿಂದ ಒಳಗೊಂಡ ಸೇವೆಯನ್ನು ಮಾಡಿದರೂ ಅದು ಬಲಹೀನತೆಯುಳ್ಳ ಬದಲಾಗಿದೆ." ಆರ್. 5855, ಸಿ.1, ಪಿ.2.

**“ಅಂತ್ಯಕಾಲದಲ್ಲಿ ಪ್ರತ್ಯಕ್ಷವಾಗುವದಕ್ಕೆ ಸಿದ್ಧವಾಗಿರುವ ರಕ್ಷಣೆಯು ನಂಬುವವರಾದ ನಿಮಗೆ ದೊರೆಯಬೇಕೆಂದು ದೇವರು ನಿಮ್ಮನ್ನು ತನ್ನ ಬಲದಿಂದ ಕಾಯುತ್ತಾನೆ.” 1 ಪೇತ್ರ. 1:5.**

“ದೇವರ ಬಲವೇನೆಂದರೆ ಆತನ ವಾಕ್ಯ ಹಾಗೂ ಅನುಗ್ರಹವಾಗಿದೆ.” ಆರ್. 3285, ಸಿ.1, ಮೇಲೆ.

“ದೇವರು ತನ್ನ ಬಲದಿಂದ ಕಾಯುತ್ತಾನೆ (ಆತನ ಮಿತಿಮೀರಿದ ಶ್ರೇಷ್ಠ ಹಾಗೂ ಅಮೂಲ್ಯ ವಾಗ್ದಾನಗಳು ಮತ್ತು ನಾವು ಹಿಡಿದಿಟ್ಟುಕೊಂಡಿರುವ ಅನುಗ್ರಹಗಳು).” ಆರ್. 1007, ಸಿ.1, ಪಿ.2.

“ನಾವು ಕಷ್ಟದಲ್ಲಿರುವಾಗ, ಕರ್ತನಲ್ಲಿ ಭರವಸೆಯಿಟ್ಟು, ನಂಬಿಕೆಯಿಂದ ಆತನನ್ನೇ ನೋಡಬೇಕು. ಪರಲೋಕ ತಂದೆಯು ಆತನ ಮೇಲಣ ನಮ್ಮ ನಂಬಿಕೆಯನ್ನು ಕಾರ್ಯಗತಗೊಳಿಸುವಂತೆ ನಮ್ಮಿಂದ ಬಯಸುತ್ತಾರೆ. ‘ರಕ್ಷಣೆಗೆ ನಂಬಿಕೆಯ ಮುಖಾಂತರ ದೇವರು ತನ್ನ ಬಲದಿಂದ ಕಾಯುತ್ತಾನೆ’ ಎಂದು ಪೇತ್ರನು ನಮಗೆ ಹೇಳುತ್ತಾನೆ. ಆದುದರಿಂದ ‘ಸದ್ಯಕ್ಕೆ ಸ್ವಲ್ಪಕಾಲ ನಾನು ಕಷ್ಟಗಳಲ್ಲಿ (ಮತ್ತು ಶೋಧನೆಗಳಲ್ಲಿ) ದುಃಖಿಸುವವರಾಗಿದ್ದರೂ ಬಹಳವಾಗಿ’ ನಾವು ಹರ್ಷಿಸುತ್ತೇವೆ. ‘ನಿಮ್ಮ ನಂಬಿಕೆಯು ನಶಿಸಿಹೋಗುವ ಬಂಗಾರದ ಮೌಲ್ಯಕ್ಕಿಂತಲೂ ಹೆಚ್ಚಿನದಾಗಿದೆ.” ಆರ್. 5403, ಸಿ.1, ಪಿ.4.

**“ಕರ್ತನ ದೃಷ್ಟಿ ನೀತಿವಂತರ ಮೇಲಿದೆ. ಆತನು ಅವರ ಪ್ರಾರ್ಥನೆಗಳಿಗೆ ಕಿವಿ ಗೊಡುತ್ತಾನೆ.” 1 ಪೇತ್ರ. 3:12.**

“ಒಂದುವೇಳೆ ತಂದೆಯು ಹಾಗೂ ಆತನ ಮಗನು ಯಾವಾಗಲೂ ಪ್ರಸನ್ನವಾಗಿದ್ದಾರೆ ಎಂದು ಹೇಳಿಕೊಳ್ಳುವ ಪಕ್ಷದಲ್ಲಿ, ಒಂದುವೇಳೆ ಆತನನ್ನು ಪ್ರೀತಿಸಿ, ಆತನ ಆಜ್ಞೆಗಳನ್ನು ಕೈಗೊಂಡು ನಡೆಯದೆ ಇದ್ದಲ್ಲಿ, ನಾವು ಆಗಾಗ್ಗೆ ಸ್ವರ್ಗೀಯ ಕೃಪಾಸನದ ಮುಂದೆ ಬರಲು ಸಾಧ್ಯವಿಲ್ಲ... ದೇವರ ಯಾವ ಮಕ್ಕಳೂ ಆತನಲ್ಲಿಗೆ ಆಗಾಗ್ಗೆ ಬರುವುದಕ್ಕೂ ಹಾಗೂ ಆತನ ಐಕ್ಯತೆ ಹಾಗೂ ಅನ್ಯೋನ್ಯತೆಯಲ್ಲಿ ಬಹು ಸಮಯ ಕಳೆಯುವುದಕ್ಕೆ ಹಿಂಜರಿಯದಿರಲಿ... ಆತನು ಅಧಿಕ ಮಹತ್ವವುಳ್ಳ ಇತರ ಕೆಲಸಗಳಲ್ಲಿ ಕಾರ್ಯನಿರತರಾಗಿದ್ದಾನೆ ಅಥವಾ ನಮ್ಮ ಅಲ್ಪ ಮಹತ್ವವುಳ್ಳ ಕಾರ್ಯಗಳಿಂದ ನಾವು ಪದೇ ಪದೇ ಆತನಲ್ಲಿ ಹೋಗುವುದರಿಂದ ಆತನು ಬೇಸರಪಡುತ್ತಾನೆ ಎಂದು ಅಂದುಕೊಂಡು ದೇವರ ಹತ್ತಿರ ಹೋಗುವುದಕ್ಕೆ ಅಂಜಿಕೆಯು ನಮ್ಮಲ್ಲಿ ಇರುವ ಅಗತ್ಯವಿಲ್ಲ.” ಆರ್. 1865, ಸಿ.1, ಪಿ.5,6, ಸಿ.1, ಪಿ.1.

**“ಪ್ರಿಯರೇ, ನಿಮ್ಮನ್ನು ಶೋಧಿಸುವದಕ್ಕೆ ಅಗ್ನಿಯಂತಿರುವ ಪರಿಶೋಧನೆಗಾಗಿ ನೀವು ಆಶ್ಚರ್ಯಪಡಬೇಡಿರಿ; ಅಪೂರ್ವವಾದ ಸಂಗತಿ ನಿಮಗೆ ಸಂಭವಿಸಿತೆಂದು ಯೋಚಿಸಬೇಡಿರಿ. ನೀವು ಕ್ರಿಸ್ತನ ಬಾಧೆಗಳಲ್ಲಿ ಪಾಲುಗಾರರಾಗಿರುವದರಿಂದ ಸಂತೋಷವುಳ್ಳವರಾಗಿರ್ರಿ; ಇದಲ್ಲದೆ ಆತನ ಮಹಿಮೆಯ ಪ್ರತ್ಯಕ್ಷತೆಯಲ್ಲಿ ನೀವು ಸಂತೋಷಪಟ್ಟು ಅತ್ಯಂತ ಉಲ್ಲಾಸಗೊಳ್ಳುವಿರಿ.” 1 ಪೇತ್ರ. 4:12, 13.**

"ಒಂದುವೇಳೆ ನಾವು ದೇವರ ಕುಮಾರರಾಗಿದ್ದು ಮತ್ತು ಕ್ರಿಸ್ತನ ಸೈನಿಕರಾಗಿದ್ದರೆ, ನಮ್ಮನ್ನು ಖಂಡಿತವಾಗಿ ಶೋಧಿಸಲಿರುವ ಅಗ್ನಿಯಂತಿರುವ ಪರಿಶೋಧನೆಗೆ ಆಶ್ಚರ್ಯಪಡಬಾರದೆಂದು ಮುನ್ನೆಚ್ಚರಿಸಲಾಗಿದೆ... ಕ್ರಿಸ್ತೀಯ ಸೈನಿಕನು ಇವುಗಳನ್ನು ನಿರೀಕ್ಷಿಸಿ, ಅವುಗಳಿಗಾಗಿ ಜಾಗರೂಕತೆಯಿಂದ ಸಿದ್ಧವಾಗಿರಬೇಕು. ಪೇತ್ರನು, ನಾವು ವೈರಿಯನ್ನು ನಂಬಿಕೆಯೆಂಬ ಬಲದಿಂದ ಎದುರಿಸಬೇಕೆಂದು ಹೇಳುತ್ತಾನೆ, 'ನೀವು ನಂಬಿಕೆಯಲ್ಲಿ ದೃಢವಾಗಿದ್ದು ಆತನನ್ನು ಎದುರಿಸಿರಿ ಎಂದು ಹೇಳಲಾಗಿದೆ ಮತ್ತು ಯೋಹಾನನು ಕೂಡ ಇದೇ ಆಲೋಚನೆಯನ್ನು ವ್ಯಕ್ತಪಡಿಸುತ್ತಾ 'ಲೋಕವನ್ನು ಜಯಿಸುವಂಥದು ನಮ್ಮ ನಂಬಿಕೆಯೆ' ಎಂದಿದ್ದಾನೆ (1ಯೋಹಾನ 5:4)... ನಂಬಿಕೆಯು ದೇವರ ಮಿತಿಮೀರಿದ ಶ್ರೇಷ್ಠ ಹಾಗೂ ಅವುಗಳ ಮೌಲ್ಯವನ್ನು ಪ್ರಶಂಶಿಸಬೇಕು. ನಂಬಿಕೆಯು ದೇವರ ಬಲವನ್ನು ಕೂಡ ಹಿಡಿದುಕೊಳ್ಳಬೇಕು ಮತ್ತು ಸಮಯೋಚಿತವಾಗಿ ಸಹಾಯ ಮಾಡುವ ಆತನ ಕೃಪೆಯನ್ನು ಕಂಡುಕೊಳ್ಳಬೇಕು." ಆರ್. 1859, ಸಿ.2, ಪಿ.5,6.

## "ನಿಮ್ಮ ಚಿಂತೆಯನ್ನೆಲ್ಲಾ ಆತನ ಮೇಲೆ ಹಾಕಿರಿ, ಆತನು ನಿಮಗೋಸ್ಕರ ಚಿಂತಿಸುತ್ತಾನೆ." 1 ಪೇತ್ರ. 5:7.

"ಈ ಅನುಭವಗಳನ್ನು ದೇವರು ನಮಗೆ ಅನುಮತಿಸುವ ಉದ್ದೇಶವು ಆತನ ಜನರ ಚಿಂತೆಯನ್ನೆಲ್ಲಾ ಆತನ ಮೇಲೆ ಹಾಕುವಂತೆ ದಾರಿತೋರಿಸುವುದಕ್ಕೂ, ಅವರನ್ನು ತನ್ನ ಸಮೀಪಕ್ಕೆ ಬರಮಾಡುವುದಕ್ಕೂ, ಅವರಿಗೆ ತಾಳ್ಮೆ ಸಹನೆಯನ್ನು ಕಲಿಸುವುದಕ್ಕೂ, ಅವರಿಗೆ ಅಧಿಕವಾದ ಅವಶ್ಯಕತೆಯನ್ನೂ, ಆತನ ವಿನಃ ಅವರ ಅಸಾಯಕತೆಯನ್ನೂ, ಅವರಿಗೆ ಒದಗಬಹುದಾದ ಕೇಡನ್ನು ತೋರ್ಪಡಿಸುವುದಕ್ಕೂ ಆಗಿದೆ... ನಮ್ಮನ್ನು ದೇವರ ಸಮಾಧಾನದಿಂದ ಕಸಿದುಕೊಳ್ಳುವ ಚಿಂತೆಯನ್ನು ಬಿಟ್ಟುಬಿಡಬೇಕು, ಇದನ್ನು ನಿರ್ಲಕ್ಷ್ಯದಿಂದ ಮಾಡದೆ, ಬದಲಾಗಿ ಜಾಗರೂಕತೆಯಿಂದ ಮಾಡಬೇಕು, ನಮ್ಮ ಭಾರವನ್ನು ಹೊರುವವನಾದ ಯೇಸುಕ್ರಿಸ್ತನು ನಮ್ಮನ್ನು ಆಹ್ವಾನಿಸಿ, ನಮ್ಮ ಸಮಾಧಾನಕ್ಕೆ ತೊಂದರೆಪಡಿಸುವಂಥಹ ನಮ್ಮ ಚಿಂತೆಯನ್ನೆಲ್ಲಾ ಆತನ ಮೇಲೆ ಹಾಕುವಂತೆ ಒತ್ತಾಯಪಡಿಸುತ್ತಾನೆ. ಆತನು ನಮ್ಮ ಭಾರವನ್ನು ಹಗುರ ಮಾಡಿ ನಮ್ಮ ಶೋಧನೆಗಳನ್ನು ಸರಳಗೊಳಿಸುತ್ತಾನೆ. ಇದು ನಂಬಿಕೆಯ ಪರೀಕ್ಷೆಯಾಗಿದೆ ಮತ್ತು ಆತನ ಪ್ರೀತಿಯ ಮೇಲಣ ನಂಬಿಕೆಯ ಹೊರತು, ಆತನ ವಾಗ್ದಾನಗಳ ಮೇಲಣ ನಂಬಿಕೆಯ ಹೊರತು ಇದು ದಕ್ಕಲಾರದು." ಆರ್. 5509, ಸಿ.1, ಪಿ.2,3.

## "ನೀವು ಲೋಕದಲ್ಲಿ ದುರಾಶೆಯಿಂದುಂಟಾದ ಕೆಟ್ಟತನಕ್ಕೆ ತಪ್ಪಿಸಿಕೊಂಡು ದೈವಸ್ವಭಾವದಲ್ಲಿ ಪಾಲನ್ನು ಹೊಂದುವವರಾಗಬೇಕೆಂದು ಆತನು ಅತ್ಯಂತ ಮಹತ್ವವುಳ್ಳ ಅಮೂಲ್ಯವಾದ ವಾಗ್ದಾನಗಳನ್ನು ನಮಗೆ ದಯಪಾಲಿಸಿದ್ದಾನೆ." 2 ಪೇತ್ರ. 1:4.

"ಇವುಗಳಿಂದ, ಅವುಗಳಿಗೆ ವಿಧೇಯರಾಗುವುದರಿಂದ... ಓ! ಮಹಾ ಸೃಷ್ಟಿಕರ್ತನು ಪಾಪಿಗಳನ್ನು ವಿಮೋಚಿಸುವುದಕ್ಕೆ ಮಾತ್ರವಲ್ಲದೆ ಉದಾರವಾದ ಕೊಡುಗೆಗಳನ್ನು ಆಶೀರ್ವಾದಗಳನ್ನು ಪಡಕೊಳ್ಳಲು ಅವರನ್ನು ಆಕರ್ಷಿಸುವುದಕ್ಕೂ ಒತ್ತಾಯ ಪಡಿಸುವುದಕ್ಕೂ ತನ್ನನ್ನು ತಗ್ಗಿಸಿಕೊಂಡದ್ದು ಎಂಥಹಾ ಅದ್ಭುತವಲ್ಲವೆ." ಆರ್. 3059, ಸಿ.1, ಪಿ.4.

"ಮಿತಿಮೀರಿದ ಶ್ರೇಷ್ಠ ಹಾಗೂ ಅಮೂಲ್ಯವಾದ ವಾಗ್ದಾನಗಳನ್ನು ಕ್ರಮೇಣವಾಗಿ ನಮಗೆ ಪ್ರಕಟಿಸಲಾಗಿದೆ, ನಾವು ನಂಬಿಗಸ್ತರೆಂದು ಸಾಬೀತುಪಡಿಸಿಕೊಂಡು ಸಾಗುತ್ತಾ ಇದ್ದಂತೆ, ಇವುಗಳ ನಿಮಿತ್ತವಾಗಿ, ಅವುಗಳು ಸುರಿಸುವ ಬಲ ಹಾಗೂ ಧೈರ್ಯದಿಂದಾಗಿ, ನಾವು ಬಹುಮಾನವನ್ನು ಹೊಂದಲು ಓಡುವುದಕ್ಕೆ ಸಮರ್ಥರನ್ನಾಗಿ ಮಾಡಲಾಗುವುದು." ಸಿ.220, ಪಿ.2.

**"ನೀವು ಪೂರ್ಣ ಜಾಗ್ರತೆಯಿಂದ ನಿಮಗಿರುವ ನಂಬಿಕೆಗೆ ಸದ್ಗುಣವನ್ನೂ ಸದ್ಗುಣಕ್ಕೆ ಜ್ಞಾನವನ್ನೂ ಕೂಡಿಸಿರಿ; ಇವು ನಿಮ್ಮಲ್ಲಿದ್ದು ಹೆಚ್ಚುತ್ತಾ ಬಂದರೆ ನಮ್ಮ ಕರ್ತನಾದ ಯೇಸು ಕ್ರಿಸ್ತನ ಪರಿಜ್ಞಾನದಲ್ಲಿ ನಿಮ್ಮನ್ನು ಬಂಜೆಯರೂ ನಿಷ್ಫಲರೂ ಆಗದಂತೆ ಮಾಡುತ್ತವೆ." 2 ಪೇತ್ರ. 1:5,8.**

"ಆತನು ಒತ್ತಾಯಪಡಿಸುವುದೇನೆಂದರೆ, ನಮ್ಮ ವೈರಾಗ್ಯವನ್ನು ಪ್ರೇರೇಪಿಸುವಂಥಹ ಹಾಗೂ ನವೀಕರಿಸಿದ ಧೈರ್ಯವನ್ನು ಕೊಡುವಂಥಹ ಅಮೂಲ್ಯವಾದ ವಾಗ್ದಾನಗಳ ಮೇಲಿನ ನಮ್ಮ ನಂಬಿಕೆಗೆ ಹೆಚ್ಚಳವಾಗಿ... ನಾವು ಪೂರ್ಣ ಜಾಗ್ರತೆಯಿಂದ ನಿಮಗಿರುವ ನಂಬಿಕೆಗೆ ಸದ್ಗುಣವನ್ನೂ ಸದ್ಗುಣಕ್ಕೆ ಜ್ಞಾನವನ್ನೂ, ಇತ್ಯಾದಿಗಳನ್ನು ಸೇರಿಸಬೇಕು. ಅದನಂತರ ಆತನು ಹೇಳುವ ಪ್ರಕಾರ, 'ಇವುಗಳನ್ನು ನಾವು ಮಾಡಿದರೆ ಎಂದಿಗೂ ತಪ್ಪಿಹೋಗುವುದಿಲ್ಲ.' ನಿಶ್ಚಲವಾಗಿ ದೃಢಸ್ವಭಾವದಿಂದ ಬೆಳೆಸಿಕೊಳ್ಳುವ ಈ ಕೃಪಾಪೂರಿತ ಗುಣಲಕ್ಷಣಗಳು ನಮ್ಮ ಆತ್ಮೀಕ ನೋಟವನ್ನು ಸ್ಪಷ್ಟಗೊಳಿಸುತ್ತವೆ, ದೇವರ ಸತ್ಯವನ್ನು ಪೂರ್ಣವಾಗಿ ಗ್ರಹಿಸಿಕೊಳ್ಳಲು ನಮ್ಮನ್ನು ಶಕ್ತಗೊಳಿಸುತ್ತವೆ, ಮತ್ತು ಹೀಗೆ 'ಬಲಗಡೆಯೂ ಎಡಗಡೆಯೂ ಇರುವ ನೀತಿಯ ಆಯುಧದಿಂದ' ನಾವು 'ಸೈತಾನನ ತಂತ್ರೋಪಾಯಗಳನ್ನು ಎದುರಿಸಿ ನಿಲ್ಲುವುದಕ್ಕೂ' ಶಕ್ತರಾಗುತ್ತೇವೆ ಮತ್ತು ನಂಬಿಕೆಯ ಜಯವನ್ನು ಹೊಂದಿ ನಮ್ಮ ಕರೆಯನ್ನೂ ಆಯ್ದುಕೊಳ್ಳುವಿಕೆಯನ್ನು ದೃಢಪಡಿಸಿಕೊಳ್ಳುತ್ತೇವೆ." ಆರ್. 1859, ಸಿ.2, ಪಿ.7,8.

**"ಆದದರಿಂದ ಸಹೋದರರೇ, ದೇವರು ನಿಮ್ಮನ್ನು ಕರೆದದ್ದನ್ನೂ ಆದುಕೊಂಡದ್ದನ್ನೂ ದೃಢಪಡಿಸಿಕೊಳ್ಳುವದಕ್ಕೆ ಮತ್ತಷ್ಟು ಪ್ರಯಾಸಪಡಿರಿ. ಹೀಗೆ ನೀವು ಮಾಡಿದರೆ ಎಂದಿಗೂ ಎಡಹುವದಿಲ್ಲ. ಮತ್ತು ನಮ್ಮ ಕರ್ತನೂ ರಕ್ಷಕನೂ ಆಗಿರುವ ಯೇಸು ಕ್ರಿಸ್ತನ ನಿತ್ಯರಾಜ್ಯದಲ್ಲಿ ಪ್ರವೇಶಿಸುವ ಹಾಗೆ ದೇವರು ನಿಮಗೆ ಧಾರಾಳವಾಗಿ ಅನುಗ್ರಹಿಸುವನು." 2 ಪೇತ್ರ. 1:10,11.**

"ದೇವರ ರಾಜ್ಯಕ್ಕೆ ಯೋಗ್ಯರಾದ ಒಬ್ಬರನ್ನಾದರೂ ಒನೆಯಲಾಗುವುದಿಲ್ಲ ಎಂಬುವುದನ್ನು ನಾವು ಖಚಿತವಾಗಿ ತಿಳಿದುಕೊಳ್ಳಬೇಕು. ಅಂಥವರ ವಿಷಯವಾಗಿ ಬರೆದಿರುವಂತೆ, 'ನನ್ನ ತಂದೆಯ ಕೈಯೊಳಗಿಂದ ಅವರನ್ನು ಯಾವನೂ ಕಸಕೊಳ್ಳಲಾರನು' ಎಂಬುವದಾಗಿ ಬರೆಯಲಾಗಿದೆ, ಮತ್ತೂ 'ನೀವು ಇವುಗಳನ್ನು ಮಾಡಿದರೆ (ಕರ್ತನ ಸ್ವರವನ್ನು ಕೇಳಿ, ಆತನ ಮನಸ್ಸನ್ನು ಬೆಳೆಸಿಕೊಂಡು, ಆತನ ಹಾದಿಯಲ್ಲಿ ನಡೆಯುವುದಾದರೆ) ಎಂದಿಗೂ ತಪ್ಪಿಹೋಗುವುದಿಲ್ಲ, (ಹೀಗೆ ಮಾಡುವುದರಿಂದ) ಮತ್ತು ನಮ್ಮ ಕರ್ತನೂ ರಕ್ಷಕನೂ ಆಗಿರುವ ಯೇಸುಕ್ರಿಸ್ತನ ನಿತ್ಯ ರಾಜ್ಯದಲ್ಲಿ ಪ್ರವೇಶಿಸುವ ಹಾಗೆ ನಿಮಗೆ ಧಾರಾಳವಾಗಿ ಅನುಗ್ರಹಿಸಲ್ಪಡುವುದು' ಎಂಬುವುದಾಗಿ ಹೇಳಲಾಗಿದೆ." ಆರ್. 2257, ಸಿ.2, ಮೇಲೆ.

**“ನಮ್ಮ ಪಾಪಗಳನ್ನು ಒಪ್ಪಿಕೊಂಡು ಅರಿಕೆ ಮಾಡಿದರೆ ಆತನು ನಂಬಿಗಸ್ತನೂ ನೀತಿವಂತನೂ ಆಗಿರುವದರಿಂದ ನಮ್ಮ ಪಾಪಗಳನ್ನು ಕ್ಷಮಿಸಿಬಿಟ್ಟು ಸಕಲ ಅನೀತಿಯನ್ನು ಪರಿಹರಿಸಿ ನಮ್ಮನ್ನು ಶುದ್ಧಿಮಾಡುವನು.” 1 ಯೋಹಾನ. 1:9.**

“ಈ ಕಾರ್ಯಗಳನ್ನು ಬರೆದಿರುವುದು ನಮ್ಮ ತಪ್ಪುಗಳನ್ನು ನಿರ್ಲಕ್ಷತೆಯಿಂದ ದಾಟಿಹೋಗುವ ತಪ್ಪಾದ ಆಲೋಚನೆಯನ್ನು ಬೆಳೆಸಿಕೊಂಡು ಮತ್ತು ಆನಂತರ ಕರ್ತನಲ್ಲಿ ಕ್ಷಮೆಯಾಚಿಸಲು ಹೋಗಬೇಕೆನ್ನುವ ಉದ್ದೇಶದಿಂದ ಅಲ್ಲ. ಇದಕ್ಕೆ ತೀರಾ ವ್ಯತಿರಿಕ್ತವಾಗಿ, ದೇವರ ಅನುಗ್ರಹಗಳ ಈ ಭರವಸೆಗಳು ಮತ್ತು ಆತನ ಕ್ಷಮಿಸುವ ಇಚ್ಚೆಯು ನಾವು ಪಾಪಗಳನ್ನು ಜಾಗರೂಕತೆಯಿಂದ ತಡೆಹಿಡಿಯುವ ರೀತಿಯಲ್ಲಿ ನಮ್ಮ ಹೃದಯದ ಮೇಲೆ ಮಧುರವಾದ ಪ್ರಭಾವವನ್ನು ಉಂಟುಮಾಡುವಂತೆ ಸಂಕಲ್ಪಿಸಲಾಗಿದೆ. ನಮ್ಮ ಮನಸ್ಸಿನಿಂದ ನಮ್ಮನ್ನೇ ಕರ್ತನ ಹತ್ತಿರ ಇರಿಸುವುದರಿಂದ ಆತನೊಂದಿಗೆ ಎಡೆಬಿಡದ ಅನ್ಯೋನ್ಯತೆಯಲ್ಲಿ ಇರಬಹುದು. ಮತ್ತು ನಮ್ಮ ತಪ್ಪೊಪ್ಪಿಕೊಳ್ಳುವುದರಿಂದ ಹಾಗೂ ಆತನಿಂದ ಕ್ಷಮೆಯಾಚಿಸುವುದರಿಂದ ನಮ್ಮ ಪ್ರಯಾಣವನ್ನು ಪಾಪದಿಂದ ಶುದ್ಧವಾಗಿ ಮುಂದುವರಿಸಬಹುದು; ಆದರೂ ಕೂಡ ನಮ್ಮ ಶಾರೀರಿಕ ಅಪರಿಪೂರ್ಣತೆಯನ್ನು ಒಪ್ಪಿಕೊಳ್ಳಲೇಬೇಕು.” ಆರ್. 2235, ಸಿ.2, ಪಿ.5, ಆರ್. 2236, ಸಿ.2, ಪಿ.2.

**“ಯಾವನಾದರೂ ಆತನ ವಾಕ್ಯವನ್ನು ಕೈಕೊಂಡು ನಡೆದರೆ ಅವನಲ್ಲಿ ನಿಜವಾಗಿ ದೇವರ ಮೇಲಣ ಪ್ರೀತಿಯು ಪರಿಪೂರ್ಣವಾಗಿದೆ.” 1 ಯೋಹಾನ. 2:5.**

“ದೇವರ ವಾಕ್ಯವು ಸಿಕ್ಕಿರುವುದರಿಂದ ಅದನ್ನು ಕಾಪಾಡಿಕೊಳ್ಳಬೇಕು, ಅಂದರೆ ಭಯಭಕ್ತಿಯಿಂದ ವಿಧೇಯರಾಗಿ ನಡೆಯಬೇಕು. ನಮ್ಮ ಜೀವನವನ್ನೂ ಅದರ ಕಾರ್ಯಗಳನ್ನು ಅದಕ್ಕೆ ಹೊಂದುವಂತೆ ಕ್ರಮಪಡಿಸಿಕೊಳ್ಳಲು ಪ್ರಯಾಸಪಡಬೇಕು. ಯಾರು ದೇವರ ವಾಕ್ಯವನ್ನು ಕೈಗೊಂಡು ನಡೆಯುತ್ತಾರೋ ಅವನಲ್ಲಿ ದೇವರ ಪ್ರೀತಿಯು ಪರಿಪೂರ್ಣವಾಗಿರುವುದರ ಫಲಿತಾಂಶವು ಕಂಡುಬರುತ್ತದೆ. ದೇವರ ಈ ಪರಿಪೂರ್ಣ ಪ್ರೀತಿಯು ನಮ್ಮಲ್ಲಿರುವುದು ಸಾಧ್ಯವೆಂಬುದನ್ನು ನಾವು ನಂಬುತ್ತೇವೆ. ಒಂದುವೇಳೆ ಶಾರೀರಿಕ ರೀತಿಯಲ್ಲಿ ಪರಿಪೂರ್ಣ ಕ್ರೀಯೆಗಳು ಅವಶ್ಯವಾಗಿದ್ದರೆ, ನಮ್ಮಲ್ಲಿ ಪರಿಪೂರ್ಣ ಸಾಮರ್ಥ್ಯವಿರುವುದರ ಬಗ್ಗೆ ಸಂದೇಹಪಡಬಹುದಾಗಿತ್ತು. ಆದರೆ ಇದು ಹೃದಯದ ವಿಚಾರವಾಗಿರುವುದರಿಂದ ಇದನ್ನು ಸಾಧಿಸುವುದು ಸಾಧ್ಯ; ಯಾಕೆಂದರೆ ನಾವು ಹೃದಯದಲ್ಲಿ ಶುದ್ಧರಾಗಿರಬಹುದು... ಆದುದರಿಂದ ದೇವರ ಈ ಪ್ರೀತಿಯು ನಮ್ಮಲ್ಲಿ ಪರಿಪೂರ್ಣವಾಗಲು ನಾವು ಬಹಳ ಉನ್ನತವಾದ ಆದರ್ಶವನ್ನು ಹೊಂದಿದ್ದೇವೆ ಮತ್ತು ದೇವರು ನಮ್ಮನ್ನು ಪ್ರೀತಿಸಿದಂತೆಯೇ ನಾವು ಆತನನ್ನು ಪ್ರೀತಿಸುತ್ತೇವೆಂಬುವದು ಸೂಚಿಸುತ್ತದೆ.” ಆರ್. 5276, ಸಿ.2, ಪಿ.3,5,6.

**“ದೇವರ ಮಕ್ಕಳೆಂಬ ಹೆಸರನ್ನು ನಮಗೆ ಕೊಡುವದರಲ್ಲಿ ತಂದೆಯು ಎಂಥಾ ಪ್ರೀತಿಯನ್ನು ನಮ್ಮ ಮೇಲೆ ಇಟ್ಟಿದ್ದಾನೆ ನೋಡಿರಿ; ನಾವು ಆತನ ಮಕ್ಕಳಾಗಿದ್ದೇವೆ. ಈ ಕಾರಣದಿಂದ ಲೋಕವು ನಮ್ಮನ್ನು ತಿಳಿದುಕೊಳ್ಳುವದಿಲ್ಲ. ಅದು ಆತನನ್ನು ತಿಳಿದುಕೊಳ್ಳಲಿಲ್ಲವಲ್ಲಾ.” 1 ಯೋಹಾನ. 3:1.**

“ಒಂದುವೇಳೆ ದೇವರ ವಾಕ್ಯಗಳನ್ನು ಜಾಗ್ರತೆಯಿಂದ ಆಲಿಸುವವರಾಗಿ, ಅದರ ಸತ್ಯವನ್ನು ಒಳ್ಳೆಯ, ಪ್ರಾಮಾಣಿಕ, ಪ್ರತಿಷ್ಠೆ ಮಾಡಲ್ಪಟ್ಟ ಹೃದಯದಿಂದ ಅಂಗೀಕರಿಸಿಕೊಂಡರೆ, ಅದು ನಮ್ಮಲ್ಲಿ ದೇವರ ಮೇಲೆ ಹಾಗೂ ಆತನ ಯೋಜನೆಯ ಮೇಲೆ ಪ್ರೀತಿಯನ್ನು ಹುಟ್ಟಿಸುತ್ತದೆ ಮತ್ತು ಒಳ್ಳೆಯ ಸಮಾಚಾರವನ್ನು ಹೇಳುವ, ಸುವಾರ್ತೆಯನ್ನು ಸಾರುವ ಆಸೆಯನ್ನು ಹುಟ್ಟಿಸುತ್ತದೆ, ನಂತರದಲ್ಲಿ ಜೀವನದಲ್ಲಿನ ಎಲ್ಲವನ್ನೂ ಹೀರಿಕೊಳ್ಳುವ ವಸ್ತುವಾಗಿ ಪರಿಣಮಿಸುತ್ತದೆ; ಮತ್ತು ಇದು ಕೇವಲ ನಮ್ಮನ್ನು ಲೋಕದಿಂದಲೂ, ಹೆಸರು ಕ್ರೈಸ್ತರಿಂದಲೂ, ಅವರ ಆತ್ಮದಿಂದಲೂ ಪ್ರತ್ಯೇಕಿಸುವುದು ಮಾತ್ರವಲ್ಲದೆ, ಅವುಗಳಿಂದ ಸಂಪೂರ್ಣವಾಗಿ ಬೇರ್ಪಡನ್ನು ಉಂಟುಮಾಡುತ್ತದೆ. ಅವರು ನಿಮ್ಮನ್ನು ವಿಚಿತ್ರವಾಗಿ ಕಾಣುತ್ತಾರೆ ಮತ್ತು ಅವರ ಸಹವಾಸದಿಂದ ನಿಮ್ಮನ್ನು ದೂರವಿಡುತ್ತಾರೆ ಮತ್ತು ನೀವು ಉಪೇಕ್ಷಿಸಲ್ಪಡುತ್ತೀರಿ ಹಾಗೂ ಕ್ರಿಸ್ತನ ನಿಮಿತ್ತ ಮೂರ್ಖರೆಂದು ಎಣಿಸಲ್ಪಡುತ್ತೀರಿ. ಯಾಕೆಂದರೆ ಅವರು ಕರ್ತನನ್ನು ತಿಳಿದುಕೊಳ್ಳದಂತೆ ನಮ್ಮನ್ನೂ ತಿಳಿದುಕೊಳ್ಳುವುದಿಲ್ಲ.” ಎ347, ಪಿ.1.

**“ಆತನು ಪ್ರತ್ಯಕ್ಷನಾದಾಗ ನಾವು ಆತನ ಹಾಗಿರುವೆವೆಂದು ಬಲ್ಲೆವು; ಯಾಕಂದರೆ ನಾವು ಆತನನ್ನು ಆತನಿರುವ ಪ್ರಕಾರವೇ ನೋಡುವೆವು. ಆತನಲ್ಲಿ ಈ ನಿರೀಕ್ಷೆಯನ್ನು ಇಟ್ಟಿರುವ ಪ್ರತಿಯೊಬ್ಬನು ಆತನು ಶುದ್ಧನಾಗಿರುವಂತೆಯೇ ತನ್ನನ್ನು ಶುದ್ಧಮಾಡಿಕೊಳ್ಳುತ್ತಾನೆ.” 1 ಯೋಹಾನ. 3:2,3.**

“ಇಲ್ಲಿ ಸೂಚಿಸಿರುವ ಪ್ರಕಾರ, ಶುದ್ಧಮಾಡುವ ಶ್ರೇಷ್ಠ ಪ್ರಭಾವವನ್ನು ಹೊಂದಿರುವಂಥಹ ಈ ವಾಕ್ಯಕ್ಕಿಂತ ಬೇರೆ ಸತ್ಯವು ನಮಗೆ ತಿಳಿಯದು, ‘ಆಶೀರ್ವಾದದ ನಿರೀಕ್ಷೆ’ಯು ನಮ್ಮ ಮಹಿಮೆಯುಳ್ಳ ಕರ್ತನ ಪ್ರತ್ಯಕ್ಷ್ಯತೆಯೇ ಆಗಿದೆ. ಈ ನಿರೀಕ್ಷೆಯು ಶುದ್ಧಗೊಳಿಸುತ್ತದೆ. ‘ಈ ನಿರೀಕ್ಷೆಯನ್ನು ಇಟ್ಟಿರುವ ಪ್ರತಿಯೊಬ್ಬನು ಆತನು ಶುದ್ಧನಾಗಿರುವಂತೆಯೇ ತನ್ನನ್ನು ಶುದ್ಧಮಾಡಿಕೊಳ್ಳುತ್ತಾನೆ.’ (1 ಯೋಹಾನ. 3:3) ...ಹೃದಯದಲ್ಲಿ ಶುದ್ಧರಾಗಿರುವವರು ಮಾತ್ರ ಪ್ರಾಮಾಣಿಕವಾಗಿ ಹಾಗೂ ನಿಜವಾಗಿ ಈ ನಿರೀಕ್ಷೆಯನ್ನು ನಿಭಾಯಿಸಬಹುದು. ಆತ್ಮೀಯ ಸಹೋದರರೇ, ನಮ್ಮ ಪ್ರಭುವು ವಾಗ್ದಾನ ಮಾಡಿರುವ ಆತನ ಹಿಂದಿರುಗುವಿಕೆಯನ್ನು ಚೆನ್ನಾಗಿ ನಮ್ಮ ಮನಸ್ಸಿನಲ್ಲಿಯೇ ಇಟ್ಟುಕೊಳ್ಳೋಣ ಮತ್ತು ಆತನ ‘ಪ್ರಸನ್ನತೆ’ಯ (ಅದೃಶ್ಯದ ಪ್ರಸನ್ನತೆ) ಸಮಯದಲ್ಲಿ ಇದರ ಸಂಪೂರ್ಣ ತೂಕ ಹಾಗೂ ಪ್ರಭಾವವು ನಮ್ಮ ಎಲ್ಲಾ ನುಡಿ, ನಡೆಗಳ ಮೇಲೆ ಇರಲಿ, ಹೌದು, ನಮ್ಮ ಯೋಚನೆಗಳ ಮೇಲೂ ಕೂಡ ಇರಲಿ. ನಾವು ಅತೀ ಶೀಘ್ರದಲ್ಲಿ ಪುನರುತ್ಥಾನದ ಬದಲಾವಣೆಯನ್ನು ಅನುಭವಿಸುವೆವು ಹಾಗೂ ನಮ್ಮ ಪ್ರಿಯ ವಿಮೋಚಕನಂತೆ ಮಾಡಲ್ಪಡುವೆವು ಮತ್ತು ಆತನ

ಹಾಗಿರುವೆವು ಎಂಬ ನಿರೀಕ್ಷೆಯು ನಮ್ಮ ಹೃದಯಗಳನ್ನು ಚೇತನಗೊಳಿಸಲಿ, ನಮ್ಮ ತುಟಿಗಳನ್ನು ಸಡಿಲಗೊಳಿಸಲಿ ಹಾಗೂ ನಮ್ಮ ಗುರುವಿಗೂ ಹಾಗೂ ವಿಶ್ವಾಸದ ಮನೆತನದವರಿಗೆ ಸೇವೆಮಾಡುವುದಕ್ಕೋಸ್ಕರ ಇರುವ ಎಲ್ಲಾ ಕರ್ತವ್ಯ, ಭಾಗ್ಯ ಹಾಗೂ ಅವಕಾಶಗಳಲ್ಲಿ ನಮ್ಮನ್ನು ಬಲಪಡಿಸಲಿ." ಆರ್. 3193, ಸಿ.2, ಪಿ.1,2,4.

## "ನಿಮ್ಮಲ್ಲಿರುವಾತನು ಲೋಕದಲ್ಲಿ ಇರುವವನಿಗಿಂತ ದೊಡ್ಡವನಾಗಿದ್ದಾನೆ." 1 ಯೋಹಾನ. 4:4.

"ಸೈನ್ಯದ ಕರ್ತನು ನಮ್ಮೊಂದಿಗಿದ್ದಾನೆ. ಆತನ ವಾಗ್ದಾನಗಳು, ಹಾಗೆಯೇ ಆತನ ಪರಾಂಬರಿಕೆಗಳು ರಕ್ಷಣೆಯ ಗೋಡೆಗಳಾಗಿದ್ದು ಎಲ್ಲಾ ದಿಕ್ಕಿನಿಂದಲೂ ಕಾವಲಾಗಿವೆ. ಕ್ರಿಸ್ತನಲ್ಲಿರುವ ದೇವರ ಪ್ರೀತಿಯಿಂದ ನಮ್ಮನ್ನು ಯಾವುದರಿಂದ ಬೇರ್ಪಡಿಸಲು ಸಾಧ್ಯ? ಯಾತನೆಗಳೋ? ಇಲ್ಲ! ಇದು ನಮ್ಮನ್ನು ಇನ್ನೂ ಆತನ ಸಮೀಪಕ್ಕೆ ಬರುವಂತೆ ಮಾಡುತ್ತದೆ; ಆತನ ಕಾವಲುಗಾರಿಕೆಯ ಪಾಲನೆಯ ವಶದಲ್ಲಿ ವಿಶ್ರಾಂತಿ ಹೊಂದುವೆವು. ನಮಗೆ ಆತನ ಕೃಪೆಯೇ ಸಾಕು. ನಮ್ಮ ಬಲಹೀನತೆಯಲ್ಲಿ ಆತನ ಬಲವು ವ್ಯಕ್ತವಾಗುತ್ತದೆ. ನಾವು ನಮ್ಮಲ್ಲಿ ಬಲಹೀನತೆಯನ್ನು ಕಾಣುವಾಗ, ಆತನಲ್ಲಿ ಬಲವುಳ್ಳವರಾಗಿದ್ದೇವೆ. ಆತನು ನಮ್ಮನ್ನು ಎಂದಿಗೂ ಕೈಬಿಡುವುದಿಲ್ಲ, ತೊರೆದುಬಿಡುವುದಿಲ್ಲ." ಆರ್. 1653, ಸಿ.2, ಪಿ.5.

## "ದೇವರನ್ನು ಯಾರೂ ಎಂದೂ ನೋಡಿಲ್ಲ; ನಾವು ಒಬ್ಬರನ್ನೊಬ್ಬರು ಪ್ರೀತಿಸಿದರೆ ದೇವರು ನಮ್ಮಲ್ಲಿ ನೆಲೆಗೊಂಡಿದ್ದಾನೆ, ಮತ್ತು ಆತನಿಂದಾಗುವ ಪ್ರೀತಿಯು ನಮ್ಮಲ್ಲಿ ಸಿದ್ಧಿಗೆ ಬರುತ್ತದೆ." 1 ಯೋಹಾನ. 4:12

"ಕರ್ತನು ಆಜ್ಞಾಪಿಸುವಂಥಹ ಪರೋಪಕಾರಿಯಾದ ನಿಜವಾದ ಪ್ರೀತಿಯಿಂದ ನಾವು ಒಬ್ಬೊರನ್ನೊಬ್ಬರು ಪ್ರೀತಿಸಲು ಕಲಿತರೆ, ದೇವರ ಪ್ರೀತಿಯು ನಮ್ಮಲ್ಲಿ ಸಿದ್ಧಿಗೆ ಬರುತ್ತದೆ. ಕರ್ತನು ಹೇಳುವಂತೆ, ಆತನು ನಮ್ಮನ್ನು ಪ್ರೀತಿಸಿದಂತೆ ನಾವು ಒಬ್ಬೊರನ್ನೊಬ್ಬರು ಪ್ರೀತಿಸಬೇಕು, ಅಂದರೆ ಇನ್ನೊಬ್ಬರಿಗೆ ನಮ್ಮ ಪ್ರಾಣವನ್ನು ಕೊಡಲು ತಯಾರಾಗಿರುವ ಮಟ್ಟಿಗೆ ಪ್ರೀತಿಸಬೇಕು. ನಾವು ಕೆಲವು ಸಹೋದರರನ್ನು ಕೆಲವು ಸಾರಿ ಪ್ರೀತಿಸಿ, ಕೆಲವು ಸಹೋದರರನ್ನು ಎಲ್ಲಾ ಸಮಯದಲ್ಲೂ ಪ್ರೀತಿಸುವಂತಿರಬಾರದು; ಬದಲಾಗಿ ನಾವು ಎಲ್ಲಾ ಸಹೋದರರನ್ನು ಎಲ್ಲಾ ಸಮಯದಲ್ಲೂ ಪ್ರೀತಿಸಬೇಕು; ಮತ್ತು ಅವರ ದೌರ್ಬಲ್ಯತೆಗಳನ್ನು ಹಾಗೂ ಅಪರಿಪೂರ್ಣತೆಗಳನ್ನು ಕಡೆಗಾಣಿಸಿ, ದೇವರು ಕ್ರಿಸ್ತನ ನಿಮಿತ್ತ ನಮ್ಮ ಲೋಪ ದೋಷಗಳನ್ನು ಲಕ್ಷಿಸದೇ ಇರುವಂತೆ, ದೇವರು ಅವರನ್ನು ಕಾಣುವ ಆ ಉನ್ನತ ದೃಷ್ಟಿಕೋನದಿಂದ ಒಬ್ಬೊರನ್ನೊಬ್ಬರು ಮನ್ನಿಸಬೇಕು. ದೇವರು ನಮ್ಮ ಪಾಪಗಳನ್ನು ಕ್ಷಮಿಸುವರು ಎಂಬ ನಂಬಿಕೆ ಹಾಗೂ ನಿರೀಕ್ಷೆಯಿರುವಂತೆ, ನಮಗೆ ವಿರುದ್ಧವಾದ ತಪ್ಪು ಮಾಡುವವರನ್ನು ನಾವು ಕ್ಷಮಿಸಬೇಕು. ಇಂಥಹ ಪ್ರೀತಿಯು ಒಬ್ಬನಲ್ಲಿ ಸಿದ್ಧಿಗೆ ಬಾರದೇ ಹೋದಲ್ಲಿ ಅವನು 'ಆಯ್ಕೆ'ಯಾದ ತರಗತಿಯಲ್ಲಿ ಸೇರಲಾರನು." ಆರ್. 4849, ಸಿ.2, ಪಿ.5.

**"ಲೋಕವನ್ನು ಜಯಿಸಿದಂಥದು ನಮ್ಮ ನಂಬಿಕೆಯೇ." 1 ಯೋಹಾನ. 5:4.**

"ಈ ಘರ್ಷಣೆಯಲ್ಲಿ (ಪಾಪದ ವಿರುದ್ಧ) ನಮ್ಮ ಯಶಸ್ಸಿನ ಮಟ್ಟವು ವ್ಯಾಪಕವಾಗಿ ನಮ್ಮ ನಂಬಿಕೆಯ ಉತ್ಸುಕತೆಯ ಮೇಲೆಯೂ ಹಾಗೂ ಶ್ರೇಷ್ಠ ಬೋಧಕನ ಮೇಲಿರುವ ಭರವಸೆಯ ಮೇಲೆಯೂ ಅವಲಂಬಿತವಾಗಿದೆ. ಒಂದುವೇಳೆ ಆತನ ಜ್ಞಾನದಲ್ಲಿ ನಾವು ಭರವಸೆಯನ್ನಿಟ್ಟರೆ, ನಾವು ಆತನ ಆದೇಶವನ್ನು ಹತ್ತಿರದಿಂದ ಹಿಂಬಾಲಿಸಿ, ನಮ್ಮ ಹೃದಯಗಳನ್ನು ಜಾಗ್ರತೆಯಿಂದ ಕಾಪಾಡಿಕೊಳ್ಳುತ್ತೇವೆ. ನಾವು ಆತನಿಗೆ ಸಂಪೂರ್ಣವಾಗಿ ವಿಧೇಯರಾಗಿ ನಡೆಯಬೇಕಾದರೆ, ಕರ್ತನ ಜ್ಞಾನದಲ್ಲಿ ನಂಬಿಕೆಯೂ ಮತ್ತು ಅಗತ್ಯ ಸಮಯಗಳಲ್ಲಿ ಸಹಾಯವೂ ಅಗತ್ಯ; ಆದುದರಿಂದಲೇ 'ಲೋಕವನ್ನು ಜಯಿಸಿದಂಥದು ನಮ್ಮ ನಂಬಿಕೆಯೇ' ಎಂಬುವುದಾಗಿ ಬರೆಯಲಾಗಿದೆ; ಅಂದರೆ, ಇದು ಅಭ್ಯಾಸಿಸುವ ನಂಬಿಕೆ ಹಾಗೂ ಅದರಿಂದ ಹರಿಯುವ ವಿಧೇಯತೆಯಿಂದಲೇ 'ನಾವು ಜಯಶಾಲಿಗಳಾಗಲು ಹಾಗೂ ನಮ್ಮನ್ನು ಪ್ರೀತಿಸಿ ತನ್ನನ್ನೇ ಅರ್ಪಿಸಿಕೊಟ್ಟಾತನ ಮೂಲಕ ಹೆಚ್ಚಿನ ಜಯಶಾಲಿಗಳಾಗಲು' ನಾವು ಸಮರ್ಥರಾಗುವೆವು." ಆರ್. 2249, ಸಿ.2, ಪಿ.1.

**"ದೇವರಿಂದ ಹುಟ್ಟಿರುವವನು ಪಾಪಮಾಡುವವನಲ್ಲವೆಂಬದು ನಮಗೆ ಗೊತ್ತದೆ. ದೇವರಿಂದ ಹುಟ್ಟಿದವನು ತನ್ನನ್ನು ತಾನು ಕಾಪಾಡಿಕೊಳ್ಳುವನು; ಕೆಡುಕನು ಅವನನ್ನು ಮುಟ್ಟುವದಿಲ್ಲ." 1 ಯೋಹಾನ. 5:18.**

"ಒಂದುವೇಳೆ ಅವರು ತಮ್ಮ ಹೃದಯಗಳನ್ನು ಕಾಪಾಡಿಕೊಂಡರೆ, 'ಕೆಡಕನು ಅವರನ್ನು ಮುಟ್ಟಲಾರನು,' ಅವರಿಗೆ ನೋವನ್ನುಂಟುಮಾಡುವುದಿಲ್ಲ, ಅವರಿಗೆ ಹಾನಿಯನ್ನುಂಟು ಮಾಡನು. ಆತನ ಆಕ್ರಮಣಗಳು ಪರೀಕ್ಷೆಯಾಗಿ ಉಪಯೋಗಿಸಲ್ಪಡುವವು, ಇವುಗಳನ್ನು ದೇವರು ಅನುಮತಿಸುವುದರಿಂದ ಅವರಿಗೆ 'ಅತ್ಯಂತಾಧಿಕವಾದ ಪ್ರತಿಫಲವನ್ನು ಉಂಟುಮಾಡುವುದಲ್ಲದೆ ನಿರಂತರವಾಗಿರುವ ಗೌರವವುಳ್ಳ ಪ್ರಭಾವವನ್ನು ದೊರಕಿಸುತ್ತದೆ'; ಆದರೆ ವಿರೋಧಿಯು ಅವರಿಗೆ ಹಾನಿಯನ್ನುಂಟುಮಾಡಲಾರನು, ಯಾಕೆಂದರೆ ಅವರು ದೇವರಿಗೆ ಒಳಪಟ್ಟವರಾಗಿದ್ದಾರೆ, ಸಂಪೂರ್ಣವಾಗಿ ಪ್ರತಿಷ್ಠೆಪಡಿಸಿಕೊಳ್ಳುವುದರಲ್ಲಿ ಆತನಿಗೆ ತಮ್ಮ ಹೃದಯಗಳನ್ನು ಅತ್ಯುನ್ನತವಾದ ಅರ್ಥದಲ್ಲಿ ಅರ್ಪಿಸಿದವರನ್ನು ಆತನು ಕಾಪಾಡುವನೆಂದು ದೇವರು ಪ್ರತಿಜ್ಞೆಮಾಡಿದ್ದಾನೆ." ಆರ್. 4660, ಸಿ.2, ಪಿ.3.

**"ನೀನು ಸಾಯಬೇಕಾದರೂ ನಂಬಿಗಸ್ತನಾಗಿರು; ನಾನು ನಿನಗೆ ಜೀವವೆಂಬ ಜಯಮಾಲೆಯನ್ನು ಕೊಡುವೆನು." ಪ್ರಕಟಣೆ. 2:10.**

"ಉತ್ತಮ ಪ್ರತಿಷ್ಠೆಯನ್ನು ಮಾಡಿದರೆ ಸಾಲದು; ಒಂದಷ್ಟು ಸಮಯ ಹೋರಾಟವನ್ನು ಹೋರಾಡಿದರೆ ಸಾಲದು. ನಿಜವಾಗಿಯೂ ಇಲ್ಲ! ಒಮ್ಮೆ ನಂಬಿಗಸ್ಥ ರಾಗಿದ್ದವರನ್ನು ದೇವರು ಆತನ ರಾಜ್ಯಕ್ಕೆ ಅಂಗೀಕರಿಸಿಕೊಳ್ಳುವುದಿಲ್ಲ. ಆತನು ಅಪೇಕ್ಷಿಸುವುದು ಒಮ್ಮೆ ನಂಬಿಗಸ್ತರಾಗಿದ್ದವರನ್ನು, ಆಮೇಲೆಯೂ ನಂಬಿಗಸ್ಥರಾಗಿದ್ದವರನ್ನು, ಯಾವಾಗಲೂ ನಂಬಿಗಸ್ತರಾಗಿರುವವರನ್ನು! ಆತನು ರಾಜ್ಯದ ತಾನು ಕಿಂಚಿತ್ತೂ ಸಂಶಯಪಡದೆ

ನಂಬುವವರನ್ನು, ತಾನು ನಂಬಿಗಸ್ತರಿಗೆ ವಾಗ್ದಾನದಂತೆ ಮಹಿಮೆಯನ್ನು, ಗೌರವವನ್ನು ಹಾಗೂ ಅಮರತ್ವವನ್ನು ನೀಡಬಯಸುತ್ತಾನೆ. ಅವರು ಈ ಉನ್ನತ ಬಹುಮಾನವನ್ನು ಹಾಗೂ ಉತ್ಕೃಷ್ಟತೆಯನ್ನು ಪಡಕೊಳ್ಳುವ ಅವರನ್ನು ಪೂರ್ಣವಾಗಿ ಪರೀಕ್ಷೆಗೊಳಪಡಿಸಿ ಅವರ ಅರ್ಹತೆಯನ್ನು ಸಾಬೀತುಪಡಿಸಿಕೊಳ್ಳಬೇಕಾಗುತ್ತದೆ." ಆರ್. 5594, ಸಿ.2, ಪಿ.3.

## "ಜಯಹೊಂದುವವನಿಗೆ ಎರಡನೆಯ ಮರಣದಿಂದ ಕೇಡಾಗುವದೇ ಇಲ್ಲ." ಪ್ರಕಟನೆ. 2:11.

"ಅಂಥಹ ಉನ್ನತವಾದ ಮಹಿಮೆಯನ್ನು ಗ್ರಹಿಸಿಕೊಳ್ಳಲು ಸಾಹಸಪಡುವ ಮನುಷ್ಯನ ಆತ್ಮವು ತತ್ತರಿಸುತ್ತದೆ. ಹೀಗಿದ್ದರೂ ಕರ್ತನಲ್ಲಿ ಆಳವಾದ ಪ್ರೀತಿಯುಳ್ಳ ಹೃದಯವು ಕ್ರಿಸ್ತನ ಪ್ರಿಯ ಮದುವಣಗಿತ್ತಿಯಾಗಲು, ಕರ್ತನಂತೆ ಮಾರ್ಪಾಡಾಗಲು ಹಾಗೂ ನಿರಂತರವೂ ಆತನ ಮಹಿಮೆಯ ಪ್ರಸನ್ನತೆಯಲ್ಲಿರಲು ಆತನು ನೀಡಿದ ಮಿತಿಮೀರಿದ ಒಲವಿನ ಆಹ್ವಾನವನ್ನು ಪ್ರಶಂಶಿಸಬಹುದಾಗಿದೆ. ಅತ್ಯಾಶ್ಚರ್ಯವಾದ ಕೃಪೆ ಇದಾಗಿದೆ! ಮತ್ತು ಕ್ರಿಸ್ತನ ಅತ್ಯಂತ ಉತ್ಕೃಷ್ಟಕ್ಕಾಗಿ ನಾವು ಪ್ರತಿಫಲಿಸುವಾಗ ವಿಸ್ಮಯವು ಅಧಿಕವಾಗುತ್ತದೆ. ಇದು ಜಗತ್ತುತ್ಪತ್ತಿಗೆ ಮುಂಚೆ ತನ್ನ ತಂದೆಯ ಜೊತೆ ಆತನಿಗಿದ್ದ ಮಹಿಮೆಗಿಂತ ಎಷ್ಟೋ ಅಧಿಕವಾದದ್ದು, ವ್ಯಕ್ತಿಯ ಮಹಿಮೆಯೆಂದರೆ 'ದೇವರ ಸ್ವಭಾವದ ಪ್ರತಿರೂಪ,' ಐಶ್ವರ್ಯದ ಮಹಿಮೆಯು, ಅಂದರೆ 'ಸಮಸ್ತಕ್ಕೂ ಬಾಧ್ಯಸ್ಥನನ್ನಾಗಿಯೂ,' ಸಮಸ್ತ ಲೋಕವನ್ನು ತನ್ನ ಪಾದದಲ್ಲಿ ಇಡುವಂಥದ್ದೂ,' 'ಅಧಿಕಾರವುಳ್ಳ ಮಹಿಮೆಯು,' 'ಭೂಲೋಕ ಹಾಗು ಪರಲೋಕದ ಮೇಲೆ ಅಧಿಕಾರ,' ಹೊಂದಿರುವ ಮಹಿಮೆಯೂ ಆಗಿದೆ, ಇದು ಇಡೀ ವಿಶ್ವದ ಅಧಿಪತಿಯಾಗಿರುವ ಯೆಹೋವನ ಸ್ಥಾನಕ್ಕಿಂತ ನಂತರದ್ದೇ ಆಗಿದೆ. (1 ಕೊರಿಂಥ. 15:27, 28), ಮತ್ತು ದೋಷರಹಿತವಾದ ಪವಿತ್ರತೆಯಿಂದ ಸಕಲ ಪ್ರಕಾಶಮಾನವಾಗಿ ಹೊಳೆಯುವಂಥಹ ಗುಣಲಕ್ಷಣದ ಮಹಿಮೆಯಾಗಿದೆ." ಆರ್. 1262, ಸಿ.1, ಪಿ.6.

## "ಯಾವನು ಜಯಹೊಂದುತ್ತಾನೋ ಅವನಿಗೆ ಬಚ್ಚಿಟ್ಟಿರುವ ಮನ್ನವೆಂಬ ಆಹಾರವನ್ನು ಕೊಡುವೆನು; ಇದಲ್ಲದೆ ಅವನಿಗೆ ಬಿಳೀ ಕಲ್ಲನ್ನೂ ಆ ಕಲ್ಲಿನ ಮೇಲೆ ಕೆತ್ತಿದ ಹೊಸ ಹೆಸರನ್ನೂ ಕೊಡುವೆನು; ಆ ಹೆಸರನ್ನು ಹೊಂದಿದವನಿಗೇ ಹೊರತು ಅದು ಇನ್ನಾರಿಗೂ ತಿಳಿಯದು." ಪ್ರಕಟಣೆ. 2:17.

"ಬಿಳೀ ಕಲ್ಲು ಕರ್ತನ ಪ್ರೀತಿಯನ್ನು ಸೂಚಿಸುವ ಅಮೂಲ್ಯ ಗುರುತಾಗಿದೆ, ಮತ್ತು ಕಲ್ಲಿನ ಮೇಲೆ ಬರೆದಿರುವ ಹೊಸ ಹೆಸರು ಮದಲಿಂಗನ ಹೆಸರನ್ನು ಸೂಚಿಸುತ್ತದೆ. ಈ ಹೇಳಿಕೆಯು ಶ್ರೇಷ್ಠ ರಾಜಾಧಿರಾಜನ ಜೊತೆಗಿರುವ ವಿಶೇಷವಾದ ಬಾಂಧವ್ಯವನ್ನು, ಅಂದರೆ ತನ್ನೊಂದಿಗೂ ಹಾಗೂ ವ್ಯಕ್ತಿಯ ನಡುವೆಯೂ ಇರುವ ರಹಸ್ಯವನ್ನು ಸೂಚಿಸುತ್ತದೆ. ಜಯಹೊಂದುವವರನ್ನು ಕೇವಲ ವರ್ಗದವರಾಗಿ, ಮದಲಗಿತ್ತಿಯ ವರ್ಗದವರಾಗಿ ಗುರುತಿಸಲ್ಪಡುವುದಿಲ್ಲ, ಬದಲಾಗಿ ಪ್ರತಿಯೊಬ್ಬರಿಗೂ ಕರ್ತನ ವಯುಕ್ತಿಕವಾದ ಕೃಪೆ ಇರುವುದು, ಇದರ ಬಗ್ಗೆ ಅವನಿಗೂ ರಾಜನಿಗೂ ಹೊರತೂ ಬೇರೆ ಇನ್ನಾರಿಗೂ

ತಿಳಿದಿರುವುದಿಲ್ಲ. ಇಲ್ಲಿ ಕರ್ತನ ಹಾಗೂ ಜಯಹೊಂದುವವರ ನಡುವೆ ವ್ಯಕ್ತಿಗತವಾದ ಹಾಗೂ ವಯುಕ್ತಿಕವಾದ ಗೆಳೆತನವಿದೆ, ಇಂಥವರು ಪ್ರಸ್ತುತ ಜೀವನದಲ್ಲಿಯೇ ಗುರುತಿನ ಚಿಹ್ನೆಯಾದ ಪ್ರತಿಬಿಂಬದ ಬಿಳಿ ಕಲ್ಲನ್ನು ಪಡೆಯುವುದಾಗಿ ಹೇಳಲಾಗಿದೆ. ಈ ಗುರುತು ಪವಿತ್ರಾತ್ಮನ ಮುದ್ರೆಯಾಗಿದ್ದು, ಇದರ ಮೂಲಕ ಕರ್ತನು ಜಯಶಾಲಿಗಳನ್ನು ಗುರುತುಹಚ್ಚುತ್ತಾರೆ... ಪವಿತ್ರಾತ್ಮದ ಪೂರ್ಣ ಮುದ್ರೆಯನ್ನು ಪುನರುತ್ಥಾನದಲ್ಲಿ ನೀಡಲಾಗುವುದು... ಆಗ ನಾವು ಕರ್ತನಿಗೂ ಹಾಗೂ ಆತನು ನಮಗೂ ಯಾವ ಹೆಸರಿನಿಂದ ನಿರಂತರವೂ ಅರಿತುಕೊಳ್ಳುವೆವು ಎಂಬುದರ ಸಂಪೂರ್ಣ ತಿಳುವಳಿಕೆಯನ್ನು ನೀಡಲಾಗುವುದು." ಆರ್. 5113, ಸಿ.1, ಪಿ.4, ಸಿ.2, ಪಿ.2.

**"ಜಯಹೊಂದುವ ಇವನೇ ಬಿಳೀ ವಸ್ತ್ರದಿಂದ ಹೊದಿಸಲ್ಪಡುವನು; ಜೀವದ ಪುಸ್ತಕದಿಂದ ನಾನು ಅವನ ಹೆಸರನ್ನು ಅಳಿಸಿ ಬಿಡುವದೇ ಇಲ್ಲ, ಆದರೆ ನನ್ನ ತಂದೆಯ ಮುಂದೆಯೂ ಆತನ ದೂತರ ಮುಂದೆಯೂ ಅವನ ಹೆಸರನ್ನು ಒಪ್ಪಿಕೊಳ್ಳುವೆನು." ಪ್ರಕಟಣೆ 3:5.**

"ಸತ್ಯವೇದವು ಜೀವದ ಎರಡು ಪುಸ್ತಕಗಳ ಬಗ್ಗೆ ಪ್ರಸ್ತಾಪಿಸುತ್ತದೆ, ಒಂದು ಪ್ರಸ್ತುತ ಯುಗಕ್ಕೆ ಸಂಬಂಧಿಸಿದೆ ಹಾಗೂ ಮತ್ತೊಂದು ಸಾವಿರ ವರ್ಷದ ಯುಗಕ್ಕೆ ಸಂಬಂಧಿಸಿದೆ... ಪ್ರಸ್ತುತ ಯುಗದಲ್ಲಿ ತೆರೆಯಲ್ಪಡುವ ವಿಶೇಷವಾದ ಜೀವದ ಪುಸ್ತಕದಲ್ಲಿ ಈ ಸುವಾರ್ತಾ ಯುಗದಲ್ಲಿ ಎಲ್ಲಾ ಜಯಶಾಲಿಗಳ ಹೆಸರುಗಳನ್ನು ಬರೆಯಲಾಗಿದೆ... ಈ ದಾಖಲಾತಿಯು ಪ್ರಸ್ತುತ ಯುಗದ ಪರ್ಯಂತರ ನಡೆಯುತ್ತಿದೆ. ಇದರ ಅರ್ಥವೇನೆಂದರೆ, ಇಲ್ಲಿ ಬರೆಯಲ್ಪಟ್ಟ ಹೆಸರುಗಳು ಕೇವಲ ದೇವರ ಕುಟುಂಬದ ಸದಸ್ಯರಾಗಿರದೆ ಮದಲಗಿತ್ತಿಯ ಸದಸ್ಯರೂ ಆಗಿರುತ್ತಾರೆ. ಈ ಸ್ಥಾನವನ್ನು ಕಾಪಾಡಿಕೊಳ್ಳಬೇಕಾದರೆ ಅವರು ಜಯಹೊಂದಿದವ ರಾಗಿರಬೇಕು... ಈ ವಾಕ್ಯದಲ್ಲಿ ಮಹಾಸಮೂಹದವರು ಸೇರಿದ್ದಾರೋ ಇಲ್ಲವೋ ನಮಗೆ ಖಚಿತವಾಗಿ ತಿಳಿದಿಲ್ಲ. ಒಂದು ದೃಷ್ಟಿಕೋನದಿಂದ ಅವರು ಒಳಗೊಂಡಿದ್ದಾರೆಂದೂ; ಇನ್ನೊಂದು ದೃಷ್ಟಿಕೋನದಿಂದ ಇಲ್ಲದಿರಬಹುದೆಂದು ಕಂಡುಬರುತ್ತದೆ. ಇದರ ಬಗ್ಗೆ ನಮ್ಮ ಮನಸ್ಸಿನಲ್ಲಿ ಖಚಿತವಾಗಿ ನಿರ್ಧರಿಸದೆ ಕರ್ತನ ಉದ್ದೇಶವೇನು ಎಂಬುದಕ್ಕೆ ಕಾಯೋಣ." ಆರ್. 5377, ಪಿ.8, ಸಿ.2, ಪಿ.2,3.

**"ನೀನು ನನ್ನ ಸಹನವಾಕ್ಯವನ್ನು ಕಾಪಾಡಿದ್ದರಿಂದ ಭೂಮಿಯ ಮೇಲೆ ವಾಸಮಾಡುವವರನ್ನು ಪರೀಕ್ಷಿಸುವದಕ್ಕಾಗಿ ಲೋಕದ ಮೇಲೆಲ್ಲಾ ಬರುವದಕ್ಕಿರುವ ಶೋಧನೆಯ ಸಮಯದಿಂದ ನಾನು ಸಹ ನಿನ್ನನ್ನು ಕಾಪಾಡುವೆನು." ಪ್ರಕಟಣೆ. 3:10.**

"'ನನ್ನ ಸಹನವಾಕ್ಯ,'ಅಥವಾ ನನ್ನ ವಾಕ್ಯವು ಒತ್ತಿ ಹೇಳುವ ಸಹನೆಯೆಂಬ ಈ ಪದವು ಕೇಡನ್ನು ಸಂತೋಷದಿಂದಲೂ, ಇಚ್ಛಾಪೂರ್ವಕವಾಗಿಯೂ, ತಾಳ್ಮೆಯಿಂದಲೂ ಸಹಿಸುವ ಆಲೋಚನೆ ಹೊಂದಿದೆ. ಅಂಥಹ ಹೃದಯದ ಹಾಗೂ ಗುಣಲಕ್ಷಣದ ಬೆಳವಣಿಗೆಯು

ಆತನ ಚಿತ್ತಕ್ಕೆ ವಿರೋಧವಾಗಿ ದಂಗೆ ಏಳದೆ, ದೈವೀಕ ಜ್ಞಾನ ಹಾಗೂ ಪ್ರೀತಿಯಲ್ಲಿ ಸಂಪೂರ್ಣವಾದ ಒಪ್ಪಿಗೆಯಿಂದ ಅನ್ಯಾಯವನ್ನು ಅಥವಾ ಭಾಧೆಯನ್ನು ತೃಪ್ತಿಯಿಂದ ಸಹಿಸಿಕೊಳ್ಳುವುದರಲ್ಲಿಯೇ ವ್ಯಕ್ತವಾಗುತ್ತದೆ, ಒಂದುವೇಳೆ ಎಂದಾದರೂ ತಾಳ್ಮೆಯ ಸಹನೆಯು ಬೇಕಾಗಿದ್ದಲ್ಲಿ ಅದು ಈಗ ಅವಶ್ಯ. ಎಂದಾದರೂ ಇದು ನಿಜವಾಗಿರುವುದಾದರೆ, 'ನಿಮ್ಮ ಸೈರಣೆಯಿಂದ ನಿಮ್ಮ ಪ್ರಾಣಗಳನ್ನು ಪಡಕೊಳ್ಳುವಿರಿ,' ಈಗಲೂ ಅದೇ ರೀತಿ ಅಂಗೀಕರಿಸಲ್ಪಡುವ ಹಾಗೆ ಹಾಗೂ ಈ ತಾಳ್ಮೆಯುಳ್ಳ ಸಹನೆಯನ್ನು ಹೊಂದಿಕೊಂಡು ಓಟವನ್ನು ಓಡುವವರು 'ಈ ಕೆಟ್ಟದಿನದಲ್ಲಿ ನಿಂತುಕೊಳ್ಳಲು' ಶಕ್ತರಾಗುವರು ಮತ್ತು ಬೇರೆ ಯಾರೂ ಹೀಗೆ ನಿಂತುಕೊಳ್ಳಲು ಶಕ್ತರಾಗಲಾರರು." ಆರ್.2790, ಸಿ.2, ಪಿ.6, ಆರ್.2792, ಸಿ.1, ಪಿ.6, ಸಿ.2, ಪಿ.1.

**"ಯಾವನು ಜಯಹೊಂದುತ್ತಾನೋ ಅವನನ್ನು ನನ್ನ ದೇವರ ಆಲಯದಲ್ಲಿ ಸ್ತಂಭವಾಗಿ ನಿಲ್ಲಿಸುವೆನು; ಅವನು ಇನ್ನು ಮುಂದೆ ಅದರೊಳಗಿಂದ ಹೋಗುವದೇ ಇಲ್ಲ. ಇದಲ್ಲದೆ ನನ್ನ ದೇವರ ಹೆಸರನ್ನೂ ನನ್ನ ದೇವರ ಬಳಿಯಿಂದ ಪರಲೋಕದೊಳಗಿಂದ ಇಳಿದುಬರುವ ಹೊಸ ಯೆರೂಸಲೇಮ್ ಪಟ್ಟಣವೆಂಬ ನನ್ನ ದೇವರ ಪಟ್ಟಣದ ಹೆಸರನ್ನೂ ಅವನ ಮೇಲೆ ಬರೆಯುವೆನು." ಪ್ರಕಟಣೆ. 3:12**

"ದೇವರು ತನ್ನ ಜನರಿಗೆ, ತನ್ನ ಸಭೆಗೆ, ಮದಲಗಿತ್ತಿಗೆ, ಕುರಿಯಾದಾತನ ಪತ್ನಿಗೆ ಹೊಸ ಹೆಸರನ್ನು ಸಂಕಲ್ಪಿಸಿದ್ದಾನೆ. ನಮ್ಮ ಕರ್ತನ ಹೆಸರು ಯೇಸುವೆಂದು ಇದ್ದು ಮತ್ತು ಆತನು ಕ್ರಿಸ್ತನು, ಮೆಸ್ಸೀಯನು ಆದ ಹಾಗೆ ಆತನ ದೇಹದ ಸದಸ್ಯರಾಗುವವರೆಲ್ಲರೂ ಆತನು ಹೊಸ ಹೆಸರಿನ ಅಡಿಯಲ್ಲಿ ಬರುತ್ತಾರೆ ಮತ್ತು ಕ್ರಿಸ್ತನವರೆಂದು ಗುರುತಿಸಿಕೊಂಡು ಹಾಗೂ ಬಹುಶಃ ಒಬ್ಬರನ್ನೊಬ್ಬರು ತಾವು ಕ್ರಿಸ್ತನ ಸದಸ್ಯರೆಂದು ಗುರುತಿಸಿಕೊಳ್ಳಬಹುದು (ಪ್ರಕಟಣೆ. 3:12); ಮತ್ತು ಮತ್ತೊಮ್ಮೆ ದೇವರು ಕ್ರಿಸ್ತನ ಬಗ್ಗೆ ಪ್ರವಾದನಾ ರೀತಿಯಲ್ಲಿ ಹೇಳುವಂತೆ, 'ಆತನು ಕರೆಯಲ್ಪಡುವ ಹೆಸರು ಯಾವುದೆಂದರೆ ನಮ್ಮ ನೀತಿಯ ಕರ್ತನೇ' ಎಂಬುವದಾಗುವದು. ಮತ್ತೊಮ್ಮೆ ಕ್ರಿಸ್ತನ ಮದುವಣಗಿತ್ತಿಯ ಬಗ್ಗೆ ಮಾತನಾಡುತ್ತಾ 'ಆಕೆಯ ಕರೆಯಲ್ಪಡುವ ಹೆಸರು ಇದೇ–ನಮ್ಮ ನೀತಿಯಾಗಿರುವ ಕರ್ತನು' ಎಂಬುವದಾಗಿ ಹೇಳಲಾಗಿದೆ. (ಯೆರೆಮೀಯ. 33:16) ಮದಲಿಂಗನ ಹೆಸರನ್ನು ಮದಲಗಿತ್ತಿಗೆ ಕೊಡಲಾಗಿದೆ–'ನಾನು ನನ್ನ ಆಭರಣಗಳನ್ನು ಕೂಡಿಸಿಕೊಳ್ಳುವ ಆ ದಿನದಲ್ಲಿ ಅವರು ನನ್ನವರಾಗಿರುವರೆಂದೂ ಕರ್ತನು ಹೇಳುತ್ತಾನೆ.' ಮತ್ತು ಆ ಹೊಸ ಹೆಸರನ್ನು ಪಡೆಯುವವರೆಲ್ಲರು ಖಂಡಿತವಾಗಿಯೂ ತಾವು ಜಯಹೊಂದಿದವರು ಎಂಬುದನ್ನು ನಿರೂಪಿಸಲು ಕರೆಯಲ್ಪಡುವರು." ಆರ್.3970, ಸಿ.2, ಪಿ.3.

**"ಬಾಗಿಲಲ್ಲಿ ನಿಂತುಕೊಂಡು ತಟ್ಟುತ್ತಾ ಇದ್ದೇನೆ; ಯಾವನಾದರೂ ನನ್ನ ಶಬ್ದವನ್ನು ಕೇಳಿ ಬಾಗಿಲನ್ನು ತೆರೆದರೆ ನಾನು ಒಳಗೆ ಬಂದು ಅವನ ಸಂಗಡ ಊಟಮಾಡುವೆನು, ಅವನು ನನ್ನ ಸಂಗಡ ಊಟಮಾಡುವನು." ಪ್ರಕಟಣೆ. 3:20.**

“ಪ್ರಸ್ತುತ ಕಾಲದಲ್ಲಿ, ಲವೋದೊಕಿಯ ಕಾಲದಲ್ಲಿ ಸಹನೆಯಿಂದ ಓಟವನ್ನು ಓಡುವವರೆಲ್ಲರಿಗೆ ಇದು ವಿಶೇಷವಾದ ಬಹುಮಾನವಾಗಿದೆ. ಶೋಧನೆಯ ಗಳಿಗೆಯನ್ನು ತಪ್ಪಿಸಿಕೊಳ್ಳುವುದು ನಮಗಿರುವ ಭಾಗ್ಯವಲ್ಲ, ಆದರೆ ಕ್ರಿಸ್ತನ ಪ್ರಸನ್ನತೆಯ ಕಾಲದಲ್ಲಿ ಜೀವಿಸುವ ನಿಮಿತ್ತವಾಗಿ ಸಿಕ್ಕಿರುವ ವಿಶೇಷವಾದ ಆಶೀರ್ವಾದವನ್ನು ಸಮತೂಕದಲ್ಲಿ ಹೊಂದಿರುವುದು ನಮ್ಮ ಭಾಗ್ಯವಾಗಿದೆ. ನಾವು ಆತನ ಅನ್ಯೋನ್ಯತೆಯಲ್ಲಿರಬಹುದು, ಆತನ ಬೋಧನೆಯನ್ನು ಕೇಳಬಹುದು. ಈಗ ಇರುವ ‘ಕಾಲಕ್ಕೆ ತಕ್ಕ ಭೋಜನ’ವಾದ ಆತನ ಆತ್ಮೀಕ ಆಹಾರವನ್ನು ಹಂಚುವುದರ ಮೂಲಕ ಈ ಹಿಂದಿನ ಕಾಲದಲ್ಲಿ ಜೀವಿಸಿದ ಯಾವೊಬ್ಬ ನೀತಿವಂತನೂ ಆಸ್ವಾದಿಸದ ಮಟ್ಟಿಗೆ ನಾವು ಅದನ್ನು ಆಸ್ವಾದಿಸಬಹುದು. ಆದರೆ ನಾವು ನಿರೀಕ್ಷಿಸುವಂತೆ, ಈ ಶ್ರೇಷ್ಠ ಅನುಗ್ರಹಕ್ಕೆ ಅನುಗುಣವಾಗಿ ಗೂಡತೆಯುಳ್ಳ ತೀಕ್ಷಣವಾದ ಪ್ರಲೋಭನ ಕಾಲದ ಪರೀಕ್ಷೆಗಳು ಈ ಭೂಲೋಕದ ಮೇಲೆ ಬರುವುದಾಗಿದೆ.” ಆರ್. 2792, ಸಿ.1, ಪಿ.6.

**“ನಾನು ಜಯಹೊಂದಿ ನನ್ನ ತಂದೆಯೊಡನೆ ಸಿಂಹಾಸನದಲ್ಲಿ ಕೂತುಕೊಂಡೆನು; ಹಾಗೆಯೇ ಜಯ ಹೊಂದುವವನನ್ನು ನನ್ನೊಡನೆ ಸಿಂಹಾಸನದಲ್ಲಿ ಕೂತುಕೊಳ್ಳುವಂತೆ ಮಾಡುವೆನು.” ಪ್ರಕಟಣೆ. 3:21**

“ಈ ಸುಗ್ಗೀಕಾಲದೊಳಗೆ ನಮಗೆ ವಿರುದ್ಧವಾಗಿ ಅನೇಕ ಹಾಗೂ ಉಗ್ರವಾದ ಬಿರುಗಾಳಿಯು ಎದುರಾಗಿದೆ; ಮತ್ತು ನಿಸ್ಸಂದೇಹವಾಗಿ ಇನ್ನೂ ಅನೇಕ ಕ್ರೂರವಾದ ಶೋಧನೆಗಳು ನಮ್ಮನ್ನು ಹಿಂಬಾಲಿಸಲಿವೆ. ಆದರೆ ಜಯಹೊಂದುವ ನಂಬಿಕಯುಳ್ಳವರು ಅವುಗಳನ್ನೆಲ್ಲಾ ಹೊರಗೋಡಿಸುವರು, ಅವುಗಳನ್ನು ತಾಳ್ಮೆಯಿಂದ ಸಹಿಸಿಕೊಳ್ಳುವರು, ಕ್ರಿಸ್ತನ ಆತ್ಮದ ಜೊತೆಗೆ ಅದರ ಕೃಪೆ ಹಾಗೂ ಫಲಗಳನ್ನು ಬೆಳೆಸಿಕೊಳ್ಳುವಂಥವರು ಮತ್ತು ಯುದ್ಧ ಭೂಮಿಯಿಂದ ಹಿಂಜರಿಯದೆ ಶೂರತನದಿಂದ ನಂಬಿಕೆಯ ಶ್ರೇಷ್ಠ ಹೋರಾಟವನ್ನು ಹೋರಾಡುವಂಥವರು ಮಾತ್ರ ಜಯಶಾಲಿಗಳಾಗಿದ್ದಾರೆ ಮತ್ತು ಇಂಥವರಿಗೆ ಕಿರೀಟವನ್ನು ಉಡಿಸುವ ದಿನದಂದು ಜಯಮಾಲೆಯನ್ನು ನೀಡಲಾಗುವುದು.” ಆರ್. 1656, ಸಿ.2, ಪಿ.3.